# ನನ್ನಾಕೆ

Copyright© Prabhuraj Moogi
www.telprabhu.com

ಹೀಗೊಂದು ಸಂಜೆ... ರಾತ್ರಿಯಾಗುವರೆಗೆ... ೩
ನಸುಕಿಗೆ ಮುಸುಕು ತೆಗೆದಾಗ... ೫
ಆಫೀಸಿಗೆ ಹೊರಟಾಗ... ೬
ಸಿಗ್ನಲ್ಲಿನಲ್ಲಿ ಸೌಂದರ್ಯದೊಂದಿಗೆ... ೭
ಹೆಲ್ಪು ಮಾಡಲು ಹೋಗಿ... ೧೦
ನನ್ನವರ ನನ್ನವರಿಂದ ನನ್ನವರಿಗೋಸ್ಕರ... ೧೨
ಬಿರುಕು... ೧೪
ಸೀರೆ ಖರೀದಿ... ೧೭
ಪರಿಧಿ... ೨೦
ಪ್ರೀತಿಯಿಂದ... ೨೪
ಹೊಟ್ಟೆ ಪಾಡಿಗೆ... ೨೭
ನೀನಿಲ್ಲದಾಗ... ೩೦
ಆ ಒಂದು ದಿನ ನಿನಗೆಂದು... ೩೨
ಕೆಲಸದ ನಡುವೆ... ೩೪
ಹಸಿರು ಕಾನನದೂರಿನಿಂದ... ೩೭
ತಿರುವಿನಲ್ಲಿ ದಾರಿ ತಪ್ಪಿ... ೪೨
ನಶೆಯೇರದೆ ನಟಿಸಿದಾಗ... ೪೫
ಬೇವು ಬೆಲ್ಲ ಬೇರೇನಿಲ್ಲ... ೪೯
ನಾಯಿ ಬೆಕ್ಕು, ನಾವು... ೫೦
ಹಿಂಜರಿತ ಆರ್ಥಿಕವಾಗಿ, ಮಾನಸಿಕವಾಗಿ... ೫೨
ನಾನ್ಯಾಕೆ?... ನನ್ನಾಕೆ... ೫೫
ನಾ ಚುನಾವಣೆಗೆ ನಿಂತರೆ... ೫೮
ರಂಗೋಲಿ... ೬೦
ಬಸ್ಸು ಬಂತು ಬಸ್ಸು... ೬೩
ಪತ್ರ ಬರೆಯಲಾ... ೬೬

Copyright© Prabhuraj Moogi
www.telprabhu.com

## ಹೀಗೊಂದು ಸಂಜೆ... ರಾತ್ರಿಯಾಗುವರೆಗೆ...

ಸಂಜೆ ಆರು ಘಂಟೆ ಆಯ್ತು ಯಾಕೊ ಇವತ್ತು ಫೋನೇ ಬಂದಿಲ್ಲ ಅಂತಿದ್ದೆ, ಯಾಕೋ ಅವ್ಳ ಮೊಬೈಲ್ ಅಷ್ಟೇ ಅಲ್ಲ ಪಕ್ಕದ ಮನೆಯವ್ರ ಫೋನೂ ಕೆಟ್ಟಿರಬೇಕು, ಇಲ್ಲಾಂದ್ರೆ ಅವ್ಳು ಅಪ್ಪಿ ತಪ್ಪಿನೂ ಮರೆಯೊಲ್ಲ, ನನ್ನ ಬಯ್ಯೊಕೆ ಇರೋ ಒಂದು ಅವಕಾಶ ಹೇಗೆ ತಾನೆ ಕಳಕೊಂಡಾಳು. ಹೀಗೆ ಏನೊ ಯೊಚಿಸ್ತಾ ಕೀಬೋರ್ಡ್ ಕುಟ್ಟುತ್ತಿದ್ದೆ, ಅದೋ ರಿಂಗ್ ಆಯ್ತು, ಅದೇ ಮಾಮೂಲಿ ಏನು ಇವತ್ತೂ ಲೇಟಾ ಅಂದ್ಲು, ಅವ್ಳಿಗೂ ಗೊತ್ತು ನಾನ ಬರೋದೆ ಲೇಟ್ ಅಂತ, ಆದ್ರೆ ನನ್ನ ಬಾಯಿಂದಾನೆ ಕೆಳ್ಬೇಕು ಅಂತಾನೆ ಫೊನ್ ಮಾಡ್ತಾಳೆ. ಹೂಂ ಕಾನ್ಫರೆನ್ಸ ಕಾಲ್ ಇದೆ, ಬೇಗ ಬರ್ತೀನಿ ಅಂದೆ, ಕಾಲ್ ಇದ್ರೆ ಬೇಗ ಎಲ್ಲಿ ಬರೋಕಾಗುತ್ತೆ, ಸುಮ್ನೆ ಹೇಳೊಕೇನು. ಈ ಅಮೆರಿಕಾದಲ್ಲಿ ಸೂರ್ಯ ನಮ್ಮ ಸಂಜೆಗೆ ಯಾಕೆ ಹುಟ್ತಾನೊ ಅಂತಾ ಗೊಣುಗುತ್ತಾ ಫೋನಿಟ್ಲು. ಅವಳಿಗೇನು ಗೊತ್ತು ಆ ಸಂಜೆ ಸೂರ್ಯನಿಂದಾನೆ ನನ್ನಂತಾ ಎಷ್ಟೋ ಜನರ ಮನೆ ಬೆಳಗ್ತಿದೆ ಅಂತಾ. ಮತ್ತೆ ಮತ್ತೆ ಫೊನ್ ಮಾಡಿ ಮಾಡಿ ಕೊನೆಗೆ ಸಾಕಾಗಿ ಆಯ್ತು ನಾನು ಮಲಗಿರ್ತೀನಿ ಡೊರ್ ಲೋಕ್ ಇದೆತಾನೆ ಅಂದ್ಲು, ನಾನು ನಿಟ್ಟುಸಿರು ಬಿಟ್ಟು ಆ ಲೊಕ್ ಕಂಡು ಹಿಡಿದೊನಿಗೆ ಮನಸಲ್ಲೇ ನಮಿಸಿದೆ. ಅರಳು ಹುರಿದಂತೆ ಮಾತಾಡೋ ಆ ಅನಸ್ಯೆಟ್ ಹುಡುಗೀ, ಅದೇ ನಮ್ಮ ಮ್ಯಾನೇಜರ್ರು ಅವಳ ಜತೆ ಕಾಲ್ ಮುಗೀತು, ಅವಳ ಕಿಲ ಕಿಲಾಂತ ನಕ್ಕು ಫೊನು ಕುಕ್ಕಿದ ಮೇಲೆ ಪಕ್ಕದಲ್ಲಿ ಕೂರೋ ಕೊಲೀಗು ಜತೆ ಸೇರಿ ಆ ಡಿಸೈನ್ ಸರೀ ಇಲ್ಲಾ, ಅವನ ತಪ್ಪು, ಇವನು ಬೆಸ್ಟು ಅಂತಾ ಮನಸಲ್ಲಿರೊದನ್ನೆಲ್ಲ ಕಾರಿ ಕೂಗಿ ಬಯ್ದು, ಅಬ್ಬಾ ಈವತ್ತು ನೈಟ್ ಔಟ್ ಇಲ್ಲಾ ಅಂತಾ ಮುಖ ಇಷ್ಟಗಲ ಮಾಡ್ಕೊಂಡು, ಎನೋ ಬಹಳ ಗುಡ್ಡ ಕಡಿದು ಕೆಳಗೆ ಇಟ್ಟೊರ ಹಾಗೆ ಹೆಮ್ಮೆ ಪಟ್ಕೊಂಡು ಹೊರ್ಟಿದ್ದಾಯ್ತು.

ಪಾರ್ಕಿಂಗ್ ಹತ್ರ ಬಂದು ಅದೆ ಸಿಗರೇಟು ಹಚ್ಕೊಂಡು ನಿಂತಿರೊ ಹುಡುಗೀರ ನೋಡಿ ಇವಕ್ಕೇನು ಮಾನ ಮರ್ಯಾದೆ ಇಲ್ವ ಅಂತಾ ಹಳೆ ಕಾಲದ ಮನೇಲಿರೊ ಮುದುಕೀ ಥರ ಗೊಣಗಿಕೊಂಡು, ಬೈಕ್ ಹತ್ರ ಬಂದೆ. ಯಾಕೋ ಗಾರ್ಡ್ ಕಾಣ್ತಿಲ್ಲ ಅನ್ತಿದ್ದಂಗೆ ಹಿಂದಿನಿಂದ ಬಂದು "ಸಲಾಂ ಸಾಬ್" ಅಂತಂದು ಒಂದು ಕ್ಷಣ ಹೆದರಿಸಿ ಬಿಟ್ಟ, ದಿನಾ ಅವನು ಹಾಗೇನೆ, ನಾನೇನು ಮೈಸೂರು ಮಹರಾಜಾನ ನಮಸ್ಕಾರ ಮಾಡೋಕೆ, ಅಂದ್ರೂ ಕೇಳಲ್ಲ, ರಾಣಿಯಂಥ ನನ್ನ ಹೆಂಡತೀನೆಲ್ಲೊ ನೋಡೀದಾನೊ ಏನ್ ಕಥೆ ಯಾರಿಗೆ ಗೊತ್ತು, ಅಂತೂ ನಮ್ಮ ಸಲಾಮಿ ಮುಗಿಸಿಕೊಂಡು ರಥ ಏರಿದೆ, ಅಯ್ಯೊ ಸಾರಿ, ಬೈಕು ಬಟನ್ನು ಒತ್ತಿದೆ(ಈಗ ಕಿಕ್ಕು ಕೊಡೋದು ಎಲ್ಲಿ, ಎಲ್ಲ ಎಲೆಕ್ಟ್ರಾನಿಕ್ಕು, ನಾವ್ ಕತ್ತೆ ಅಲ್ಲವಲ್ಲ ಒದೆಯೋಕೆ).

ಮೊದಲೇ ಫ಼ಾಸ್ಟ್ ಬೈಕ ಒಡಿಸಲ್ಲ, ಇನ್ನು ಅಕ್ಕ ಪಕ್ಕ ಹುಡುಗೀರು ಯಾರೂ ಇಷ್ಟೊತ್ನಲ್ಲಿ ಇರಲ್ಲ ಸ್ಟೈಲ್ ಹೊಡಿಯೊಕೆ, ನಿಧಾನವಾಗಿ ದಸರೆ ಮೆರವಣಿಗೆ ಹಾಗೆ ಹೊರಟೆ. ಈ ಬೈಕೂ ಮಹಾ ಕಿಲಾಡಿ ಎಲ್ಲಾದ್ರೂ ಒಂದು ಸ್ಕೂಟಿ ಕಾಣ್ಸಿದ್ರೆ ಸಾಕು, ಎನು ರೇಸ್ ಕೊಟ್ರೂ ಒಡಲ್ಲಾನೇ ಅನ್ನತ್ತೆ, "ಎಲ್ಲಾ ಸಹವಾಸ ದೊಷ್, ನಿಮ್ಮ ಜೊತೆಗಿದ್ಮೇಲೆ ಇನ್ನೇನು ಮತ್ತೆ" ಅನ್ತಿರ್ತಾಳೆ ನನ್ನವಳು, ಅದೂ ಸರೀನೆ. ಹಾಗೂ ಹೀಗೂ ಮಾಡಿ ನಮ್ಮ ನಗರಕ್ಕೆ ಬಂದೆ, ಬೆಂಗ್ಳೂರು ಇಷ್ಟಗಲ ಇದೆ ಊರಿಂದ ಊರಿಗೆ ಹೋದಷ್ಟು ದೂರಾನೆ ಅದ್ಕೆ ಎಲ್ಲಾ ಏರಿಯಾಗಳು ನಗರಾನೆ.

ಅದೋ ಆ ಹಾಲಿನಂಗಡಿ ಮುಂದೆ ಇಳಿದು ನಡೆದೆ ಹಾಲು ತರಲು, ಮುಂಜಾನೆದ್ದು ಇವಳು ಕಾಫಿಗೂ ಹಾಲಿಲ್ಲ ಅಂತ ಹಲ್ಲಿಲ್ಲದಿದ್ರೂ ಬುಸುಗುಟ್ಟೊ ಹಾವಿನ ಥರ ಬುಸುಗುಟ್ತಾಳೆ ಇಲ್ಲಾಂದ್ರೆ. ಹಾಲಿನಂಗಡಿ ಹಾಸಿನಿ ಹಾಲಿನೊಂದಿಗೆ ಒಂದು ಸ್ಮೈಲೂ ಕೊಟ್ಲು, ಬಯ್ ಆಂಡ್ ಗೆಟ್ ಫ್ರೀ ಹಾಗೆ. ಅವಳ ಹೆಸರೇನು ಹಾಸಿನಿಯೇನಲ್ಲ, ಅಷ್ಟಕ್ಕೂ ಅವಳ ಹೆಸರೇ ನಂಗೊತ್ತಿಲ್ಲ, ಹಾಸನದವಳಂತೆ ಅದಿಕ್ಕೆ ನನ್ನ ಪಾಲಿಗೆ ಅವ್ಳು ಹಾಸಿನಿ. ಹೀಗೆ ಆ ಕಿರಾಣಿ ಅಂಗಡೀ ಕೀರ್ತಿ, ಅದೇ ಯಾವಾಗ್ಲೂ ಕಿರುಚತಿರ್ತಾಳಲ್ಲ ಅದಿಕ್ಕೆ ಕೀರುತಿ, ಇನ್ನೂ ಸಾಕಷ್ಟಿದೆ, ಎಲ್ಲ ನಮ್ಮ ನಾಮಕರಣಗಳೇ.

ಮನೆ ಬರ್ತಿದ್ದಂಗೆ ಹಾರ್ನ ಮಾಡ್ದೆ, ನನ್ನೊಳು ಗೇಟ್ ತೆಗಿಯೊಕೆ ಬರ್ತಾಳಂತಲ್ಲ, ಅದೇ ಆ ಪಕ್ಕದ ಮನೆ ಪದ್ದು ಇನ್ನೂ ಎಚ್ಚರವಾಗೇ ಇರ್ತಾಳೆ, ಅವಳಿಗೆ ಕೇಳಲಿ ಅಂತ. ಕಿಟಕಿ ಬಾಗಿಲು ಸ್ವಲ್ಪ ತೆರೀತು, ನಮ್ಮನೆದಲ್ಲ ಪಕ್ಕದ್ದು! ಅವಳೇನೂ ಅವಳ ಗಂಡ ಬರ್ತಾನೆ ಅಂತ ಕಾಯ್ತಿರಲ್ಲ, ಆ ಆಸಾಮಿ ಬಂದು ಎಂಟಕ್ಕೆ ನಿದ್ದೆ ಹೊಡ್ದಿರತ್ತೆ, ಅದಕ್ಕೀಗ ಮಧ್ಯರಾತ್ರಿ ಮುಗ್ದು ಮುಂಜಾವು ಮೂರಾಗಿರತ್ತೆ. ಅವಳೇನು ನಿಶಾಚರಿನೊ ಇಲ್ಲಾ, ನನಗೇ ಕಾಯ್ತಾಳೊ ನಂಗೂ ಗೊತ್ತಿಲ್ಲ, ನನ್ನೊಳು ಎಚ್ಚರವಾಗಿರ್ತಾಳೊ ಬಿಡ್ತಾಳೊ ಅವ್ಳ ಮಾತ್ರ ದಿನಾಲು ಪಕ್ಕಾ ಇರ್ಲೇಬೇಕು. ನೊಡೋಕೂ ಸುಂದರಿ, ಪಕ್ಕದ ಮನೆಯೊಳಲ್ವಾ ಅದಕ್ಕೆ ಹಾಗನಿಸತ್ತೋ ಎನೊ. ರೊಡನಲ್ಲೆಲ್ಲ ಸಿಗ್ನಲ್ಲು ಜಂಪು ಮಾಡಿ ಬಂದಿದ್ರೂ ಎನ್ ಮಹಾ ಟ್ರಾಫ಼ಿಕ್ ರೂಲ್ಸ ಮೀರದಿರೋರ ಹಾಗೆ, ಗೇಟ್ನಲ್ಲಿ ಎಡಕ್ಕೆ ತಿರುಗೋವಾಗ ಲೆಫ಼್ಟ್ ಇಂಡಿಕೇಟರ ಹಾಕ್ತ್ದೆ, ಪದ್ದುಗೆ ಸಿಗ್ನಲ್ಲದು, ನಾನ ಬಂದಾಯ್ತು ನೀನ್ ಹೋಗಿ ಮಲಗು ಅಂತ!!!

Copyright© Prabhuraj Moogi
www.telprabhu.com

ಮನೆ ಲೊಕ್ ತೆಗ್ದು, ಕಳ್ಳರಂಗೆ ನುಗ್ಗಿದೆ, ಹಸಿವಿರಲಿಲ್ಲ ಸಂಜೆ ತಿಂದ ಮ್ಯಾಗಿ ಇನ್ನೂ ಹೊಟ್ಟೇಲಿ ಹುಳ ಬಿಟ್ಕೋರಂಗೆ ಹೊಯ್ದಾಡುತ್ತಿತ್ತು, ಹಾಲಿಟ್ಟು ಹೋಗಿ ಅವ್ಳ ಪಕ್ಕ ಬಿದ್ಕೊಂಡೆ. ಹಿಮಾಲಯ ಪರ್ವತ ಮೈಮೇಲೆ ಕಡ್ಕೊಂಡು ಬಿದ್ದ ಹಾಗಾಯ್ತು, ಎನು ಅಂತ ನೋಡಿದ್ರೆ ಇವಳೇ ಹೊರಳಿ ಮೈಮೇಲೆ ಬಿದ್ದಿದ್ಲು. ಏಯ್ ಕಳ್ಳ ಮನೆ ನುಗ್ಗಿದ್ದಲ್ದೆ, ಊಟ ಮಾಡ್ದೆ ಹಾಗೆ ನನ್ನ ಪಕ್ಕ ಬಂದು ಮಲಗ್ತಿದೀಯ 100ಗೆ ಫೊನ್ ಮಾಡ್ಲಾ ಅಂದ್ಲು, ಇಲ್ಲಾ 101ಗೆ ಮಾಡು ನಿನ್ನ ಎತ್ಕೊಕೆ ಫ಼ೈರ್ ಫ಼ೈಟರನವ್ರಿಗೇ ಬಾ ಅಂತಾ ಹೇಳು ಅಂದೆ, ಛಟಾರ್ ಅಂತ ಎಟು ಕೊಟ್ಲು, ಅಮ್ಮಾ ಅಂತ ಚೀರಿ ಮೇಲೆದ್ದೆ. ನಡೀರಿ ಊಟಕ್ಕೆ ಅಂದ್ಲು, ಹಸಿವಿಲ್ಲ ಅಂದ್ರೆ ನಾನ್ ಕಂಪನಿ (ಜೊತೆ) ಕೊಡ್ತೀನಿ ಅಂತ ಎಳೆದೊಯ್ದ್ಲು, ಎಲ್ಲಿ ಕಂಪನಿ, ಅವ್ಳೂ ಊಟ ಮಾಡಿರಲ್ಲ ಕಾದು ಕಾದು ಸುಸ್ತಾಗಿ ಹಾಗೇ ಮಲಗಿರ್ತಾಳೆ, ನಂಜೊತೆನೇ ಊಟ ಮಾಡೊದು ಸುಮ್ನೆ ಆಗ್ಲೇ ಊಟ ಅಗಿತ್ತು ಅಂತಾಳೆ. ಅದೇ ಪಲ್ಯಾ ಬಿಸಿ ಮಾಡ್ತಾ, ಹಾಸಿನಿಗೆ ಲೈನ್ ಹೊಡಿದ್ರಾ ನೀವ್ ಪುಕ್ಲು ಬಿಡಿ, ಮತ್ತೆ ಪದ್ದು ಸಿಕ್ಕಿದ್ಲಾ ಅಂತೆಲ್ಲ ಗೊಳು ಹೊಯ್ಕೊತಾಳೆ, ಯಾರು ಅದು ಹೆಚ್ ಆರ್ ನಲ್ಲಿ (ಆಫ಼ೀಸಿನಲ್ಲಿ ನನ್ನಂತ ತಲೆಗಳನ್ನ ಗೂಡಿ ಹಾಕೋ ಡಿಪಾರ್ಟಮೆಂಟ್) ಹೊಸದಾಗಿ ಬಂದಿರೊ ಹುಡ್ಗಿ, ಅಂತಿದ್ದಂಗೆ ನಾನ್ ಅವ್ಳ ಹೆಸ್ರು ಉಸುರಿ ಬಿಟ್ಟಿರ್ತೀನಿ, ಅದಹೇಗೆ ಅವ್ಳಿಗೊತ್ತಾಯ್ತು ಅಂದ್ರೆ, ಸುಮ್ನೆ ಗೆಸ್ ಮಾಡಿ ನನ್ನತ್ರ ಇಡೀ ಜಾತಕಾನೆ ಹೇಳಿಸಿಬಿಟ್ಟಿರ್ತಾಳೆ. ಅದಕ್ಕೆ ಅವ್ಳಂದ್ರೆ ನಂಗೆ ಅಷ್ಟು ಪ್ರೀತಿ, ಎನೂ ಮುಚ್ಚಿಡದ ನನ್ನ ಮನಸನ್ನ ಅವ್ಳು ಮೆಚ್ಚಿದ್ರೆ, ಏನ್ ಹೇಳಿದ್ರೂ, ಏನ್ ಮಾಡಿದ್ರೂ ನನ್ನ ಮೆಚ್ಕೊ ಅವಳ ವಿಶಾಲ ಹೃದಯದ ಒಡೆಯ ನಾನೆಂದು ಹಿಗ್ಗಿ ಹೀರೆಕಾಯಿಯಂತಾಗುತ್ತೇನೆ. ಇನ್ಯಾರೋ ಆಗಿದ್ರೆ ನಾವ್ಯಾಗ್ಲೋ ಬೇರೇಯಾಗಿರ್ಬೇಕಿತ್ತು. ಹರಟೆ ಹೊಡೀತ ಊಟ ಎರಡು ತುತ್ತು ಜಾಸ್ತೀನೆ ಹೋಗಿ ನನ್ನ ಗುಡಾಣದಂಥ ಹೊಟ್ಟೇ ನೋಡಿ, ಎನ್ರೀ ಎಷ್ಟು ತಿಂಗ್ಳು ಈವಾಗ ಅಂತನ್ನೊ ಅವಳ ಅಟ್ಟಿಸಿಕೊಂಡು ಒಡುತ್ತೇನೆ, ತಲೆದಿಂಬುಗಳು ಚೆಲ್ಲಾಪಿಲ್ಲಿ ಆಗುವಂತೆ ಫ಼ೈಟಿಂಗು ಶುರು ಆಗಿರುತ್ತೆ... ಹೂಂ ಆಯ್ತು ಇನ್ನೂ ಎನ್ ಓದ್ತಿದೀರ, ಇನ್ನೇನು ಮುಂದೆ ನಡೆಯೋದು ಬರೆಯೋಕಾಗಲ್ಲ!!!... ಮತ್ತೊಂದಿನಾ ಮುಂಜಾನೆ ಸಿಕ್ತೀನಿ... ನಮ್ಮ ಸುಪ್ರಭಾತ ಕೇಳುವಿರಂತೆ.

Copyright© Prabhuraj Moogi
www.telprabhu.com

## ನಸುಕಿಗೆ ಮುಸುಕು ತೆಗೆದಾಗ...

ಮುಂಜಾವು ಇನ್ನೂ ನಾಲ್ಕು ಐದು ಘಂಟೆಯೇನೊ ಆಗಿರುತ್ತೆ ದಿನಾಲೂ ಭೂಕಂಪ ಆಗುತ್ತೆ ನಮ್ಮನೆಲೀ, ನಾನೆಲ್ಲಿ ಬೇರೆ ಜಗತ್ತಿನಲ್ಲಿ ಇದ್ದೇನೆಂದು ತಿಳಿಯಬೇಡಿ, ಎನಿಲ್ಲ ನನ್ನವಳು ಆವಾಗ ಏಳುತ್ತಾಳೆ, ಮಂಚ ಕೊಂಚ ಅಲುಗಾಡುತ್ತೆ ಅಷ್ಟೆ. ಈ ಮೊಬೈಲಿನಲ್ಲಿ ರಿಂಗ್ ಆಗೋ ಮುಂಚೆ ವೈಬೇಟ್(ಕಂಪನ) ಆಗುತ್ತಲ ಹಾಗೇ ಇದೂ, ಇನ್ನಿವಳು ರಿಂಗಣಿಸಲು ಶುರು ಮಾಡ್ತಾಳೆ ಅಂತ ಸೂಚನೆ!!!

ಅವಳು ಎದ್ದಾಗಲೇ ಅರೆ ಎಚ್ಚರವಾಗಿರ್ತೇನೆ, ಇದೊಂಥರಾ ಅರೆನಿದ್ರೆ ಟೈಮ್ ನಂಗೆ. ಅಡುಗೆ ಮನೇಲಿ ಒಂದೊಂದೇ ಪಾತ್ರೆ ಸದ್ದಾಗದ ಹಾಗೆ ತೊಳೆದು ನನ್ನ ಟಿಫಿನ್ ಬಾಕ್ಸ ತುಂಬಲು ನಾನಾ ತರದ ತಿಂಡಿ ಮಾಡಲು ಅಣಿಯಾಗುತ್ತಿರ್ತಾಳೆ, ಅದಕ್ಕೆ ನಮ್ಮ ಆಫೀಸಿನಲ್ಲಿ ಎಲ್ಲರಿಗೂ ನನ್ನ ಬಾಕ್ಸ ಕಂಡ್ರೆ ಅಷ್ಟು ಹೊಟ್ಟೇಯುರಿ, "ಎಲ್ಲೋ ಹೊಟೇಲಿನಿಂದ ತಂದು ಹೆಂಡ್ತಿ ಮಾಡಿದ್ದು ಅಂತಾನೆ" ಅಂತ ಆಡಿಕೊಳ್ಳೋರು ಕಮ್ಮಿಯೇನಿಲ್ಲ. ಆರು ಆಗೋಷ್ಟರಲ್ಲಿ ಸ್ನಾನ ಮಾಡಿ, ಪೂಜೆ ಮಾಡುತ್ತಿರುತ್ತಾಳೆ. ಕೋಗಿಲೆ ಕಂಠ ಎನಲ್ಲದಿದ್ರೂ ತನ್ನಷ್ಟಕ್ಕೆ ತಾನೆ ನಾಕು ಸ್ತೋತ್ರ ವಚನಗಳ ಗುನುಗುನಿಸುತ್ತಿರುವಾಗ ಅಗರಬತ್ತಿ ವಾಸನೆ ಹೀರಲು ಮುಸುಕು ತೆಗೆಯುತ್ತೇನೆ. ಮತ್ತೆ ಮುಸುಕು ಮೇಲೆಳೆದು ಇನ್ನೊಂದು ಜೊಂಪು ಹತ್ತುತ್ತಿರಬೇಕು, "ಆ ಹೂವೂ, ಮಲ್ಲಿಗೆ ಕಾಕಡಾ ಮಾಲೆ ಬೇಕೇನಮ್ಮ" ಅಂತಾ ದನಿ ಕೇಳುತ್ತೆ, ಒಡುತ್ತ ಬಂದವಳೇ "ರೀ ಮಾಲೆ" ಅಂತ ತಿವಿದು ಎಬ್ಬಿಸ್ತಾಳೆ, ಅದೊ ಅಲ್ಲಿ ಪಾಕೆಟ್ ಇದೆ ಎಷ್ಟು ಬೇಕೊ ಅಷ್ಟು ಮಾಲೆ ತುಗೊ ನನ್ನ ಏಳು ಅನಬೇಡ ಅಂತೀನಿ. ಅವಳೆಲ್ಲಿ ಕೆಳ್ಬೇಕು ನಾನ ಕೊಂಡು ಕೊಟ್ರೆ ಸರೀ, ಎನಿದ್ರೂ ದುಡ್ಡು ನಂದೇ ತಾನೆ, ನಾನ ಕೊಟ್ರೇನು ನೀನ್ ತುಗೊಂಡ್ರೆನು ಅಂದ್ರೂ ಬಿಡಲ್ಲ, ಎದ್ದು ತಂದು ಅವಳ ಕೈಗಿಟ್ಟು ಮತ್ತೆ ಬಿದ್ಕೊತೇನೆ. ಮೊದ್ಲೆಲ್ಲ ನಾನೇ ಎದ್ದು ಕಾಯ್ತಿರ್ತಿದ್ದೆ ಗುಲಾಬಿ( ಅದು ನಾವು ಹೂವು ಮಾರೊಳಿಗಿಟ್ಟ ಹೆಸ್ರು) ಬರ್ತಿದ್ಲಲ್ಲ ಆವಾಗ, ಈಗಾದ್ರೆ ಈ ಮುಳ್ಳು ಅದೇ ಅವಳ ಗಂಡ ಬರ್ತಾನೆ. "ಲೇ ಮುಂಜಾನೆ ಮುಂಜಾನೆ ಆ ಮುಳ್ಳು ಮುಖ ನೋಡೊಕಾಗಲ್ಲ ನನ್ನ ಎಬ್ಬಿಸ್ಬೇಡ" ಅಂದೆ, ಸರೀ ಬಿಡಿ ಎನೊ ಮೊನ್ನೆ ಪಕ್ಕದ ಮನೆ ಪದ್ದು ನಿಮ್ಮೇಲೆ ಫುಲ್ ಇಂಪ್ರೆಸ್ ಆಗಿದ್ಲು, "ನೊಡ್ರಿ ನಿಮ್ಮೆಜಮಾನ್ರು ಮುಂಜಾನೆ ಎದ್ದು ಹೂವು ಬರೊವರೆಗೆ ಕಾದು ಮಾಲೆ ಕೊಡಿಸ್ತಾರೆ, ನಮ್ದೂ ಇದೆ ಹಾಲು ತುಗೊಂಬರೋಕು ಹೋಗಲ್ಲ" ಅಂತಿದ್ಲು ಅವ್ಳಿಗೇನು ಗೊತ್ತು ನೀವ್ ಗುಲಾಬಿಗೆ ಕಾಯಿದ್ರಿ ಅಂತಾ ಅಂತಾ ನಸು ನಕ್ಳು. ನಂಗೊತ್ತು ನಾಳೆ ನಾನು ಪದ್ದು ಇಂಪ್ರೆಸ್ ಮಾಡಕೆ ಅಂತಾನಾದ್ರೂ ಎಳ್ಳಿ ಅಂತಾನೆ ಹಾಗೆ ಹೇಳಿದ್ದು, ನಾಳೆಗೆ ಮೊಬೈಲಿನಲ್ಲಿ ರಿಮೈಂಡರ್ ಇಟ್ಟೆ, ಚಾನ್ಸ ಯಾಕೆ ಮಿಸ್ಸ್ ಮಾಡ್ಕೊಬೇಕು!!!

ಮತ್ತೆ ಹಾಸಿಗೆಯಲ್ಲಿ ಬಿದ್ದು ಹೆಬ್ಬಾವಿನಂತೆ ಹೊರಳಾಡುತ್ತಿರುತ್ತೇನೆ, ಕಾಫಿ ಕಪ್ಪೊಂದು ಹಿಡಿದು ಬರ್ತಾಳೆ, ಬೆಡ್ ಕಾಫಿ ಇದು, ಕೈಲೊಂದು ಸಾಸರ್ ಹಿಡಿದು ಮುಂದೆ ಕೂತ್ಕೊತಾಳೆ, ದಿನಾ ಹೀಗೇನೇ ನನಗೆ ಮಾಡಿದ ಆ ಕಪ್ಪು ಕಾಫಿಯಲ್ಲೇ ಅವಳಿಗೂ ಒಂದು ಸಿಪ್ಪು ಬೇಕು!! ಅವಳ ಸಾಸರಿಗೊಂದಿಷ್ಟು ಸುರಿದು ಒಂದು ಗುಟುಕಿನಲ್ಲಿ ಕಾಫಿ ಮುಗಿಸುತ್ತೇನೆ, ನಾವು ಕಂಪನಿಯಲ್ಲಿ ಪುಕ್ಕಟೆ ಅಂತಾ ಇಷ್ಟಿಷ್ಟು ದೊಡ್ಡ ಮಗ್ ನಲ್ಲಿ ಕಾಫೀ ಟೀ ಕುಡಿಯೋರು ಇದೆಲ್ಲಿ ನಮ್ ಹೊಟ್ಟೆಗೆ ಹತ್ಬೇಕು! ಆದ್ರೂ ಈ ಕಾಫಿ ರುಚಿನೇ ಬೇರೆ, ಕೆಲವೊಂದು ಸಾರಿ ಸುಮ್ನೇ ಸಕ್ರೇನೆ ಹಾಕಿಲ್ಲ ಅಂತ ಬೈದು, ಅವ್ಳು ರುಚಿ ನೋಡಿದ ಮೇಲೆ, ತುಟೀಲೇನು ಜೇನು ಇಟ್ಕೊಂಡಿದೀಯ ಈಗ ಸರಿಯಾಗಿದೆ, ಅಂತ ಛೇಡಿಸಿರ್ತೀನಿ. ಬೆಚ್ಚಗೆ ಹೊದ್ಕೊಂಡು ಕೂತಿದ್ದ ಹೊದಿಕೆ ಕಿತ್ಕೊಂಡು ಓಡ್ತಾಳೆ, ವಿಧಿಯಿಲ್ದೆ ಎದ್ದೇಳಲೇಬೇಕಾಗುತ್ತೆ, ಅಟ್ಟಿಸಿಕೊಂಡು ಹೋದ ನನ್ನ ನೂಕಿ, ಸ್ನಾನಕ್ಕೆ ಬಿಸಿ ನೀರಿದೆ ಹೋಗಿ ಅಂತಾಳೆ, ಬಿಸಿಬಿಸಿ ನೀನು ಜತೆಗಿದ್ರೆ ಬಿಸಿನೀರ್ಯಾಕೆ ಅಂತ ಅನ್ನುತ್ತ ಬಾತ್ ರೂಮ್ ಸೇರಿಕೊಳ್ತೇನೆ... ನನ್ನ ಕರ್ಕಷ ಕಂಠದಲಿ ನನ್ನದೇ ಸಾಹಿತ್ಯದ ಹಾಡೊಂದೂ ಹೊರ ಹೊಮ್ಮತೊಡುಗುತ್ತೆ... ಮತ್ತೊಂದಿನಾ ಆಫೀಸಿ ಹೊರಡೊ ಮುಂಚೆ ಸಿಕ್ತೀನಿ...

Copyright© Prabhuraj Moogi
www.telprabhu.com

## ಆಫೀಸಿಗೆ ಹೊರಟಾಗ...

ಮುಂಜಾನೆ ಏಳೂವರೆ ಆಗೋಷ್ಟೊತ್ತಿನಲ್ಲಿ ಸ್ನಾನ ಮುಗಿದಿರುತ್ತೆ. ತಲೆ ಒರೆಸಿಕೊಳ್ಳುತ್ತಾ ಅವಳ ಪಾಕಶಾಲೆಗೆ ಹೋಗಿ ಅವಳಿಗೊಂದಿಷ್ಟು ತಲೆಯಲ್ಲಿನ ನೀರು ಸಿಡಿಸಿ ಬೈಸಿಕೊಳ್ಳುತ್ತಿರುತ್ತೇನೆ. ಹೆಚ್ಚಿಟ್ಟ ತರಕಾರಿಯಲ್ಲಿ ಒಂದು ಗಜ್ಜರಿಯೊ ಸೌತೆಕಾಯಿಯೊ ಎತ್ತಲು ಕೈ ಹಾಕಿ ಸೌಟಿನಲ್ಲಿ ಏಟು ತಿಂದು ಹೊರಗೆ ಬಂದು, ದೇವರಿಗೊಂದು ನಮಸ್ಕಾರ ಹೇಳಿ, ಇಂಥ ನೆಚ್ಚಿನ ಹುಡುಗಿ ಜೊತೆ ಮಾಡಿದ್ದಕ್ಕೆ ಥ್ಯಾಂಕ್ಸ್ ಅಂದು. ಆಫೀಸಿನಲ್ಲಿ ತಲೆ ತಿನ್ನುತ್ತಿರುವ ಕೋಡೊಂದು ಹೇಗಾದ್ರೂ ಮಾಡಿ ವರ್ಕ್ ಆಗೋ ಹಾಗೆ ಮಾಡಪ್ಪ ಅಂತಾನೊ, ಇಲ್ಲ ವೀಕೆಂಡಿಗೆ ಕೆಲಸ ಬರದಿರುವ ಹಾಗೆ ಮಾಡೊ ಅಂತಾನೊ ಏನೊ ಒಂದು ಬೇಡಿಕೆ ಸಲ್ಲಿಸಿ ಡ್ರೆಸ್ ಹಾಕಿಕೊಳ್ಳಲು ಬೆಡ್ ರೂಂಗೆ ಹೋಗುತ್ತ ಈ ವೀಕೆಂಡು ಕೆಲ್ಸ ಇದೆ ರಜೆ ಇಲ್ಲಾ ಅಂತ ಡಂಗುರ ಸಾರುತ್ತೇನೆ. "ಯಾಕ್ರೀ ಶಾಪಿಂಗ್ ಹೊಗೋಣ ಅಂತಾ ಕಾದ್ತೀನಿ ಅಂತ ಆಫೀಸಿಗೆ ಹೊಗ್ತಿದಿರೊ ಹೇಗೆ" ಅಂತಾಳೆ, ಇಲ್ಲ ನಿಜ ಪ್ರೊಜೆಕ್ಟ್ ರಿಲೀಸು ಇದೆ ಅಂದ್ರೆ. ಏನ್ರಿ ಅದು ನಿಮ್ಮ ಪ್ರೊಜೆಕ್ಟ ಹೆಸ್ರು "ಬುಲ್ ಶಿಟ್ಟಾ" ಅಂತಾಳೆ. "ಲೇ ಇಂಗ್ಲೆಂಡಿನ ಮಹರಾಣಿ ನಿನ್ನ ಇಂಗ್ಲೀಶೋ ನೀನೊ ಎಲ್ಲಾ ಸರಿಯಾಗಿದೆ" ಅಂದ್ರೆ "ಮತ್ತಿನ್ನೇನ್ರಿ ಯಾವಾಗ್ಲೂ ಬುಲ್ ಶಿಟ್ ಪ್ರೊಜೆಕ್ಟ ಬುಲ್ ಶಿಟ್ ಪ್ರೊಜೆಕ್ಟ್ ಅಂತಿರ್ತೀರ ಅದಕ್ಕೆ ಅದೇ ಹೆಸ್ರೇನೊ ಅನ್ಕೊಂಡೆ" ಅಂತಾಳೆ. ಅದೂ ಕರೆಕ್ಟೆ ಬಿಡು ಅಂದು. ಹಾಸಿಗೆ ಮೇಲೆ ಅವಳು ತಾಸುಗಟ್ಟಲೆ ತಲೆ ಕೆಡಿಸಿಕೊಂಡು ತನಗಿಷ್ಟವಾದೊಂದು ಡ್ರೆಸ್ಸ್ ಆರಿಸಿ ತೆಗೆದಿಟ್ಟಿರುತ್ತಾಳೆ, ಅದರಲ್ಲಿ ತೂರಿಕೊಳ್ಳುತ್ತೇನೆ.

ಡಿಯೋಡ್ರಂಟ ಹಾಕಿಕೊಳ್ಳುತ್ತಿದ್ದಂತೇನೇ ಅದರ ಸುವಾಸನೆಗೆ "ಪರಿಮಳ" ನೆನಪಾಗಿ ಬಿಡ್ತಾರೆ, ಇವಳು ಸೇರಿಕೊಂಡಿರುವ ಸೊಷಿಯಲ್ ಕ್ಲಬ್ ಚೇರಮನ್ ಅವ್ರು, ಹೆಸ್ರೇನೊ ಬೇರೆ ಇದೆ, ಆದ್ರೆ ಅವರು ಹಾಕಿಕೊಳ್ಳೊ ಆ ಫಮ್ ಅಂತಿರೋ ಸೆಂಟ್ ವಾಸನೆ ನೋಡಿ "ಪರಿಮಳ"  ಅಂತಾ ನಾವಿಟ್ಟಿರೊ ಹೆಸ್ರು, ಸೆಂಟು ಬಾಟಲಿನಲ್ಲೆ ಮುಳುಗಿ ಒಂದು ಡುಮುಕಿ ಹೊಡೆದು ಬಂದಿರ್ತಾರೆ ಅಂತ ಕಾಣುತ್ತೆ, ಇವ್ಳೊ ಮನೆಗೆ ಅವ್ರು ಬಂದಾಗ ಅದು ಇದು ತೊರಿಸ್ತೀನಿ ಅಂತ ಮನೆ ತುಂಬಾ ಸುತ್ತಾಡಿಸಿ ರೂಂ ಫ್ರೆಶ್ನರ್ ಖರ್ಚು ಉಳಿಸಿರ್ತಾಳೇ. ಲೇ ಪರಿಮಳ ಯಾವಾಗ ಬರ್ತಾರೇ ಅಂದ್ರೆ ಇನ್ನೇನು ಮುಂದಿನ ವಾರ ಕರೆಯೊಣಾ ಅಂತಿದೀನಿ ಅತ್ತೆ ಬರ್ತಿದಾರಲ್ಲ ಮನೆ ಫಮ್ ಅಂದ್ರೆ ಅವ್ರಿಗೂ ಖುಶಿಯಾಗುತ್ತೆ ಅಂದ್ಲು, ಒಳ್ಳೆ ಪ್ಲಾನೇ ಹಾಕಿರ್ತಾಳೆ ಅಮ್ಮನ್ನ ಇಂಪ್ರೆಸ್ ಮಾಡಿ ಅದೇ ಟೈಮಿನಲ್ಲಿ "ಲೇ ಕಂಜ್ಯೂಸಾ ಎರಡು ಸೀರೆ ಕೊಡ್ಸೊ ಅವ್ಳಿಗೆ" ಅಂತ ಬೈಸಿ ನಾಲ್ಕು ಸೀರೆ ತುಗೊಂಡು ನನ್ನ ಕ್ರೆಡಿಟ್ ಕಾರ್ಡ ಲಿಮಿಟ್ಟು ಮೀರಿಸಿ ಬಿಟ್ಟಿರ್ತಾಳೆ.

ಅಂತೂ ರೆಡಿಯಾಗಿ ಡೈನಿಂಗ್ ಟೇಬಲ್ಲಿಗೆ ಬಂದ್ರೆ, ತಿಂದು ಸ್ವಲ್ಪ ದಪ್ಪ ಆಗ್ಲಿ ಅಂತಾ ಅವಳು ನಾಲ್ಕು ಜನರಿಗಾಗುವಷ್ಟು ಹಾಕಿಟ್ಟ ಟಿಫಿನ್ನು ಅದೇ ಗಡಿಬಿಡಿಯಲ್ಲಿ ಹಾಗೆ ಹೀಗೆ ಮಾಡಿ ಮುಗಿಸಿ, ಇನ್ನೇನು ಮಧ್ಯಾನ್ಹ ಲಂಚ್ ಬೇಡವೇ ಬೇಡ ಅನ್ನಿಸಿದ್ರೂ, ಅದೊ ಅಲ್ಲಿ ಲಂಚ್ ಬಾಕ್ಸ ರೆಡಿ ಮಾಡಿರ್ತಾಳೆ. ನಾನೇನು ತಿಂದು ಹೃತಿಕ್ ರೋಷನ್ನು (ಅವಳ ಫೆವರಿಟ್ಟು!) ಆಗಲ್ಲಾ ಕಣೇ ಅಂದ್ರೂ ಅವ್ಳು ಕೇಳಲ್ಲ. ಮಾತಿಲ್ಲದೆ ಬಾಕ್ಸ್ ಬ್ಯಾಗಿಗೆ ಹಾಕಿಕೊಳ್ಳುತ್ತೇನೆ. ಹೊರಡಲು ಶೂ ಹಾಕಿಕೊಳ್ಳ ಹೋದ್ರೆ ಸಾಕ್ಸು ಸಿಗಲ್ಲ, "ಲೇ ತಗಡು ಸಾಕ್ಸ ಎಲ್ಲೇ" ಅಂತ ಚೀರುತ್ತೇನೆ, ಸಿಟ್ಟು ಏನ್ ಬಂದಿರಲ್ಲ, ತಗಡು ಅನ್ನೋದು ಅತೀ ಪ್ರೀತಿ ಬಂದಾಗ, ಯಾವಾಗ್ಲೊ ಚಿನ್ನಾ ಅಂದ್ರೆ ಹಳೆಯದಾಯಿತ್ರಿ ಅಂದ್ಲು, ಪ್ಲಾಟಿನಮ್ಮು ಅನ್ಲಾ ಅಂದ್ರೆ ಜಾಸ್ತಿ ಆಯ್ತು ಅಂದದ್ದಕ್ಕೆ ಪ್ರೀತಿಯಿಂದ ತಗಡು ಅಂತೀನಿ.  ಸಾಕ್ಸು ಅಲ್ಲೇ ಬಿದ್ದಿರತ್ತೆ ನಂಗೆ ಮಾತ್ರ ಕಾಣಲ್ಲ ಬಂದು ಅವ್ಳು ಹುಡುಕಿ ಕೊಟ್ರೇ ಸಿಗ್ಬೇಕು.

ಅಪ್ಪಿ ಪಪ್ಪಿಯೊಂದು ಕೊಟ್ಟು ಹೊರಟರೆ, ಬಾಗಿಲಿ ಒರಗಿ ನಿಂತುಕೊಂಡು ನಾ ಬರುವುದು ರಾತ್ರಿಯೆಂದು ಗೊತ್ತಿದ್ರೂ "ಸಂಜೆ ಬೇಗ ಬನ್ರಿ" ಅಂತಿರುವ ಅವಳಿಗೆ ಕೈ ಮಾಡಿ ಬೈಕಿನ ಗೇರು ಹಾಕುತ್ತಿದ್ದರೆ ಕಿಟಕಿ ಸಂದಿಯಲ್ಲಿ ಪಕ್ಕದ ಮನೆ ಪದ್ದು ನೊಡುತ್ತಿರುತ್ತಾಳೆ. ಆಫೀಸಿನಲ್ಲಿ ಕೆಲಸ ಬಹಳ ಇದೆ, ಈ ಟ್ರಾಫಿಕ್ಕು ಬೇರೆ ಮತ್ತೊಂದಿನಾ ಸಿಗ್ನಲ್ಲಿನಲ್ಲಿ ಸಿಗುವ ಸುಂದರಿಯರೊಂದಿಗೆ ಭೇಟಿಯಾಗ್ತೇನೆ, ಬೈ ಬೈ...

Copyright© Prabhuraj Moogi
www.telprabhu.com

## ಸಿಗ್ನಲ್ಲಿನಲ್ಲಿ ಸೌಂದರ್ಯದೊಂದಿಗೆ...

ಮುಂಜಾನೆ ಎಂಟು ಗಂಟೆ ಅಂದ್ರೆ ರೋಡುಗಳೆಲ್ಲ ಕಿಕ್ಕಿರಿದ್ರು ತುಂಬಿರುತ್ತವೆ, ಆಫೀಸಿಗೆ ಹೊರಟ ನನ್ನಂತ ಟೆಕ್ಕಿಗಳು, ಕಾಲೇಜಿಗೆ ಹೊರಟಿರುವ ಹಕ್ಕಿಗಳು, ಮತ್ತು ಶಾಲೆಗೆ ಹೊರಟಿರುವ ಚುಕ್ಕಿಗಳು ಎಲ್ಲಾರಿಗೂ ಅವಸರ... ಅದರ ನಡುವೆ ಈ ಸಿಗ್ನಲ್ಲುಗಳು, ಟ್ರಾಫಿಕ್ಕು ಜಾಮುಗಳು ಅಂತ ಎಲ್ಲರೂ ಬೈಕೊಂಡ್ರೂ ಆ ಬಗ್ಗೆ ನನಗೇಕೊ ಬಲು ಪ್ರೀತಿ. ನಾನು ಆಫೀಸಿಗೆ ತಲುಪುವಲ್ಲಿ ಏನಿಲ್ಲವೆಂದ್ರೂ ಹತ್ತು ಸಿಗ್ನಲ್ಲುಗಳು, ಹತ್ತಿರ ಹತ್ತಿರ ಇಪ್ಪತ್ತು ಕಿಲೊ ಮೀಟರು ಪಯಣ, ಆದ್ರೂ ಬೇಜಾರಿಲ್ಲ. ಇವಳಂತಾಳೇ "ಪಕ್ಕದ ಮನೆ ಪದ್ದೂಗೆ ಮನೆ ತಿರುವಿನಲ್ಲಿ ಸಿಗ್ನಲ್ಲು ಕೊಡೊರು ನೀವು, ಇನ್ನು ಸಿಗ್ನಲ್ಲಿರುವ ಸರ್ಕಲ್ ಸಿಕ್ರೆ ಬಿಡ್ತೀರಾ, ಮೊಬೈಲ್ ಟವರ್ ಆಗಿ ಎಲ್ರಿಗೂ ಸಿಗ್ನಲ್ಲು ಕೊಟ್ಟಿದ್ದೆ ಕೊಟ್ಟಿದ್ದು, ಟೆಲಿಕಾಂ ಇಂಜಿನಿಯರಿಂಗ್ ಕಲಿತದ್ದು ಸಾರ್ಥಕ ಆಯ್ತು!! ಹೀಗಿರೊವಾಗ ಅದ ಹೇಗಪ್ಪ ಬೇಜಾರಾಗುತ್ತೆ". ಅದೂ ಸರೀನೆ ಸ್ಕೂಟಿ ಕಣ್ಣಿಗೆ ಕಂಡ್ರಂತೂ ಹಚ್(ವೊಡಫೊನ್) ನಾಯಿಯಂತೆ ಫಾಲೋ ಕೂಡ ಮಾಡ್ತೇನೆ!!!.

ಮನೆಯಿಂದ ಹೊರಟ್ರೆ ಹೊತ್ತು ಹೊಗಿದ್ದೆ ಗೊತ್ತಾಗಲ್ಲ, ಅದ್ಯಾವುದೋ ಸಿಗ್ನಲ್ಲಿನಲ್ಲಿ ಡಿಸ್ಕ್ ಬ್ರೆಕ್ ಹಾಕಿ ಗಕ್ಕನೆ ನಿಂತಾಗಲೇ ಗೊತ್ತಾಗೋದು ಇಷ್ಟು ದೂರ ಬಂದಿದ್ದೀನಲ್ಲ ಅಂತ, ಡಿಸ್ಕ್ ಬ್ರೆಕ್ ಹಾಕಲೇ ಬೇಕಂಬಷ್ಟು ಜೊರಾಗಿ ಬೈಕು ಏನೂ ಓಡ್ಸಲ್ಲ ಆದ್ರೂ ಸ್ಟೈಲ್‌ಗೆ ಸುಮ್ನೆ "ನೋಡು ನನ್ನ ಬೈಕಿಗೆ ಡಿಸ್ಕ್ ಬ್ರೆಕ್ ಇದೆ" ಅಂತ ತೋರಿಸೊಕೆ ಅಷ್ಟೇ. ಇವಳನ್ನ ಮೊದಲ ಸಾರಿ ಬೈಕಿನಲ್ಲಿ ಸುತ್ತೊಕೆ ಕರ್ಕೊಂಡು ಹೊಗಿದ್ನಲ್ಲ ಅವಾಗ ಫ್ರಂಟ್ ಬ್ರೆಕ್ ಹಾಕಿದ್ದೆ ಹಾಕಿದ್ದು, ಸಿಟ್ಟಿಗೆದ್ದು "ರೀ ಇನ್ನೇನಾದ್ರೂ ಬ್ರೆಕ್ ಹಾಕಿದ್ರೊ,ಆ ಡಿಸ್ಕ್ ಬ್ರೆಕ್ ಕಿತ್ತು ಕೈಲಿ ಕೊಡ್ತೀನಿ" ಅಂತ ಬೈದಿದ್ಲು ಹೀ ಹೀ... ಈಗ್ಲೋ ರೀ ಬರ್ತೀನಿ ಕರ್ಕೊಂಡು ಹೊಗ್ರೀ ಅಂದ್ರೂ, "ಲೇ, ನೀ ಹಿಂದೆ ಕೂತ್ಕೊಂಡ್ರೆ ಅಷ್ಟೇ ನಾನ್ ಆ ರೇಸನಲ್ಲಿ ಮಾಡ್ತಾರಲ್ಲ ಹಾಗೆ ಮುಂದಿನ ವ್ಹೀಲ್ ಎದ್ದು ವ್ಹೀಲಿ ಮಾಡ್ಬೇಕಾಗುತ್ತೆ" ಅಂತ ಛೇಡಿಸ್ತಿರ್ತೀನಿ. ನಾನೇನು ಅಷ್ಟ ದಪ್ಪ ಆಗೀದೀನೆನ್ರೀ ಅಂತಾ ಕೇಳ್ತಾಳೆ, ಅದಕ್ಕೆ "ನೀನಿನ್ನೂ ಏಳು ಮಲ್ಲಿಗೆ ತೂಕದ ರಾಜಕುಮಾರಿ ಆದ್ರೆ ಮಲ್ಲಿಗೆ ತೂಕ ಜಾಸ್ತಿ ಆಗ್ಬಿಟ್ಟಿದೆ ಅಷ್ಟೇ" ಅಂತ ಸಮಾಧಾನ ಮಾಡ್ತಿರ್ತೀನಿ.

ಹಾಗೂ ಹೀಗೂ ಮಾಡಿ, ತರಕಾರಿ ತರಬೇಕಿದೆ ಮಾರ್ಕೆಟ್ಗೆ ಬಿಡ್ರಿ ಅಂತಾನೊ, ಮೊಸರಿಲ್ಲ ತರ್ತೀನಿ ಹಾಸಿನಿಯ ಹಾಲಿನಂಗಡಿಗೆ ಡ್ರಾಪ್ ಕೊಡಿ ಅಂತಾನೊ ಜೊತೆ ಬಂದ್ಬಿಡ್ತಾಳೆ, ಎಲ್ಲ ನೆಪ ಅಷ್ಟೇ ನನ್ ಜತೆ ಬರ್ಬೇಕಾಗಿರುತ್ತೆ ಅಷ್ಟೇ. ಹೀಗೆ ಬಂದೊಳು ಹಿಂದೆ ಕೂತು ಪಟಪಟಾಂತ ಹೊಗೊ ಬರೊರ್ ಕಾಮೆಂಟ್ರಿ ಶುರು ಮಾಡಿಬಿಡ್ತಾಳೆ, "ರೀ ಅಲ್ಲಿ ನೊಡ್ರಿ ಅದೇ ಆ ಕೆಂಪು ಚೂಡಿದಾರ ಹಾಕೊಂಡಿದಾಳಲ್ಲ ಅಲ್ಲಿ" ಅವಳು ಮಾತು ಮುಗಿಸೊ ಮುಂಚೇನೆ "ಸಕತ್ತಾಗಿದಾಳಲ್ಲ!" ಅಂತೀನಿ, ಹೆಲ್ಮೆಟ್ಟನ್ನೆ ತಿವಿದು "ಆ ಚೂಡಿದಾರ ಚೆನ್ನಾಗಿದೆ ಅಲ್ವಾ ಅದ ನೋಡಿ ಅಂದಿದ್ದು" ಅಂತಾಳೆ. ಹೆಲ್ಮೆಟ್ಟು ಕಟ್ಟುನಿಟ್ಟು ಮಾಡಿದ್ದು ಒಳ್ಳೆದಾಯ್ತು ಅಂತನ್ಕೊಂಡು "ಒ ಅದಾ ನಾನೇನು ಕೊಡ್ಸಲ್ಲ ಬಿಡು" ಅಂತೀನಿ, "ಏನ್ ಬೇಡ ಅತ್ತೆ ಬರ್ತೀದಾರಲ್ಲ!!" ಅಂತಾಳೆ. ಅವ್ಳು ಆಗ್ಲೇ ಪ್ಲ್ಯಾನು ಮಾಡಿ ಆಗಿರತ್ತೆ, ಮುಂಜಾನೆಯಿಂದ ಸಂಜೆ ಇರೊ ಬರೊ ಎಲ್ಲಾ ಧಾರಾವಾಹಿಗಳನ್ನು ನೊಡಿ ಸೀರೆಗಳ ಆರಿಸಿಕೊಂಡಿರ್ತಾಳೆ, ಅಮ್ಮ ಬಂದಾಗ "ಅತ್ತೆ, ಮನೆಯೊಂದು ಮೂರು ಬಾಗಿಲು ಧಾರಾವಾಹೀಲಿ ಆ ಅಮ್ಮ ಉಟ್ಕೊಂಡಿರ್ತಾರಲ್ಲ ಅದೆ ಥರ ಸೀರೆ ಇದು ತುಗೊಳ್ಳಿ ಸುಪರ್ ಕಾಣುತ್ತೆ ನಿಮ್ಗೆ" ಅಂತಾ ನನ್ನ ಕ್ರೆಡಿಟ್ ಕಾರ್ಡನ ಖಜಾನೆಯ ಎಲ್ಲ ಬಾಗಿಲುಗಳನ್ನೂ ತೆಗೆದು ಬಿಟ್ಟಿರ್ತಾಳೆ.

ದಾರೀಲಿ ಸುಮ್ನೆ ಹಿಂದೆ ಕೂತಿದ್ದೊಳು, ಯಾವುದೊ ಸಿಗ್ನಲ್ಲಿನಲ್ಲಿ ಹಾಗೇ ನಡು ಬಳಿಸಿ ಹಿಂದಿನಿಂದ ಬಿಗಿಯಾಗಿ ಅಪ್ಪಿಕೊಂಡಳೆಂದರೆ, ನಾ ಜಾಗ್ರುತನಾಗಿ ಬಿಡ್ತೇನೆ. ಅಕ್ಕಪಕ್ಕದಲ್ಲೆ ನಮ್ಮ ಕವರೇಜ್ ಏರಿಯಾನಲ್ಲಿ ಯಾವುದೋ ಸುಂದರ ಹುಡುಗಿ ನನ್ನ ನೊಡುತ್ತಿದೆಯೆಂದು ಗ್ಯಾರಂಟಿ ಆಗಿರತ್ತೆ!!! ಅದ್ಕೆ ಅಲ್ವೆ ಇವ್ಳು ನನ್ನ ಹಾಗೆ ಅಪ್ಪಿ ಇವನು ನನ್ನೊನು ಅಂತ ಸಿಗ್ನಲ್ಲು ಕೊಡ್ತಿರೊದು. ಮಿರರ್‌ನಲ್ಲಿ ನೊಡಿದ್ರೆ ಚಾಕಲೇಟು ಕಸಿದೊ ಕೊಳ್ಳೊಕೆ ಹೊದಾಗ ಮಗು ಮುಖ ಮಾಡುತ್ತಲ್ಲ ಥೇಟ್ ಹಾಗೆ ಕಾಣುತ್ತೆ ಇವಳ ಮುಖಾರವಿಂದ. ನಾನೋ ಜರ್ಕಿನ್ ಹಾಕಿಕೊಂಡು, ಕೈಗೆ ಗ್ಲೌಸು, ತಲೆಗೆ ಹೆಲ್ಮೆಟ್ಟು, ಮುಖಕ್ಕೆ ಮಾಸ್ಕ ಮುಚ್ಚಿಕೊಂಡು ಪಕ್ಕಾ ಟೆರರಿಸ್ಟ್ ಥರ ಕಾಣ್ತಿರ್ತೀನಿ! ಅದೆಲ್ಲೊ ಗಾಬರಿಯಿಂದ ನೊಡ್ಬೇಕು ನನ್ನ ಯಾರಾದ್ರೂ!! ಇಲ್ಲಂದ್ರೆ ನನ್ನ ಮುಖಕ್ಕೆ ಅದ್ಯಾವ ಹುಡುಗಿ ಮಾರು ಹೊಗೋದು. ಸಿಗ್ನಲ್ಲುಗಳು ಇಷ್ಟ ಆಗೊಕೆ ಇದೊಂದೂ ಇನ್ನೊಂದು ಕಾರಣ, ಈ ಸಿಗ್ನಲ್ಲುಗಳಲ್ಲಿ ಕಾಣುವ ಎಲ್ರೂ ಸುಂದರಿಯರೇ, ಹೆಲ್ಮೆಟ್ಟುಗಳ ಅಡಿಯಲ್ಲಿ ಕಾಣೊದು ಅರೆ ಬರೆ ಮುಖ ಮಾತ್ರ, ಸೌಂದರ್ಯ ಅನ್ನೊದು ಮುಚ್ಚಿಸ್ಟಟ್ಟು ಹೆಚ್ಚಾಗುತ್ತದೆ.

ಅದಕ್ಕೆ ಅದೊಂದು ದಿನ ಬರೆದ ಚುಟುಕು ನೆನಪಾಗುತ್ತದೆ...
*ಪಕ್ಕದಲ್ಲೊಂದು ಗಾಡಿ ಬಂದು ನಿಂತಿತು.*
*ತಿರುಗಿ ನೋಡಿದವಳ ಹೆಲ್ಮೆಟ್ ಅಡಿಯಲ್ಲಿ ಕಂಡದ್ದು ಕಣ್ಣುಗಳೆರಡು ಮಾತ್ರ.*

Copyright© Prabhuraj Moogi
www.telprabhu.com

*ಹೃದಯ ಬಡಿತ ನಿಂತು ಹೋಯಿತು.*
*ಯಾಕೆಂದ್ರೆ ಅಷ್ಟರಲ್ಲೇ ಹೋಗಿತ್ತು ಹೃದಯ ಅವಳ ಹತ್ರ.*

ಈಗ ಬಿಡಿ ಅದೇ ಚೋಟುದ್ದದ ಟೀಶರ್ಟ್ ಹಾಕೊಂಡು ಪದೇ ಪದೇ ಕೆಳಗೆಳುದುಕೊಳ್ಳುತ್ತ ಹೊಗೊದೇ ಫ್ಯಾಷನ್ನು, ಇನ್ನೂ ಕೆಲವರು ಹೈಬ್ರೀಡ ಬದನೆಕಾಯಿ ಥರ, ಇಷ್ಟುದ್ದದ ಜಡೆ(ಹೆರಳು) ಇದ್ದು ಮೊಣಕಾಲುದ್ದದ ಜೀನ್ಸ ಹಾಕಿಕೊಂಡು ಕಾಣಿಸುತ್ತಾರೆ, ಅದೇನೊ ಬದಲಾವಣೆ ಕಾಲದ ಸಾಕ್ಷಿಯೆನ್ನುವಂತೆ ಅತ್ತೂ ಇಲ್ಲ ಇತ್ತೂ ಇಲ್ಲ. ನನಗೇಕೊ ಅವರೆಂದೂ ಅಷ್ಟು ಸುಂದರಿಯರೆಂದೆನಿಸುವುದಿಲ್ಲ. ನನ್ನವಳಿಗೂ ಅದು ಇಷ್ಟವಿದ್ದಂತಿಲ್ಲ, ಅದೊಂದಿನ ಸಿಗ್ನಲ್ಲಿನಲ್ಲಿ ಕಂಡ ಆ ಡುಮ್ಮಿ ಟೈಟ್ ಜೀನ್ಸ ಹಾಕಿದ್ದು ನೊಡಿ "ರೀ ಅದ್‌ಹೆಗ್ರೀ ಅದ್ರೊಳಗೆ ತೂರಿಕೊಂಡ್ಲು" ಅಂತ ನಗಾಡಿದ್ಲು.

ಸೌಂದರ್ಯ ಹೇಗಿರಬೇಕೆಂದ್ರೆ...
*ನಡುವಿಗೆ ಕಚಗುಳಿಯಿಡುವಷ್ಟು ಉದ್ದ ಕೂದಲು.*
*ಒಂದೇ ಕೈಯಲ್ಲಿ ಬಳಸಿ ಹಿಡಿಯಬಹುದಾದ ಬಳಕುವ ನಡು.*
*ಆ ನಡುವ ಸುತ್ತಿ ಕೈ ಮೇಲೆ ಜರಿದಿರುವ ಸೀರೆ ಸೆರಗು.*
*ನಡೆದರೆ ಗೆಜ್ಜೆ ಬಳೆಗಳ ಘಲಘಲ್ ಸದ್ದು.*

ಸೀರೆ ಕೂಡಾ ಅಷ್ಟೇನು ಸೇಫ್ ಅಲ್ಲ ಅದೂ ಈ ಬೈಕಿನಲ್ಲಿ ಹೊಗುವಾಗಲಂತೂ ಮೊದಲೇ ಅಲ್ಲ. ಆದರೂ ನಮ್ಮ ಭಾರತೀಯ ಪರಂಪರೆಯ ಉಡುಗೆ ಚೆನ್ನಾಗಿದೆ, ಹೀಗಂದಾಗಲೆಲ್ಲ ನನ್ನವಳು ಛೇಡಿಸುತ್ತಾಳೆ "ನೀವ್ಯಾಕೆ ಧೊತಿ ಪೆಠ(ಪಟಗ) ಹಾಕೊಂಡು ಅಪಾಚೆ(ಬೈಕ್) ಒಡಿಸಬಾರ್ದು" ಅಂತ. ನಾನೆಂದೂ ಅವಳಿಗೆ ಜೀನ್ಸ ಟೀಷರ್ಟ್ ಹಾಕಬೇಡೆಂದಿಲ್ಲ, ಅದೇಕೊ ಅವಳು ಹಾಕುವುದೂ ಇಲ್ಲ. ನಾನು ಮಾತ್ರ ಅವಳಿಷ್ಟದಂತೆ ಯಾವತ್ತೋ ಒಂದೊಂದು ಫಂಕ್ಷನ್‌ಗಳಲ್ಲಿ ಧೋತಿ ಉಟ್ಟು ನಿಂತಿರುತ್ತೇನೆ. ಪದೇ ಪದೇ ಬಂದು "ರೀ ಎಳೆದು ಬಿಡ್ಲಾ, ಎಳೆದು ಬಿಡ್ಲಾ" ಅಂತಾ ಕಾಡಿರ್ತಾಳೆ, ನಾನೆಲ್ಲಿ ಧೋತಿ ಕೈಕೊಟ್ಟೀತೆಂದು ಒಳಗೆ ಬರ್ಮುಡ ಹಾಕಿಕೊಂಡು ತಯ್ಯಾರಿಯಲ್ಲಿರುತ್ತೇನೆ!!!

ಹೀಗೆ ಸಿಗ್ನಲ್ಲಿನಲ್ಲಿ ಕಾಣುವ ಪ್ರತಿಯೊಬ್ಬರನ್ನೂ ನನ್ನ ಸೌಂದರ್ಯದ ತಕ್ಕಡಿಯಲ್ಲಿ ತೂಗಿ ಅಳೆದು ನೊಡುತ್ತಿರುತ್ತೇನೆ. ಚುಟುಕುಗಳ ಬರೆಯಲು ಸ್ಫೂರ್ತಿಯಾದವರೆಷ್ಟೊ, ಕಂಡೂ ಕಾಣದೇ ಕಣ್ಮರೆಯಾದವರೆಷ್ಟೋ, ಆದರೂ ಅದೊಂದು ಸುಂದರಿಯರ ಸ್ವರ್ಗ. ಮುಖ ಕಾಣಿಸದಿದ್ರೂ ಮೈ ಮಾಟದಲ್ಲಿ ಮೇನಕೆಯನ್ನೂ ಮೀರಿಸಿದವಳ ಸ್ಕೂಟಿ ಬೆಂಬಿದ್ದು ಮೂರು ಕಿಲೊಮೀಟರು ಎಲ್ಲೊ ದೂರ ಹೊಗಿ ಪೆಟ್ರೊಲು ವೇಸ್ಟು ಮಾಡಿಕೊಂಡು ಬಂದಿದ್ದು, "ವಿಜಯನಗರದ ಇಳುಕಲಿಗೆ ಬೈಕ್ ಆಫ್ ಮಾಡಿ ಒಡಿಸಿ ಉಳಿಸಿದ ಪೆಟ್ರೊಲ್ ಹೀಗೆ ವೇಸ್ಟು ಆಗದೇ ಇನ್ನೇನು" ಅಂತ ಇವ್ಳು ಹಂಗಿಸೊದು. ಸಿಗ್ನಲ್ಲಿನಲ್ಲಿ ಪಕ್ಕದಲ್ಲೊಂದು ಪರಿ(ದೇವಕನ್ಯೆ) ಕಂಡಾಗ, ಅರವತ್ತು ಎಣಿಸೋ ಸೆಕೆಂಡ ಬೋರ್ಡ್ ಯಾಕೆ ನೂರಿಪ್ಪತ್ತು ಎಣಿಸೊಲ್ಲ ಅಂತಾ ಬೈದುಕೊಳ್ಳೋದು. ಹೀಗೇ ಸಿಗ್ನಲ್ಲುಗಳು ದಿನೇ ದಿನೇ ಹೊಸತನ ತರುತ್ತಿರುತ್ತವೆ.

ಇವಳಿಗೆ ದಿನಾಲೂ ಸಿಗ್ನಲ್ಲಿನ ರಿಪೊರ್ಟು ಕೊಡಬೇಕು, ದಿನಾ ಸರಿಯಾಗಿ ನಾನು ಎಂಟಕ್ಕೆ ಎದ್ದು ಬಿದ್ದು ಓಡುತ್ತಿದ್ದೇನೆಂದರೆ ಅದ್ಯಾವುದೊ ಸಿಗ್ನಲ್ಲಿನಲ್ಲಿ ದಿನಾಲೂ ನಂಗೆ ಯಾವುದೊ ಹುಡುಗಿ ಕಾಣಿಸುತ್ತಿರಬೇಕು ಅಂತ ಇವಳಿಗೆ ಗೊತ್ತಾಗಿರುತ್ತದೆ ಅಷ್ಟರ ಮಟ್ಟಿಗೆ ಅವಳು ನನ್ನ ಅರ್ಥ ಮಾಡಿಕೊಂಡಿದ್ದಾಳೆ, ಅವರನ್ಯಾಕೆ ನೊಡುತ್ತೀರಿ ಮನೆಯಲ್ಲಿ ಮಡದಿಯೆಂದು ನಾನಿಲ್ಲವೇ ಎಂದು ಅವಳೆಂದೂ ಕೇಳಿಲ್ಲ, ಅದೆಲ್ಲ ಕ್ಷಣಿಕ, ಎಷ್ಟೇ ಸಿಗ್ನಲ್ಲುಗಳಿದ್ದರೂ ಅಲ್ಲೆಲ್ಲಿ ಗಾಡಿ ನಿಂತರೂ ಕೊನೆಗೆ ಮನೆಯೆಂಬ ಪಾರ್ಕಿಂಗೆ ಲಾಟಿಗೇ ಬರೊದು ಅಂತ ಅವಳಿಗೂ ಗೊತ್ತು. ನೋಡಿದರೂ ನೋಡದಂಗೆ ನಾಟಕ ಮಾಡುವರ ಮುಂದೆ, ನೋಡಿದ್ದು ನೋಡಿದಂಗೆ ಹೇಳುವ ನಾನೆಂದರೆ ಅವಳಿಗೆ ಹೆಮ್ಮೆ.

ಇಂದು ಸಂಜೆ ಪಾರ್ಟಿ ಇದೆ, ನನ್ನ ಕೊಲೀಗು ಜತೆ ಬರ್ತಿದಾಳೆ ಡ್ರಾಪ್ ಮಾಡಿ ಬರ್ತೀನಿ ಅಂತ ಫೊನ್ ಮಾಡಿದ್ದೆ, "ರೀ ನೊಡೋಕೆ ಚೆನ್ನಾಗಿದಾಳಾ, ಸಿಗ್ನಲ್‌ನಲ್ಲಿ ಸ್ಟೈಲ್ ಹೊಡೀರಿ ಅವ್ಳಗೂ ಫ್ರಂಟ್ ಬ್ರೆಕ್ ಹಾಕಿ ಹೆದರಿಸ್ತೀರಾ?" ಅಂತಾ ಕೇಳಿದ್ಲು ಅವ್ಳಿಗೆ ಗೊತ್ತು ನಾನ್ ಹಾಗೆ ಮಾಡಲ್ಲ ಅಂತಾ, ಸುಮ್ನೆ ಕೆದಕ್ತಾಳೆ, ನಾನ್ ಹೊಟ್ಟೆ ಉರಿಸೋಣ ಅಂತಾ ಫೊನ್ ಮಾಡಿದ್ರೆ ನನ್ನೇ ಏಮಾರಿಸಿ ಬಿಡ್ತಾಳೆ. ಸಿಗ್ನಲ್ಲಿನಲ್ಲಿ ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕು ಲೇಟ್ ಆಗಿ ಬರುವ ಗಂಡನ ಅನುಮಾನಿಸುವ, ಮೊಬೈಲ್ ಸಿಗ್ನಲ್ ಸಿಗದೇ ಫೊನ್ ಮಾಡಲಾಗದ ಪತಿಯ ಶಂಕಿಸುವ ಪತ್ನಿಯರ ನಡುವೆ ಇವಳಂಥವರೂ ಇದ್ದಾರೆಂದರೆ ನನಗೇ ಅಚ್ಚರಿಯಾಗುತ್ತದೆ. ಹೀಗಿರುವಾಗ ಯಾವ ಅಪ್ಸರೆ, ಯಾವ ಸಿಗ್ನಲ್ಲಿನಲ್ಲಿ, ನನ್ನ ಮುಂದೆ ಸುಳಿದರೇನಂತೆ, ಮನಸ್ಸು ಮನೆಯೆಡೆಗೇ ಎಳೆಯುತ್ತದೆ... ಸರೀ, ಹೀಗೆ ನಿಮ್ಮೊಂದಿಗೆ ಸಿಗ್ನಲ್ಲಿನಲ್ಲಿ ನಿಂತು ಮಾತಾಡುತ್ತಿದ್ರೆ ಟ್ರಾಫಿಕ್ ಪೋಲಿಸ್ ಬಂದು ಹಿಡಕೊಂಡು ಹೋಗಿ ಬಿಡ್ತಾನೆ... ಮತ್ತೊಂದಿನಾ ಮತ್ತೊಂದು ವಿಷಯದೊಂದಿಗೆ ಸಿಕ್ತೀನೆ... ಒಕೆ ಬೈ ಬೈ... ಕೀಂ ಕೀಂ ಸರೀರಿ ಸಿಗ್ನಲ್ಲು ಬಿಟ್ತು...

Copyright© Prabhuraj Moogi
www.telprabhu.com

Copyright© Prabhuraj Moogi
www.telprabhu.com

## ಹೆಲ್ಪು ಮಾಡಲು ಹೋಗಿ...

ಅಂದು ಬೆಳಿಗ್ಗೆ ಯಾಕೋ ಇವಳು ಎದ್ದಿರಲಿಲ್ಲ, ಎಂದೂ ತಪ್ಪದೇ ಏಳೊ ಇವಳಿಗೆ ಎನಾಯ್ತು ಅಂತನಕೊಂಡು ಹಾಗೇ ಅಲುಗಿಸಿದೆ, ಇದೇನು ಇಷ್ಟು ಬಿಸಿ, ಮೊದ್ಲೆ ಹಾಟ್ ಆಂಡ್ ಸೆಕ್ಸಿ ಇವ್ಳು, ಅದ್ರೂ ಇವತ್ತು ಬಹಳೇ ಹಾಟು ಅನಿಸ್ತು, ಮಲಗಿದಲ್ಲಿಂದಲೇ ಜ್ವರ ಬಂದಿದೆ ಅಂತ ಕಾಣುತ್ತೆ ಅಂದ್ಲು. ಹಣೆ ಹಿಡಿದು ನೊಡುತ್ತಿದ್ದೆ, "ರೀ ಮೊಟ್ಟೆ ಇದ್ರೆ ತಂದು ಹಾಕಿ ಅಮ್ಲೆಟ್ ಆಗುತ್ತೆ, ನಿಮ್ಮ ಟಿಫಿನ್ ರೆಡಿ" ಅಂದ್ಲು. ಹೌದು ತುಂಬಾನೇ ಬಿಸಿಯಾಗಿತ್ತು, ಈಗ್ಲೂ ತುಂಟಾಟಕ್ಕೇನೂ ಕಮ್ಮಿಯಿಲ್ಲ, "ಕ್ರೊಸ್ತೀನ್ ನೊಡು ಒಂದು, ಸುಮ್ನೆ ಮಲಗಿರು" ಅಂತ ಮೇಲೆದ್ದೆ, "ಎನಿಲ್ಲ ಸ್ವಲ್ಪ ಮೈಬಿಸಿಯಾಗಿದೆ, ನಿಮ್ಗೆ ಲೇಟ್ ಆಯ್ತೂಂತ ಕಾಣುತ್ತೆ ಕಾಫಿ ಮಾಡ್ಬಿಡ್ತೀನಿ" ಅಂತ ಎದ್ದಳು, "ಎದ್ರೆ ಕಾಲು ಮುರಿದಾಕಿಬಿಡ್ತೀನಿ ಈವಾಗ್" ಅಂತ ಗದರಿಸಿದೆ, "ಮತ್ತಿನ್ನೇನು, ಕಾಫಿ ಪಕ್ಕದಮನೆ ಪದ್ದು ಮಾಡಿಕೊಡ್ತಾಳಾ" ಅಂದ್ಲು. ಹಾಗೇ ಸುಮ್ನೆ ನೊಡ್ದೆ, ಅವ್ಳಿಗೆ ಗೊತ್ತಾಯ್ತು, ಇನ್ನು ಸುಮ್ನಿರೊದೇ ವಾಸಿ ಅಂತ. ಅವ್ಳು ಹಾಗೇನೆ, ಸ್ವಲ್ಪ ಮಾತು ಜಾಸ್ತಿ ಯಾವಾಗ್ಲೂ ತರಲೆ, ಒಂದ್ನಿಮಿಷ್ ಸುಮ್ನಿರಲ್ಲ, ತಮಿಳು ಬರದಿದ್ರೂ ರೊಡ್ ಕೊನೆ ಮನೆ ತಮಿಳು ಪಾಟಿ (ಪಾಟಿ ಅಂದ್ರೆ ತಮಿಳಲ್ಲಿ ಅಜ್ಜಿ ಅಂತ) ಜತೆ ಹರಟೆ ಹೊಡೆದು ಬರ್ತಾಳೆ ಅಂದ್ರೆ ನೀವೆ ಊಹಿಸಿ.

ಇಂದು ಒಳ್ಳೆ ಚಾನ್ಸು ಸಿಕ್ಕಿದೆ ಅವಳ್ನ ಇಂಪ್ರೆಸ್ ಮಾಡೊಕೆ ಅನ್ಕೊಂಡು, ಈವತ್ತು ನಾನು ಕಾಫಿ, ಟಿಫಿನ್ ರೆಡಿ ಮಾಡಿದ್ರೆ ಹೇಗೆ ಅಂತ ಯೊಚಿಸಿ, "ನೀನು ಮಲಗಿರು ಇಂದು ಕಾಫಿ ಟಿಫಿನ್ ನಂದು" ಅಂದೆ, ಕೇಳಿ ಅವಳ ಟೆಂಪರೇಚರ್ ಇನ್ನೂ ಸ್ವಲ್ಪ ಜಾಸ್ತಿ ಆಯ್ತು ಅಂತ ಕಾಣುತ್ತೆ, "ಎನೂ ಬೇಡ ಹೊಟೇಲ್‌ನಲ್ಲಿ ತಿನ್ಕೊಂಡು ಹೋಗಿ, ನಂಗೆ ಹಸಿವಿಲ್ಲ ಮಧ್ಯಾಹ್ನ ಎನಾದ್ರೂ ಬೇಕಾದ್ರೆ ಬ್ರೆಡ್ ಇದೆ, ಕಾಫಿ ಬ್ರೆಡ್ ಸಾಕು ನಂಗೆ ಅಂದ್ಲು" ನಾನು ಕೇಳ್ಬೇಕಲ್ಲ "ಎನೂ ಬೇಡ ಅನ್ನ ಮಾಡಿದ್ದೀನಿ ಈಗ ಕಾಫಿನಾದ್ರೂ.." ಅಂತಿದ್ದೆ "ರೀ ಸುಮ್ನೆ ಆಫೀಸಿಗೆ ಹೊಗ್ತೀರೊ ಇಲ್ವೊ ಈಗ" ಅಂತ ರೇಗಿದ್ಲು, ಕೇಳೊರ್ಯಾರು...

ಫ್ರಿಜ್ನಲ್ಲಿರೊ ಹಾಲು ತೆಗೆದು ಅಡಿಗೆಮನೆ ಕಡೆ ಕಾಲಿಟ್ಟೆ, ಕಾಫಿ ಮಾಡೋಕೆ ಹೋಗಿ ಇದು ಕಷಾಯ ಮಾಡುತ್ತೆ ಅಂತ ಹಿಂದಿಂದ ಹೊದಿಕೆ ಹಾಗೇ ಹೊದ್ದುಕೊಂಡು ಹೊರಬಂದ್ಲು, ಲೇ ಹೋಗೆ ನಾನ್ ಮಾಡ್ತೀನಿ ಅಂದ್ರೆ, ಸುಮ್ನೆ ನೊಡ್ತಿನೀ ನೀವು ಮಾಡಿ ಅಂದ್ಲು, ಮುಂಜಾನೆ ಮುಂಜಾನೆ ಕಾಮಿಡಿ ಷೊ ಇದು ಅಂತಾ ಪಕ್ಕಾ ಗೊತ್ತಾಗಿತ್ತು ಅವ್ಳಿಗೆ. ಎನ್ ಬಹಳ ಹೆಲ್ಪ ಮಾಡೋರ ಹಾಗೆ, ಒಂದು ಕುರ್ಚಿ ಎಳೆದು ತಂದು ಕೊಟ್ಟು " ಹೂಂ ಹೊಗ್ಲೀ ಕೂತ್ಕೊ" ಅಂದೆ, ಹೊದಿಕೆ ಹೊದ್ಕೊಂಡು ರಾಣಿ ಆಸೀನರಾದ್ರು!!

ಹಾಲು ಕಾಯಿಸಲಿಟ್ಟು, ಪುಡಿ ಕಾಫಿ ಹುಡುಕತೊಡಗಿದೆ, ಅದೊ ಅಲ್ಲಿ ಬ್ರು ಕಾಫಿ ಬಾಟಲ್ಲು ಕಾಣಿಸ್ತು, ಎತ್ತಿ ನೋಡಿದೆ ಯಾಕೊ ಕಲರು ಬೇರೆ ಕಾಣಿಸ್ತು, "ಎನೇ ಕಾಫಿ ಪುಡಿ ಕಲರ್ರು ಹೀಗಿದೆ" ಅಂದೆ ಎಲ್ಲಿ ತೊರ್ಸಿ ಅಂದೊಳು ನೊಡಿ "ಅದು ಮಸಾಲೆ ಪುಡಿ, ಕಾಫಿ ಖಾಲಿ ಆಗಿದೆ, ಅದೂ ಗೊತ್ತಾಗಲ್ಲ ನಿಮ್ಗೆ" ಅಂತ ಸಿಟ್ಟಿಗೆದ್ಲು. ಕಾಫಿ ಬಾಟಲಿನಲ್ಲಿ ಮಸಾಲೆ ಹಾಕಿಟ್ರೆ ನಂಗೆ ಹೇಗೆ ಗೊತ್ತಾಗ್ಬೇಕು, "ಸುಮ್ನೆ ನಿನ್ನ ಟೆಸ್ಟ ಮಾಡ್ತಿದ್ದೆ" ಅಂತ ರೀಲು ಬಿಟ್ಟೆ, ಹೇಳಿರದಿದ್ರೆ ಮಸಾಲೆ ಕಾಫಿ ರೆಡಿ ಆಗಿರೋದು!!!

ಪ್ಲಾನ್ ಚೇಂಜ್ ಆಯ್ತು, ಟೀ ಮಾಡೋಣ ಅಂತಾ ಡಿಸೈಡು ಮಾಡಿದೆ. ಟೀ ಯಾವ ದಬ್ಬದಲ್ಲಿದೆ ಅಂತ ಯಾರಿಗೆ ಗೊತ್ತು, ಈ ಸಾರಿ ರಿಸ್ಕು ಬೇಡ ಅಂತ ಅವಳ ಕೇಳಿ ದಬ್ಬ ತೆಗೆದೆ. ಇಷ್ಟರಲ್ಲೇ ಹಾಲು ಬಿಸಿಯಾಗಿ ಉಕ್ಕಿ ಬಂತು, ಹೊಸದಾಗಿ ಮನೆಗೆ ಬಂದಾಗ ಹಾಲು ಉಕ್ಕಿಸಿರಲಿಲ್ಲ, ಅದರ ಬಾಕಿ ಈಗ ತೀರಿತು ಅನ್ಸತ್ತೆ, ಅವಳು ನೋಡಿ ಚೀರಿದಾಗ ಎನೂ ತಿಳಿಯದೆ ಹಾಗೆ ಬರಿಗೈಯಿಂದ ಪಾತ್ರೆ ಇಳಿಸ ಹೊಗಿ ಕೈ ಸುಟ್ಕೊಂಡೆ, ಅದೇ ಭರದಲ್ಲಿ "ಮೊದ್ಲೇ ನೊಡ್ಬಾರದಿತ್ತಾ" ಅಂತ ಬೈದೆ, ಕೈ ಬೇರೆ ಸುಟ್ಟಿತ್ತಲ್ಲ ಸಿಟ್ಟು ಬಂದಿತ್ತು. "ಕಾಫಿ ಮಾಡ್ತೀನಿ ಅಂತ ಬಂದೊರಾರು ನಾನ್ ಮೊದ್ಲೇ ಬೇಡ ಅಂದೆ" ಅಂತ ತಿರುಗಿ ಬಿದ್ಲು, ತಪ್ಪು ನಂದಿತ್ತು... ಇರ್ಲಿ ಬಿಡು ಅಂತಾ ಮತ್ತೊಂದು ಪಾತ್ರೆಲೀ ಎರಡು ಕಪ್ಪು ಅಂತ ಅಳೆದು, ಹಾಲು ಹಾಕಿದ್ರೆ ಸರಿಯಾಗತ್ತೆ ಅಂತ ಎನೊ ಒಂದು ಮಹಾ ಲೆಕ್ಕ ಮಾಡಿ ನೀರು ಹಾಕಿದೆ, ಅಷ್ಟೇನಾ ಅಂದ ಅವಳಿಗೆ ನಾನೆಲ್ಲ ಲೆಕ್ಕ ಮಾಡಿ ಹಾಕಿದೀನಿ ಸರಿಯಾಗತ್ತೆ ಸುಮ್ನಿರು ಅಂತ ಬಾಯಿ ಮುಚ್ಚಿಸಿದ್ದೂ ಆಯ್ತು, ಆಫೀಸಿನಲ್ಲಿ ಶುಗರ್ ಕ್ಯೂಬ್ (ಅದೇ ಸಕ್ಕರೆಯ ಚೌಕಾಕಾರದ ಕಣ್ಣೆಗಳು) ಹಾಕಿ ರೂಢಿ ಈಗ ಸಕ್ಕರೆ ಎಷ್ಟು ಹಾಕಬೇಕು ಅಂತ ಯೊಚಿಸುತ್ತಲೇ ಟೀ ಕುದ್ದು ಕುದ್ದು ಎರಡು ಕಪ್ಪು ಹೊಗಿ ಒಂದು ಕಪ್ಪು ಆಗಿತ್ತು, ಅಂತೂ ಹಾಲು ಜಾಸ್ತಿ ಹಾಕಿದರಾಯ್ತೆಂದು ಸಕ್ಕರೆ ಒಂದಿಷ್ಟು ಸುರಿದೆ. ಹಾಗೂ ಹೀಗೂ ಮಾಡಿ ಒಂದೂವರೆ ಕಪ್ಪು ಟೀ ರೆಡಿಯಾಯ್ತು!!! ಅವಳೆಲ್ಲಿ ಬೇರೆ ಕಪ್ಪಲ್ಲಿ ಕುಡಿತಾಳೆ ನನ್ನ ಕಪ್ಪಿಂದಲೆ ಸಾಸರಿಗೊಂದಿಷ್ಟು ಹಾಕಿ ಹಿಡಿದ್ರೆ, ಕೈಯಿಂದ ಕಪ್ಪು ಕಿತ್ಕೊಂಡ್ಲು, "ನೀವ್ ಮಾಡಿದ್ದು ರುಚಿ ಹೇಗಿದೆ ನೊಡ್ಬೇಕು ನಂಗೇ ಜಾಸ್ತಿ" ಅಂದ್ಲು. ಸಾಸರಿನಲ್ಲಿ ನಾ ಮೊದಲು ರುಚಿ ನೊಡಿದೆ, ಟೀ ಪುಡಿ ಕುದ್ದದ್ದು ಜಾಸ್ತಿಯಾಗಿ ಕಹಿಯಾಗಿತ್ತು, ಮುಖಕ್ಕೆ

Copyright© Prabhuraj Moogi
www.telprabhu.com

ಎರಚುತ್ತಾಳೇನೊ ಅಂತ ಅವಳೆಡೆಗೆ ನೊಡಿದ್ರೆ, ಖಡಕ ಟೀ ಮಾಡೀದೀರಾ ಅಂತನ್ನುತ್ತ ಹೀರುತ್ತಿದ್ಲು... ನನಗೇಕೊ ನಾ ಅವಳ ಹೊಸರುಚಿ ಹೊಗಳಿದ್ದು ನೆನಪಿಗೆ ಬಂತು...

ಕುರ್ತುಕೋಟಿ ಅವಲಕ್ಕಿ ಮಾಡ್ಕೊತೀನಿ ಟಿಫಿನ್‌ಗೆ, ದ್ಯಟ್ಸ ಕನ್ನಡ ದಾಟ್ ಕಾಮ್‌ನಲ್ಲಿ ಯಾರೋ ಹೇಗೆ ಮಾಡೊದು ಅಂತ ಲೇಖನ ಬರ್ದೀದಾರೆ ಅಂತಂದೆ, "ರೀ ನಿಮ್ಗೇನು ಈವತ್ತು ರಜೇನಾ" ಅಂತ ಎಡವಟ್ಟು ಪ್ರಶ್ನೆ ಕೇಳಿದ್ಲು, ಪ್ರಶ್ನೆ ಅರ್ಥ ನನಗೆ ಆಗಿತ್ತು, ಆಯ್ತು ನಾರ್ಮಲ್ ಅವಲಕ್ಕೀನೇ ಮಾಡೋಣ ಅಂತಂದು ಈರುಳ್ಳಿ ಹೆಚ್ಚಲು ಕುಳಿತೆ, ಹೆಚ್ಚಿದ್ದಕ್ಕಿಂತ ಕಣ್ಣಲ್ಲಿನ ನೀರು ಒರೆಸಿಕೊಂಡಿದ್ದೇ ಜಾಸ್ತಿ ಆಯ್ತು, ನೋಡಿ ನೋಡಿ ಅವಳೂ ಸೆರಗಿಂದ ಒಂದಿಷ್ಟು ಕಣ್ಣೊರಿಸಿದ್ಲು, ಅದ್ ಹೇಗೆ ಫಾಸ್ಟ್ ಆಗಿ ಹೊಟೇಲಿನಲ್ಲಿ ಕತ್ತರಿಸುತ್ತಾರಲ್ಲ, ಹಾಗೆ ಕತ್ತರಿಸೋದು ಹೇಗೆ ಅಂತ ಅವಳಿಗೆ ತೋರಿಸ ಹೊಗಿ ಬೆರಳು ಕುಯ್ದುಕೊಂಡೆ. ರಕ್ತ ಚಿಮ್ಮಿದ್ದು ನೋಡಿ ಬೆರಳು ಬಾಯಿಗಿಟ್ಕೊಂಡು ಬಯ್ಯೊಕೆ ಬಾಯಿ ತೆರೆಯಲಾಗದೇ ಕಣ್ಣಲ್ಲೇ ಕೋಪ ತೊರಿಸಿದ್ಲು. ಇನ್ನು ಏನೂ ಮಾಡುವುದೂ ಆಗುವ ಹಾಗೆ ಕಾಣಲಿಲ್ಲ, ನಾನು ಮಾಡುತ್ತೇನಂದ್ರೂ ಅವಳು ಬಿಡಲು ಸಾಧ್ಯವಿಲ್ಲ ಅಂತ ಗೊತ್ತಾಗಿ ಮೇಲೆದ್ದೆ.

ನಾನವಳ ಡಾಕ್ಟರ್ ಕಡೆ ಕರೆದುಕೊಂದು ಹೊಗಬೇಕಿದ್ದು, ಈಗ ಅವಳೇ ನನ್ನ ಕರೆದೊಯ್ಯುವ ಹಾಗಾಗಿತ್ತು. ಇಬ್ಬರೂ ಹೋಗಿ ಡಾಕ್ಟರಿಗೆ ಇನ್ನೂರು ಚೆಲ್ಲಿ, ಬೆರಳು ಡ್ರೆಸ್ಸಿಂಗ ಮಾಡಿಸಿಕೊಂಡು, ಮಾತ್ರೆ ಬರೆಸಿಕೊಂಡು ಹೊರಬಂದಿದ್ದಾಯ್ತು. "ನರ್ಸ್ ನೋಡಿದ್ಯಾ" ಅಂತ ತರಲೆ ಪ್ರಶ್ನೆ ಹಾಕಿದೆ, "ಯಾಕೇ ವಾಪಸ್ಸು ಕರ್ಕೊಂಡು ಹೋಗಿ ನಿಮ್ಗೊಂದು ಚುಚ್ಚಿಸಿಕೊಂಡು ಬರ್ಲಾ, ಅವಳು ಇಂಜೆಕ್ಷನ್ ಚೆನ್ನಾಗಿ ಮಾಡ್ತಾಳೆ" ಅಂತ ರೇಗಿದ್ಲು. ಟೈಮು ಬೇರೆ ಆಗಿತ್ತು, ಶಾಂತಿ ಸಾಗರದಲ್ಲಿ (ಹೊಟೇಲು) ಶಾಂತಿಯಿಂದ ಇಬ್ಬರೂ ಇಡ್ಲಿ ತಿಂದ್ವಿ. ಅವಳ ಮನೆಗೆ ಬಿಟ್ಟು ಆಫೀಸಿಗೆ ಹೊರಟೆ... ದಾರಿಯಲ್ಲಿ... ಪಾಪ ಹುಶಾರಿಲ್ಲ್ ಮನೇಲಿ ಒಬ್ಳೆ ಹೇಗೆ? ನಾನಿದ್ದು ಏನಾದ್ರೂ ಹೆಲ್ಪ್ ಮಾಡೋಣ ಅಂತಾ ಯೋಚಿಸಿ, ಟೆಕ್ ಲೀಡ್ಗೆ ಫೊನ್ ಮಾಡಿ ಕೈ ಗಾಯ ಆಗಿದೆ ಆಫೀಸಿಗೆ ಬರ್ತಿಲ್ಲ ಅಂತ ಹೇಳಿ ಮನೆಗೆ ಮರಳಿದೆ... ಅವಳೊ ಬಾಗಿಲಲ್ಲೇ ಕಾಯ್ತಿದ್ಲು "ನಂಗೊತ್ತಿತ್ತು ನೀವು ವಾಪಸ್ಸು ಬರ್ತೀರಂತ, ಏನು ಹೆಲ್ಪ ಮಾಡೊದೂ ಬೇಕಿಲ್ಲ, ಮುಂಜಾನೆಯಿಂದ ಮಾಡಿದ್ದೆ ಸಾಕು ಹೊರಡಿ" ಅಂತ ಹೊರ ದಬ್ಬಿದ್ಲು... ಕೈ ಗಾಯ ನೊಯ್ತಿದೆ ಅಂತಾ ಏನೊ ಸಬೂಬು ಹೇಳಿ ಮನೆಗೆ ನುಗ್ಗಿದೆ... ಮತ್ತೆ ಹೆಲ್ಪ ಮಾಡೋಣ ಅಂತಾ " ಮಧ್ಯಾಹ್ನ ಊಟಕ್ಕೆ ಎನ್ ಮಾಡೊದು ಅಂತಾ" ಕೇಳಿದ ನನ್ನ ಹೀಗೇ ನೊಡಿದ್ಲು... ಅದೇ ಶಾಂತಿ ಇದಾಳಲ್ಲ... ಅಂದ್ರೆ ಶಾಂತಿ ಸಾಗರ ಇದೆಯಾಲ್ಲ ಅಂತಾ ನಗೆ ಬೀರಿದೆ... ನೀವ್ ಸುಧಾರಿಸಲ್ಲ ಅನ್ನುತ್ತ ಬಾಗಿಲ ತಳ್ಳಿದವಳು ನನ್ನ ತೆಕ್ಕೆ ಸೇರಿಕೊಂಡ್ಲು...

ಈ ಲೇಖನಗಳ ಓದಿ ಎಲ್ರೂ ನನ್ನ ಕೇಳ್ತಿದಾರೆ, ಯಾರದೂ ಅಂತಾ, ಒಬ್ಬರಂತೂ ನಿಮ್ಮಿಬ್ಬರೂ ದಂಪತಿಗಳನ್ನ ಒಂದು ಸಾರಿ ನೊಡಬೇಕು ಅಂತಾ ಇಂಚೆ (ಇ-ಅಂಚೆ) ಹಾಕಿದ್ರು... ಇದೆಲ್ಲ ಬರೀ ಕಾಲ್ಪನಿಕ... ಹುಡುಗನ ಹುಚ್ಚು ಯೊಚನೆಗಳು ಮಾತ್ರ... ನನಗಿನ್ನೂ ಮದುವೆಯಾಗಿಲ್ಲ, ಮದುವೆಯಾದ್ರೂ ಇಂಥವಳು ಜೊತೆಯಾಗುವಳೆಂದು ನಂಬಿಕೆಯೂ ಇಲ್ಲ... ಆದರೂ ಇದನ್ನ ಒದಿ ಒಂದು ದಿನ ನನ್ನೊಂದಿಗೆ ಹೀಗಿದ್ರೆ.. ನನಗದೇ ಹೆಚ್ಚು... ಬದುಕು ಅಂದದ ರಂಗೊಲಿ ಎಲ್ಲೆಲ್ಲಿ ಯಾವ ಬಣ್ಣ ತುಂಬಬೇಕು ಅನ್ನೊದು ನಿಮಗೆ ಬಿಟ್ಟಿದ್ದು... ನಾ ತುಂಬಲಿರುವ ಬಣ್ಣಗಳ ಬಗ್ಗೆ ಬರೆಯುತ್ತಿದ್ದೇನೆ.. ನಿಮಗೂ ಏನೋ ಹೆಲ್ಪು ಆಗಬಹುದು ಅಂತಾ...
ಅದ್ಯಾವತ್ತೊ ಬರೆದಿದ್ದೆ..

ಪ್ರೀತ್ಸೊರಿಗೆಲ್ಲ ಅವರ ಪ್ರಿಯತಮೆ ಸಿಕ್ಕಿದ್ರೆ
ನನ್ನವಳು ದ್ರೌಪದಿಯಲ್ಲ ಶತ್ಪದಿಯಾಗಬೇಕಿತ್ತು...
ನಾನಿಷ್ಟ ಪಟ್ಟವರೆಲ್ಲ ನನ್ನವರಾಗಿದ್ರೆ
ನಾ ಎಣಿಸುತ್ತಲೇ ಮುದುಕನಾಗಬೇಕಿತ್ತು...

ಮತ್ತೊಂದಿಷ್ಟು ಮಾತಿನೊಂದಿಗೆ ಮತ್ತೆ ಸಿಕ್ತೀನೀ... ನಿಮ್ಮನಿಸಿಕೆ ಬರೀರಿ...

Copyright© Prabhuraj Moogi
www.telprabhu.com

## ನನ್ನವರ ನನ್ನವರಿಂದ ನನ್ನವರಿಗೋಸ್ಕರ...

ಮುಂಜಾನೆ ಏಳಾಗಿತ್ತು, ಅಪ್ಪನಿಗೆ ಎಂಟಾದ ಮೇಲೆ ಸೂರ್ಯೋದಯ, ಅದರೂ ನಾವು ಬಂದಿದ್ದೀವಲ್ಲ ಅಂತ ಬೇಗ ಎದ್ದು ಪೇಪರ್ ಓದುತ್ತ ಕುಳಿತಿದ್ರು, ಇವಳು ಪಾಕಶಾಲೆಯಿಂದ ಹೊರಬಂದು ಅಪ್ಪನಿಗೆ ಚಹ ಕೊಟ್ಲು, ನನಗೇ ಅಂದಿದ್ದಕ್ಕೆ, ಮಾಡ್ತಿದೀನೀ ತಾಳಿ ಅಂತ ಗದರಿದಳು. ಅಪ್ಪ ಚಹ ಒಂದು ಸಿಪ್ಪು ಹೀರಿ, ಪಕ್ಕಾ ಉತ್ತರಕರ್ನಾಟಕದ ಸ್ಟೈಲಿನಲ್ಲಿ "ಚಾ ಭಾಳ ಚಲೋ ಮಾಡೀವಾ! ಸಕ್ರೀ ಗಿಕ್ರೀ ಅಗ್ದೀ ಕರೆಕ್ಟ ಹಾಕೀ" ಅಂತ ಹೊಗಳುತ್ತಿದ್ದಂತೇ, "ಅಲ್ಲ ಹಾಕಿ ಮಾಡೀನ್ರಿ ಕೆಮ್ಮಾ ಕಫ಼ಾ ಎಲ್ಲ ಕ್ಲಿಯರ ಆಗತೈತ್ರಿ" (ಅಲ್ಲ ಅಂದ್ರೆ, ಅದ ಶುಂಟಿ, ಅದರಕ್, ಜಿಂಜರ್ ಅಂತಾರಲ್ಲ ಅದು) ಅಂತ ಕೊಚ್ಚಿಕೊಂಡ್ಲು. ಮುಖ ಇಷ್ಟಗಲಾ ಮಾಡಿಕೊಂಡು ಹೆಮ್ಮೆಯಿಂದ ಈಕಡೆ ಬರ್ತಿದ್ದಂಗೆ ಅಮ್ಮ ಹಾಲು ಖಾಲಿ ಮಾಡಿದ್ದಕ್ಕೆ ಇವಳ ಬಯ್ಯದೇ, "ಹಾಲಿನ್ಯಾಗ್ ಚಾ ಬೇಕ ನಿಮ್ಮ ಮಾವಾರಿಗೆ, ನೀನರ ಎನ್ ಮಾಡಿ ಬಿಡ" ಅಂತ ಸಪೊರ್ಟ್ ಮಾಡಿದ್ದು ಕೇಳ್ತು. ಶುದ್ಧ ಪೆಕರನಂತೆ ನಾ ಕೂತಿದ್ದು ನೋಡಿ ತಂಗಿ ಇವ್ಳ ಕಿವಿಯಲ್ಲಿ ಏನೊ ಊದಿ ನಕ್ಕದ್ದು ಕಂಡಿತು...

ಊರಲ್ಲಿದ್ದೆ, ಅಪ್ಪ ಅಮ್ಮ ಎಲ್ಲ ನೋಡಿ ಮಾತಾಡಿ ಬರಲು ಹೊಗಿದ್ದೆ. ಇತ್ತೀಚೆಗೆ ನಾನೇ ಹೊರಗಿನವನೇನೋ ಅನ್ನುವಷ್ಟು ನನ್ನವಳು ಅವರೊಂದಿಗೆ ಬೆರೆತು ಹೋಗಿದ್ದಾಳೆ. ಅಮ್ಮ ಅವಳ ಸಪೊರ್ಟ್ ಮಾಡೋದೇನು, ಅಪ್ಪ ಅವಳ ಹೊಗಳುವುದೆನೋ, ತಂಗಿ ಅವಳು ಗೆಳತಿಯರಂತೆ ಗುಸುಗುಸು ಮಾತಾಡಿಕೊಳ್ಳೊದೇನು... ಒಂದೇ ಎರಡೇ... ಇದೆಲ್ಲ ಢಿಡೀರೆಂದು ಆದ ಬದಲಾವಣೆಯೇನಲ್ಲ... ಹೆಚ್ಚು ವರದಕ್ಷಿಣೆ ತಂದ ಸೊಸೆಗೆ ತೋರುವ ನಾಟಕದ ಪ್ರೀತಿಯಲ್ಲ... ಇದಕ್ಕೆಲ್ಲ ಕಾರಣ ನಾನು... ಹೌದು ನಾನೇ ಅಂತ ಹೆಮ್ಮೆಯಿಂದ ಬೇಕಾದರೆ ಜಂಭದಿಂದ ಹೇಳಿಕೊಳ್ಳುತ್ತೇನೆ.

ಮದುವೆಯಾದ ಹೊಸತರಲ್ಲಿ ಮೊದಲ ರಾತ್ರಿಗೆ ಎಲ್ಲರೂ ಸಾಕಷ್ಟು ಮಾತಾಡಿ ತಯ್ಯಾರಿ ಮಾಡಿಕೊಳ್ಳೊದು, ಆದ್ರೆ ನಾನು ಮೊದಲು ಬಿಟ್ಟು ಮುಂಬರುವ ಹಲವು ರಾತ್ರಿಗಳಿಗೆ ನಿದ್ರೆ ಬರದಂತೆ ಚಿಂತೆ ಹಚ್ಚಿ ಕಾಡುವ ಸಾಂಸಾರಿಕ ಗೊಂದಲಗಳು ಹುಟ್ಟದಂತೆ ಮಾಡಲು ಸಿದ್ದತೆ ಮಾಡುತ್ತಿದ್ದೆ... ಎಷ್ಟೊ ಮದುವೆಗಳ ನೋಡಿದ್ದ ನನಗೆ ನಾನೂ ಅವಲ್ಲೊಬ್ಬನಾಗಬಹುದು ಅನ್ನೊ ಭಯ ಬೇರೆ ಇತ್ತು. ಅದಕ್ಕೆ ಮದುವೆಗೆ ಮುಂಚೆ ನಾವಿಬ್ಬರೂ ಮಾತಾಡಿದಾಗಲೆಲ್ಲ, ಮನೆಯ ಪ್ರತೀ ಚಿಕ್ಕ ಪುಟ್ಟ ವಿಷಯಗಳು ಪ್ರಸ್ತಾಪವಾಗುತ್ತಿದ್ದವು. ಶುಗರ್ ಕಾಯಿಲೆ ಇಲ್ದಿದ್ರೂ ಅಪ್ಪನ ಸಕ್ಕರೆಯಿಲ್ಲದ ಚಹ, ಅಮ್ಮನ ಇಷ್ಟದ ಧಾರಾವಾಹಿಗಳು, ತಂಗಿಯ ಫೆವರಿಟ್ ಸ್ಟಾರುಗಳು, ಅಷ್ಟೇ ಅಲ್ಲ ಮನೆಗೆ ಕೆಲಸಕ್ಕೆ ಬರುವ ಪ್ರತೀ ಮನೆಗೆಲಸದವರು, ಅವರ ಇಷ್ಟಾನಿಷ್ಟಗಳು ಅವಳಿಗೆ ಗೊತ್ತಾಗಿತ್ತು, ಅವಳೊ ಬೆರಳು ಕೊಟ್ರೆ ಕೈ ನುಂಗೊ ಜಾಯಮಾನದವಳು, ಚಹಕ್ಕೆ ಜಿಂಜರ ಸೇರಿಸಿ ಅಪ್ಪನ ಫುಲ್ ಇಂಪ್ರೆಸ್ ಮಾಡಿಬಿಟ್ಟಿದ್ಲು... ಹೌದು ಇದರಲ್ಲಿ ಅವಳ ಪಾತ್ರವೂ ಇದೆ, ನಾನು ಹೇಳಿದ್ದೆಲ್ಲ ಅರ್ಥ ಮಾಡಿಕೊಂಡು ಹೊಂದಾಣಿಕೆ ಮಾಡಿಕೊಂಡಿದ್ದು ಅವಳೇ ತಾನೆ...

ಇನ್ನೂ ನೆನಪಿದೆ, ಇವಳ ನೋಡಲು ಹೋಗಿದ್ದು, ಹುಡುಗಿ ನೋಡಿಯಾದ ಮೇಲೆ ನೀವಿಬ್ಬರೂ ಏನಾದ್ರೂ ಮಾತಾಡೋದು ಇದ್ರೆ ಅಂತಿದ್ದಂಗೆ ಅವಳು ಕೈಗೊಂದು ಪುಟಾಣಿ ಮರಿ(ಮಗು) ಎತ್ಕೊಂಡು ಮನೆಯ ಟೆರ್ರೆಸ್ಸಿಗೆ ಬಂದ್ಲು, ಆ ಪುಟಾಣಿ ಕಾವಲಿಗೆ ಬಂದಿದ್ದು, ಸೆಕ್ಯೂರಿಟಿ!, ಏನು ಇವಳ ತಿಂದು ಬಿಡ್ತಿದ್ನಾ!!! ನನಗೆ ಎಂಥ ಹೆಂಡತಿ ಬೇಕೆಂದು ನಾ ಕೊರೆಯದೆ, ನಿಮಗೆ ಎಂಥ ಗಂಡ ಬೇಕು ಅಂತದಿದ್ದಕ್ಕೆ, ನಿಮ್ಮಂತಿದ್ದರೆ ಸಾಕು ಅಂತ ಬಾಂಬ್ ಹಾಕಿ ಬಿಟ್ಟಿದ್ಲು, ಅವಳಿಗೆ ಇಂಥದ್ದೇ ಆದ ಕಲ್ಪನೆಗಳೇನಿಲ್ಲ ಅಂತ ಗೊತ್ತಾಗಿ ಹೋಗಿತ್ತು. ನಿಮಗೆ ಎಂಥ ಹೆಂಡತಿ ಬೇಕು ಅಂತ ಮರು ಪ್ರಶ್ನೆಯೊಂದು ತೂರಿ ಬಂದಿತ್ತು. ನನಗೆ ಹೆಂಡತಿಗಿಂತ ನಮ್ಮನೆಗೆ ಸೊಸೆ ಬೇಕು ಅಂತ ಸೂಚ್ಯವಾಗಿ ಹೇಳಿದ್ದಕ್ಕೆ, ನನಗೆ ಮನೆ ಮಗಳಾಗಿ ಬರುವ ಆಸೆ ಅಂತ ಜಾಣ ಉತ್ತರ ನೀಡಿ ಮನಸ ಗೆದ್ದು ಬಿಟ್ಟಿದ್ಲು.

ಮದುವೆಯಾಗಿ ಬಂದ ಮೊದಲ ದಿನದಿಂದಲೇ ಎಲ್ಲರ ಮೋಡಿ ಮಾಡಿ ಬಿಟ್ಲು, ಅಮ್ಮ ಮಾಡುತ್ತಿದ್ದ ಚಹಕ್ಕೆ ಎರಡು ನಿಂಬೆಯ ಎಳೇ ಎಲೆ ಹಾಕಿದ್ಲು ಅಷ್ಟೇ, ಎಲ್ರೂ ಲೆಮನ್ ಫ್ಲೇವರ್ ಟೀ ಮೆಚ್ಚಿದ್ದಕ್ಕೆ ಅಮ್ಮ ಸೊಸೆ ಮಾಡಿದ್ದು, ಸೊಸೆ ಮಾಡಿದ್ದು ಅಂತಾ ಹೇಳುತ್ತ ಹೆಮ್ಮೆಯಿಂದ ತಿರುಗಿದ್ದು ನೋಡಿ, ನನಗೇ ನಂಬಲಾಗಿರಲಿಲ್ಲ... ಆವತ್ತಿನ ಆ ಲೆಮನ್ ಟೀನಿಂದ ಇಂದಿನ ಈ ಜಿಂಜರ ಟೀವರೆಗೂ ಅವಳೊಂದಿನಿತೂ ಬದಲಾಗಿಲ್ಲ, ಅವಳ ಮೇಲಿನ ಎಲ್ಲರ ಪ್ರೀತಿ ಡಬಲ್ ಟ್ರಿಬಲ್ ಆಗುತ್ತ ಹೊರಟಿದೆ.

ಊರಿಗೆ ಹೋಗಿದ್ದೆ ತಡ ಅವಳು ಬಂದಿದ್ದು ಎಲ್ಲರಿಗೂ ಗೊತ್ತಾಗಿರುತ್ತೆ, ಮನೆಗೆಲಸದವರೂ ಮಗ ಸೊಸೆ ಬಂದಿದ್ದಾರೆ ಅವರ ಮನೆಗೆ ಬೇಗ ಹೋಗಬೇಕು ಅಂತ ಬೇರೆ ಮನೆ ಕೆಲಸ ಬಿಟ್ಟು ಓಡೊಡಿ ಬರ್ತಾರೆ. ಕೆಲಸದವರ ಮಗ ಮಗಳ ಹೆಸರಿನಿಂದ ಹಿಡಿದು ಯಾರು ಯಾವ ಕ್ಲಾಸಲ್ಲಿ ಓದ್ತಿದಾರೆ ಅನ್ನೋದು ಕೂಡ ನೆನಪಿಟ್ಟುಕೊಂಡು ಕೇಳ್ತಾಳೆ, ಕ್ಲಾಸಿಗೆ ಫಸ್ಟ್ ಬಂದ್ರೆ ಕೊಡಿಸ್ತೀನೆಂದ ಹೇಳಿ ಉಬ್ಬಿಸಿ ಓದುವಂತೆ ಮಾಡಿದ ಅವರ ಮಗನಿಗೆ ಬ್ಯಾಗು ಮರೆಯದೆ ತಂದಿರ್ತಾಳೆ, ಅದಕ್ಕೆ

ಕೊಟ್ಟಿದ್ದು ನೂರೈವತ್ತೇ ಆದ್ರೂ, ಮನೆಗೆಲಸದವಳು ಊರಿಗೆಲ್ಲ ಟಾಂ ಟಾಂ ಅಂತಾ ಬೆಂಗಳೂರಿನಿಂದ ಬ್ಯಾಗು ತಂದು ಕೊಟ್ಟಿದ್ದಾರೆ ಅಂತ ಸಾರಿಕೊಂಡು ಬಂದಿರುತ್ತಾಳೆ. ನಿಜವಾಗ್ಲೂ ಕೆಲಸದವರ ಬಗ್ಗೆ ಕಾಳಜಿವಹಿಸಿ ನೋಡಿ ಮನೆಯ ನೆಮ್ಮದಿಯಲ್ಲಿ ಅವರ ಪಾಲೂ ಇರುತ್ತೆ, ಅದಕ್ಕೆ ಅಲ್ವೆ ನಾ ಮನೆಗೆಲಸದವರ ವಿವರವನ್ನೂ ಇವಳಿಗೆ ಹೇಳಿದ್ದು.

ಅಮ್ಮ ಎಣ್ಣೆ ಬಿಸಿ ಮಾಡಿ ತಲೆ ತುಂಬ ಹಚ್ಚಿ ಅವಳ ಎಣ್ಣೆ ಸ್ನಾನಕ್ಕೆ ರೆಡಿ ಮಾಡುತ್ತಿದ್ರು, ಹೋಗಿ ಕೂದಲ ಹಿಡಿದೆಳದು ತವರು ಮನೆಲೂ ನಿನಗಿಷ್ಟು ಆರೈಕೆ ಮಾಡ್ತಾರಿಲ್ಲೊ ಅಂತ ಛೇಡಿಸಿ ಬಂದೆ, ಅಮ್ಮನೂ ಅಷ್ಟೇ ಅವಳ ಮಗಳಂತೇ ನೋಡಿಕೊಂಡಿದಾರೆ, ಮದುವೆಗೆ ಹುಡುಗಿ ಹುಡುಕುವಾಗಲೇ ಈಗೆಲ್ಲ ಒಳ್ಳೆ ಸೊಸೆ ಸಿಗೊದು ಕಷ್ಟ ಅಂತ ಹೇಳ್ತಾ ಹೇಳ್ತಾ ಸೊಸೆ ಮೇಲಿನ ಅವರ ನಿರೀಕ್ಷೆ (ಎಕ್ಸಪೆಕ್ಟೇಶನ್) ಕಮ್ಮಿ ಮಾಡುತ್ತ ಬಂದಿದ್ದೆ, ಹೀಗಾಗಿ ಅವರೂ ಹೊಂದಾಣಿಕೆ ಮಾಡಿಕೊಳ್ಳಲು ಅಣಿಯಾಗಿದ್ರು. ಅದಕ್ಕೆ ಕೆಲವು ಸಾರಿ ಅವಳ ತಪ್ಪುಗಳನ್ನೂ ಕೂಡ ಅವರು ಸಮರ್ಥಿಸಿಕೊಳ್ಳೊದು.

ಸ್ನಾನ ಮುಗಿದು, ಅಮ್ಮನ ಕೈಯಡಿಗೆ ರುಚಿ ನೋಡಿ, ಬಾಯಿ ಚಪ್ಪರಿಸುತ್ತ ಹೊರ ಬಂದೆ, ಏನೇ ಅನ್ನಿ ಹೆಂಡತಿ ಎಷ್ಟೇ ಪಂಚ ಪಕ್ವಾನ್ನ ಮಾಡಿ ಹಾಕಲಿ ಅಮ್ಮನ ಕೈ ರುಚಿಯೇ ಬೇರೆ, ಇದು ಎಲ್ಲರೂ ಒಪ್ಪಲೇ ಬೇಕು. ಇಲ್ಲಿ ನೊಡಿದ್ರೆ ತಂಗಿ ಇವಳು ನನ್ನ ಲ್ಯಾಪಟಾಪ್ ತೆಗೆದು ಯಾವುದೊ ಫಿಲ್ಮ್ ನೊಡುತ್ತ ಕುಳಿತಿದ್ರು, ಇವಳು ನೊಡಿರ್ತಾಳೆ ಆದ್ರೂ ತಂಗಿಗೆ ಕಂಪನಿ ಕೊಡಲು ಕೂತಿದ್ಲು, ಮೇಲ್ ಚೆಕ್ ಮಾಡ್ಬೇಕು ಲ್ಯಾಪಟಾಪ್ ಕೊಡು ಅಂತಂದಿದ್ದಕ್ಕೆ ತಂಗಿ ಕೊಟ್ಟಿರೋಳು, ಇವಳು ನಡುವೆ ಬಾಯಿ ಹಾಕಿ "ರೀ ಇಂಜನೀಯರ್ರು ಸಾಹೇಬ್ರೆ, ಊರಿಗೆ ಬಂದಾಗ್ಲಾದ್ರೂ ಕಂಪ್ಯೂಟರ್ ಕುಟ್ಟೊದು ಬಿಡಿ" ಅಂತ ಬೈದು, ನನ್ನ ಲ್ಯಾಪ್ ಮೇಲೆ ಎರಿ ಕುಳಿತು ಕಿವಿಯಲ್ಲಿ "ನಿಮಗೆ ಲ್ಯಾಪಟಾಪ್ ಬೇಕಿದ್ರೆ ನಾನಿದೀನಲ್ಲ" ಅಂತ ಉಸಿರಿದ್ಲು. ತಂಗಿ ಮುಸಿ ಮುಸಿ ನಗುತ್ತಿದ್ದು ನೋಡಿ ನಾಚಿ, ಅಪ್ಪನೊಂದಿಗೆ ಹರಟಲು ಹೊರಗೆ ಬಂದು ಕಟ್ಟೆ ಮೇಲೆ ಕುಳಿತೆ, ಇನ್ನು ಅಪ್ಪನೊಂದಿಗೆ ಹರಟೆ ಅಂದ್ರೆ ನಾ ತಾಸು ಎರಡು ತಾಸು ಆಕಡೆ ಸುಳಿಯಲ್ಲ ಅಂತ ಗ್ಯಾರಂಟಿಯಾಗಿ, ಅವರಿಬ್ರೂ ಕರೀನಾಳ ಹೊಸ ಬಾಯಫ್ರೆಂಡ ಯಾರು ಅಂತಾ ಚರ್ಚಿಸುತ್ತ ಫಿಲ್ಮ್ ನೋಡತೊಡಗಿದ್ರು.

ಸಂಜೆಯಾಗುತ್ತಿದ್ದಂತೆ ಟೀವೀ ನೊಡುತ್ತ ಕುಳಿತವನನ್ನು ರೀ ಧಾರಾವಾಹಿ ಟೈಮ್ ಆಯ್ತು ರಿಮೊಟು ಕೊಡಿ ಅಂದ್ಲು, ಅಮ್ಮನ ಫೇವರಿಟ್ಟು ಧಾರಾವಾಹಿ ಹತ್ತೋದಿರಬೇಕು, "ಧಾರಾವಾಹಿ ಯಾವುದು, ಮನೆಯೊಂದು ಮುರಿದ ಬಾಗಿಲಾ" ಅಂತ ಕೇಳಿದೆ ಅಲ್ಲ ಅಂತ ರಿಮೊಟು ಕಸಿದುಕೊಂಡು, "ಅತ್ತೆ ಮನೆಯೊಂದು ಮೂರು ಬಾಗಿಲು ಧಾರಾವಾಹಿ ಹತ್ತಿತು ಬನ್ನಿ" ಅಂತ ಚೀರಿದ್ಲು, "ಸ್ವರೂಪಾ ಬಂದ್ರೆ ಕರೀ" ಅಂತ ಎದ್ದು ಬಂದೆ, ಅದೇ "ಈ ಟೀವೀ" ಮನೆಯೊಂದು ಮೂರು ಬಾಗಿಲು ಧಾರಾವಾಹಿ ಕ್ಯಾರೆಕ್ಟರ್ರು ಸ್ವರೂಪಾ ನೊಡೋಕೆ ಚೆನ್ನಾಗಿದಾಳೆ, ಕಣ್ಣಲ್ಲೇ ನಟಿಸಿಬಿಡ್ತಾಳೆ, ಅದ್ಕೆ ಅಲ್ವೆ ನಾ ರಾತ್ರಿ ಒಂಬತ್ತರ ಮುಂದೆ ಅಮ್ಮ ನೊಡದಿದ್ರೂ ಆ "ಮುಕ್ತ ಮುಕ್ತ" ಧಾರಾವಾಹೀಲಿ ಕಲ್ಯಾಣಿಯಾಗಿಯೂ ಬರುವ ಅವಳ ನೋಡಲು ಕೂತ್ಕೊಳ್ಳೊದು, ಅದು ಇವಳಿಗೂ ಗೊತ್ತು, ಆಗ ಇವಳು ಅಮ್ಮ ಸೇರಿ ನನಗೆ ರಿಮೊಟು ಕೊಡದೆ ಸತಾಯಿಸಿ ಮಜಾ ತೊಗೊಳ್ಳೊದು ಕೇಳಲೇಬೇಡಿ...

ಹೀಗೆ ಬಂದುಳಿದು ಐದು ದಿನಗಳಾಗಿದ್ದು ಗೊತ್ತೇ ಆಗ್ಲಿಲ್ಲ, ಮತ್ತೆ ಬೆಂಗಳೂರಿಗೆ ಹೊರಡುವಾಗ ಅಮ್ಮ ಮಾಡಿದ ಉಪ್ಪಿನಕಾಯಿ ಶೇಂಗಾ(ನೆಲಗಡಲೆ, ಕಳ್ಳೆಕಾಯಿ) ಚಟ್ನಿ, ಬೆಳಗಾವಿ ಕುಂದಾ(ಸ್ವೀಟ್, ಪೇಡ ಹಾಗೆ ಇರುತ್ತೆ) ಎಲ್ಲ ಕಟ್ಟಿಸಿಕೊಂಡು ಒಂದು ದೊಡ್ಡ ಬ್ಯಾಗು ಮಾಡಿಕೊಂಡಿರ್ತಾಳೆ, ಇದೆಲ್ಲ ಹೊರೋಕೆ ಕತ್ತೆನೇ ಬೇಕು ಅಂದ್ರೆ ನೀವಿದೀರಲ್ಲ ಅಂತ ಕಾಂಪ್ಲಿಮೆಂಟು ಕೊಟ್ಟು ನನ್ನ ಕತ್ತೆ ಮಾಡಿರ್ತಾಳೆ. ಎಲ್ಲ ಹೊತ್ತುಕೊಂಡು ಬಸ್ಸು ಏರಿ ಕುಳಿತ್ರೆ, "ಅವ್ರು ನಮ್ಮ ಇವರ ಸೊಸೆ ಅಲ್ವಾ, ಬಹಳ ಒಳ್ಳೆಯವ್ರು ಅಂತಾ ಕೇಳೀದೀನಿ" ಅಂತಾ ಇವಳ ಕಂಡು ಹಿಂದಿನ ಸೀಟಿನಲ್ಲಿ ಯಾರೊ ಮಾತಾಡಿದ್ದು ಕೇಳಿ, ಪ್ರೀತಿ ಉಕ್ಕಿ ಬಂದು ಸ್ಲೀಪರ ಕೊಚ್‌ನ ಪರದೆ ಎಳೆದು ಇವಳ ಬರಸೆಳೆದು ಮುತ್ತಿಡ್ತೀನಿ, ಈ ಬಸ್ಸಿನವ್ರು ಸ್ಲೀಪರ ಕೊಚ್ ಮಾಡಿ ದೊಡ್ಡ ತಪ್ಪು ಮಾಡಿದ್ರು ನೋಡಿ ಅಂತ ಗೊಣಗುತ್ತ ಕೊಸರಿಕೊಂಡು ಆ ಪಕ್ಕ ಜರುಗಿದ್ರೂ ಮತ್ತೆ ಸರಿದು ನನ್ನ ಸುತ್ತ ಒಂದು ಕೈ ಹಾಕಿ ನಿದ್ದೆ ಹೊದ್ಲು, ಎಷ್ಟೋ ಹೊತ್ತು ಮಲಗಿದವಳ ಮುಖ ಹಾಗೇ ನೊಡುತ್ತಿದ್ದೆ. ರಾತ್ರಿಯೆಲ್ಲ ಬಸ್ಸಿನ ಸದ್ದಿನಲ್ಲಿ ನಿದ್ದೆ ಹತ್ತದಿದ್ರೂ ಯಾಕೋ ಮನಸ್ಸಿಗೆ ನೆಮ್ಮದಿಯಿತ್ತು...

ಇಷ್ಟೆಲ್ಲ ನಾ ಮಾಡುತ್ತಿರುವುದು ನನ್ನವರಿಗೊಸ್ಕರ, ಮಾಡಿಸುತ್ತಿರುವುದೂ ನನ್ನವರಿಂದ, ಇದೆಲ್ಲ ನನ್ನವರದ್ದೇ... ಅದಕ್ಕೇ ಅಬ್ರಾಹ್‌ಂ ಲಿಂಕನ್ ಹೇಳಿದ್ದು ಜನರ, ಜನರಿಂದ, ಜನರಿಗೊಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ ಅಂತಾ, ಅದೇ ನಾ ತಿರುಚಿ ಬರೆದದ್ದು ನನ್ನವರ ನನ್ನವರಿಂದ ನನ್ನವರಿಗೋಸ್ಕರ ನಾ ನಡೆಸುತ್ತಿರುವ ಸಂಸಾರವೇ ಈ ನನ್ನ ಪ್ರಭುತ್ವ... ಹೆಸರೇ ಪ್ರಭು ಅಲ್ವೆ ಅಂತ ಇವಳು ಟೀಕಿಸಿದ್ದಕ್ಕೂ ಸರಿ ಹೊಯ್ತು...

ಮತ್ತೊಂದಿಷ್ಟು ಮಾತಿನೊಂದಿಗೆ ಮತ್ತೆ ಸಿಕ್ತೀನೀ... ನಿಮ್ಮನಿಸಿಕೆ ಬರೀರಿ...

Copyright© Prabhuraj Moogi
www.telprabhu.com

## ಬಿರುಕು...

ಸಂಜೆ ಆಫೀಸಿನಿಂದ ಬೇಗ ಬಂದಿದ್ದೆ, ಇವಳು ಮನೆಯಲ್ಲಿರಲಿಲ್ಲ, ಅದೇ ಯಾರದೋ ಮನೇಲಿ ಮಗುವಿನ ಹುಟ್ಟು ಹಬ್ಬವಿದೆ ಅಂತ ಮೊದಲೇ ಹೇಳಿದ್ದರಿಂದ ಅವಳಿಗೇನು ಫೋನು ಮಾಡಿರಲಿಲ್ಲ, ಸೀದಾ ಮನೆಗೆ ಬಂದವನೇ ನನಗೆ ನಾನೇ ಒಂದು ಕಪ್ಪು ಟೀ ಮಾಡಿಕೊಂಡು ಸೊಫಾದ ಮೇಲೆ ಇತ್ತ ಮಲಗಿದ ಹಾಗೂ ಇಲ್ಲ, ಇತ್ತ ಕೂತ ಹಾಗೂ ಅಲ್ಲ ಹಾಗೆ ಬಿದ್ದುಕೊಂಡು ಟೀ ಹೀರುತ್ತಿದ್ದೆ. ಪಕ್ಕದ ಟೀಪಾಯಿ ಮೇಲೆ ಏರಟೆಲ್ ಮೊಬೈಲು ಬಿಲ್ಲು ಪೋಸ್ಟ್ ಬಿದ್ದಿತ್ತು. ಏನೂ ಕೆಲಸವಿಲ್ಲದ ತಲೆ ದೆವ್ವದ ಮನೆಯೆನ್ನುವಂತೆ ಎಂದೂ ನೋಡದ ಬಿಲ್ಲು ನೋಡತೊಡಗಿದೆ, ಇತ್ತೀಚೆಗೆ ಮೊಬೈಲು ಬಿಲ್ಲುಗಳು ಪ್ರತೀ ಕರೆಯ ವಿವರವನ್ನೂ ಕೂಡ ಕೊಡತೊಡಗಿರುವುದರಿಂದ, ಕಂಪನಿಗಳಿಗೆ ಆಫರ್ ಎಂದು ನೂರಾರು ನಿಮಿಷ ಫ್ರೀ ಬೇರೆ ಇರೊದ್ರಿಂದ ಪುಕ್ಕಟೆ ಫೋನು ಮಾಡಿದ್ದೆ ಮಾಡಿದ್ದು ನಾಲ್ಕೈದು ಪುಟ ನಂಬರುಗಳೇ ತುಂಬಿದ್ದವು, ಎಲ್ಲಿಗೆ ಮಾಡಿದ್ದು, ಯಾವಾಗ, ಎಷ್ಟೊತ್ತು ಮಾತಾಡಿದ್ದು, ಎಲ್ಲ ಇತ್ತು. ಹಾಗೇ ನೋಡುತ್ತಿದ್ದವನಿಗೆ ಕಾಣಿಸಿದ್ದೊಂದು ಗೊತ್ತಿಲ್ಲದ ಮೊಬೈಲು ನಂಬರು ಒಂದೇ ದಿನದಲ್ಲಿ ಮೂರು ಗಂಟೆ ಮೂವತ್ತೈದು ನಿಮಿಷ ಮಾತಾಡಿದ್ದು....

ಇವಳು ನಾನು ಮದುವೆಗೆ ಮುಂಚೆ ಮಾತಾಡಿದಾಗ ಬಂದ ಬಿಲ್ಲುಗಳು ಸೇರಿಸಿದ್ದರೆ ಎಷ್ಟು ಕೇಜಿ ರದ್ದಿಯಾಗಿರುತ್ತಿತ್ತೊ ಏನೋ, ಈಗ ನಾನು ನನ್ನ ಕೆಲಸದಲ್ಲಿ ಬಿಜಿ, ಹೇಗೂ ಮನೆಯಲ್ಲಿದ್ದಾಳಲ್ಲ ಅಂತ ಉದಾಸೀನ ಬೇರೇ, ಫೋನಿನಲ್ಲಿ ಮಾತೇ ಕಮ್ಮಿಯಾಗಿ ಹೋಗಿದೆ. ಅದರೂ ಇದ್ಯಾರು ಇವಳು ಯಾರ ಜೊತೆ ಇಷ್ಟೊತ್ತು ಮಾತಾಡಿದ್ದು, ನನಗೇ ಗೊತ್ತಿಲ್ಲದೇ ಅನುಮಾನದ ಎಳೆಯೊಂದು ಹೊರಹೊಮ್ಮಿತು... ಇಲ್ಲ ಇಲ್ಲ ಅಂತ ಮನಸು ಹೇಳುತ್ತಿದ್ದರೂ, ಮನೆಯ ಫೋನಿನಿಂದ ಒಂದು ಸಾರಿ ಫೋನು ಮಾಡಿದೆ, ಆಕಡೆಯಿಂದ ಅದ್ಯಾವುದೋ ದನಿ, ಅವನ್ಯಾರೋ ಗೊತ್ತಿಲ್ಲ, ಸುಮ್ಮನೆ "ವಿ ಅರ್ ಕಾಲಿಂಗ್ ಫ್ರಾಮ್ ಕಂಟ್ರಿ ಕ್ಲಬ್ ಸರ್.." ಅಂತ ಏನೊ ಬಡಬಡಿಸಿದೆ, ಆಕಡೆಯಿಂದ ಅದೇ ನಾ ಇಂಥ ಕರೆಗಳಿಗೆ ಉತ್ತರಿಸುವಂತೆ "ನಾಟ್ ಇಂಟ್ರೆಸ್ಟೆಡ್.." ಮಾಮೂಲಿ ಉತ್ತರ ಬಂತು.
ಯಾರಿರಬಹುದು?, ಅದ್ಯಾಕೆ ಅವನ ಜೊತೆ ಅಷ್ಟೊತ್ತು ಮಾತಾಡಿದ್ದು? ಎಷ್ಟು ದಿನದಿಂದ ಹೀಗೆ? ಎಷ್ಟೊ ಪ್ರಶ್ನೆಗಳ ತಾಕಲಾಟ ನಡುನಡುವೆ ಇವಳು ಹಾಗಿಲ್ಲ, ಏನೊ ಬೇರೆ ಇರಬೇಕು, ಅಂತ ನನಗೆ ನನ್ನ ಮನಸೇ ಸಮಾಧಾನಿಸುವಂತಿತ್ತು...

ಇದೆಲ್ಲ ತಲೆ ತುಂಬಿ, ಕೊಲಾಹಲವೆದ್ದು ಕಲಸುಮೇಲೊಗರವಾಗಿ, ಟೆನ್ಶನ್ ನಿಂದ ತಲೆನೊವು ಶುರುವಾಗಿ ಇನ್ನೊಂದು ಕಪ್ಪು ಟೀ ಮಾಡಿ ಕುಡಿಯತೊಡಗಿದೆ, ಆದರೂ ಅದ್ಯಾಕೊ ರುಚಿಸಲಿಲ್ಲ, ಒಂದು ಯೊಚಿಸಹೋಗಿ ಇನ್ನೊಂದು ತಿಳಿಯುವಂತೆ, ಇನ್ನೂ ಮನೆಗೆ ಯಾಕೆ ಬಂದಿಲ್ಲ, ಈಗ ಎಲ್ಲಿ ಹೋಗಿದ್ದಾಳೆ, ಇಷ್ಟೊತ್ತಿಗೆಲ್ಲ ಬರಬೇಕಿತ್ತಲ್ಲ ಅಂತೆಲ್ಲ ತಲೆ ಚಚ್ಚಿಕೊಳ್ಳತೊಡಗಿದೆ.

ಅವಳು ಮನೆಗೆ ಬಂದಾಗ ಎಂಟೂವರೆ, ಅಷ್ಟೊತ್ತಿಗೆಲ್ಲ ನಾನು ಏನೇನೊ ಯೋಚಿಸಿಯಾಗಿತ್ತು. ಬರ್ತಿದ್ದಂಗೆ "ಏನು ಇಷ್ಟೊತ್ತು ಎಲ್ಲಿ ಹೋಗಿದ್ದೆ, ಬೇಗ ಬರಬೇಕಿತ್ತು" ಅಂತ ಹರಿಹಾಯ್ದೆ. ಎಂದೂ ಇಲ್ಲದ ನನ್ನ ಸಿಟ್ಟು ನೋಡಿ ಅವಳು ದಂಗುಬಡಿದಂತಿತ್ತು, "ಏನು ನೀವು ದಿನಾಲು ಬೇಗ ಬರೋ ಹಾಗೆ ಹೇಳ್ತಿದೀರಲ್ಲ, ಒಂದು ದಿನ ನಾನಿಲ್ಲದೇ ಕಾಯೋಕೆ ಬೇಜಾರಾ, ನಾನು ದಿನಾಲೂ ಕಾಯ್ತೀನಲ್ಲ" ಅಂತ ತಿರುಗಿಬಿದ್ದು. ಸುಮ್ಮನಾದೆ, ಆದರೇನು ತಲೆಯಲ್ಲಿ ಇನ್ನೂ ಹುಳು ಕೊರೆದಂಗೆ ಆ ನಂಬರ್ರು ಕೊರೆಯುತ್ತಿತ್ತು. ಎಂದೂ ಶಾಂತವಾಗಿ ಊಟ ಮಾಡದ ನಾವಿಬ್ಬರೂ ಸುಮ್ಮನೆ ಊಟ ಮುಗಿಸಿ ಎದ್ದೆವು, ಮಾತನಾಡಲೇನು ಇರಲಿಲ್ಲ, ಎಲ್ಲ ತಲೆ ತುಂಬ ಹಲವು ಯೋಚನೆಗಳ ಕೊಲಾಹಲ ಮಾತ್ರ, ನನ್ನಲ್ಲಾದ ಬದಲಾವಣೆ ಅವಳು ಗಮನಿಸಿದ್ದು, ಅವಳೂ ಮಾತಿಗಿಂತ ಮೌನ ಲೇಸು ಅಂದುಕೊಂಡಂತಿತ್ತು. ಇಲ್ಲಾಂದ್ರೆ ಸಾರು ಹೇಗಿದೆ ಅಂತಾನೊ, ಆಫೀಸಿನಲ್ಲಿ ನಿಮ್ಮ ಪಕ್ಕ ಕೂರೊ ಹುಡುಗಿ ಈವತ್ತು ಯಾವ ಡ್ರೆಸ ಹಾಕಿದ್ಲು ಅಂತಾನೊ, ಏನೊ ಒಂದು ಸುದ್ದಿ ತೆಗೆದು ಕೆದಕಿ ಮಾತಾಡೋಳು, ಅವಳಿಗೆ ಮಾತಾಡೋಕೆ ಮಾತು ಬೇಕು ಅಷ್ಟೇ. ಈಗ ಅವನ್ಯಾರೋ ಸಿಕ್ಕಿದಾನಲ್ಲ, ನನ್ನೊಂದಿಗೇನಿದೆ ಮಾತಾಡೋಕೆ ಅಂದುಕೊಂಡೆ.

ಕೇಳಿ ಬಿಡಲೇ ಯಾರದು ಅಂತ, ನಿಜವಾಗಲೂ ಅವನ್ಯಾರೋ ಇದ್ರೆ, ಇವಳ ಬಿಟ್ಟುಕೊಡಲಾಗುತ್ತಾ, ಯಾರೂ ಇಲ್ಲಾಂದ್ರೆ, ನಾನು ಅವಳ ಬಗ್ಗೆ ಹೇಗೆ ಯೊಚಿಸಿದೆನಲ್ಲ ಅಂತ ಏನಂದುಕೊಂಡಾಳು, ಹೀಗೆ ಏನೇನೊ ಯೋಚಿಸುತ್ತ ಹಾಸಿಗೆಯಲ್ಲಿ ಉರುಳಿದೆ. ನಿದ್ದೆಯಂತೂ ಯಾವಾಗಲೋ ಹಾರಿ ಹೋಗಿತ್ತು. ಇನ್ನೂ ಅವಳು ಏನೊ ಕೆಲಸದಲ್ಲಿದ್ಲು ಅಂತ ಕಾಣುತ್ತೆ ಬರುವುದು ಸ್ವಲ್ಪ ಹೊತ್ತಾಯಿತು, ಅದರೂ ನಾನಿನ್ನೂ ಏನೂ ನಿರ್ಣಯಕ್ಕೆ ಬಂದಿರಲಿಲ್ಲ, ಕೇಳುವುದೊ ಬೇಡವೊ ಅನ್ನೊ ತಾಕಲಾಟದಲ್ಲೇ ಇದ್ದೆ. ಬಂದು ಪಕ್ಕದಲ್ಲೇ ಸುಮ್ಮನೆ ಮಲಗಿದಳು, ನನಗೀಗ ಅವಳ ಮೌನ ಸಹಿಸಲಸಾಧ್ಯವಾಯ್ತು. ಸದಾ ಚಟಪಟ ಅಂತ ಮಾತಾಡುವ ಅವಳ ಕೆಲವೊಂದು ಸಾರಿ ನಾನೇ ಬೈದು ಸುಮ್ಮನಾಗಿಸಬೇಕು, ಆದೇಕೊ ಮನೆ

Copyright© Prabhuraj Moogi
www.telprabhu.com

ಭೂತಬಂಗಲೆಯಂತೆ ನಿಶಬ್ದವಾದಂತನಿಸಿತು. ಅವಳಿಗೂ ನಿದ್ರೆ ಬಂದಂತಿರಲಿಲ್ಲ, ನನ್ನ ಕಾಡದೇ ಅದೆಂದು ಮಲಗಿಯಾಳು, ತವರುಮನೆಗೆ ಹೋದಾಗಲೂ ಫೊನು ಮಾಡಿ ತಲೆ ತಿಂದಾಗಲೇ ಸಮಾಧಾನ.

ಮಗ್ಗಲು ಬದಲಿಸಿದೆ, ಯೊಚನೆಯೂ ಮಗ್ಗಲು ಬದಲಿಸಿದಂತಿತ್ತು, ಮತ್ತೆ ಮಂಥನ ಶುರು, ಆದರೆ ಈ ಸಾರಿ ತರ್ಕದ ತಕ್ಕಡಿಯಲ್ಲಿ ಪ್ರತಿಯೊಂದು ತೂಗುತ್ತಿದ್ದೆ, ಮದುವೆಯಾಗಿ ಇಷ್ಟು ವರ್ಷವಾಯ್ತು, ಎಂದಾದರೂ ಅವಳು ನನ್ನ ಯಾವತ್ತಾದರೂ ಹಾಗೆ ಅನುಮಾನದಿಂದ ನೋಡಿದ್ದಾಳಾ, ನನ್ನೀ ಚೆಲುವೆಯರ ಚೆಲ್ಲಾಟಗಳ ಬಗ್ಗೆ ಚಕಾರವೆತ್ತಿದ್ದಾಳಾ, ಹೋಗ್ಲಿ ಯಾರಯಾರಿಗೊ ಅಪ್ಸರೆ, ಅಪ್ಪಟ ಗೊಂಬೆಯಂತಿದ್ದಾಳೆ ಅಂದಾಗ ಅಸೂಯೆ ಪಟ್ಟಿದ್ದಾಳಾ. ಇಲ್ಲವಲ್ಲ ಅನುಮಾನ ಪಡಲು ಹಲವು ಅವಕಾಶಗಳಿದ್ದಾಗಲೂ ಅವಳಿಗೆಷ್ಟು ನಂಬಿಕೆ, ನಾನೋ ಯಾವುದೋ ಒಂದು ನಂಬರು, ಮಾತಾಡಿದ್ದು ಮೂರು ತಾಸು ಅಷ್ಟಕ್ಕೆ ಅನುಮಾನ ಪಟ್ಟೆನಲ್ಲ, ಛೀ... ಅನ್ನಿಸಿತು, ಪಕ್ಕದ ಮನೆ ಪದ್ದು, ಹಾಸಿನಿ ಎನ್ನುತ್ತ ಸುತ್ತುವ ನಾನು ಅವಳಿಗೆ ಯಾವ ಸಮ... ಅವಳಿಟ್ಟಿರುವ ಅಷ್ಟು ಪ್ರೀತಿಗೆ ನಾ ನಾಲಾಯಕ್ಕು ಅನ್ನಿಸಿ ಪಾಪಪ್ರಜ್ಞೆ ಕಾಡತೊಡಗಿತು... ಹೇಳೊಕೂ ಆಗದೆ, ಬಿಡೊಕೂ ಆಗದೇ ನನ್ನಷ್ಟಕ್ಕೆ ನಾನೇ ಬೆವರಿದೆ... ಅವಳೆಡೆಗೆ ನೋಡಲೂ ಕೂಡ ನನಗೆ ನನ್ನಷ್ಟಕ್ಕೆ ನಾಚಿಕೆಯಾಯ್ತು, ಮತ್ತೆಂದೂ ಅವಳ ಬಗ್ಗೆ ಹಾಗೆ ಯೋಚಿಸೊಲ್ಲ ಅಂತನ್ನಕೊಳ್ಳತೊಡಗಿದೆ. ಅದ್ಯಾಕೊ ಇನ್ನು ತಡೆಯಲಾಗಲಿಲ್ಲ, ಕೈ ಹಿಡಿದು ಎಳೆದೆ, ಕೈ ಕೊಸರಿಕೊಂಡ್ಲು... ಅಯ್ಯೊ ಅವಳಿಗೆ ಸಿಟ್ಟು ಬಂದಂತಿದೆ, ಏನು ಮಾಡ್ಲಿ ಅಂತ ಯೊಚಿಸುವುದರಲ್ಲಿ, ನೀರವ ಮೌನ ಮುರಿದು ಅದೊ ಆಕಡೆಯಿಂದ ಪ್ರಶ್ನೆಯೊಂದು ತೂರಿ ಬಂತು "ನೀವೇನೊ ಮುಚ್ಚಿಡ್ತಿದೀರ..." ತಕ್ಷಣ ತಡವರಿಸುತ್ತ "ಇಲ್ಲ ಹಾಗೇನಿಲ್ಲ" ಅಂತಿದ್ದಂಗೆ " ಇದೊ ಸುಳ್ಳು ಬೇರೆ..." ಅಂತಂದ್ಲು. ಅಷ್ಟೇ ಮಾತೇ ಹೊರಡಲಿಲ್ಲ, ಬಿಸಿತುಪ್ಪ ಬಾಯಲ್ಲಿ ಬಿದ್ದಿತ್ತು, ಉಗುಳುವುದಾ, ನುಂಗುವುದಾ, ಎರಡೇ ಆಯ್ಕೆಗಳು.

ನಂಗೆ ಸುಳ್ಳು ಹೇಳೋಕೆ ಬರೊಲ್ಲ, ಬಂದರೂ ಅವಳ ಮುಂದೆ ಅಂತೂ ಅಸಾಧ್ಯ, ಮುಖ ನೊಡೇ ಗುರುತು ಹಿಡಿದು ಬಿಡ್ತಾಳೆ. ಈಗಂತೂ ಎಕ್ಸಪರ್ಟ್ ಆಗೀದಾಳೆ ಮುಖ ನೊಡದೇ ದನಿಯಲ್ಲೇ ಗೊತ್ತಾಗಿದೆ. ನಾ ಬಾತರೂಮಿನಲ್ಲಿದ್ದು ಬರುವುದು ತಡವಾಗಿಹೊದರೆ ಕರೆದಳೆಂದ್ರೆ, ಲೇ ಬನಿಯನ್ನು ಹಾಕೊತಿದೀನಿ ಬಂದೆ ಅಂದ್ರೆ, "ಆ ನಂಗೊತ್ತು ನಿಮ್ಮ ಬಾಡಿ ಮಸಲ್ಲು ನೊಡಿಕೊಂಡಿದ್ದು ಸಾಕು, ನೀವೇನೂ ಹೃತಿಕ್ ರೊಶನ್ನು ಆಗೊಲ್ಲ ಬನ್ನಿ" ಅಂತದಿರ್ತಾಳೆ "ನಿನಗೆ ಹೇಗೆ ಗೊತ್ತಾಯ್ತು ಬಾಗಿಲ ಸಂದಿಯಲ್ಲಿ ನೊಡ್ತಿದ್ಯಾ" ಅಂದ್ರೆ, "ನಿಮ್ಮ ಬಗ್ಗೆ ನಂಗೆ ಗೊತ್ತಿಲ್ವಾ, ಇಲ್ಲೆ ಕೂತ್ಕೊಂಡು ಎಲ್ಲ ಹೇಳ್ತೀನಿ" ಅಂತ ಸವಾಲೂ ಹಾಕಿರುತ್ತಾಳೆ... ಅದು ನಿಜಾನೆ ಅವಳ ನನ್ನ ಪ್ರತಿಯೊಂದು ನಡೆಯನ್ನೂ ಅರೆದು ಕುಡಿದಿದ್ದಾಳೆ.

"ಏನು ಯೋಚಿಸ್ತಿದೀರಾ, ಏನೊ ಕೇಳಬೇಕಿದೆ, ಆದರೆ ಆಗಲಿಂದ ಕೇಳುತ್ತಿಲ್ಲ" ಅಂತ ಮತ್ತೆ ಉಸುರಿದ್ಲು, ಬಿಸಿತುಪ್ಪ ಉಗುಳುವುದೇ ಸರಿಯೆನ್ನಿಸಿತು, ಗಂಟಲು ಸುಟ್ಟರೆ ತೊಂದ್ರೆ, ತುಪ್ಪ ಮತ್ತೆ ಕೊಂಡುಕೊಳ್ಳಬುದಲ್ವೆ. "ನಾನೀಗ ಹೇಳುವುದ ಕೇಳಿ ನೀನೇನು ಅಂದ್ಕೊತಿಯೇನೊ, ಏನಾದ್ರೂ ತಪ್ಪೆಲ್ಲ ನಂದೆ" ಅಂದ್ರೆ "ರೀ ಪುರಾಣ ಸಾಕು, ವಿಷಯಕ್ಕೆ ಬನ್ನಿ" ಅಂದ್ಲು, ಅವಳ ಕೈ ಗಟ್ಟಿಯಾಗಿ ಹಿಡಿದು ಒಂದೇಟಿಗೆ ಚಹ ಕುಡಿಯುವಾಗ ನೋಡಿದ ನಂಬರಿನಿಂದ, ಇದೊ ಈಗ ಪಕ್ಕದಲ್ಲಿ ಬಿಡ್ಕೊಂಡು ಯೊಚಿಸುತ್ತಿದ್ದದ್ದನ್ನೆಲ್ಲ ವರದಿ ಸಲ್ಲಿಸಿದೆ. ಎಲ್ಲಿ ಬಿಟ್ಟು ಓಡಿ ಹೋಗಿಯಾಳೆಂದು ಕೈಯಿನ್ನೂ ಬಿಗಿಯಾಗಿ ಹಿಡಿದಿದ್ದೆ, "ಬಿಡ್ರೀ ಕೈನಾ" ಚೀರಿದ್ಲು, ಸಿಟ್ಟು ಬಂದಿದೆ, ಇನ್ನು ಇವಳಿಲ್ಲಿರಲ್ಲ, ಅಷ್ಟೇ ಅಂತ ಪೆಚ್ಚು ಮೋರೆ ಹಾಕಿ ನೋಡಿದೆ. "ಇಷ್ಟೇನಾ?" ಅಂತ ನಿಟ್ಟುಸಿರು ಬಿಟ್ಟು "ಆ ನಂಬರ್ರು ಸುಧಾಕರಂದು" ಅಂದ್ಲು. ನಾನಿನ್ನು ಯಾರೀ ಸುಧಾಕರ ಏನು ಎತ್ತ ಎಂದು ಮತ್ತೆ ಯೋಚಿಸುವುದರೊಳಗೆ "ಅದೇ ನಮ್ಮ ಸೊಷಿಯಲ್ಲು ಕ್ಲಬ್ ಹುಡುಗಿ, ಸುಧಾ, ಆ ಸುಧಾ ತರಂಗ ಪತ್ರಿಕೆಯಲ್ಲೇ ತಲೆ ಹುದುಗಿಸಿ ಕೂಡುತ್ತಿದ್ದ ಹುಡುಗಿ, ನಾವೇ ಅಲ್ವೆ ಹೆಸರಿಟ್ಟಿದ್ದು, ಅವಳ ಕೈ(ಕರ) ಹಿಡಿಯಲಿರುವ ಹುಡುಗ, ಹೆಸರು ಗೊತ್ತಿಲ್ಲ ಅದ್ಕೆ, ಅವ್ನು ಸುಧಾ-ಕರ" ಅಂದ್ಲು, ಏನಿಲ್ಲ ಅವಳು ಮೊನ್ನೆ ಮನೆಗೆ ಬಂದಿದ್ದಾಳೆ, ಮದುವೆಗೆ ಮೊದಲು ಹುಡುಗ ಹುಡುಗಿ ಗಂಟೆಗಟ್ಲೆ ಮಾತಾಡೊಲ್ವೆ, ಮೊಬೈಲು ಬಿಲ್ಲು ಜಾಸ್ತಿ, ಅದ್ಕೆ ಇವಳು, ನನಗೆ ತಿಂಗಳಿಗೆ ಹತ್ತು ಗಂಟೆ ಫ್ರೀ ಮಾತಾಡು ಅಂತಾ ತನ್ನ ಮೊಬೈಲು ಕೊಟ್ಟೀದಾಳೆ, ಸಿಕ್ಕಿತು ಚಾನ್ಸು ಅಂತ ಸುಧಾ ಬರೊಬ್ಬರಿ ಮೂರೂವರೆ ಗಂಟೆ ಮಾತಾಡಿದ್ದಾಳೆ, ಅದೇ ನಾ ನೋಡಿ ಇಷ್ಟೆಲ್ಲ ರಾಧ್ಧಾಂತ ಮಾಡಿಕೊಂಡಿದ್ದು.

"ಸಮಾಧಾನ ಆಯ್ತಾ" ಅಂದ್ಲು ನನ್ನ ಕಣ್ಣಲ್ಲಿ ನೀರಾಡಿತು, ಮುಖ ತೋರಿಸಲಾಗದೆ ಮುಚ್ಚುತ್ತಿದೆ. "ರೀ ಯಾಕೆ" ಅಂದ್ಲು, "ಅಷ್ಟು ಒಳ್ಳೆಯವಳಾಗಬೇಡ ನನ್ನ ಮನ ಪೂರ್ತಿ ಬೈದು ಬಿಡು" ಅಂದೆ, "ರೀ ತಪ್ಪು ನಿಮ್ಮದಲ್ಲ, ನೀವು ನನ್ನ ಅಷ್ಟೊಂದು ಹಚ್ಚಿಕೊಂಡಿದೀರ" ಅಂದ್ಲು, ನನಗೇನೂ ತಿಳಿಯಲಿಲ್ಲ, ತಲೆಯ ಮೇಲೊಂದು ಪ್ರಶ್ನಾರ್ಥಕ ಚಿಹ್ನೆ ಎದ್ದಿರಬೇಕು, ಅವಳೇ ಹೇಳತೊಡಗಿದಳು. "ಮಗುವಿಗೊಂದು ಗೊಂಬೆ ಕೊಡಿ ಅದನ್ನ ಅದು ಹಚ್ಚಿಕೊಂಡು ಬಿಡುತ್ತೆ, ಅದೊಂಥರ ಅಟ್ಯಾಚ್ಮೆಂಟ್, ಅದಕ್ಕೆ ಅಷ್ಟು ಪ್ರೀತಿ, ಬೇರೆ ಮಗು ಬರಲಿ ನೋಡಿ ಅದು ಗೊಂಬೆ ಕೊಟ್ರೆ ಕೇಳಿ! ಎಲ್ಲೊ ಕಳೆದುಕೊಂಡು ಬಿಡ್ತೀನಿ ಅನ್ನೊ ಭಯ, ಅದೇ ನೀವು... ಅದೇ ಮಗುವಿನ ಅಮ್ಮ ನೋಡಿ, ಮಗು ಅಪ್ಪನ ಹತ್ತಿರ ಹೋಗ್ಲಿ, ಇಲ್ಲ ಅಕ್ಕ, ಮಾಮನ ಹತ್ರ ಹೋಗ್ಲಿ ಬೇಜಾರಿಲ್ಲ, ಮತ್ತೆ ತನ್ನೆಡೆ ಬಂದೆ ಬರುತ್ತೆ ಅನ್ನೊದು ನಂಬಿಕೆ, ಅದು ನಿಜ ಕೂಡ ಮಗುವಿನ ಮೇಲೆ ಅವಳ ಪ್ರೀತಿ ಕಮ್ಮಿಯೇನಾಗಲ್ಲ. ಅದೇ ನಮಗೂ ಅನ್ವಯಿಸುತ್ತೆ" ಏನೊ ಪಕ್ಕಾ ಸಿಧ್ಧಾಂತ ಮಂಡಿಸಿದ್ಲು, ಕರ್ರೆಕ್ಟೆ ಅಲ್ವಾ. ಇನ್ನೂ

Copyright© Prabhuraj Moogi
www.telprabhu.com

ಮುಂದುವರೆಸಿ "ಇಲ್ಲಿ ನೀವು ಅನುಮಾನಿಸಿದಿರಿ ಅನ್ನೋದು ಮುಖ್ಯ ಅಲ್ಲ, ನಿಮಗೇ ಗೊತ್ತಿಲ್ಲದೆ ನಿಮ್ಮ ಮನಸು ಹಾಗೆ ಮಾಡಿಸಿತು, ಮನೆಯೆ ಗೊಡೆ ಬಿರುಕು ಬಿಡುವುದು ಸಹಜ, ಬಿರುಕು ಕಂದಕವಾಗುವ ಮುಂಚೆ ಬಿರುಕು ತುಂಬಿ ಬಣ್ಣ ಬಳಿದು ಬಿಡಬೇಕು, ಬೆಳೆಯ ಬಿಡಬಾರದು, ಮನಸಲ್ಲೆ ಹಾಗೆ ತೊಳಲಾಡುತ್ತಿರದೆ ಕೇಳಿ ಬಿಡಬೇಕಿತ್ತು" ಅಂದ್ಲು "ನೀನೇನೊ ಸರಿ ಏನೂ ಅಂದುಕೊಳ್ಳದೇ ಹೃದಯ ವೈಶಾಲ್ಯದಿಂದ ಒಪ್ಪಿಕೊಂಡೆ, ಆದ್ರೆ ಎಲ್ರೂ ಹಾಗೆ ಇರಲ್ಲಾ ಆದ್ರೆ ನನಗೆ ನಿನ್ನ ಮೇಲೆ ನಂಬಿಕೆ ಇರಬೇಕಿತ್ತು, ಅನುಮಾನಿಸಿದ್ದು ನನ್ನ ಮೊದಲ ತಪ್ಪು" ಅಂದೆ "ಅದೂ ಸರಿ ಬಿಡಿ, ಕೇಳಿದರೂ ವಿಕೋಪಕ್ಕೆ ಹೋಗೊ ಚಾನ್ಸುಗಳೂ ಇರ್ತವೆ, ಆದ್ರೆ ನನ್ನ ಮುಂದೆ ನೀವೇನು ಮುಚ್ಚಿಡಬೇಕಿಲ್ಲ" ಅಂತ ಫುಲಟೈಂ ಪರಮಿಷನ್ನು ಕೊಟ್ಲು, ಎನು ಕೇಳಲೂ ಲೈಸನ್ಸು ಸಿಕ್ಕಂತಾಯ್ತು, ಅದ್ರೂ ನಾನಿನ್ನೆಂದೂ ಕೇಳಲಿಕ್ಕಿಲ್ಲ.

ವೀಕೆಂಡಿನ ಸುಂದರ ಸಂಜೆಯೊಂದು ನಂಬರಿನಿಂದ ಹಾಳಾಗಿ ಹೋಗಿತ್ತು, ಆದರೂ ಬಿರುಕು ತುಂಬಿ ಸಂಭಂದ ಮತ್ತಷ್ಟು ಗಟ್ಟಿಯಾಗಿತ್ತು. ಕ್ಷಣ ಮಾತ್ರದಲ್ಲೆ ಆಕಡೆಯೆಲ್ಲೊ ಮುಖ ಸಿಂಡರಿಸಿಕೊಂಡು ಬಿದ್ದವಳು, ಕೊರಳಿಗೆ ಸುತ್ತಿಕೊಂಡಿದ್ಲು, ಹುಚ್ಚು ಯೊಚನೆಗಳ ಹೊಯ್ದಾಟದಲ್ಲಿ ತಲೆ ಹುಚ್ಚೆದ್ದು ನೋಯುತ್ತಿತ್ತು. ಅದರೂ ಏಕೊ ಮನಸು ಏನೊ ಭಾರ ಇಳಿಸಿದಂತೆ ನಿರಾಳವಾಗಿತ್ತು, ತಲೆ ನೋವಿದೆಯೆಂದದ್ದಕ್ಕೆ ಇವಳ ಬೆರಳುಗಳು ಹಣೆಯ ಮೆಲೆ ಪರೇಡು ನಡೆಸಿದ್ದವು. ಬೊಂಬೆ ಸಿಕ್ಕ ಮಗುವಿನಂತೆ ಬಾಚಿ ಅಪ್ಪಿಕೊಂಡಿದ್ದೆ, ಯಾರೂ ಕಿತ್ತುಕೊಳ್ಳದಂತೆ. ಬಹಳ ಹೊತ್ತು ಅವಳು ಸುಮ್ಮನಿರುವುದಿಲ್ಲ... "ರೀ ನಾಳೆ ಫಿಲ್ಮಗೆ ಕರ್ಕೊಂಡೊ ಹೊಗ್ತೀರಾ" ಅಂದ್ಲು..."ಹೂಂ 'ಗಜಿನಿ' ಹೊಗೋಣಾ" ಅಂದೆ ಎನ್ ಬೇಡ ಅವನ ಹಾಗೆ ನೀವು ನನ್ನ ಮರೆತುಬಿಟ್ರೆ ಅಂತಾ ಕಿಚಾಯಿಸಿದ್ಲು, "ಸರೀ ನಾವಿಬ್ಬರೂ ಪರಫೆಕ್ಟ್ ಜೋಡಿ ಅಲ್ವಾ 'ರಬ್ ನೆ ಬನಾ ದಿ ಜೊಡಿ' ಹೊಗೊಣಾ" ಅಂದಿದ್ದಕ್ಕೆ " ರೀ ಯಾವುದಾದ್ರೂ ಕನ್ನಡ ಫಿಲ್ಮ ಹೊಗೋಣ 'ಗುಲಾಮ' ಹೇಗೆ" ಅಂದ್ಲು ನಾನೇನು ನಿನ್ನ ಗುಲಾಮ ಅಲ್ಲ ಬರಲ್ಲ ಹೋಗು ಅಂದೆ, ಕೊನೆಗೆ "ಸರಿ 'ನೀನ್ಯಾರೆ' ಹೊಗೋಣ" ಅಂದ್ರೆ..."ರೀ ನಾನ ಕಣ್ರಿ ನಿಮ್ ಹೆಂಡ್ತಿ ನೀನ್ಯಾರೆ ಅಂತ ಕೇಳ್ತಿದೀರಲ್ಲ" ಅಂತ ತುಂಟಾಟಕ್ಕಿಳಿದಳು, ಫಿಲ್ಮ ನಾಳೆ ನೋಡಿದ್ರಾಯ್ತು ತುಂಟಿ ಬಿಟ್ಟರೆ ಮಾತಾಡ್ತಾನೇ ಇರ್ತಾಳೆ ಅಂತ ತುಟಿಗೆ ತುಟಿ ಲೊಕ್... ಅಹಾ ಏನ್ ಇನ್ನೂ ನೊಡ್ತಿದೀರ... ನಮ್ಮನೆ ನಮ್ಮ ಸಂಸಾರ, ಏನೊ ಸ್ವಲ್ಪ ಜಗಳ ಆಗ್ತಿರತ್ತೆ... ಗಂಡ ಹೆಂಡ್ತಿ ಜಗಳ ಉಂಡು ಮಲಗೊ ತನಕ ಅಂತಾರೆ... ನೀವು ಅನುಮಾನಿಸಿ ನಿಮ್ಮನೇಲಿ ಬಿರುಕು ಬಿಡದಂದೆ ನೋಡಿಕೊಳ್ಳ ಹೋಗಿ... ಹ ಹ ಹ ಹ...

ಮತ್ತೊಂದಿಷ್ಟು ಮಾತಿನೊಂದಿಗೆ ಮತ್ತೆ ಸಿಕ್ತೀನೀ... ನಿಮ್ಮನಿಸಿಕೆ ಬರೀರಿ...

Copyright© Prabhuraj Moogi
www.telprabhu.com

## ಸೀರೆ ಖರೀದಿ...

ಮುಂಜಾನೆ ಬೇಗ ಎದ್ದು ಪೇಪರ್ರು ಹಿಡಿದು ಕೂತಿದ್ದೆ, ಭಾನುವಾರಗಳೆಲ್ಲ ಹಾಗೆ, ಇರುವ ರಜೆ ದಿನ ಪೂರ್ತಿ ಸವಿಯೋಣವೆಂದು ಆವತ್ತು ಮಾತ್ರ ಬಲುಬೇಗ ಏಳೊದು, ಲೇಟಾಗಿ ಎದ್ದರೆ ದಿನ ಕಳೆದುಹೋಗಿದ್ದೆ ಅರಿವಿಗೆ ಬರೊಲ್ಲ. ಶನಿವಾರ ಸೂರ್ಯ ನೆತ್ತಿಗೆ ಬರುವ ಹೊತ್ತಿಗೆ ಎದ್ದರೂ ಇನ್ನೂ ಹಾಸಿಗೆಯಲ್ಲೇ ಬಿದ್ದಿರುವುದರಿಂದ ಇಂದು ನಿದ್ದೆ ಬೇಕೆನಿಸುವುದಿಲ್ಲ. ಭಾನುವಾರ ಅವಳಿಗೂ ರಜೆ... ಮುಂಜಾನೆ ಬೇಗ ಏಳಬೇಕಿಲ್ಲ... ಇನ್ನೂ ಮಲಗಿದ್ದಳು, ನಾನೇ ಟೀ ಮಾಡಿಕೊಂಡು, ವಿಜಯ ಕರ್ನಾಟಕದ ವಿಶೇಷ ಅಂಕಣಗಳಲ್ಲಿ ತಲೆ ಹುದುಗಿಸಿ ಕೂತು ಓದುತ್ತಿದ್ದರೆ ಸಮಯ ಹೋಗಿದ್ದೆ ಗೊತ್ತಾಗಲ್ಲ.

ಯಾವುದೊ ವಿಶೇಷ ಲೇಖನ ಓದುತ್ತ ಮೈ ಮರೆತಿದ್ದೆ, ಅವಳು ಎದ್ದು ಹತ್ತಿರ ಬಂದಿದ್ದೂ ಗೊತ್ತಾಗಿರಲಿಲ್ಲ, ಹಿಂದಿನಿಂದ ಬಂದು ಚೀರಿ ಹೆದರಿಸಿಬಿಟ್ಲು, ಒಂದು ಕ್ಷಣ ಸಾವರಿಸಿಕೊಂಡು, ರೇಗಿದೆ, ನಸುನಗುತ್ತ ಎದ್ದು ಹೋದ್ಲು. ಕೀಟಲೆ ಮಾಡದಿದ್ರೆ ಅವಳಿಗೆಲ್ಲಿ ಸಮಾಧಾನ. ಅಬ್ಬ ಹೋದ್ಲಲ್ಲ, ಇನ್ನು ನಿರಾತಂಕವಾಗಿ ಓದಬಹುದು ಅಂತಾ ಮತ್ತೆ ಪೇಪರಿನಲ್ಲಿ ಮುಳುಗಿದೆ, ಯಾಕೊ ಮನಸು ಅಲ್ಲಿ ನಿಲ್ಲಲಿಲ್ಲ, ಕೂರಲಾಗದೆ, ಏನ್ ಮಾಡ್ತಾ ಇದಾಳೆ, ನಾನೊಂದು ಸ್ವಲ್ಪ ಕಾಡಿಸೋಣ ಎಂದು ಎದ್ದು ನಡೆದೆ.

ನಾ ಮಾಡಿಟ್ಟಿದ್ದ ಟೀ ಬಿಸಿ ಮಾಡುತ್ತಿದ್ಲು, ನನ್ನ ನೋಡಿ "ಏನ್ ರಾಯರ ಸವಾರಿ ಈಕಡೆ ಬಂತು, ಪೇಪರ್ ಓದಿದ್ದಾಯ್ತೊ" ಅಂದ್ಲು. "ಇಲ್ಲ, ಅಮ್ಮಾವ್ರು ಏನ್ ಮಾಡ್ತಿದೀರ ನೋಡಲು ಬಂದೆ" ಅಂದೆ. ಏನ್ ಮಾಡ್ಲಿ ಈವತ್ತು ಅಂದ್ಲು, ನಾನದಕ್ಕೆ "ಎರಡು ಮುದ್ದು ಮುದ್ದು ಮಾತು, ಸ್ವಲ್ಪ ಕೀಟಲೆಯ ಮಸಾಲೆ ಹಾಕಿ, ಪ್ರೀತಿ ಸವರಿ, ಒಂದು ತುತ್ತು ತಿನ್ನಿಸಿ ಬಿಡು ಸಾಕೆಂದೆ, ಹೊಟ್ಟೆ ತುಂಬಿಬಿಡುತ್ತೆ" ಅಂದೆ. "ಹೊಗ್ರೀ, ನಿಮ್ಮನ್ನ ಕೇಳಿದ್ದೆ ತಪ್ಪಾಯ್ತು, ಕೆಲಸ ಬಹಳ ಇದೆ, ಅಂದ ಹಾಗೆ ಇಂದೇನು ನಿಮ್ಮ ಪ್ಲಾನು" ಅಂದ್ಲು. ಏನಿಲ್ಲ ಅಂದಿದ್ದೆ ತಪ್ಪಾಯ್ತು, ಅವಳೊಂದಿಗೆ ಸೀರೆ ತರಲು ಬರಬೇಕೆಂದು ಒಪ್ಪಿಸಿದ್ಲು. ನನ್ನ ಕ್ರೆಡಿಟ್ಟು ಕಾರ್ಡು ಲೂಟಿಯಾಗುವುದನ್ನ ನಾ ನೋಡೊಕಾಗಲ್ಲ ಅಂದ್ರೂ ಕೇಳಲಿಲ್ಲ.

ಅಮ್ಮನ ಹುಟ್ಟುಹಬ್ಬಕ್ಕೆ ಇವಳು ಕೊಡುವ ಗಿಫ್ಟು ಅದು, ಇವಳಿಗೇನೂ ಅಲ್ಲವಲ್ಲ, ಹೀಗಾಗಿ ಬಹಳ ಹೊತ್ತಾಗಲಿಕ್ಕಿಲ್ಲ ಅಂದುಕೊಂಡೆ. ಆ ಅಂಗಡಿಯ ಮೆಟ್ಟಿಲು ಹತ್ತುತ್ತಿರಬೇಕಾದ್ರೆ, ಶೋಕೇಸಿನಲ್ಲಿ ನಿಲ್ಲಿಸಿದ ಅಂದದ ಬೊಂಬೆಗಳೆಲ್ಲ ನನ್ನೇ ನೊಡುತ್ತಿವೆಯೆನಿಸಿ ಖುಶಿಯಾಯ್ತು. ಆ ಬೊಂಬೆಗಳೇ ಹಾಗೆ ಯಾರು ನೋಡಿದರೂ ಅವರನ್ನೆ ನೊಡುತ್ತಿರುವಂತೆ ಅನಿಸೋದು, ಆ ತರ್ಕ ನನಗೇಕೆ ಬೇಕು ಹೇಳಿ. "ರೀ ಅದು ಬೊಂಬೆ" ಅಂತ ಇವಳು ಎಚ್ಚರಿಸಿದ್ಲು, **ಬೊಂಬೆಯಾದ್ರೇನಂತೆ ಅದು ಯಾವುದೊ ಕಲಾಕಾರನ ಕಲ್ಪನೆಯ ಕೂಸು, ಅವನ ಕನಸಿನ ಕನ್ಯೆಯ ಪ್ರತಿಕೃತಿಯೂ ಇರಬಹುದು**, ಅದೆಲ್ಲಿ ಇವಳಿಗೆ ಅರ್ಥ ಆಗಬೇಕು, ಹೇಳಿ ಪ್ರಯೋಜನವಿಲ್ಲವೆಂದು ಸುಮ್ಮನಾದೆ.

ಅಂಗಡಿಯೊಳಗೆ ಕಾಲಿಡುತ್ತಿದ್ದಂತೆ ಮಾಲೀಕ ಮುಖ ಅರಳಿಸಿಕೊಂಡು, "ಎನ್ ಮ್ಯಾಡಮ ಬಹಳ ದಿನದ ಮೇಲೆ ಈಕಡೆ" ಅಂದ, ಮುಖ ಯಾಕೆ ಅರಳಲ್ಲ ಹೇಳಿ, ಬಂದಾಗೊಮ್ಮೆಯೂ ಬರಿಗೈಲಿ ಹೋಗದ ಇವಳು ಬಂದಿರಬೇಕಾದ್ರೆ, ಬಹಳ ದಿನಗಳ ಮೇಲೆ ಅಂತೆ, ಇನ್ನೇನೂ ದಿನಾಲೂ ಬರಬೇಕಾ, ಇವಳೇನು ಪ್ರಖ್ಯಾತ ಸಿನಿಮಾ ನಟಿನಾ, ಇಲ್ಲ ನಾನೇನು ಅಮೀರ ಕುಬೇರನಾ. ನನ್ನ ಕ್ರೆಡಿಟ್ಟು ಕಾರ್ಡು ಬಿಲ್ಲು ನೆನಪಾಗಿ ನನ್ನ ಮುಖ ಕಮರಿತ್ತು. "ಮತ್ತೇನು ಸೇಠು, ಹೊಸ ಸ್ಟಾಕು ಬಂದಿದೇನಾ" ಅಂತ ಒಳ ನುಗ್ಗಿದಳಿವಳು. ದಾಳಿಗೆ ಮೊದಲೇ ಸೋತ ಸೇನಾಪತಿಯಂತಾಗಿದ್ದೆ.

ಸೀರೆ ತೊರಿಸುವ ಹುಡುಗ, ಇವಳ್ಯಾಕಪ್ಪ ಬಂದ್ಲು ಅಂತನಕೊಂಡಿರಬೇಕು, ಇವತ್ತು ಎಕ್ಸ್ಟ್ರಾ ಡ್ಯೂಟಿ ಸಂಬಳ ಕೇಳಿದ್ರು ಕೇಳಬಹುದು. ರಾಶಿ ಸೀರೆ ತೆಗೆದುಹಾಕಿಸುತಾಳೆಂದು ಅವನ ತಗಾದೆ, ಹಾಗೆ ಸುಮ್ನೆ ಒಂದು ಸಾರಿ ಮುಗುಳು ನಕ್ಕೆ ಅವನೆಡೆಗೆ ನೋಡಿ, ನಮ್ಮಿಬರದೂ ಒಂದೆ ಪಾಡು, ನಾ ನಿನ್ನ ಜತೆಗಿದ್ದೇನೆ ಅನ್ನೋ ಹಾಗೆ... "ಹೊರಗೆ ಶೊಕೇಸಿನಲ್ಲಿ ಹಾಕೀದೀರಲ್ಲ, ಅದು.." ಇನ್ನೂ ಮಾತು ಮುಗಿಸಿರಲಿಲ್ಲ, ನಾ ನಡುವೆ "ಯಾವ ಬೊಂಬೆ ಅಂತ ನೋಡಿಕೊಂಡು ಬರಲಾ" ಅಂದೆ, ದುರುಗುಟ್ಟಿ ನೋಡಿದ್ಲು, ಹಲ್ಲು ಕಿರಿದು ತೆಪ್ಪಗಾದೆ. "ಅದಾ ಮ್ಯಾಡಮ ಹೊಸಾ ಫ್ಯಾಷನ್ನು ಈಗ..." ಅಂತ ಅದೇ ಹಳಸಲು ಮಾಲನ್ನು ಹೊಗಳತೊಡಗಿದ ಆ ಹುಡುಗ. ಆ ಸೀರೆ ಮೈ ಮೇಲೆ ಹೊದ್ದು, ಹೇಗೆ ಕಾಣುತ್ತೆ ಅಂತ ಕೇಳಿದ್ಲು, ಅಲ್ಲಾ ನಾವೀಗ ಬಂದಿರೋದು ಅಮ್ಮನಿಗೆ ಸೀರೆ ತರಲು, ಇದು ಬೇರೆ ಹೊಸ ಫ್ಯಾಷನ್ನು, ಇವಳು ತನಗೆ ಹೇಗೆ ಕಾಣುತ್ತೆ ಅಂತ ಕೇಳುತ್ತಿದ್ದಾಳೆ!!! ಏನೂ ತೊಚದೆ... "ಅಮ್ಮನಿಗೆ, ಹೊಸ ಫ್ಯಾಷನ್ನು ಇಷ್ಟ ಆಗಲಿಕ್ಕಿಲ್ಲ" ಅಂತಂದೆ... ಅರ್ಥ ಆಯಿತೆಂದು ಕಾಣುತ್ತೆ, ಒಂದೇ ಮಾತಿನಲ್ಲಿ ಎಲ್ಲ ಹೇಳಿದ್ದೆ.

Copyright© Prabhuraj Moogi
www.telprabhu.com

ಆ ಸೀರೆ ಪಕ್ಕಕ್ಕೆ ಸರಿಸಿಟ್ಟು, "ಕಾಂಚೀವರಂ, ಇಲ್ಲಾ ಕೋಚಂಪಲ್ಲಿ ಸೀರೆನಲ್ಲಿ ಬೇರೆ ಬೇರೆ ವರ್ೈಟಿ ತೋರಿಸು, ಬೇರೆ ರೇಶ್ಮೆ ಸೀರೆ ಇದ್ರೂ ತಗೊಂಬಾ" ಅಂತ ಹುಡುಕಾಟದಲ್ಲಿ ಮುಳುಗಿದ್ಲು, ಆ ಸೀರೆ ಅಲ್ಲೇ ಪಕ್ಕಕ್ಕಿತ್ತಲ್ಲ, ಹಾಗೆ ಅವಳು ಉಟ್ಟರೆ ಹೇಗಿರಬಹುದೆಂದು ಕಲ್ಪಿಸಿಕೊಂಡೆ, ಪರವಾಗಿಲ್ಲ ಚೆನ್ನಾಗೇ ಇತ್ತು, ಅದೇ ನನ್ನಿಷ್ಟದ **ತಿಳಿ ನೀಲಿ ಬಣ್ಣ, ಅಂಚಿನಲ್ಲಿ ಚಿಕ್ಕ ಬಿಳಿ ಬಳ್ಳಿಯಂಥ ಬಾರ್ಡರು, ಸೆರಗಿಗೆ ಸ್ವಲ್ಪ ಡಿಸೈನು.. ಮುಟ್ಟಿದರೆ ಗರಿ ಗರಿ, ಉಟ್ಟರೆ ಇವಳು ಪರಿ**(ದೇವಕನ್ಯೆ) ಸುಪರ್... ಅವಳಿಗೆ ಹೇಳಿ ಮಾಡಿಸಿದಂತಿತ್ತು.

"ರೀ ಇದು ಹೇಗಿದೆ, ಅಮ್ಮನ ಕಲರ್‌ಗೆ ಸರಿ ಹೊಂದುತ್ತಲ್ವಾ" ಅಂತ ಅವಳು ಕೇಳಿದಾಗಲೇ ಕಲ್ಪನಾಲೋಕದಿಂದ ಈಚೆ ಬಂದೆ. ಹೂಂ ಹೂಂ ಅಂತೆನೊ ಬಡಬಡಿಸಿದೆ, ಇದು.. ಅಂತ ಇನ್ನೊಂದು ತೋರಿಸಿದ್ಲು, "ಓಹ್ ಇದೂ ಚೆನ್ನಾಗಿದೆ, ಇಲ್ಯಾಕೊ ಡಿಸೈನು ಇಲ್ಲ, ನೆಯ್ಗೆ ಹಾಕೊವಾಗ ಮರೆತರೆಂದು ಕಾಣುತ್ತೆ" ಅಂದೆ. "ರೀ ಅದು ಬ್ಲೌಜ್ ಪೀಸು, ಅದರೊಂದಿಗೇ ಬರುತ್ತೆ" ಅಂತ ಬಯ್ದ್ಲು, ಈ ವಿಷಯದಲ್ಲಿ ನನ್ನ ಅಪಾರ ಮೌಢ್ಯವನ್ನು ನಾ ಪ್ರದರ್ಶಿಸಿದ್ದೆ. "ಓಹ್ ಹಾಗಾ, ಸರಿ ಬಿಡು ಅದೇ ಇರಲಿ" ಅಂದೆ, ತಾಳಿ ಇನ್ನೂ ನೋಡೋಣ ಅಂದ್ಲು, ಇಷ್ಟು ಬೇಗ ಆರಿಸಿ ಕೊಂಡ್ರೆ ಹೇಗೆ, ಇನ್ನೂ ಒಂದು ಘಂಟೆ ಕೂಡಾ ಆಗಿಲ್ಲ. ಇನ್ನೊಂದು ರಾಶಿ ಸೀರೆ ಬೀಳುವುದು ಖಾತ್ರಿಯಾತು, ನಾನೆದ್ದು, ಸೇಠು ಕಡೆ ಹೋದೆ, "ಢೊಣಪ"(ಡುಮ್ಮ) ಕೂತಲ್ಲೇ ಹಲ್ಲು ಕಿರಿಯುತ್ತಿದ್ದ. ತಟಕ್ಕನೆ ಫೊನು ಮಾಡಿ "ಬಾಸ ಮೂರು ಟೀ ಕಳಿಸು" ಅಂದ "ಮೂರಲ್ಲ ನಾಲ್ಕು" ಅಂದೆ.. ಪಾಪ ಆ ಹುಡುಗ ಕೂಡ ಸೀರೆ ತೆಗೆದು ತೆಗೆದು ದಣಿದಿದ್ದ. ಸೇಠು ತಲೆ ಮೆಲೆದ್ದಿದ್ದ ಪ್ರಶ್ನಾರ್ಥಕ ಚಿಹ್ನೆಗೆ ಉತ್ತರವೆನ್ನುವಂತೆ, ಆ ಹುಡುಗನ ನೋಡಿ ನಕ್ಕೆ, ಕಣ್ಣಲ್ಲೇ ಅವನು ಧನ್ಯವಾದ ಹೇಳಿದಂತಿತ್ತು, ಸೇಠು ಮತ್ತೊಮ್ಮೆ ಹಲ್ಲು ಕಿರಿದ. "ಮತ್ತೆ ಹೇಗಿದೆ ಸೇಲ್ಸು" ಅಂತ ಮಾತಿಗೆಳೆದೆ, ಹೇಳಲೇ ಕಾದಿದ್ದವನಂತೆ, ಒಂದೆ ಸಮನೆ ಉಸುರುತ್ತಿದ್ದ, ನಾ ಕೇಳುತ್ತಿದ್ದೆ. ಒಳ್ಳೆ ಮಾತುಗಾರ ಅದಕ್ಕೆ ಅಲ್ವೆ ಇಷ್ಟು ಬಿಜಿನೆಸ್ಸು ಬೆಳೆದಿರೊದು, ಅದೆಲ್ಲೊ ಮೂಲೇಲಿದ್ದ ಚಿಕ್ಕ ಅಂಗಡಿಯಿಂದ ಇಂದು, ಇಷ್ಟು ದೊಡ್ಡ ಶೊರೂಮು ಬೆಳೆಸಿದ್ದಾನೆ. ನಾವೇ ಮೊದಲ ಗಿರಾಕಿ ಅವನಿಗೆ.. ಅದಕ್ಕೆ ನಮಗೆ ಡಿಸ್ಕೌಂಟೂ ಸಿಗುತ್ತೆ. ಹಾಗೆ ಕ್ವಾಲಿಟೀನಲ್ಲೂ ಮೊಸ ಮಾಡಲ್ಲ. ಹತ್ತಿರ ಕರೆದು, ಕಿವಿಯಲ್ಲಿ ಏನೊ ಪಿಸುಗುಟ್ಟಿದೆ(ಅದೇನೆಂದು ನಿಮಗೆ ಆಮೇಲೆ ಹೇಳುತ್ತೀನಿ ತಾಳಿ, ಮುಂದೆ ಓದಿ), ಅವ ಇನ್ನೊಂದು ರಾಜನಗೆ ಬೀರಿದ, ಟೀ ಮುಗಿದಿತ್ತು, ನಾ ಹೋಗಿ ಅವಳ ಪಕ್ಕ ಕುಳಿತೆ.

ಇದು ಕಲರು ಹೇಗಿದೆ, ಅಂತ ಇನ್ನಾವುದೊ ಸಾರಿ ತೊರಿಸಿದ್ಲು, ಓಹ್ ಗುಲಾಬಿ ಚೆನ್ನಾಗಿದೆ ಅಂದದ್ದಕ್ಕೆ, ಅಲ್ಲ ಅದು ರಾಣಿ ಕಲರ್ರು ಅಂದ್ಲು, "ಇದ್ಯಾವ ಹೊಸ ಕಲರು ಕೋಡ್, ನಮಗೆ ಗೊತ್ತಿಲ್ಲ ಬಿಡು" ಅಂದೆ. ಇನ್ಯಾವುದೊ ತೆಗೆದು ಇದೊ ಪಿಸ್ತಾ ಕಲರು ಹೇಗಿದೆ ಅಂತಾನೂ ಕೇಳಿದ್ಲು, ಏನೂ ತಿಳಿಯದೆ... ಹೀ ಹೀ ಅಂದೆ. ಕೇಳಿ ಪ್ರಯೊಜನವಿಲ್ಲವೆಂದು ಅವಳೇ ಆರಿಸತೊಡಗಿದ್ಲು. ಮಿರಿ ಮಿರಿ ಮಿಂಚುತ್ತಿದ್ದ ಸಾರೀಯೊಂದನ್ನು ಎತ್ತಿ, "ಏನಿದು ಜರಿ ತುಂಬಾ ಭಾರಿ ಇದೆ, ಜರಿಯಲ್ಲಿ ಬಂಗಾರ ಇರುತ್ತೇನೆ?" ಕೇಳ್ದೆ, ಸಿಟ್ಟು ಬಂತು ಅಂತಾ ಕಾಣುತ್ತೆ "ಹೂಂ ಒಂದು ಕೇಜೀ ಹಾಕಿರ್ತಾರೆ" ಅಂದ್ಲು. ಅಳೆದೂ ತೂಗಿ... **ಅಂಚಿನಗುಂಟ ಕೈ ಕುಸುರಿಯಂತೆ ಚಿಕ್ಕ ಜರಿ, ಸೆರಗಿನುದ್ದಕ್ಕೂ ಹರಡಿದ ಎಳೆಗಳ ಸಾಲು, ಅದಕ್ಕೆ ಎಳೆ ಬಿಚ್ಚದ ಹಾಗೆ ಕಟ್ಟಿದ ಗೊಂಡೆ ಕಟ್ಟುಗಳು, ತುಸು ಭಾರವೆನಿಸಿದರು, ಭಾರೀ ಆಡಂಬರವೆನಿಸದ ಒಂದು ಸೀರೆ** ಆಯ್ಕೆ ಮಾಡಿದ್ದಾಯ್ತು. ಹಾಗೆ ಅಪ್ಪಾಜಿಗೆ, ಒಂದು ಜತೆ ಡ್ರೆಸ್ಸು, ತಂಗಿಗೆ ಒಂದು ಡ್ರೆಸ್ ಮಟೀರಿಯಲ್ಲು(ಹೊಲಿಗೆ ಹಾಕಲು) ಎತ್ತಿಕೊಂಡ್ಲು. "ಮತ್ತಿನ್ನೇನು, ಪದ್ದು, ಹಾಸಿನಿಗೆ ಸೀರೆ ಕೊಡಿಸಲ್ವಾ" ಅಂತಾ ಕೀಟಲೆ ಪ್ರಶ್ನೆಯೊಂದನ್ನು ಬಿಸಾಕಿದ್ಲು. ರಿಸೆಷನ್(ಆರ್ಥಿಕ ಹಿಂಜರಿತ) ಕಾಸ್ಟ ಕಟ್ಟಿಂಗ ನಡೆದಿದೆ, ಮತ್ತೊಮ್ಮೆ ನೊಡೋಣ ಎಂದು, ಕಿರಿಕ್ಕು ಉತ್ತರ ಕೊಟ್ಟೆ. ಮತ್ತೊಮ್ಮೆ ಮೊಟ್ಟ ಮೊದಲು ತರಿಸಿದ್ದ ಹೊಸ ಫ್ಯಾಷನ್ನು ಸೀರೆ ಇನ್ನೊಮ್ಮೆ ಹಾಗೆ ಸವರಿ ವಾಪಸ್ಸು ಕೊಟ್ಟು, ಉಳಿದದ್ದು ಪ್ಯಾಕ್ ಮಾಡಿ ಅಂದ್ಲು. ಆ ಸೀರೆ ಅವಳಿಗೆ ಬಹಳ ಇಷ್ಟ ಆಗಿತ್ತೆಂದು ಕಾಣುತ್ತೆ, ಖರೀದಿ ಖರ್ಚು ಬಹಳ ಆಯಿತೆಂದು ಬೇಡವೆಂದು ಬಿಟ್ಲು ಅನಿಸತ್ತೆ.

ಸೇಠು, ದಿಸ್ಕೌಂಟ್ ಅನ್ನುತ್ತ ಎದ್ದು ಬಿಲ್ ಕೌಂಟರ ಕಡೆ ನಡೆದ್ಲು, "ನೀವು ಕೇಳೊದೆ ಬೇಡ, ನಾನೆಲ್ಲ ಸರಿ ಹಾಕೀದೀನಿ" ಅಂದ, ಅದು ಹಾಗೆನೆ, ಅವನಿಗೂ ಗೊತ್ತು ನಾವು ಜಾಸ್ತಿ ಏನೂ ಕೇಳೊಲ್ಲವೆಂದು, ಅದಕ್ಕೇ ಏನೊ ಒಳ್ಳೇ ಬೆಲೆನೇ ಕೊಟ್ಟಿರ್ತಾನೆ. ಆಯ್ತು ನಾನು ಬಿಲ್ ಪೇ ಮಾಡಿ, ಪ್ಯಾಕ್ ತರ್ತೀನಿ, ನೀ ನಡಿ ಅಂದೆ. ಕಾರ್ಡು ಎಳೆದು ಪ್ಯಾಕು ಹೊತ್ತುಕೊಂಡು ಮೆಟ್ಟಲಿಳಿಯತೊಡಗಿದೆ. ಸಪ್ಪೆ ಮುಖ ಹೊತ್ತು ಸುಮ್ಮನೆ ನಡೆಯುತ್ತಿದ್ಲು, ಶೊಕೇಸಿನಲ್ಲಿ ನಿಂತ ಬೊಂಬೆ ನೋಡಿ ನಗುತ್ತಿತ್ತು.

ಮನೆಗೆ ಬಂದಿಳಿದಾಗ, ಮಧ್ಯಾಹ್ನ ಮೂರಾಗಿತ್ತು, ಭಾನುವಾರ ಸಣ್ಣ ಜೊಂಪು(ಅರೆನಿದ್ದೆ) ಹೊಡೆಯುವ ವೇಳೆಯಾಗಿತ್ತು. ಅದೆ ಶಾಂತಿಯ ದೊಸೆ ಇನ್ನೂ ಕರಗಿರಲಿಲ್ಲ, ಶಾಂತಿ ಅಂದ್ರೆ, ಶಾಂತಿ ಸಾಗರ ಹೊಟೆಲ್ಲು. ಹಾಸಿಗೆ ಮೇಲೆ ಹಾಗೆ ಕುಳಿತಿದ್ಲು, "ತಂದ ಸೀರೆಗಳ ನೊಡೋಲ್ವೆ" ಅಂದೆ, ಯಾಕೊ ಆಸಕ್ತಿಯಿದ್ದಂತೆ ಕಾಣಲಿಲ್ಲ, ನಾನೇ ಹೋಗಿ ಪ್ಯಾಕು ಎತ್ತಿಕೊಂಡು ಬಂದೆ,

"ರೀ ಈಗ ಬೇಡಾ" ಅಂತ ದಯನೀಯವಾಗಿ ಕೇಳಿದ್ಲು. ಆದರೆ ನಾ ಬಿಡಬೇಕಲ್ಲ, ಒಂದು ಪ್ಯಾಕು ತೆಗೆದವನೆ, "ಸೀರೆಗೊಂದು ಸವಾಲ್ ಕಾರ್ಯಕ್ರಮಕ್ಕೆ ಸ್ವಾಗತಾ.. ಸುಸ್ವಾಗತ.. ಸೀರೆಯ ನಿಖರ ಬೆಲೆ ಹೇಳಿ ಈ ಸೀರೆ ನಿಮ್ಮದಾಗಿಸಿಕೊಳ್ಳಿ..." ನಾನು ಹೇಳುತ್ತಿದ್ರೆ ನನ್ನತ್ತ ಅವಳು ನೊಡುತ್ತಲೆ ಇಲ್ಲ, ತಲೆ ಕೆಳಗೆ ಮಾಡಿಕೊಂಡು ಹಾಗೆ ಕೂತಿದ್ದಾಳೆ, ಬಹಳ ಬೇಜಾರಾಗಿತ್ತನಿಸುತ್ತೆ, ನಾ ಹಾಗೆ ಮುಂದುವರಿಸಿದೆ "ಇದೊ ನೋಡಿ, ತಿಳಿ ನೀಲಿ ಬಣ್ಣ, ಅಂಚಿನಲ್ಲಿ ಚಿಕ್ಕ ಬಿಳಿ ಬಳ್ಳಿಯಂಥ ಬಾರ್ಡರು, ಸೆರಗಿಗೆ ಸ್ವಲ್ಪ ಡಿಸೈನು.. ಮುಟ್ಟಿದರೆ ಗರಿ ಗರಿ, ಉಟ್ಟರೆ ನೋಡಲು ಪರಿ.. ಈ ಸೀರೆ ಬೆಲೆ ಊಹಿಸಿ, ನಿಮ್ಮದಾಗಿಸಿಕೊಳ್ಳಿ" ಅಂತ ಕೂಗಿದೆ, ನಿಧಾನ ತಲೆ ಎತ್ತಿದಳು, ಯಾವುದೂ ತಿಳಿ ನೀಲಿ ಸಾರಿ ಕೊಂಡುಕೊಂಡಿಲ್ಲ ಇದ್ಯಾವುದು ಅಂತ ಅನುಮಾನವೆದ್ದಿರಬೇಕು... ನಾ ಪ್ಯಾಕು ತೆರೆದು ಕೈಲಿ ಸಾರಿ ಹಿಡಿದೆ, ಅವಳು ನೋಡುತ್ತಿದ್ದರೆ, **"ಸೀರೆಯ ನಿಖರ ಬೆಲೆ ಹೇಳಿ ಈ ಸೀರೆ ನಿಮ್ಮದಾಗಿಸಿಕೊಳ್ಳಿ..."** ಮತ್ತೊಮ್ಮೆ ಸಾರಿದೆ... "ಮುನ್ನೂರ ಐವತ್ತು" ಅಂತಾ ಅದ್ಯಾವುದೊ ಮೂಲೆಯೆಂದಾ ಬಂದಂತೆ ಅವಳ ದನಿ ಬಂತು. ಓಡಿ ಬಂದವಳೇ, ಅಪ್ಪಿಕೊಂಡ್ಲು, "ಮ್ಯಾಡಮ್ ಮ್ಯಾಡಮ್ ನೀವು ಗೆದ್ದೀದೀರ, ನಿಮಗೇ ಕೊಡ್ತೀನಿ ತಾಳಿ" ಅಂತಿದ್ದರೂ ಸೀರೆ ಅವಳು ತೆಗೆದುಕೊಳ್ಳಲಿಲ್ಲ, ಈಗದು ಅವಳಿಗೆ ಬೇಕಾಗೂ ಇರಲಿಲ್ಲ.

ರಭಸದಿಂದ ಓಡಿ ಬಂದದ್ದರಿಂದ, ಕೆಳಗೆ ಕುಸಿದು ಹಾಸಿಗೆ ಮೇಲೆ ಕುಳಿತೆ, ಆ ಕಣ್ಣಂಚಿಂದ ನೀರು ತೊಟ್ಟಿಕ್ಕಿತ್ತು, "ಲೇ ಯಾಕೇ" ಅಂದೆ ಉತ್ತರವೇನೂ ಬರಲಿಲ್ಲ. ಹಾಗೇ ಎಷ್ಟೊ ಹೊತ್ತು ಮಡಿಲಲ್ಲೆ ಮಲಗಿದ್ಲು ಮುಖ ಮುಚ್ಚಿಕೊಂಡು, ಮಾತೇ ಇಲ್ಲದಂತೆ. ಬಹಳ ಹೊತ್ತಾದ ಮೇಲೆ ಮಿಸುಕಾಡಿದ್ಲು, ಅಲುಗಿಸಿದೆ... "ಆಗಲೇ ಯಾಕೆ ಹೇಳ್ಲಿಲ್ಲ, ಯಾವಾಗ್ ಪ್ಯಾಕ್ ಮಾಡಿಸಿದ್ರಿ, ಸತಾಯಿಸ್ತೀರಾ, ಮೊದಲೇ ಖರ್ಚು ಜಾಸ್ತಿಯಾಗಿತ್ತು, ಈಗಿದು ಬೇಕಿತ್ತಾ" ಧರ್ಮರಾಯನಿಗೆ ಯಕ್ಷ ಪ್ರಶ್ನೆ ಕೇಳಿದಂತೆ ಆಕಾಶವಾಣಿ ಕೇಳಿಸ್ತು. ನೀ ಮೊದಲು ಏಳು ಹೇಳ್ತೀನಿ ಅಂದ್ರೂ ಏಳಲಿಲ್ಲ, ಬದಲಿಗೆ ಸತಾಯಿಸ್ತೀರ ಅಂತ ಏಟು ಬಿತ್ತು. ಚೀರಿದೆ "ಇದೊಳ್ಳೆ ಆಯ್ತಲ್ಲ ನಿಂಗಿಷ್ಟಾ ಆಗಿತ್ತು ಅಂತಾ ತಂದ್ರೆ, ಏಟು ಕೊಡ್ತೀದೀಯಲ್ಲ" ಅಂದೆ. ಮ್ಯಾಡಮ್ಮು ಮುಖ ದರ್ಶನ ಆಯ್ತು, ತಿರುಗಿದ್ಲು, ಗಲ್ಲ ಉಬ್ಬಿಸಿಕೊಂಡು ಹಾಗೇ ನೊಡಿದ್ಲು. ನಗು ಬಂತು... "ಅದೆ ಟೀ ಕುಡಿಯೋಕೆ ಸೇಠು ಹತ್ರ ಹೋದ್ನಲ್ಲ ಆಗ ಅವನ ಕಿವಿಯಲ್ಲಿ, ನಿನಗೆ ಗೊತ್ತಾಗದಂತೆ ಆ ಸಾರಿ ಪ್ಯಾಕು ಮಾಡುವಂತೆ ಪಿಸುಗುಟ್ಟಿ ಬಂದಿದ್ದೆ" ಅಂದೆ "ತಾಳಿ ಸೇಠುನ ಮತ್ತೊಮ್ಮೆ ಹೋದಾಗ ನೊಡ್ಕೊತೀನಿ" ಅಂತಂದ್ಲು, "ಲೇ, ಪಾಪ ಅವನೇನೆ ಮಾಡ್ದ, ನಾನು ಹೇಳಿದೆ ಅಂತ ಕೊಟ್ಟ, ಭಲೇ ಇಂಪ್ರೆಸ್ಸ್ ಆಗಿ ದಿಸ್ಕೌಂಟೂ ಕೊಟ್ಟದ್ದಲ್ದೆ, ಮೇಲಿನ ನೂರಿಪ್ಪತ್ತು ಕೂಡ ಬಿಟ್ಟ" ಅಂದೆ. "ಮೂರು ಸಾವಿರ ಇದ್ರೂ ತರ್ತಿದ್ರಾ" ಅಂದ್ಲು "ಅದಕ್ಕೆಲ್ಲ ಮೌಲ್ಯ ಕಟ್ಟಬೇಡ, ನನ್ನ ಕೈಗೆಟುವ ಬೆಲೆ ಯಾವುದಾಗಿದ್ರೂ ಸರಿ ತರ್ತಿದ್ದೆ, ಕೊಟ್ಟಿದ್ದು ಬರೀ ಮುನ್ನೂರೈವತ್ತು, ಆದ್ರೆ ನನಗೆ ಮೂರು ಕೋಟಿ ಕೊಟ್ರೂ ಇಷ್ಟು ಸಂತೊಷ ಸಿಕ್ತಿರಲಿಲ್ಲ" ಅಂದೆ. ನಿಜ **ನಮಗೆ ಕೈಗೆಟುವ ಬೆಲೆಯಲ್ಲೆ ಎಷ್ಟೊ ಆನಂದವಿದೆ, ನಾವ್ಯಾಕೆ ಅದನ್ನ ಕೊಳ್ಳಲ್ಲ**, ಬರೀ ಅಳೆದು ತೂಗಿ ಮೌಲ್ಯ ಮಾಡುತ್ತೇವೆ ಹೊರತು, ಬೆಲೆ ಕಟ್ಟಲಾಗದ ಇಂಥ ಚಿಕ್ಕ ಚಿಕ್ಕ ಸಂತೋಷಗಳನ್ನ ನಾವು ಯಾಕೆ ಕಳೆದುಕೊಳ್ತೀವಿ. ಆ ಪ್ರಶ್ನೆಗೆ ನನ್ನಲ್ಲಿ ಉತ್ತರವಿಲ್ಲ, ಉತ್ತರಿಸುವ ಪ್ರಮೇಯವೂ ಬರದಿರಲಿ.

ಬಿಟ್ಟರೆ ಇನ್ನೂ ಪ್ರಶ್ನೋತ್ತರ ನಡೆದಿರುತ್ತಿತ್ತು, ಕೌನ್ ಬನೆಗಾ ಕರೊಡಪತಿಯಂತೆ, ನಮ್ಮ ಕರೊಡಪತ್ನಿ ಇನ್ನೂ ಪ್ರಶ್ನೆ ಹಾಕುತ್ತಿರುತ್ತಿದ್ಲು. "ಪರಿ, ಗರಿ ಗರಿ ಸೀರೆ ಉಟ್ಟು ತೋರಿಸಲ್ವಾ" ಅಂದೆ, "ಉಹೂಂ" ಅಂದ್ಲು, ಬೇಡಬಿಡೆಂದು ಸುಮ್ಮನಾದೆ ಸಂಜೆ ಫ್ಯಾಶನ್ನು ಷೋ ಮಾಡಿ ಹೇಗೂ ತೋರಿಸುತ್ತಾಳೆ. ನಾ ಸಾಕು ಅನ್ನೊವರೆಗೂ, ಎಲ್ಲಿ ಹೋಗಿ ಬರೋದಾದ್ರೂ ಅದನ್ನೇ ಉಟ್ಟು ನಿಲ್ಲುತ್ತಾಳೆ, ಅಮ್ಮನ ಹತ್ತಿರ ನಡೆದದ್ದೆಲ್ಲ ಹೇಳಿ ಮುಜುಗರಕ್ಕೀಡು ಮಾಡೋದಲ್ದೆ, ಹೋದಲ್ಲಿ ಬಂದಲ್ಲಿ ಎಲ್ಲ ಇವ್ರು ಕೊಡಿಸಿದ್ದು, ಇವ್ರು ಕೊಡಿಸಿದ್ದು ಅಂತ ಹೇಳಿದ್ದೇ ಹೇಳಿದ್ದು. ಪದ್ದುಗೆ ಮೊದಲು ಹೇಳಿ ಹೊಟ್ಟೆ ಉರಿಸಿ ಬರೊದು ಗ್ಯಾರಂಟಿ.

ಅರೆನಿದ್ದೆ ಇನ್ನೇನು ಬೇಕೆನಿಸಲಿಲ್ಲ, ಎದ್ದೆ... ಲೇ ಎಲ್ಲಿ ಮುಖ ತೊರಿಸೆ ಅಂತ ಗಲ್ಲ ಹಿಡಿದೆ, ನಾಚುತ್ತ ಮುಖ ತೊಳೆಯಲೋಡಿದ್ಲು. ಸಂಜೆ ಟೀಯೊಂದಿಗೆ ಪಕೋಡ ಕೂಡ ಸಿಕ್ತು. ಸೀರೆ ಉಟ್ಟು ಸಂಭ್ರಮ ಪಟ್ಟಿದ್ದೆ ಪಟ್ಟಿದ್ದು, ಯಾಕೊ ಕೇಳಿದ್ಲು "ಎಲ್ರಿಗೂ ಹೊಸ ಬಟ್ಟೆಯಾಯ್ತು, ಮತ್ತೆ ನಿಮಗೆ" ಅಂದ್ಲು, "ಒಹ್, ನೀ ಆ ಸೀರೆ ಉಟ್ಟು, ದಂತದ ಬೊಂಬೆ, ನಿನ್ನ ಪಕ್ಕ ನಾ ದೃಷ್ಟಿಯಾಗದಿರಲೆಂದು ದೃಷ್ಟಿಬೊಂಬೆ" ಅಂದೆ.. ಈಗಾಗಿರುವ ಖರ್ಚೆ ಹೆಚ್ಚು, ಇನ್ನು ನನಗೆಲ್ಲಿ... ಇಷ್ಟಕ್ಕೂ ಮೆಚ್ಚಿನ ಮಡದಿ ಮನೆಯಲ್ಲಿರಬೇಕಾದ್ರೆ, ನಾ ಯಾರನ್ನ ಮೆಚ್ಚಿಸಬೇಕಿದೆ ಬಿಡಿ.

ಮತ್ತೊಂದಿಷ್ಟು ಮಾತಿನೊಂದಿಗೆ ಮತ್ತೆ ಸಿಕ್ತೀನೀ... ನಿಮ್ಮನಿಸಿಕೆ ಬರೀರಿ...

Copyright© Prabhuraj Moogi
www.telprabhu.com

## ಪರಿಧಿ...

ಮುಂಜಾನೆ ಗಣತಂತ್ರ ದಿನ ಅಂತಾ ಏನೊ ಸ್ವೀಟ ಮಾಡಿದ್ಲು, ಅದೇ ಕೇಸರೀಭಾತ, ಕಾರಾಭಾತ ಎರಡೂ ಸೇರಿಸಿ ಚೌಚೌ ಭಾತ.. ನಮ್ಮೂರಲ್ಲಿ ಶಿರಾ ಉಪ್ಪಿಟ್ಟು ಅಂತೀವಿ. ಪ್ರತೀ ಗಣತಂತ್ರ ದಿನಾನೂ ರಜೆ ಇದೆ ಮಲಗಲು ಬಿಡೆ ಅಂದ್ರೂ ಬಿಡದೆ ಆರಕ್ಕೆ ಎಬ್ಬಿಸಿ ಎಳಕ್ಕೆ ಸರಿಯಾಗಿ ಹತ್ತಿರದಲ್ಲಿ ಯಾವುದಾದರೂ ಸರಿ ಒಂದು ಶಾಲೆಗೆ ಕರೆದೊಯ್ಯುತ್ತಾಳೆ, ಮಕ್ಕಳು ಧ್ವಜ ಹಾರಿಸುವುದನ್ನು ನೋಡಿ ಹೆಮ್ಮೆ ಪಟ್ಟು ಮನೆಗೆ ಬರೋದು. ಚಿಕ್ಕೊನಿದ್ದಾಗ ನಾನೂ ಹೀಗೆ... ನಾಳೆ ಅಗಸ್ಟ ಹದಿನೈದೊ, ಜನವರಿ ಇಪ್ಪತಾರೊ ಇದೆ ಅಂದ್ರೆ, ಹಿಂದಿನ ದಿನಾನೇ ಭಲೆ ತಯ್ಯಾರಿ ಮಾಡಿಕೊಳ್ಳೊದು, ಯುನಿಫಾರ್ಮ ಚೆನ್ನಾಗಿ ಒಗೆದು ಖಡಕ್ ಇಸ್ತ್ರಿ ಮಾಡಿ, ಬೂಟು ಮಿರ ಮಿರ ಮಿಂಚುವಂತೆ ಪಾಲೀಶು ಮಾಡಿ, ಮುಂಜಾನೆ ನಾಲ್ಕಕ್ಕೇ ಎದ್ದು, ಅಮ್ಮನ ಎಬ್ಬಿಸಿ ತಯ್ಯಾರಾಗಿ ಹೋಗಿ ಪರೇಡು ಮಾಡಿ ಬರೊದು, ಪರೇಡು ಲೀಡರ ಬೇರೆ ಆಗಿದ್ದರಿಂದ ಅದೊಂದು ಹೆಮ್ಮೆ ವಿಷಯ. ಪ್ರಭಾತ ಫೇರಿ ಅಂತಾ ಊರೆಲ್ಲ ಸುತ್ತೊದು ಆವತ್ತು, ಆಗ ಜಯಘೋಷಗಳ ಕೂಗಿ ಕೂಗಿ ಎರಡು ದಿನ ಗಂಟಲು ಕುಗ್ಗಿ, ಗೊಗ್ಗರು ದನಿಯಾಗಿರುತ್ತಿತ್ತು.

ಈಗ ಅದೂ ಮತ್ತೊಂದು ರಜಾ ದಿನ ಅನ್ನೊ ಮಟ್ಟಿಗೆ ಉದಾಸೀನನಾಗಿದ್ದೇನೆ, ಇಲ್ಲ ಬೇಕೆಂತಲೆ ಬೆಳೆಸಿಕೊಂಡಿದ್ದೇನೆ ಅಂದರೂ ತಪ್ಪಿಲ್ಲ. ಅದರೂ ನನ್ನ ದೇಶಪ್ರೇಮ, ಯಾರೂ ಪ್ರಶ್ನಿಸುವಂತಿಲ್ಲ. ನನಗೂ ನನ್ನ ದೇಶ, ನನ್ನ ಜನ, ನನ್ನ ನುಡಿ ಮೇಲೆ ಹೇಳಲಾಗದಷ್ಟು ಪ್ರೀತಿಯಿದೆ, ಹುಟ್ಟಿದ್ದೆ ನವೆಂಬರ ಒಂದರಂದು ಅಂದ ಮೇಲೆ ಕನ್ನಡದ ಮೇಲಂತೂ ಬಲು ಅಕ್ಕರೆ, ಆದರೆ ಬೇರೆ ಭಾಷೆಗಳ ದ್ವೇಷ ಮಾಡುವಂತಲ್ಲ, ನನ್ನ ಭಾಷೆ ನನ್ನ ಪ್ರೀತಿ, ಅವರದು ಅವರಿಗೆ ಅಷ್ಟೇ. ಯಾವುದೋ ಬಹುರಾಷ್ಟ್ರೀಯ ಕಂಪನಿಯಲ್ಲಿ ಕಂಪ್ಯೂಟರ್ ಕುಟ್ಟುವ ಈ ಐಟೀ ಮಂದಿ ಇಷ್ಟೇ ಅಂತ ನೀವು ಭಾವಿಸಿದರೂ, ಅದರಲ್ಲಿ ನಿಮ್ಮ ತಪ್ಪಿಲ್ಲ, ತೀರ ಎಲ್ಲರೂ ಯೋಚಿಸುವುದು ಹಾಗೇನೆ. ಯಾರಾದರೂ ನೀವು ಐಟೀ ಮಂದಿ ಇಷ್ಟೆ ಅಂದಾಗ ನಮಗೂ ಎಷ್ಟು ನೋವಾಗುತ್ತದೆ ಅನ್ನೋದು ಅನುಭವಿಸಿದವರಿಗೇ ಗೊತ್ತು. ನಾನೂ ಇವಳು ಇದೇ ವಿಷಯದ ಮೇಲೆ ಎಷ್ಟೊ ಸಾರಿ ಜಗಳಾಡಿದ್ದೇವೆ. ಇಂದೂ ಹಾಗೆ ಆಯಿತು, ಆದರೆ ಕೊನೆಗೂ ನನ್ನ ವಿಚಾರ ಅವಳಿಗೂ ತಿಳೀಯಿತಲ್ಲಾ ಅನ್ನೋದೆ ಸಮಾಧಾನ.

ಪರೇಡು ನೋಡಿದ್ದು ಮುಗಿದು, ಪೇಪರು ಓದುತ್ತ ಕುಳಿತಿದ್ಲು, ಯಾವುದೋ ಉಗ್ರರ ಸುದ್ದಿ ನೋಡಿ, "ಇವರಿಗೆ, ನಮ್ಮವರ ಕಂಡ್ರೆ ಅದೇನು ಸಿಟ್ಟೊ, ಯಾವಾಗ ನೋಡಿದರೂ ತಗಾದೆ" ಅಂತ ಗೊಣಗಿದ್ಲು. ಸುಮ್ಮನೆ ಕುಳಿತಿದ್ದವನ ಕಿವಿ ಚುರುಕಾಯಿತು, "ಏನಂದೆ" ಅಂದೆ, "ನಿಮಗೆ ಕೇಳಿಸಿದೆ, ಸುಮ್ನೆ ನಾಟಕ ಮಾಡಬೇಡಿ, ನಾನೇನು ಹತ್ತಿರ ಬರಲ್ಲ, ನಿಮ್ಮ ತುಂಟಾಟ ಶುರು ಆಗುತ್ತೆ" ಅಂದ್ಲು. "ಆಯ್ತು, ನಾನೇ ಬಂದೆ ಅಂತ ಹತ್ತಿರ ಹೋಗಿ ಕುಳಿತರೆ, ಒಳ್ಳೇ ಆರಾಮ ಕುರ್ಚಿಯಲ್ಲಿ ಕೂತೊರಂತೆ ನನ್ನ ಮೇಲೆ ಒರಗಿ, ಎದೆಗೆ ಆತುಕೊಂಡು ಕೂತ್ಲು, ಈಗ ಪೇಪರು ಇಬ್ಬರೂ ಓದಬಹುದಿತ್ತು, "ಇದೇ ನಾ ಹೇಳುತ್ತಿದ್ದುದು" ಅಂತ ಲೇಖನ ತೋರಿಸಿದ್ಲು. "ಇದೇ ಈಗ ಹೇಳಿದೆಯಲ್ಲ, ನಮ್ಮವರು ಅಂತ, ನಿನ್ನವರು ಯಾರು" ಅಂದೆ, ಕಣ್ಣು ಕೆಕ್ಕರಿಸಿ ನನ್ನೊಂದು ಸಾರಿ ನೋಡಿ "ಅದೇ ಭಾರತೀಯರು," ಅಂದ್ಲು. "ಹಾಗಾದ್ರೆ, ಅಮೇರಿಕದಲ್ಲಿ ಹುಟ್ಟಿರುವ ನಿಮ್ಮಕ್ಕನ ಮಗ, ನಿನ್ನ ಲಿಸ್ಟಿನಲ್ಲಿ ಇಲ್ಲ ಬಿಡು" ಅಂದೆ, "ರೀ ಅವನೂ ಮೂಲ ಭಾರತೀಯ ತಾನೆ", ಅಲ್ಲೇ ತೊಂದ್ರೆ ಬರೋದು, **ನಮಗೆ ಬೇಕಾದವರೆಲ್ಲ ಹಾಗೊ ಹೀಗೊ ಬೇಕು, ಬೇಡವಾದವರು ನಮ್ಮವರಲ್ಲ.**

"ರೀ ಸರೀರಿ, ನನಗೆ ಕೆಲಸ ಇದೆ ನಿಮ್ ಜತೆ ಕೂತ್ಕೊಳ್ಳೊಕೆ ಟೈಂ ಇಲ್ಲ" ಅಂತ ಪಲಾಯನಗೈಯಲು ಪ್ರಯತ್ನಿಸಿದ್ಲು, ನಾ ಬಿಟ್ಟರೆ ತಾನೆ, ಕೈ ಬಳಸಿ ಬಿಗಿದು ಕಟ್ಟಿಹಾಕಿ ಕೂರಿಸಿಕೊಂಡೆ. "ಈಗ ನಿನ್ನವರು ಯಾರು ಅಂತ ಲಿಸ್ಟ ಮಾಡೋಣ, ಮೊದಲು ನೀನು ಯಾರು?" ಅಂದೆ ತರಲೆ ಉತ್ತರ ಬಂತು "ರೀ, ನಾನು ನಿಮ್ ಹೆಂಡ್ತಿ", ತಲೆಗೊಂದು ಏಟು ಕೊಟ್ಟು, ತರಲೆ ಬೇಡ ಅಂದ್ರೆ, ತಲೆ ಸವರಿಕೊಳ್ಳುತ್ತ, "ನಾನು ಭಾರತೀಯಳು" ಅಂತ ಹೆಮ್ಮೆಯಿಂದ ಹೇಳಿಕೊಂಡ್ಲು. "ಅದಕಿಂತ ಮೊದ್ಲು ನೀನು ಮನುಜಳು" ಅಂದದ್ದಕ್ಕೆ ಕಣ್ಣ ಕಣ್ಣು ಬಿಡುತ್ತ ನೋಡಿದ್ಲು, ನಾನೇನು ಬೇರೆ ಗ್ರಹದ ಜೀವಿ(ಏಲಿಯನ) ಅಂತನಕೊಂಡಿದ್ದರೇನೊ ಅಂತ ಅನುಮಾನ ಅವಳ ಕಾಡಿರಬೇಕು. ಈಗ ಲಿಸ್ಟು ಮಾಡತೊಡಗಿದೆವು...

"ಮೊದಲು ನೀನು, ಆಮೇಲೆ" ಅಂದೆ, ಅವಳಂದ್ಲು "ಆಮೇಲೆ ನೀವು, ನೀವು ನನ್ನೊರಲ್ವಾ" ಅಂದ್ಲು, ಅಪ್ಪ ಅಮ್ಮ ಅಂದದ್ದಕ್ಕೆ ಅತ್ತೆ ಮಾವ, ಅಪ್ಪ ಅಮ್ಮ ಲಿಸ್ಟಿಗೆ ಸೇರಿದ್ರು, ಒಟ್ಟಿನಲ್ಲಿ ನಿನ್ನವರು ಅಂದ್ರೆ ನಿನ್ನ ಕುಟುಂಬ ಅಷ್ಟೆ ಅಲ್ವೆ ಅಂದ್ರೆ, "ಇಲ್ಲಾಪ್ಪ, ಊರಲ್ಲಿ ಪರಿಚಯದವರು ಬಹಳ ಜನ ಇದಾರೆ ಅಂದ್ಲು" ಅಂದ್ರೆ "ಊರಲ್ಲಿರೋರೆಲ್ಲ, ಸರೀನಾ" ಹೂಂಗುಟ್ಟಿದ್ಲು, "ರೀ, ಹುಕ್ಕೇರಿನ್ಯಾಗ ನಮ್ಮ ಕಾಕಾ(ಚಿಕ್ಕಪ್ಪ) ಇದಾರೆ" ಅಂತ ಹೇಳಿದ್ದಕ್ಕೆ ಆಯ್ತು ಬೆಳಗಾವಿಯಲ್ಲಿರೊರೆಲ್ಲ, ಆದ್ರೆ ಧಾರವಾಡದ ನಿಮ್ಮ ಅಂಟಿ ಅಂತ ವಿಷಯ ಬಂದು, ಬೀದರಿನ ಅಜ್ಜ ನೆನಪಾಗಿ, "ರೀ ನಮ್ಮೊರು ಅಂದ್ರೆ ನಾವೆಲ್ಲ ಉತ್ತರ ಕರ್ನಾಟಕದವರು" ಅಂದ್ಲು, ಈಗೇನೊ ಅಧಿವೇಶನ ಇಲ್ಲಿ ನಡೀತಿದೆ, ಏನೊ ಸ್ವಲ್ಪ ನಮ್ಮನ್ನೂ ಎಲ್ರೂ ಕೇಳ್ತಿದಾರೆ

Copyright© Prabhuraj Moogi
www.telprabhu.com

ಅಂದ್ಲು, "ಹಾಗಾದ್ರೆ ನಾವ್ಯಾಕೆ ಬೆಂಗಳೂರಿನಲ್ಲಿರೋದು, ಬೆಂಗಳೂರಿನಲ್ಲಿರೊರು ನಮ್ಮವರಲ್ವಾ" ನನ್ನ ಮರುಪ್ರಶ್ನೆ "ಯಾಕೆ, ಪಕ್ಕದ ಮನೆ ಪದ್ದು ಬಿಟ್ಟೆ ಅಂತ ಬೇಜಾರಾ" ಅಂತ ಅಲ್ಲೂ ತುಂಟತನದ ಮಧ್ಯೆ "ರೀ, ನಾವೆಲ್ಲ ಕನ್ನಡಿಗರು, ಕರ್ನಾಟಕದವರು ಎಲ್ಲ ನಮ್ಮೋರು" ಅಂತ ಘೋಷಿಸಿದ್ಲು. "ಸರೀ, ನಾವೆಲ್ಲ ಕನ್ನಡಿಗರು, ನಾವೆಲ್ಲ ಒಂದು, ಮುಂಬಯಿನಲ್ಲಿ ಏನಾದರೇನಂತೆ, ಹೇಗೂ ಬೆಳಗಾವಿ ಬೇಕೆಂದು ನಮ್ಮನ್ನು ಕಾಡುತ್ತರಲ್ಲ" ಅಂದೆ, ಬುಸುಗುಡುತ್ತ "ರೀ ನಾವೆಲ್ಲ ಭಾರತೀಯರು, ಭಾರತದ ತಂಟೆಗೆ ಯಾರಾದ್ರೂ ಬಂದ್ರೆ ಅಷ್ಟೇ" ಗರ್ಜಿಸಿದ್ಲು. "ಹೂಂ, ಮತ್ತೆ ನಾವು ನಾವೇ ಯಾಕೆ ಕಚ್ಚಾಡೋದು, ಉತ್ತರ ಭಾರತೀಯರು, ದಕ್ಷಿಣ ಭಾರತೀಯರು ಅಂತ  ಬೇಧ ಭಾವ ಯಾಕೆ, ನಾವೆಲ್ಲ ಒಂದು ಅನ್ನೊದಾದ್ರೆ, ಮೊನ್ನೆ ನಿಮ್ಮ ಭಾವ ಫಾರಿನ್‌ನಿಂದ ಬಂದಾಗ ಹೇಳುತ್ತಿದ್ರಲ್ಲ, ಅಲ್ಲಿನ ಏಷಿಯನ್ನರ ಮೆಲಿನ ಭಾವನೆಗಳ ಬಗ್ಗೆ ಹೇಳುತ್ತಿದ್ದುದ ಕೇಳಿದ್ರೆ, ನಾವೆಲ್ಲ ಏಷಿಯನ್ನರು ಒಂದೇ ಅಂದ್ರೆ, ನಮ್ಮೊಂಗಿದೆ ಕಚ್ಚಾಡುವ ನಮ್ಮ ಅಕ್ಕಪಕ್ಕದ ದೇಶಗಳು ಎಲ್ಲಿ ಬಂದ್ವು, ಅವೂ ಏಷಿಯಾನಲ್ಲೆ ಇಲ್ವೆ". ಕೊಂಚ ಸಮಯ ಏನೂ ತಿಳಿಯದಂತೆ ಪೆಚ್ಚಾಗಾಗಿ, "ಹಾಗಾದ್ರೆ, ನಾವೆಲ್ಲ ಭೂಮಿ ಮೇಲಿನ ಮನುಜರೆಲ್ಲ ಒಂದೆ, ನಾವೆಲ್ಲ ಮಾನವರು, ಎಲ್ಲರೂ ನಮ್ಮವರಾ" ಕೇಳಿದ್ಲು, ಆ ಪ್ರಶ್ನೆಗೆ ನನ್ನಲ್ಲೂ ಉತ್ತರವಿಲ್ಲ, ಅದೇ ನನ್ನ ಗೊಂದಲ. "ರೀ, ನೀವು ಕನ್‌ಫ್ಯೂಜ ಆಗೋದಲ್ದೆ, ಈಗ ನನ್ನೂ ಮಾಡಿದ್ರಿ" ಅಂತ ಎದೆಗೊಂದು ಗುದ್ದು ಕೊಟ್ಟು ಎದೆಗೆ ತಲೆಯಾಣಿಸಿ ಮೇಲೆ ನನ್ನೆಡೆಗೆ ನೋಡತೊಡಗಿದ್ಲು. ನಾನಿನ್ನೂ ಗೊಂದಲಗಳ ನಡುವೆ ಸಿಕ್ಕಿಕೊಂಡು ಒದ್ದಾಡುತ್ತಿದ್ದೆ. ಇವೇ ನಮ್ಮ ಸುತ್ತಲಿನ ವೃತ್ತಗಳು, ಅವುಗಳ ಪರಿಧಿಗಳೆ ನಮ್ಮ ಎಲ್ಲೆಗಳು.

ನಾವೇ ನಮ್ಮ ಸುತ್ತ ಒಂದು ವೃತ್ತ ರಚಿಸಿಕೊಂಡು ಬಿಡುತ್ತೇವೆ, ನಾನು, ನನ್ನ ಹೆಂಡ್ತಿ, ನಮ್ಮ ಮಕ್ಕಳು, ನಮ್ಮ ಕುಟುಂಬ, ನಮ್ಮೂರು, ನಮ್ಮ ಜಿಲ್ಲೆ, ನಮ್ಮ ರಾಜ್ಯ, ನಮ್ಮ ದೇಶ, ನಮ್ಮ ಖಂಡ, ನಮ್ಮ ಭೂಮಿ... ವೃತ್ತದ ಪರಿಧಿ ಬೆಳೆಯುತ್ತ ಹೋದಂತೆ ಎಲ್ಲ ನಮ್ಮದೇ... ಗಂಡು, ಹೆಣ್ಣು, ಜಾತಿ ಲೆಕ್ಕದಲ್ಲೆ ತೆಗೆದುಕೊಳ್ಳಿ, ಹೀಗೆ... ನಾನು ಲಿಂಗಾಯತ ಪಂಚಮಸಾಲಿ, ಬಣಜಿಗರೂ ಬೇಕೆಂದು ನೆಂಟಸ್ತಿಕೆ ಬೆಳೆಸಿ, ನಾವೆಲ್ಲ ಲಿಂಗಾಯತರು, ವೀರಶೈವರು, ಹಾಗಾದ್ರೆ ಬ್ರಾಹ್ಮಣ್ರು, ಕುರುಬರು, ಒಕ್ಕಲಿಗರು.. ಬೇಡವಾ, ಬೇಕು, ಸರಿ ಎಲ್ಲ ಸೇರಿ ಹಿಂದೂಗಳು... ಮುಸ್ಲಿಮರಲ್ಲೆ ಸುನ್ನಿ, ಶಿಯಾ, ಕ್ರಿಸ್ಚಿಯನ್ನರಲ್ಲಿ... ಕ್ಯಾಥೊಲಿಕ್ಕು, ಪ್ರೊಟೆಸ್ಟಂಟರು.. ಎಲ್ಲಿಡಲಿ ಪರಿಧಿ, ಎಲ್ಲಿಯವರೆಗೆ ಬೆಳಸಲಿ.

ಮೊದಲು ಮಾನವನಾಗು, ಕವಿವಾಣಿ ನೆನಪಾಗುತ್ತೆ. ಎಲ್ಲ ಉಳಿವಿಗಾಗಿ ಹೋರಾಟ, ನಾ ಬದುಕಬೇಕು , ನನ್ನವರೂ ಕೂಡ ಅಷ್ಟೇ.. ಆದಿಮಾನವನಿದ್ದಾಗಲೇ ಬುಡುಕಟ್ಟುಗಳ ಕಟ್ಟಿಕೊಂಡು ಬಡಿದಾಡಿದವರು ನಾವು, **ವೃತ್ತಗಳ ಎಳೆಯುತ್ತಲೇ ಇರುತ್ತೇವೆ. ಪರಿಧಿಗಳು ಸಂಕುಚಿತವಾದಂತೆ ಕೊನೆಗೆ ಉಳಿಯುವುದು ಏನೂ ಇಲ್ಲ, ಪರಿಧಿಯಿಲ್ಲದ ವೃತ್ತದ ಒಂದು ಕೇಂದ್ರಬಿಂದು ಮಾತ್ರ.**

ಅವಳೂ ಆತ್ಮಾವಲೋಕನದಲ್ಲಿ ತೊಡಗಿದ್ಲು, ಅಲುಗಿಸಿದೆ... "ರೀ ಇದು ಬಹಳ ಗಹನವಾದ ವಿಚಾರ ನನ್ನ ಊಹೆಗೆ ನಿಲುಕದ್ದು" ಅಂದ್ಲು, "ನಾನನ್ನೊದೂ ಅಷ್ಟೇ, ನನಗೂ ಯೊಚಿಸಿದಷ್ಟು, ಯೋಚನೆಯ ಪರಿಧಿ ವಿಸ್ತಾರವಾಗುತ್ತಲೇ ಹೊಗುತ್ತೆ ಹೊರತು, ಉತ್ತರವಿಲ್ಲ, ಉತ್ತರ ಸಿಕ್ಕರೂ ಮತ್ತೊಂದು ಪ್ರಶ್ನೆ ಹುಟ್ಟಿ ಬಿಡುತ್ತೆ" ಅಂದೆ. ಮುಂದುವರೆಸಿ ಹೀಗೆ ಜೀವನ ಸಾಗುತ್ತಿರುತ್ತದೆ "ವೃತ್ತಗಳ ಎಳೆಯುತ್ತ, ಪರಿಧಿಯ ವಿಸ್ತರಿಸುತ್ತ, ಕುಗ್ಗಿಸುತ್ತ, ಬೇರೆ ವೃತ್ತಗಳಲ್ಲಿ ಸೇರಿಕೊಳ್ಳುತ್ತ ಸಾಗುತ್ತಲೇ ಇರಬೇಕು. ಇಂದು ನಮ್ಮ ವೃತ್ತ, ಭಾರತ, ನಾವು ಭಾರತೀಯರು, ಗಣತಂತ್ರ ದಿನ ಆಚರಿಸಿದೆವು, ವಿಸ್ತರಿಸಿದರೆ... ನಾಳೆ ಪರಿಸರದ ವಿಷಯ ಬಂದ್ರೆ, ಭೂಮಿ ನಮ್ಮ ವೃತ್ತ, ಕುಗ್ಗಿಸಿದರೆ... ನವೆಂಬರ ಒಂದಕ್ಕೆ, ಕರ್ನಾಟಕ ನಮ್ಮ ವೃತ್ತ", ಅವಳ ಕಣ್ಣುಗಳ ಹೊಳೆಯತೊಡಗಿದವು "ರೀ ಈ ಕಲ್ಪನೆ ಚೆನ್ನಾಗಿದೆ, ನನಗೆ ಬಹಳ ಹಿಡಿಸಿತು, ಇನ್ನೆಂದೂ ನಿಮ್ಮನ್ನ ಐಟಿ ಮಂದಿ, ಫಾರಿನ ಕಂಪನೀನವ್ರು ಅಂತ ಹೀಯಾಳಿಸಲ್ಲ... ಯಾಕೆಂದ್ರೆ ನೀವು ಮನುಕುಲಕ್ಕೆ ಒಂದು ಒಳಿತಾಗುವ ಎನೊ ಕೆಲಸ ಮಾಡುತ್ತಿದ್ದೀರಿ, ನನ್ನ ಪರಿಧಿ ದೊಡ್ಡದಾಗಿ ಬಿಡುತ್ತೆ" ಅಂದ್ಲು. "ಕಳ್ಳೀ, ನನ್ನೇ ಒಲೈಸೊಕೆ ನೊಡ್ತೀಯ" ಅಂತ ಕಿವಿ ಹಿಂಡಿದೆ... ಕಿರುಚಿದ್ಲು... ಈಗ ಇನ್ನೊಂದು ಚಿಕ್ಕ ವೃತ್ತ, ಅದರ ಪರಿಧಿ ಚಿಕ್ಕದು, ಅಲ್ಲಿ ನಾನು ನೀನು, ಅಂತನ್ನುತ್ತ ಅವಳ ಸುತ್ತ ಆವರಿಸಿದೆ. "ರೀ ಬಿಡ್ರೀ ಅದ್ಕೆ ನಿಮ್ಮ ಹತ್ರ ನಾ ಬರೊಲ್ಲ ಅಂದಿದ್ದು, ನಿಮ್ಮ ವೃತ್ತ ಬೇಡ ನಂಗೆ", ಅಂತ ಕೊಸರಾಡಿದ್ಲು, ನನ್ನ ವೃತ್ತದ ಪರಿಧಿ ಚಿಕ್ಕದಾಗುತ್ತಲೇ ಹೋಯ್ತು...

ಮತ್ತೊಂದಿಷ್ಟು ಮಾತಿನೊಂದಿಗೆ ಮತ್ತೆ ಸಿಕ್ತೀನೀ... ನಿಮ್ಮನಿಸಿಕೆ ಬರೀರಿ...

ಏನೊ ನನಗೆ ತೋಚಿದ್ದು, ತೋಚಿದಂತೆ ಬರೆದಿದ್ದೇನೆ, ಯಾವುದೇ ರೀತಿಯಲ್ಲಿ, ಯಾರಿಗೂ, ಯಾವುದೇ ಕೋಮಿಗೂ, ಊರಿಗೂ, ರಾಜ್ಯ, ದೇಶಕ್ಕೊ, ನೋವುಂಟು ಮಾಡುವುದಂತೂ ನನ್ನ ಉದ್ದೇಶವಲ್ಲ. ಆದಾಗ್ಯೂ ಯಾರ ಭಾವನೆಗಳಿಗೂ ಘಾಸಿಯುಂಟಾಗಿದ್ದಲ್ಲಿ ಮನಸಾ ಕ್ಷಮೆ ಕೇಳುತ್ತೇನೆ. ಎಲ್ಲರಿಗೂ ಇದು ಸರಿಯೆನಿಸಬೇಕೆಂದೇನಿಲ್ಲ, ಇಷ್ಟವಾಗದ್ದಲ್ಲಿ ಏನೊ ಹುಚ್ಚು ಹುಡುಗನ ಹತ್ತು ಹುಚ್ಚು ಕಲ್ಪನೆಗಳಲ್ಲಿ ಹನ್ನೊಂದನೆಯದೆಂದು, ಬಿಟ್ಟು ಬಿಡಿ.

Copyright© Prabhuraj Moogi
www.telprabhu.com

Copyright© Prabhuraj Moogi
www.telprabhu.com

## ಪ್ರೀತಿಯಿಂದ...

ಒಂದೊಂದು ದಿನ ರಜೆಯಿದ್ದಾಗ ಬಿಸಿಲು ಕಾಯಿಸುತ್ತ ಕುಳಿತಿರುತ್ತೇನೆ... ದಿನವಿಡೀ ಏಸೀ ರೂಮಿನ ಆಫೀಸುಗಳಲ್ಲಿ ಕಾಲ ಕಳೆಯುವುದರಿಂದ ಸೂರ್ಯನ ಕಣ್ಣಿಗೆ ಕಾಣುವುದು ಕಮ್ಮಿ. ಮನೆಯಲ್ಲಿಟ್ಟಿರುವ ಹೂ ಕುಂಡಗಳನ್ನು ವಾರಕ್ಕೊಂದು ದಿನ ಹೊರಗಿಟ್ಟು ಬಿಸಿಲು ಕಾಣಿಸಿದಂತೆ, ನಾನೂ ವಾರಾಂತ್ಯದ ಒಂದು ದಿನ ಸಮಯ ಸಿಕ್ಕಾಗ ಪೇಪರು ಓದುತ್ತಲೊ, ಇಲ್ಲ ಟೀ ಹೀರುತ್ತಲೊ ಮುಂಜಾನೆಯ ಎಳೆ ಬಿಸಿಲಿಗೆ ಹೊರಗೆ ಕೂತು ಬಿಡುತ್ತೇನೆ, ಹಾಗೇ ಇಂದು ಕೂತಿದ್ದೆ, ಟೀ ಪೇಪರು ಎನಿಲ್ಲದಿದ್ದರಿಂದ ಆಕಾಶದತ್ತ ಮುಖ ಮಾಡಿ ಆರಾಮ್ ಕುರ್ಚಿಯಲ್ಲಿ ಒರಗಿದ್ದೆ. ಏನೊ ನೆರಳು ಬಂದಂತಾಯಿತು, ಅರೇ ಸೂರ್ಯನೇನಾದ್ರೂ ಕಾಣೆಯಾದನೊ, ಇಲ್ಲ ಮೋಡದಲ್ಲಿ ಮರೆಯಾದನೊ ಅಂತ ಕಣ್ಣು ತೆರೆದೆ, ಬಿಸಿಲಲ್ಲಿ ಕಣ್ಣು ಪಾಪೆ ಹಿರಿದಾಗಿ ನೆರಳಾಗಿ ನಿಂತ ಆಕೃತಿ ಯಾರೆಂದು ಕಾಣದಿದ್ದರೂ, ದೇವಲೊಕದಿಂದಲೇ ಯಾರೋ ಪ್ರತ್ಯಕ್ಷ ಆದರೇನೊ ಅನ್ನುವಂತೆ, ಇವಳೇ ಇರಬಹುದೆಂದು "ಯಾರಿದು ದೇವದೂತೆ" ಅಂದೆ. "ಅಲ್ಲ, ಇದು ಪ್ರೇಮದೂತೆ, ನಿನಗೇನು ವರ ಬೇಕು ಕೇಳುವಂತವನಾಗು" ಅಂತ ನಾಟಕದ ಡೈಲಾಗು ಒಂದು ಹೇಳಿದಳು. "ಸ್ವಲ್ಪ ಪಕ್ಕ ಸರಿದು ಸೂರ್ಯನ ನೋಡಲು ಬಿಟ್ರೆ ಸಾಕು" ಅಂದೆ. "ಪ್ರೇಮದೂತೆಯಲ್ಲಿ ಪ್ರೀತಿಯಿಂದ ಎನಾದ್ರೂ ಕೇಳಿಕೊಳ್ಳಲ್ವ" ಅಂದ್ಲು. ಇವಳಿನ್ನು ಇಲ್ಲಿ ಕೂರಲು ಬಿಡುವುದಿಲ್ಲ ಅಂತ ಗೊತ್ತಾಗಿ ಒಳನಡೆದೆ, ಬಾಲಂಗೋಚಿಯಂತೆ ಹಿಂದಹಿಂದೆ ಬಂದ್ಲು.

ಬೆವರಿದ್ದರಿಂದ ಮುಖ ತೊಳೆದು ಬರುತ್ತಿದ್ದಂತೆ, ಟೀ ಕಪ್ಪು ಹಿಡಿದು ಹಾಜರಾಗಿದ್ಲು, ಇದೇನು ಇಷ್ಟು ಉಪಚಾರ ನಡೆದಿದೆ ಇದರ ಹಿಂದೆ ಏನೊ ಇದೆ ಸಂಶಯ ಬಂತು "ಪ್ರೇಮದೂತೆ ವರ ಕೊಡುತ್ತಿಲ್ಲ, ಅವಳಿಗೇ ವರ ಬೇಕಿರುವಂತಿದೆ" ಅಂದೆ. ಕಳ್ಳಿ ಸಿಕ್ಕಿ ಬಿದ್ಲು, "ಇಲ್ಲಪ್ಪ ಏನೂ ಇಲ್ಲ" ಅಂತಿದ್ದಂಗೆ ಏನೊ ಇದೆಯೆನ್ನುವುದಂತೂ ಗೊತ್ತಾಗಿತ್ತು. ಸುಮ್ಮನೆ ಟೀ ಹೀರುತ್ತಿದ್ದವನಿಗೆ ಪ್ರಶ್ನೆಯೊಂದನ್ನ ತೂರಿಬಿಟ್ಲು. **"ರೀ ಈ ತಿಂಗಳು ಹದಿನಾಲ್ಕು ಏನಿದೆ" ಹೇಳಿ ಅಂದ್ಲು.** ಅಯ್ಯೊ ಎಡವಟ್ಟಾಯಿತಲ್ಲ, ನಮ್ಮ ಮದುವೆಯಾದ ದಿನಾನೋ, ಇಲ್ಲ ಯಾರದೋ ಜನ್ಮದಿನಾನೊ ಏನೊ ಇರಬೇಕು, ಇಲ್ಲ ಇವಳದೇ ಜನ್ಮದಿನ ಇದೆಯೊ, ಏನೂ ನೆನಪಿಗೆ ಬರುತ್ತಿಲ್ಲವಲ್ಲ. ಹೇಗೆ ನೆನಪಿರುತ್ತೆ ಹೇಳಿ, ಅದೆ ಇ-ಮೇಲ್ ಕ್ಯಾಲೆಂಡರ, ಇಲ್ಲ ಫೊನು ರಿಮೈಂಡರಗಳು ನಾಲ್ಕು ಸರಿ ನೆನಪು ಮಾಡಿದಾಗಲೇ ಏನೊ ಒಂದು ಶುಭಾಶಯ ಅಂತ ಬರೆದು ಮೇಲ್ ಇಲ್ಲ ಎಸ್ಎಂಎಸ್ ಮಾಡೊ ನನಗೆ, ಈ ಥರ ಒಮ್ಮೆಲೆ ಕೇಳಿದರೆ ಏನು ಹೇಳಲಾಗುತ್ತದೆ. ಸುಮ್ಮನೆ ಹಲ್ಲು ಕಿರಿದೆ. ಸಿಟ್ಟಿನಿಂದ ನೋಡಿದ್ಲು, "ಹಾಂ, ಅಂಬೇಡ್ಕರ್ ಜಯಂತಿ" ಅಂದೆ ಅದೂ ಯಾವುದೊ ಹದಿನಾಲ್ಕು ದಿನಾಂಕಾನೇ ಅಲ್ವ ಅದೇ ಇರಬಹುದೆಂದು ಊಹಿಸಿದ್ದೆ. "ಅದು ಏಪ್ರೀಲ್ ಹದಿನಾಲ್ಕು" ಅಂತ ಬುಸುಗುಟ್ಟಿದ್ಲು. ಇನ್ನು ನಾನು ಏನು ಅಂತ ಸರಿಯಾಗಿ ಹೇಳದಿದ್ರೆ, ಅಂದು ನನ್ನ ತಿಥಿಯಾಗುವುದಂತೂ ಗ್ಯಾರಂಟಿಯಾಯಿತು. ತಲೆ ಕೆರೆದುಕೊಂಡೆ, ಅಂತೂ ಟ್ಯೂಬಲೈಟ್ ಉರಿಯಿತು.." ಅಲೆಲೆ ಫೆಬ್ರವರಿ ಹದಿನಾಲ್ಕು ಪ್ರೇಮಿಗಳ ದಿನ ಅಲ್ವ" ಅಂದೆ. ಖುಷಿಯಾಗಿ, ಅವಳ ಮುಖವೂ ಒಂದು ನೂರು ವ್ಯಾಟ್ ಮರ್ಕ್ಯುರಿ ಬಲ್ಬು ಉರಿದಂತೆ ಮಿನುಗಿತು, ಪುಣ್ಯಾತ್ಮ ನೆನಪು ಮಾಡಿಕೊಂಡನಲ್ಲ ಅಂತ ಇರಬೇಕು. ನಾನೂ ಹಿಗ್ಗಿ ಹೀರೆಕಾಯಿಯಾದೆ, ಇಲ್ಲದಿದ್ರೆ ಹುತಾತ್ಮ.. ಹೂತಾತ್ಮ ಆಗಬೇಕಿತ್ತಲ್ಲ ಅದು ತಪ್ಪಿತೆಂದು.

ಮತ್ತೆ ಟೀ ಹೀರತೊಡಗಿದೆ. ಪ್ರಶ್ನೆಗೆ ಉತ್ತರ ಹೇಳಿಯಾಯ್ತಲ್ಲ ಅಂತ, ಆದ್ರೆ ಬೇತಾಳ ಎಲ್ಲಿ ಬಿಡಬೇಕು. ಬರೀ ಉತ್ತರಕ್ಕಾಗಿ ಕೇಳಿದ ಪ್ರಶ್ನೆ ಅದಲ್ಲ. ಇನ್ನೂ ದಿಟ್ಟಿಸಿ ನೋಡುತ್ತಿದ್ಲು. ನಂಗೆ ಗೊತ್ತಾಯ್ತು ಆವತ್ತಿಗೆ ಏನೊ ಉಡುಗೊರೆ ಕೊಡಬೇಕು, ಏನೊ ಪ್ಲಾನು ಹಾಕಬೇಕು, ಅದೇ ಇವಳು ಕೇಳುತ್ತಿರುವುದೆಂದು. "ಏನೇ ನಾವದನ್ನು ಆಚರಿಸಬೇಕ ಅದೆಲ್ಲ ಪ್ರೇಮಿಗಳಿಗೆ" ಅಂದೆ, ಕಾದ ದೋಸೆ ಹಂಚಿನ ಮೇಲೆ ನೀರು ಹಾಕಿದಂತಿತ್ತು, "ಏನದರರ್ಥ, ನಿಮಗೆ ನನ್ನ ಮೇಲೆ ಪ್ರೀತೀನೆ ಇಲ್ವಾ" ಅಂದ್ಲು. ನಾ ಹೇಳುತ್ತಿರುವುದು ಅವಳಿಗೆ ಅರ್ಥವಾಗುವಂತಿರಲಿಲ್ಲ, ಅದಕ್ಕೇ ಹೆಚ್ಚು ವಾದ ಬೇಡವೆಂದು "ಸರಿ, ಎಲ್ಲ ಪ್ಲಾನು ನಿಂದು ಫುಲ್ ಡೇ ನಿನ್ನಿಷ್ಟ" ಅಂದೆ. ಮುಂಜಾನೆ ದೇವಸ್ಥಾನಕ್ಕೆ ಭೇಟಿ, ಮಧ್ಯಾಹ್ನ ಅವಳ ಕೈಯಡುಗೆಯ ರುಚಿ ನೋಡಿ, ಸಂಜೆಗೆ ಫಿಲ್ಮು, ರಾತ್ರಿ ಹೊರಗೆ ಊಟ ಅಂತ ಒಂದು ಲಿಸ್ಟು ಕೊಟ್ಲು. "ಒಕೇಸ್... ಡನ್" ಅಂದೆ.

ಟೀವೀ ಹಚ್ಚಿದೆ, ಅದೇ ಯಾವ ಚಾನಲ್ಲು ಬದಲಿಸಿದ್ರೂ ಪ್ರೇಮಿಗಳ ದಿನದ ವಿಶೇಷಗಳ ಪ್ರಚಾರ, ಇಲ್ಲ ಅದ ವಿರೋಧಿಸುವರ ಸುದ್ದಿ, ಬಿಟ್ರೆ ಕಂಪನಿಗಳ ಆ ದಿನದ ಡಿಸ್ಕೌಂಟಗಳ ಅಡವರಟೈಜಮೆಂಟುಗಳು ಅಷ್ಟೆ. ಅದ ಆಫ್ ಮಾಡಿ ಪೇಪರು ತೆಗೆದೆ, ಇನ್ನು ಬೇರೇನು ಹೇಳಬೇಕಿಲ್ಲ... ಅದೂ ಬೀಸಾಕಿ. ಸುಮ್ಮನೆ ಸೊಫಾದಲ್ಲಿ ಮೈ ಚೆಲ್ಲಿದೆ, ಇವಳು ಬಂದು ಸೊಫಾದಲ್ಲಿ ಕುಳಿತವಳು, ತಲೆಗೆ ದಿಂಬಿನಂತೆ ಮಡಿಲ ಆಸರೆ ಕೊಟ್ಟು ಕೂದಲಿನಲ್ಲಿ ಬೆರಳಿನಿಂದ ಹುಲ್ಲಿನ ಮೇಲೆ ಲಾನ ಮಶೀನು ಓಡುವಂತೆ ಸವರತೊಡಗಿದ್ಲು. ಅಮ್ಮನ ಮಡಿಲಲ್ಲಿ ಮಗು ಮಲಗಿದಂತೆ ಕಣ್ಣು ಮುಚ್ಚಿದೆ, ಮಲಗಲು ಅವಳು ಬಿಡಬೇಕಲ್ಲ. "ಯಾಕೊ ನಿಮಗೆ ಪ್ಲಾನು ಹಿಡಿಸಿದಂತಿಲ್ಲ" ಅಂದ್ಲು. "ಇಲ್ಲ ಹಾಗೇನಿಲ್ಲ" ನಾನಂದೆ, ಅವಳೇನು ನನ್ನ ಮನಸಿಂದ ಡೈರೆಕ್ಟ್ ಟೆಲಿಫೊನು ಲೈನು ಎಳೆದುಕೊಂಡಿದ್ದಾಳೋ ಏನೊ ನಾ ಮನಸಿನಲ್ಲಿ ಅಂದುಕೊಂಡಿದ್ದೆಲ್ಲ ಅವಳಿಗೆ

Copyright© Prabhuraj Moogi
www.telprabhu.com

ಗೊತ್ತಾಗಿರುತ್ತದೆ. "ಸುಳ್ಳು" ಒಂದೇ ಒಂದು ಶಬ್ದ ಉಸುರಿ ಸುಮ್ಮನಾದ್ಲು, ಅದರರ್ಥ ಇನ್ನು ನಿಜ ಹೇಳು ಇಲ್ಲಂದ್ರೆ ನಾನೇನು ಕೇಳಲ್ಲ ಅಂತ.

ಸ್ವಲ್ಪ ಹೊತ್ತು ಸುಮ್ಮನಿದ್ದವನು, ಮಧ್ಯಾಹ್ನ ಏನು ಅಡುಗೆ ಅಂದೆ, ಉತ್ತರ ಬರಲಿಲ್ಲ, ಬರುವುದೆಂದು ನನಗೂ ಅನಿಸಿರಲಿಲ್ಲ. ಇನ್ನು ಸುಮ್ಮನಿದ್ದು ಪ್ರಯೋಜನವಿರಲಿಲ್ಲ, **"ನೀ ನನ್ನ ಎಷ್ಟು ಪ್ರೀತಿಸ್ತೀಯ?" ಪ್ರಶ್ನೆ ಹಾಕ್ದೆ, ಉತ್ತರ ಬರಲೇಬೇಕಿತ್ತು. "ಒಂದು ಎರಡೂವರೆ ಕೇಜೀ" ಅಂದ್ಲು**. ಅಲ್ಲೇ ಚಿವುಟಿದೆ, ಚೀರಿದ್ಲು, ನಗುತ್ತ ದೂರ ನೂಕಲು ನೋಡಿದ್ಲು, ಆಗಲಿಲ್ಲ. ಗಲ್ಲ ಹಿಗ್ಗಿಸಿ ಹಿಡಿದೆಳೆದು "ಮತ್ತಿನ್ನೇನ್ರಿ, ಪ್ರೀತಿ ಎಷ್ಟು ಮಾಡ್ತೀಯ ಅಂತ ಕೇಳಿದ್ರೆ ಅದೇನು ಟೊಮ್ಯಾಟೊನಾ ಇಷ್ಟು ಕೇಜೀ ಅಂತ ಹೇಳಲು" ಅಂತಂದ್ಲು, ನನಗೆ ಬೇಕಾಗಿದ್ದು ಅದೇ ಉತ್ತರ. "ಯಾಕೆ ಇಡೀ ಆಕಾಶದ ವಿಸ್ತಾರದಷ್ಟು, ಸಾಗರ ಎಲ್ಲೆಯಷ್ಟು, ಗಾಳಿ ಭೂಮಿಯ ಆವರಿಸಿರುವಷ್ಟು.. ಅಂತ ಹೇಳಬಹುದಲ್ಲಾ" ಅಂದೆ. "ರೀ ಅದು ತೀರಾ ನಾಟಕೀಯ ಆಗೋಗತ್ತೆ, ಅದೊಂಥರಾ ಮನಸಿನಲ್ಲಿರೋ ಭಾವನೆ ಅಳತೆ ಮಾಡಲಾಗದು, ಹೇಳಲಾಗದು, ಅದೆಲ್ಲ ಬರೀ ಸಿನಿಮಾದಲ್ಲಿ ಸರಿ ಕಾಣುತ್ತೆ" ಅಂದ್ಲು. ಸರಿ ಹಾಗಾದ್ರೆ "ಪ್ರೇಮಿಗಳ ದಿನ ಇರುವುದ್ಯಾಕೆ?" ಅಂತ ಮರುಪ್ರಶ್ನೆ ಹಾಕಿದೆ. "ಪ್ರೀತಿಸುವವರಲ್ಲಿ ಪ್ರಪೋಸು ಮಾಡಿ.." ಅಂತ ಏನೊ ಹೇಳೋಕೆ ಹೋದವಳು ಅರ್ಧಕ್ಕೆ ನಿಲ್ಲಿಸಿದ್ಲು. ನಾನಂದುಕೊಂಡದ್ದು ನಾ ಹೇಳಿಯಾಗಿತ್ತು, ಅವಳಿನ್ನೂ ಯೋಚಿಸುತ್ತಿದ್ಲು...

ಮನಸು ನಿರಾಳವಾಗಿ ನಾ ಮಲಗಿದೆ, ಅವಳು ಗೊಂದಲಕ್ಕೊಳಗಾಗಿ ತಲೆ ಚಚ್ಚಿಕೊಳ್ಳುತಿದ್ಲು, "ರೀ, ಈಗ ನನ್ನ ಕನ್‌ಫ್ಯೂಜ ಮಾಡಿ ನೀವು ಮಲಗ್ತೀರಾ, ಅಂತ ಬಡಿದೆಬ್ಬಿಸಿದ್ಲು. "ಈಗೇನು ಪ್ರೇಮಿಗಳ ದಿನ ಆಚರಿಸೊರೆಲ್ಲ, ಪ್ರೀತಿಸಲ್ವಾ?" ಅಂದ್ಲು "ನಾನೆಲ್ಲಿ ಹಾಗೆ ಹೇಳಿದೆ" ಅಂದೆ "ಸರಿ ಬಿಡಿಸಿ ಹೇಳ್ತೀರ ಇಲ್ವಾ" ಅಂತ ಗುರಾಯಿಸಿದ್ಲು. ಇನ್ನು ಹೇಳದೆ ವಿಧಿಯಿಲ್ಲ ಶುರುವುಟ್ಟುಕೊಂಡೆ. "ಕೇಳು ನಾ ಹೇಳುವುದೆಲ್ಲ ಸರಿ ಎಂದಲ್ಲ, ಅದ ನೀ ನಂಬಲೂ ಬೇಕಿಲ್ಲ, ನಾನ್ಯಾವುದರ ವಿರೋಧಿಯೂ ಅಲ್ಲ ಪರನೂ ಅಲ್ಲ..." ನಾ ಹೇಳುತ್ತಿದ್ರೆ "ರೀ ಎನು ಕೋರ್ಟ್ ಕಟಕಟೆಯಲ್ಲಿ ಸ್ಟೇಟಮೆಂಟ್ ಕೊಟ್ಟ ಹಾಗೆ ಹೇಳ್ತೀದೀರಲ್ಲ, ಸರಿ ವಿಷಯಕ್ಕೆ ಬನ್ನಿ ಅಂದ್ಲು.

ಪ್ರೀತಿ ಅಂದ್ರೇನು? ಅದೊಂದು ಭಾವನೆ, ಮನಸಿನಲ್ಲಿ ಹುಟ್ಟುವುದು.. ಮನಸಿಂದ ಮನಸಿಗೆ ಅದಲು ಬದಲಾಗುವುದು, ಅದೊಂಥರ ಬಿಚ್ಚಿಡಲಾಗದ ಅನುಭೂತಿ, ಆಯ್ ಲವ್ ಯು ಅಂದುಬಿಟ್ಟರೆ ಮುಗಿಯಲ್ಲ, ಅದು ಪ್ರೀತಿಯ ವ್ಯಕ್ತಗೊಳಿಸುವ ಒಂದು ಪ್ರಯತ್ನ ಮಾತ್ರ, ಅದೇ ಪ್ರೀತಿಯಲ್ಲ. ಅದೊಂದು ಅವ್ಯಕ್ತ ಭಾವ... ಪ್ರೀತಿ ಅಂದ್ರೆ ವ್ಯಾಲೆಂಟೈನ್ ಡೆ ಅಂದು, ಗುಲಾಬಿ ಗುಚ್ಚ ತಂದು ಕೊಟ್ಟು, ಯಾವುದೋ ಲೇಖಕ ಬರೆದ ನಾಲ್ಕು ಸಾಲುಗಳ ಗ್ರೀಟಿಂಗ ಕಾರ್ಡು ಇಟ್ಟು, ಮೊಬೈಲಿನಲ್ಲಿ ಎಸ್‌ಎಂಎಸ್ ಕಳಿಸಿ ಬಿಟ್ಟರೆ ಆಯಿತಾ... ಮುಂದಿನ ವ್ಯಾಲೆಂಟೈನ್ ಡೇಗೆ ಮತ್ತೇನು ನೆನಪಿರೊಲ್ಲ, ಪ್ರೀತಿಯೆಂದ್ರೆ ಬದ್ಧತೆ, ಒಂದು ದಿನಕ್ಕಲ್ಲ, ಅನುದಿನಕ್ಕೆ, ಪ್ರತಿದಿನ ಆ ಗುಲಾಬಿಯಂತೆ ಅರಳುತ್ತಿರಬೇಕು ಮನಗಳು, ನಾಲ್ಕೆ ನಾಲ್ಕು ಮಾತಾದರೂ ಸರಿ ಮನ ನಾಟುವ ಮಾತುಗಳಿರಬೇಕು, ಲೈಫಟೈಮ್ ಮೊಬೈಲು ಸಿಮ್ ಕಾರ್ಡಿನಂತೆ ಪ್ರತೀ ತಿಂಗಳು ರೀಚಾರ್ಜು ಕೇಳದೆ ಜೀವನವಿಡೀ ಜೊತೆಯಿರಬೇಕು. ನಾನು ನಿನ್ನ ಇಷ್ಟು ಪ್ರೀತಿಸ್ತೀನಿ ಅಂತ ಅದೇ ನೀ ಹೇಳಿದ ಹಾಗೆ ಇಷ್ಟು ಕೇಜೀ ಅಂತ ಹೇಳಿದ್ದಿನಾ, ಆದರೆ ನಾ ಪ್ರೀತಿಸುತ್ತೀನಿ ಅಂತ ನಿನಗೆ ಗೊತ್ತು, ಅದು ಹೇಳದಿದ್ರೂ ಹೇಗೆ ನಿನಗೆ ಗೊತ್ತು, ಎಷ್ಟು ಪ್ರೀತಿಸ್ತೀನಿ ನಿನಗೆ ಗೊತ್ತು, ಅಳತೆ ಮಾಡಿ ಹೇಳು ನೊಡೋಣ, ಆದರೆ ಅಳತೆ ಮಾಡದಿದ್ರೂ ಅದು ಎಷ್ಟೆಂದು ನಿನಗೆ ಗೊತ್ತು ತಾನೆ. ಪ್ರೀತಿಯೆನ್ನುವುದು ಪ್ರತಿದಿನ ಹಾಸುಹೊಕ್ಕಾಗಿದೆ ಅದು ಪ್ರೇಮಿಗಳ ದಿನಕ್ಕೆ ಸೀಮಿತವಲ್ಲ, ಈಗ ಹೇಳು, ನಾನೆಷ್ಟು ಪ್ರೀತಿಸ್ತೀನಿ ಅಂತ ಪ್ರೇಮಿಗಳ ದಿನ ನಾ ನಿನಗೆ ಹೇಳಬೇಕಾ, ಭಾವನೆಗಳಿಗೆ ದಿನ, ತಿಂಗಳುಗಳ ಬಂಧವೇಕೆ. ಅದೊಂಥರಾ ಆವೇಶದಲ್ಲಿ ಬಂದು ಇನ್ನೂ ಹೇಳುತಿದ್ದೆ, ಅವಳೇ ತಡೆದ್ಲು. ಅವಳಿಗೆ ಅರ್ಥವಾಗಿತ್ತು...

ಅದಕ್ಕೆ ಆ ಒಂದು ದಿನ ಬರೆದದ್ದು
*ಪ್ರೇಮಿಗಳ ದಿನ*
*ಪ್ರೀತಿಸಲು ಅನುದಿನ.*
*ತುಂಬಿ ತನು ಮನ*
*ಮಾಡಿ ಹೃದಯಗಳ ಮಿಲನ.*
*ಮುರಿದು ಮೌನ*
*ತೆರೆದು ಮನ.*
*ಕೊಟ್ಟು ವಚನ*
*ನಿಭಾಯಿಸಿ ಕೊನೆತನ.*

Copyright© Prabhuraj Moogi
www.telprabhu.com

"ಸರೀ, ನೀವನ್ನೊದು ಸರಿ ಹಾಗಾದ್ರೆ ಪ್ರೀತಿಸ್ತೀನಿ ಅಂತ ಹೇಳಲೇಬಾರದಾ" ಅಂದ್ಲು, "ಹೇಳು ನಾನೆಲ್ಲಿ ಬೇಡ ಅಂದೆ, **ಅದು ಪ್ರೀತಿ ವ್ಯಕ್ತ ಪಡಿಸಲು ಮಾಡಿದ ಒಂದು ಪ್ರಯತ್ನ ಮಾತ್ರ, ಅದಷ್ಟೇ ಪ್ರೀತಿಯಲ್ಲ**, ಅದ ಹೇಳಲು ಯಾವುದೊ ದಿನಕ್ಕೆ ಯಾಕೆ ಕಾಯುತ್ತೀಯ ಈಗಲೇ ಹೇಳು, ಪ್ರತಿದಿನ ಹೇಳು, ಹೇಳಲೇಬೇಕೆಂದೂ ಇಲ್ಲ". ಈಗ ಅವಳು ನಿರಾಳವಾದ್ಲು. ಎಲ್ಲದಕ್ಕೂ ಒಂದೊಂದು ದಿನ ಮಾಡಿ ಉಳಿದದಿನ ಅದ ಮರೆತು ಇರಬೇಕಾ, ಮದರ್ಸ್ ಡೆ ಅಂತ ಆವತ್ತು ಅಮ್ಮನಿಗೆ ಫೋನು ಮಾಡಿ ನಿನ್ನ ಮಿಸ್ ಮಾಡ್ಕೊತಿದೀನಿ ಅಂತ ಹೇಳಬೇಕೆ, ಅದೆಲ್ಲ ನಾಟಕೀಯವಾಗಿ ಹೋಗಿದೆ ಈಗ, ದಿನವಿದ್ದದ್ದನ್ನು, ವಾರಗಳಾಗಿ ಮಾಡಿದ್ದೇವೆ ಈಗ, ವ್ಯಾಲೆಂಟೈನ್ ಡೇ ಹೋಗಿ ವ್ಯಾಲೆಂಟೈನ್ ವೀಕು ಅಂತಾಗಿದೆ, ಬರೀ ಟೀವೀಗಳಲ್ಲಿ ಥರಥರದ ಶೊಗಳ ಮಾಡಲು, ಗ್ರೀಟಿಂಗು ಕಾರ್ಡುಗಳ ಮಾರಲು, ಎಸ್ಎಂಎಸ್ ಕಳಿಸಿ ಗಿಫ್ಟು ಪಡೆಯಲು, ಡಿಸ್ಕೌಂಟು ವ್ಯಾಪಾರಗಳ ಮಾಡಲು, ಪಾರ್ಟಿ, ಊಟ ಅಂತ ಹೊಟೇಲುಗಳ ತುಂಬಲು, ಆಚರಣೆ ಹೆಸರಿಗೆ ಮಾತ್ರ ಉಳಿದು ಹೋಗಿ ಭಾವನೆಗಳು ಸತ್ತು ಹೋಗುತ್ತಿವೆ. ಅಂದೆ.

ಅವಳ ಕೈ ಬೆರಳುಗಳು ನನ್ನ ಬೆರಳುಗಳ ನಡುವೆ ಜಾಗ ಮಾಡಿಕೊಂಡು ಬೆಸೆದು ಕೊಳ್ಳುತ್ತಿದ್ದವು, ಅದೂ ಪ್ರೀತಿ ವ್ಯಕ್ತಗೊಳಿಸುವ ಪ್ರಯತ್ನ ಮಾತ್ರ. "ಆಯ್ತು, ಪ್ಲಾನು ಕ್ಯಾನ್ಸಲ್" ಅಂದ್ಲು, "ಯಾಕೆ ಈವತ್ತೇ ಫಿಲ್ಮಗೆ ಹೊಗೋಣ, ಹೊರಗೆ ಊಟ ಮಾಡಿಬರೋಣ, ಆ ದಿನಕ್ಕೆ ನಾವೇಕೆ ಕಾಯಬೇಕು" ಅಂತ ಮೇಲೆದ್ದೆ, "ಸರಿ, ಹಾಗಾದ್ರೆ ನಿಮಗೆಂದು ಅಂದು ಕೊಡಲು ಪ್ರೀತಿಯಿಂದ ಶರ್ಟ ತಂದಿದ್ದೆ, ಈವತ್ತೇ ಹಾಕೊಳ್ಳಿ" ಅಂದ್ಲು ಬಹಳ ಖುಶಿಯಾಯ್ತು ಶರ್ಟ ಸಿಕ್ಕಿತಂದೆಲ್ಲ, ನನ್ನ ಭಾವನೆ ಅವಳಿಗರ್ಥವಾಯಿತೆಂದು.  ಮತ್ತೆ ತುಂಟತನ ಶುರುವಾಯ್ತು, "ಅಬ್ಬ! ಹಾಗಾದ್ರೆ, ನೀವು ಪಕ್ಕದ ಮನೆ ಪದ್ದು ಹತ್ರ ಪ್ರಪೋಸ ಮಾಡಲ್ಲ ಬಿಡಿ" ಅಂದ್ಲು ಅವಳು ಪ್ರೀತಿಯಿಂದ ತಂದಿದ್ದ ಶರ್ಟು ಹಾಕಿಕೊಳ್ಳುತ್ತ ನಗತೊಡಗಿದೆ. "ಹೂಂ ವಿಚಾರ ಮಾಡೊಣ" ಅನ್ನೊದೇ ತಡ, ಬಂದು ರಪ ರಪ ಎದೆಗೆ ಬಡಿದು ಅಪ್ಪಿಕೊಂಡ್ಳು, ಅವಳನ್ನೂ ಶರ್ಟಿನಲ್ಲಿ ಸೇರಿಸಿಕೊಂಡು ಬಟನ್ನು ಹಾಕತೊಡಗಿದೆ, ಬಿಡಿಸಿಕೊಳ್ಳಲು ಕೊಸರಾಡುತ್ತಿದ್ಲು, ಇದೂ ನಮ್ಮ ಪ್ರೀತಿಯ ವ್ಯಕ್ತ ಮಾಡುವ ಪ್ರಯತ್ನ ಮಾತ್ರ.. ಇದೇ ಪ್ರೀತಿಯಲ್ಲ.

ಕೊನೆಗೆ ಹಾಗೆ ಎಂದೊ ಬರೆದದ್ದು ನೆನೆಪಾಯಿತು...

*ಅಂದರು ಪ್ರೀತಿಯೆಂದರೆ*
*ಮನಸ ಕೊಡುವುದೆಂದು.*
*ಕೊಟ್ಟೆ, ಗೊತ್ತಾಗಲಿಲ್ಲ ಕೊಟ್ಟ*
*ಮನಸ ನೋಯಿಸದಿರುವುದೆಂದು.*
*ಅಂದರು ಪ್ರೀತಿಯೆಂದರೆ*
*ಕನಸ ಕಾಣುವುದೆಂದು.*
*ಕಂಡೆ ಗೊತ್ತಾಗಲಿಲ್ಲ ಕಂಡ*
*ಕನಸು ನನಸಾಗಿಸುವುದೆಂದು.*
*ಅಂದರು ಪ್ರೀತಿಯೆಂದರೆ*
*ಒಂದಾಗುವುದೆಂದು.*
*ಗೊತ್ತಾಗಲಿಲ್ಲ ದೂರವಿದ್ದರೂ*
*ಒಂದಾಗಿರುವುದೆಂದು.*
*ಅಂದವರ ಮಾತು*
*ಕೇಳಿದೆನಂದು.*
*ಅವಳಿಲ್ಲ*
*ನನ್ನೊಂದಿಗಿಂದು.*

ಇಲ್ಲಿ ಬರೆದಿರುವುದೆಲ್ಲ ಕೇವಲ ನನ್ನ ವಿಚಾರಗಳು ಮಾತ್ರ, ನೀವು ಒಪ್ಪಬೇಕೆಂದಿಲ್ಲ, ಬರೆದಿರುವುದೆಲ್ಲವೂ ಸರಿಯೆಂದೂ ಹೇಳುತ್ತಿಲ್ಲ, ಇದು ನನ್ನ ಮನದಲ್ಲಿ ಅನಿಸಿದ್ದನ್ನು ಅನಿಸಿದ ಹಾಗೆ ಹೇಳಲು ಮಾಡಿದ ಪ್ರಯತ್ನ ಮಾತ್ರ.
ಇಂತೀ ಪ್ರೀತಿಯಿಂದ, ತಮ್ಮವ...

Copyright© Prabhuraj Moogi
www.telprabhu.com

## ಹೊಟ್ಟೆ ಪಾಡಿಗೆ...

ಅದೇ ಆಗ ಎದ್ದು ಆಕಳಿಸುತ್ತ ಮೈಮುರಿದು ಕಣ್ಣು ತೀಡುತ್ತ ಹೊರಗೆ ಬಂದೆ, ಇವಳು ಉಗುರು ಕತ್ತರಿಸಿ ರಂಗು, ಅದೇ ನೇಲ್ ಪಾಲೀಶು ಹಾಕಿಕೊಳ್ಳುತ್ತಾ ಕುಳಿತಿದ್ಲು, ಅವಳ ಕೈಯಿಂದ ಬಾಟಲಿ ಕಸಿದುಕೊಂಡು ಬೆರಳೊಂದಕ್ಕೆ ರಂಗು ಬಳಿದು, ಆರಲೆಂದು ಗಾಳಿ ಊದಿದೆ, ಕಚಗುಳಿಯಿಟ್ಟಂತಾಯಿತು ಅನಿಸತ್ತೆ "ಛೀ, ಸಾಕು ಏಳ್ರೀ ಮೇಲೆ ನಾನು ಹಚ್ಕೊತೀನೆ" ಅಂತ ನೂಕಿದ್ಲು, ಸರಿದು ಗೋಡೆಗೆ ಒರಗಿ ಕೂತು ಅವಳನ್ನೇ ದಿಟ್ಟಿಸಿ ನೋಡುತ್ತಿದ್ದೆ, "ಟೀ ಮಾಡಿಟ್ಟೇದೀನಿ" ಅಂತ, ಎದ್ದು ಹೋಗು ನೋಡಿದ್ದು ಸಾಕಿನ್ನು ಅನ್ನೊ ಧಾಟಿಯಲ್ಲಿ ಸೂಚ್ಯವಾಗಿ ಹೇಳಿದ್ಲು. ಎದ್ದು ಟೀ ಸುರಿದುಕೊಂಡು ಬಂದೆ, ಸಾಸರಿನಲ್ಲಿ ಹಾಕಿ ಅವಳಿಗೊಂದು ಗುಟುಕು ಕುಡಿಸಿ, ಉಳಿದದ್ದು ನಾ ಹೀರತೊಡಗಿದೆ. ಟೀ ಮುಗೀತು ಕಪ್ಪು ಪಕ್ಕಕ್ಕಿಟ್ಟು ಮತ್ತೆ ನೋಡುತ್ತ ಕುಳಿತುಕೊಂಡೆ, ದುರುಗುಟ್ಟಿ ನೋಡಿದ್ಲು, ಬಸ್ ಸ್ಟಾಪಿನಲ್ಲಿ ಕಾಡುವ ಪಡ್ಡೆ ಹುಡುಗನನ್ನು ಹುಡುಗಿ ನೋಡುವಂತೆ. ನನಗೇನೂ ಆಗಿಲ್ಲವೆನ್ನುವಂತೆ ಹಾಗೆ ಕುಳಿತಿದ್ದೆ, ನನ್ನ ಹೆಂಡ್ತಿ ನಾ ನೋಡಲೇನು, ಇನ್ನೇನು ಪಕ್ಕದ ಮನೆ ಪದ್ದುನ ಹಾಗೆ ನೋಡೊಕಾಗುತ್ತ! ಕೊನೆಗೆ ಕಣ್ಸನ್ನೆ ಅರ್ಥವಾಗಿಲ್ಲ ಅಂತ "ರೀ ಏನೂ ಕೆಲ್ಸಾ ಇಲ್ವಾ, ಎನು ಹಾಗೆ ನೋಡುತ್ತ ಕುಳಿತು ಬಿಟ್ಟಿದ್ದೀರೀ" ಅಂದ್ಲು. ಹಲ್ಲು ಕಿರಿದೆ ಅಷ್ಟೇ.. ಮತ್ತಷ್ಟು ಕೋಪ ಬಂತು, "ಕೂತ್ಕೊಂಡ್ರೆ ಮುಗೀತು ಅಕ್ಕಿ ಮೂಟೆ ಜಲಿಸಿ  ಜರುಗಿಸಿಟ್ಟಂತೆ ಕುಸಿದು ಕುಳೀತು ಬಿಡ್ತೀರ, ಹೊಟ್ಟೆ ನೊಡ್ಕೊಳ್ಳಿ ಅದನ್ನ" ಅಂತ ಬೈದ್ಲು. ನೊಡ್ಕೊಂಡೆ, ಹೌದಲ್ಲ ಗುಡಾಣವಾಗುತ್ತಿದೆ.. ಯಾಕೆ ಇಷ್ಟು ದಿನ ಇಲ್ಲದ್ದು ಈವತ್ತು ಇದು ಇವಳಿಗಿಷ್ಟು ಕಿರಿಕಿರಿ ಮಾಡಿದೆ. ಎದ್ದು ನಡೆದೆ, ಕೂತಿದ್ರೆ ಎಲ್ಲಿ ಇನ್ನೂ ಬಯ್ಯುತ್ತಾಳೇನೊ ಅಂದುಕೊಂಡು.

ಇದೇನು ಇಂದು ನಿನ್ನೆಯದಲ್ಲ, ವರ್ಷಾನು ವರ್ಷಗಳಿಂದ ಸಾಕಿ ಸಲಹಿ ಬೆಳೆಸಿಕೊಂಡು ಬಂದದ್ದು, ಸುಖಜೀವಿಯ ಸಂಕೇತ. ಇನ್ನೇನು ಮತ್ತೆ, ಸಾಫ್ಟವೇರ್ ಕಂಪನಿಯಲ್ಲಿ ಕೆಲಸ, ಕೂತಲ್ಲೆ ಎಲ್ಲ ಕೋನಗಳಲ್ಲೂ ತಿರುಗುವ ಕುಶನ್ನು ಕುರ್ಚಿಯಲ್ಲಿ ಕುಳಿತು, ತಂಬೂರಿ ನುಡಿಸಿದಂತೆ ಬೆರೆಳು ಅಲ್ಲಾಡಿಸುತ್ತ ಕೀಬೋರ್ಡು ಕುಟ್ಟೊದು, ನಡುನಡುವೆ ತಬಲದಲ್ಲಿ ತಕಧೀಂ ಅಂದಂತೆ ಮೌಸು ಅಮುಕೋದು. ಬೈಕಿನಲ್ಲಿ ಕೂತು ಮನೆಯಿಂದ ಅಫೀಸಿನವರೆಗೆ ಪ್ರಯಾಣ, ಲಿಫ್ಟಿನಲ್ಲಿ ನಾಲ್ಕು ಮಂಜಿಲಕ್ಕೆ ಏರೊದು, ಕಂಪನಿಯ ಪುಕ್ಕಟೆ ಹಾಲು ಬೂಸ್ಟು, ಹೆಂಡತಿಯ ಕೈ ಬಗೆಬಗೆಯ ಪಕ್ವಾನ್ನ, ಸಂಜೆಗೆ ಕುರುಕಲು ತಿಂಡಿಗಳು, ಸಂಸಾರ ಜಂಜಡಗಳಿಲ್ಲದೆ ಸುಖನಿದ್ರೆ... ಇಷ್ಟೆಲ್ಲ ಇರುವಾಗ ಹೊಟ್ಟೆ ಬಲೂನು ಉಬ್ಬಿದಂತೆ ಉಬ್ಬದೇ ಇನ್ನೇನು. ಹಾಗಂತ ಸಾಫ್ಟವೇರು ಕೆಲ್ಸ ಸಲೀಸು ಅಂತೇನಲ್ಲ ಅಲ್ಲಿರುವ ಟೆನ್ಶನ್ನು, ತಲೆಬಿಸಿಗಳು ಅಲ್ಲಿನವರಿಗೇ ಗೊತ್ತು, ಭದ್ರತೆಯಿಲ್ಲದ ಭವಿಷ್ಯ ಗೊತ್ತಿಲ್ಲದ ಬದುಕು. ಆದರೂ ತಲೆಗೆ ಕೆಲಸವಿದ್ದು, ಮೈ ಕೈಗೆ ಒಂದಿಷ್ಟೂ ವ್ಯಾಯಾಮವನ್ನುವುದು ಇಲ್ಲವೆಂದರೆ ಸರಿ. ಹೀಗಾಗಿ **ಹೊಟ್ಟೆ ಪಾಡಿಗೆ ಮಾಡುವ ಕೆಲಸದಿಂದ ಹೊಟ್ಟೆ ಬಂದಿದ್ದೇನು ಅತಿಶಯವಲ್ಲ.**

ಕನ್ನಡಿ ಮುಂದೆ ನಿಂತು ನಾನೇ ನೋಡಿಕೊಳ್ಳುತ್ತಿದ್ದೆ, ಹಿಂದಿನಿಂದ ಬಂದು ಹೊಟ್ಟೆ ಬಳಸಿ ಎರಡೂ ಕೈ ಸೇರಿ ಬಿಗಿದು ಕಟ್ಟಲು ತಡಕಾಡಿ, ಹಾಗೊ ಹೀಗೋ ನಿಲುಕಿಸಿಕೊಂಡು ಅಪ್ಪಿಕೊಂಡು ನಿಂತ್ಲು, ಹೊಟ್ಟೆ ಅಷ್ಟು ಬಂದಿದೆಯಲ್ಲ, "ಏನು, ಹಾಗಂದೆ ಅಂತ ಬೇಜಾರಾಯ್ತಾ ಸುಮ್ಮನಾಗಿ ಬಿಟ್ರಿ" ಅಂದ್ಲು "ಇಲ್ಲ, ನಿಜ ನಾ ಗಮನಿಸಿರಲಿಲ್ಲ" ಅಂದೆ. "ರೀ ಮೊನ್ನೆ ಪರಿಮಳ ಬಂದಿದ್ರು ಮುಂಜಾನೆ ವಾಕಿಂಗ, ಜಾಗಿಂಗ ಮಾಡಿದ್ರೆ ಏನೆಲ್ಲ ಪ್ರಯೋಜನ ಇದೆ ಅಂತ ಹೇಳ್ತಿದ್ರು" ಅಂದ್ಲು, ಇದೋ ವಿಷ್ಯ ಪರಿಮಳ ಕಿವಿಯೂದಿದ್ದಾರಾ, ಅದಕ್ಕೆ ಎಂದೂ ಇಲ್ಲದೆ ಇಂದು ಇವಳು ಹೀಗಂದಿದ್ದು ಅಂದುಕೊಂಡೆ. "ಹೀಗೇ ನನ್ನ ನೋಡುತ್ತ ಕೂರೊ ಬದಲು ಮುಂಜಾನೆ ಬೇಗ ಎದ್ದು ಯಾಕೆ ನೀವು ವಾಕಿಂಗ ಹೋಗಬಾರದು" ಅಂದ್ಲು "ಹೌದಲ್ಲ ಅಲ್ಲಿ ಬಹಳ ಹುಡುಗೀರೂ ವಾಕಿಂಗ ಬರ್ತಾರೆ ಅವರ ನೋಡಿಕೊಂಡು ಬರಬಹುದು" ಅಂದೆ "ನೀವ ಸುಧಾರಿಸಲ್ಲ, ನಾಳೆಯಿಂದ ನಾವಿಬ್ಬರೂ ವಾಕಿಂಗ ಹೋಗ್ತಿದೀವಿ ಅಷ್ಟೆ" ಅಂದ್ಲು "ಯಾಕೆ ನಾನೊಬ್ಬನೆ ಹೋದ್ರೆ ಎಲ್ಲಿ ವಾಕಿಂಗಗಿಂತ ಹುಡುಗೀರ ನೋಡ್ತ ಸ್ಟಾಪಿಂಗ ಜಾಸ್ತಿ ಆಗುತ್ತೆ ಅನ್ನೋ ಭಯಾನಾ" ಅಂತ ಕುಟುಕಿದೆ. "ನಂದೂ ತೂಕ ಜಾಸ್ತಿಯಾಗ್ತಿದೆ, ಏಳು ಮಲ್ಲಿಗೆ ತೂಕದ ರಾಜಕುಮಾರಿಯಾಗಿರಬೇಡ್ವಾ ನಾನೂ" ಅಂತನ್ನುತ್ತ ಹೊಟ್ಟೆ ಮೇಲೆರಡು ಬಾರಿಸಿದ್ಲು, "ಲೇ ಬಾರಿಸೊಕೆ ಅದೇನು ಡೋಲು ತಮಟೆನಾ" ಅಂತ ಕಿವಿ ಹಿಂಡಿದೆ ಕೈ ಬಿಡಿಸಿ ಕೊಂಡು ಓಡಿದ್ಲು.

ಮೊದಲೇ ನಿರ್ಧರಿಸಿದಂತೆ ಮುಂಜಾನೆ ಬೇಗ ಎಬ್ಬಿಸಿದ್ಲು, ಎದ್ದು ಯಾವುದೋ ಪ್ಯಾಂಟು ಏರಿಸಿಕೊಂಡು ಎಲ್ಲೊ ಬಿದ್ದಿದ್ದ ಆ್ಯಕ್ಷನ್ನು ಶೂಜು ಹಾಕಿಕೊಂಡು ತಯ್ಯಾರಾದೆ, ಹಾಕಿಕೊಳ್ಳಲೆಂದು ವುಲನ್ ಟೋಪಿ, ಸ್ಕಾರ್ಪು ಕೊಟ್ಲು ಛಳಿಯಿರುತ್ತೆಂದು, "ಮುಂಜಾನೆ ಗಾಳಿ ಸವಿಯಬೇಕು, ಅದೆಲ್ಲ ಎನೂ ಬೇಡ, ವಾಕಿಂಗ ಹೋಗೋದೇ ಹೊಸ ಗಾಳಿ ಸವಿಯಲು" ಅಂತಂದು ಬಿಟ್ಟು ಹೊರಟೆ. ನಾನ್ಯಾರಾರನ್ನೊ ನೋಡುತ್ತಿದ್ರೆ ಇವಳು ನನ್ನ ಚಿವುಟುತ್ತ, ಅದಿದು ಹರಟತ್ತು, ಆಗಾಗ ಕೈ ಬೀಸುತ್ತ,

Copyright© Prabhuraj Moogi

ಏನೊ ಕ್ರಿಕೆಟ್ಟು ಬಾಲರ್ ಇರಬೇಕು ಎನ್ನುವಂತೆ ಬಾಲ್ ಹಾಕುವ ಹಾಗೆ ಮಾಡುತ್ತ, ನಡುನಡುವೆ ಕಸ ಆಯುವವರ ಹಾಗೆ ಬಾಗಿ ಮೇಲೆಳುತ್ತ, ಸಾಗಿತ್ತು ನಮ್ಮಿಬ್ಬರ ವಿಹಾರ. ಮೊದಲದಿನದ ಉಮ್ಮೇದಿಗೆ ನಡೆದದ್ದೆ ನಡೆದದ್ದು ಇಂದೆ ನಾಲ್ಕು ಕೇಜೀ ತೂಕ ಇಳಿದು ಬಿಡುವುದೇನೊ ಅನ್ನುವಂತೆ ಅವಳೂ ನಡೆದಳು.

ಮನೆಗೆ ಬಂದು "ಇಂದು ಬಹಳ ಫ್ರೆಷ್ ಅನಿಸ್ತಿದೆ, ಪರಫೆಕ್ಟ್ ಫಿಟ್ ಆಗ್ತೀನಿ ನೋಡ್ತಿರು" ಅಂದೆ, "ಒಂದೇ ದಿನದಲ್ಲಿ ಏನೂ ಆಗಲ್ಲ, ಅದಕ್ಕಿನ್ನೂ ಟೈಮ್ ಬೇಕು" ಅಂದ್ಲು. ಅದೇ ಜೊಶ್‌ನಲ್ಲಿ ಆಫೀಸಿಗೆ ರೆಡಿ ಆಗುತ್ತಿದ್ದೆ, "ರೀ ಅಲ್ಲಿ ಆ ಗ್ರೇ(ಬೂದು) ಕಲರ ಟ್ರಾಕ ಪ್ಯಾಂಟು ಶರ್ಟು ಹಾಕಿಕೊಂಡು ಜೋಡಿಯೊಂದು ಬಂದಿತಲ್ಲ ನೋಡಿದ್ರ, ಆ ಥರ ನಾವೂ ವಾಕಿಂಗ್‌ಗೆ ಡ್ರೆಸ್ ತುಗೋಬೇಕು" ಅಂದ್ಲು, ಬಂತಲ್ಲಪ್ಪ ಜೇಬಿಗೆ ಕತ್ತರಿ ಅಂದೆ, ತೂಕ ಇಳಿಯತ್ತೊ ಇಲ್ವೊ, ಜೇಬಿನ ತೂಕ ಇಳಿಯೋದಂತೂ ಗ್ಯಾರಂಟಿಯಾಯ್ತು. ಸಂಜೆ ಬರುವಾಗ ತರುವೆನೆಂದೆ. ಒಂದೇ ಜತೆ ಸಾಕಾಗಲ್ಲ ದಿನಾಲೂ ಅದೇ ಹೇಗೆ ಹಾಕಲಾಗುತ್ತೆ ಅಂತ ಎರಡೆರಡು ಜತೆ ತಂದದ್ದಾಯ್ತು.

ಹೊಸ ಡ್ರೆಸ್ಸು ಹಾಕಿದ ಖುಶಿಯಲ್ಲಿ ಇನ್ನೂ ದೂರ ನಡೆದೆವು, ನಡುನಡುವೆ ನಾ ಓಡಿದೆ ಕೂಡ, ಮೊದಲೆ ನಡೆದು ರೂಡಿಯಿಲ್ಲ ಇನ್ನು ಓಡಿದ್ದು ಬೇರೆ ರಾತ್ರಿಗೆ ಕಾಲುಗಳು ಮಾತಾಡತೊಡಗಿದವು, ಆದರೇನಂತೆ ಇವಳು ಸ್ವಲ್ಪ ಹಿಚುಕಿ, ಮಸಾಜು ಮಾಡಿ ಮೊದ ಮೊದಲು ಹೀಗಾಗುತ್ತೆ ಆಮೇಲೆ ಎಲ್ಲ ಸರಿಯಾಗುತ್ತೆ ಅಂತ ಪುಸಲಾಯಿಸಿ ಮತ್ತೆ ಮಾರನೆ ದಿನವೂ ಕರೆದೊಯ್ದಳು. ಬಹಳ ದೂರವಲ್ಲದಿದ್ರೂ ನಡೆದು ಬಂದು ಕೂತವನೇ ಜೋರಾಗಿ ಸೀನಿದೆ!!!.. ಶೀತ ಬರುವ ಮುನ್ಸೂಚನೆ ಕೊಟ್ಟು ಬಿಟ್ಟಿತು, ಅವಳೂ "ನಾನು ಅದಕ್ಕೆ ಟೊಪಿ ಸ್ಕಾರ್ಫು ಕೊಟ್ಟಿರಲಿಲ್ವ ಹೀಗಾಗತ್ತೆ ಅಂತ ಗೊತ್ತಿತ್ತು" ಅಂತು ಬೈದ್ಲು. ಶೀತ, ತಲೆ ಸಿಡಿತ ಅಂತ ಮೂಗು ಸುರಿದು, ಕೆಮ್ಮಿ ಎರಡು ದಿನ ವಾಕಿಂಗ ಅಷ್ಟೆ ಯಾಕೆ ಆಫೀಸಿಗೂ ಚಕ್ಕರ ಹೊಡೆದದ್ದಾಯ್ತು. ಹಾಗೂ ಹೀಗೂ ಮತ್ತೆರಡು ದಿನ ಹೋದವರು, ಛಳಿಯಾಗಿಬರದೇ ಮತ್ತೆರಡು ದಿನ ಹೋಗಲಿಲ್ಲ, ಅದೂ ಅಲ್ಲದೆ ಅದೇನೊ ವಾಕಿಂಗ ಆದ ಮೇಲೆ ಸೌತೆ ಕಾಯಿ ರಸ, ಗಜ್ಜರಿ ರಸ ಕುಡಿದರೆ ಒಳ್ಳೇದು ಎಂದು ಅದೂ ಕುಡಿದು ಹೊಟ್ಟೆ ಕೆಟ್ಟು ಟಾಯ್ಲೆಟ್ಟಿಗೆ ಓಡಾಡಿ ಅದೇ ವಾಕಿಂಗ್‌ಗಿಂತ ಜಾಸ್ತಿಯಾಗಿ ಸೋತು ಸುಣ್ಣವಾಗಿ ಹೋದೆ.

ಹಾಗೆ ಆಫೀಸಿನಲ್ಲಿ ಮಾತಿಗೆ ಕುಳಿತಾಗ ವಾಕಿಂಗ ಪ್ರಹಸನ ಹೇಳಿದಾಗ ಕೊಲೀಗು ಏರೊಬಿಕ್ಸು ಬಗ್ಗೆ ಹೇಳಿದ. ಏರೊಬಿಕ್ಸು ಸೇರಿ ಹೊಟ್ಟೆ ಇಳಿಸೊಕಿಂತ ಅಲ್ಲಿನ ಕೊಚ್ ಹುಡುಗಿಯ ವರ್ಣನೆ ಕೇಳಿ ಅದನ್ನ ಯಾಕೆ ಪ್ರಯತ್ನಿಸಬಾರದು ಅಂತ ದುಡ್ಡು ತೆತ್ತು ಅಲ್ಲಿ ಸೇರಿದೆ. ಒನ್ ಟೂ ಥ್ರೀ ಫ್ಲೊರ್ ಅಂತ ಇಂಗ್ಲೀಷು ಹಾಡಿಗೆ ಕುಣಿದದ್ದೆ ಕುಣಿದದ್ದು, ಮನೆಗೆ ಬಂದು ಇವಳ ಜತೆಗೂ ಡ್ಯಾನ್ಸು... ತನಗೂ ಕಲಿಸಿ ಅಂತ ತಾಕೀತು ಮಾಡಿದ್ದಳಲ್ಲ, ಕೊನೆಕೊನೆಗೆ ಕುಣಿತ ಕರಡಿ ಕುಣಿತವಾಗಿ ಬಿಟ್ಟಿತು, ಸ್ಟೆಪ್ಪುಗಳು ಎಲ್ಲಿ ನೆನಪಿರಬೇಕು ಗಮನವೆಲ್ಲ ಕೊಚನ್ನು ನೋಡುವುದರಲ್ಲೇ ಇರಬೇಕಾದ್ರೆ. **ಹೊಟ್ಟೆ ಇಳಿಸುವುದು ಒತ್ತಟ್ಟಿಗಿರಲಿ, ಕೊಚ್‌ಳ ಬಗ್ಗೆ ಹೇಳಿ ಹೇಳಿ ಇವಳ ಹೊಟ್ಟೆ ಉರಿಸತೊಡಗಿದೆ.**

ಏನೊ ಒಟ್ಟಿನಲ್ಲಿ ನಡೆದದ್ದು, ಕುಣಿದದ್ದೂ ಸೇರಿ ಮೈ ಹುಶಾರಿಲ್ಲದೇ ಸೊರಗಿ ಹೊಟ್ಟೆ ಒಂದು ಲೇವಲ್ಲಿಗೆ ಸಪೂರವಾಯ್ತು. ಇಂಗ್ಲೀಷು ಹಾಡಿ ಕುಣಿದು ಕುಣಿದು ಬೇಜಾರಾಗಿ, ಏನು ಎರೊಬಿಕ್ಸನಲ್ಲಿ ಏನು ಮಹ ಕಲಿಸುತ್ತಾರೆ ನಾನೇ ಮನೆಯಲ್ಲೆ ಹಾಡು ಹಾಕಿ ಜಿಗಿದಾಡಿದರಾಯ್ತು ಅಂತ ಅದನ್ನೂ ಬಿಟ್ಟೆ, ಇವಳೂ ನಿರಾಳವಾದ್ಲು ಹೊಟ್ಟೆ ಕರಗಿಸಿದೆನೆಂದಲ್ಲ, ಆ ಕೊಚು ಸಹವಾಸ ತಪ್ಪಿತಲ್ಲ ಅಂದು. ಇನ್ನೊಬ್ಬ ಕೊಲೀಗು ಎರೊಬಿಕ್ಸು ಎನು ಹೋಗ್ತೀಯ ಇಲ್ಲೇ ಯೋಗ ಪ್ರಾಣಾಯಾಮ ಕಲಿಸುತ್ತಾರೆ ಅಪ್ಪಟ ನಮ್ಮ ಭಾರತೀಯ ಪ್ರಾಚೀನ ಕಾಲದ ಕಲೆ, ಆರೋಗ್ಯಕ್ಕೆ ಅತ್ಯಂತ ಸೂಕ್ತ ಅಂದ. ಫೀಜು ಕೇಳಿ ಸಧ್ಯ ಏನೂ ಬೇಡ ಅಂತ ನಿರ್ಧರಿಸಿದ್ದಾಯ್ತು.

ಅದೊಂದು ದಿನ ಮಧ್ಯಾಹ್ನ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದೆ, ಪಕ್ಕ ಬಂದು ತೆಕ್ಕೆ ಸೇರಿದವಳು, ಹೊಟ್ಟೆ ಸವರಿದ್ಲು, ತಟ್ಟನೆ "ನನ್ನ ಕೈಲಿ ಇಷ್ಟೆ ಕರಗಿಸಲಾಗಿದ್ದು, ಇನ್ನೂ ಕರಗಿಸಲಾಗಲ್ಲ ಕಣೇ" ಅಂದೆ. ಎಲ್ಲಿ ಇನ್ನೂ ಯಾವುದೊ ಕೊರ್ಸೊ ಇಲ್ಲ ಕಸರತ್ತೊ ಮಾಡಲೊ ಹೇಳುತ್ತಾಳೇನೊ ಅಂತ ಭಯದಿಂದ ನೋಡುತ್ತಿದೆ. "ನಾನೇನು ನನ್ನ ಫೇವರಿಟ್ಟು ಹೃತಿಕ್ (ರೊಶನ್) ಹಾಗೆ ಸಿಕ್ಸ್ ಪ್ಯಾಕ್ ಬಾಡಿ ಮಾಡಿ ಅಂತ ಕೇಳಿರಲಿಲ್ಲ, ಅದು ನನಗೆ ಬೇಕೂ ಇಲ್ಲ, ಪತಿರಾಯ ಗಣಪತಿಯಂತೆ ಡುಮ್ಮ ಆಗಿರದಿರಲಿ ಅಂತ ಆಸೆಯಿತ್ತು ಅಷ್ಟೆ" ಅಂದ್ಲು. ಕೇಳಿ ಸಮಾಧಾನ ಆಯ್ತು. "ನನಗೂ ಏನೂ ಏಳು ಮಲ್ಲಿಗೆ ತೂಕದ ರಾಜಕುಮಾರಿ ಬೇಕಿಲ್ಲ, ನಾನೆತ್ತಿ ಮುದ್ದಾಡುವಷ್ಟಿದ್ದರೆ ಸಾಕು" ಅಂದೆ "ಮತ್ತೆ ನಿಮ ಎರೊಬಿಕ್ಸು ಕೊಚು ಎನಾದ್ಲು" ಅಂದ್ಲು "ಕೊಲೀಗಿಗೆ ಬಿಟ್ ಕೊಟ್ಬಿಟ್ಟೆ" ಅಂದೆ "ಅಹಾಹಾ ಏನು ಮಹಾ ನಿಮ್ಮ ಜತೆ ಎರಡು ಡ್ಯುಯೆಟ್ಟಿಗೆ ಹೆಜ್ಜೆ ಹಾಕಿ ನಿಮ್ಮವಳೇ ಆಗಿಬಿಟ್ಟಿದ್ಲು ನೋಡಿ, ಬಿಟ್ಟು ಕೊಡೋಕೆ" ಅಂತ ತಿವಿದಳು. ಎಷ್ಟೋ ಹಾಡುಗಳಿಗೆ ಹೆಜ್ಜೆಯಂತೂ ಹಾಕಿದ್ದಲ್ಲ ಆದ್ರೂ, ಇವಳಿರಬೇಕಾದ್ರೆ ನನಗೆ ಬೇರೆಯವರು ಯಾಕೆ ಬೇಕು ಹೇಳಿ. "ಇನ್ನು ನೀನು ಎಷ್ಟು ತಿಂಗ್ಳು ಅಂತ ಕೇಳಿ ನನ್ನ ಕಾಡಿಸೋಕೆ ಆಗಲ್ಲ ಬಿಡು ಅಂದೆ"... "ಹೂಂ, ಅಲ್ವಾ ಅದೂ ಸರಿ, ಆದ್ರೆ ನಂಗೆ ಕಾಡಿಸೊಕೆ ವಿಷಯಗಳ ಕೊರತೆಯೇನಿಲ್ಲ ಬಿಡಿ... ಏನೂ ಹೆರಿಗೆ ಯಾವಾಗ ಆಯ್ತು ಮಗು ಹೆಣ್ಣಾ ಗಂಡಾ ಅಂತ ಕೇಳ್ತೀನಿ" ಅಂದ್ಲು. "ತುಂಟಿ ನಿನ್ನ

Copyright© Prabhuraj Moogi
www.telprabhu.com

ತರಲೆ ಮಾಡೊದ್ರಲ್ಲಿ ಮೀರಿಸೊಕಾಗಲ್ಲ.." ಅಂತ ತಲೆಗೊಂದು ಏಟು ಕೊಟ್ಟೆ ಕಿಲಕಿಲ ನಗುತ್ತ ಮಗುವಿನಂತೆ ಬಾಚಿ ತಬ್ಬಿಕೊಂಡ್ಳು, ನಮ್ಮಿಬ್ಬರ ನಡುವಿನ ಅಂತರ ಮತ್ತಷ್ಟು ಕಡಿಮೆಯಾಗಿತ್ತು, ಹೊಟ್ಟೆ ಕರಗಿದ್ದರಿಂದ ಅಷ್ಟೇ ಏನಲ್ಲ, ಇಂಥ ದಿನನಿತ್ಯದ ಅವಳ ತರಲೆಗಳಿಂದ ಕೂಡ..

ಹೊಟ್ಟೆ ತುಂಬಾ ಊಟಕ್ಕೆ ಒಂದು ಉಪ್ಪಿನಕಾಯಿಯಿರಲೆಂದು ಯಾವಾಗಲೊ ಬರೆದದ್ದು ಹಾಗೇ ಕೇಳಿ..

*ಜೋಗಿಂಗ್ ಹೊಗೋಣ*
*ಬೇಗ ಎದ್ದೇಳಿ ಅಂದ್ಲು..*
*ಮುಂದೆ ಹೋಗ್ತಿರು ಯಾರಾದ್ರೂ*
*ಚುಡಾಯಿಸಿದ್ರೆ ಹಿಂದಿರ್ತೀನಿ ಅಂದೆ..*

*ಆಹಾ! ನೀವ್ ಗೊತ್ತಿಲ್ವ ಇರೊಬರೋ*
*ಹುಡುಗೀರ್ನೆಲ್ಲ ನೊಡ್ಕೊಂಡ್ ಬರ್ತೀರ ಅಂದ್ಲು..*
*ಅದ್ಕೆ ಬೇಡ ಬಿಡೆಂದು ಬರಸೆಳೆದು*
*ಮುಸುಗೆಳೆದುಕೊಂಡೆ..*

ಮತ್ತೆ ಸಿಗೊಣ ಎಲ್ಲೋ ವಾಕಿಂಗು ಮಾಡುತ್ತ...

ಆ ಎರೊಬಿಕ್ಸ್ ಸೆಂಟರು ಎಲ್ಲಿದೆ ಅಂತ ನನ್ನ ಕೇಳ್ಬೇಡಿ ನೀವೇ ಹುಡುಕಿಕೊಳ್ಳಿ. ಹೊಟ್ಟೆಯಿದ್ದವರು ಏನು ನಮ್ಮ ಬಗ್ಗೆ ಹೀಗೆಲ್ಲ ಬರೆದಿದ್ದಾನಲ್ಲ ಅಂತ ಬೇಜಾರು ಮಾಡಿಕೊಳ್ಳದೆ ಹುಡುಗನ ಹುಡುಗಾಟವೆಂದು ತಪ್ಪಾಗಿದ್ದರೆ ಹೊಟ್ಟೆಗೆ ಹಾಕಿಕೊಳ್ಳಿ, ಹಾಗೂ ಹೊಟ್ಟೆ ಕರಗಿಸಲು ಸ್ವಲ್ಪ ಪ್ರಯತ್ನವನ್ನೂ ಮಾಡಿ. ನಿಮ್ಮ ಹೊಟ್ಟೆ ಪಾಡಿನ ಕಥೆಗಳಿದ್ದರೆ ಹಂಚಿಕೊಳ್ಳಿ, ಹೊಟ್ಟೆ ಹುಣ್ಣಾಗುವಂತೆ ನಗೊಣ.

Copyright© Prabhuraj Moogi
www.telprabhu.com

## ನೀನಿಲ್ಲದಾಗ...

ಮುಂಜಾನೆ ಆರು ಘಂಟೆಗೇ ಎಬ್ಬಿಸಿದ್ಲು, ಊರಿಗೆ ಹೊರಟಿದ್ಲು, ಅವರ ಚಿಕ್ಕಪ್ಪನ ಮಗನ ಮದುವೆ ಅಂತೆ ಮದುವೆಗೆರಡು ದಿನ ಮೊದಲೇ ಬರುವಂತೆ ಹೇಳಿ ಹೋಗಿದ್ದರು, ಅಲ್ಲದೇ ಬೇರೆ ನಿನ್ನೆ ಫೋನು ಮಾಡಿ ಹೇಳಿದ್ರು. ಹೋಗಲೇಬೇಕಿತ್ತು. ಅಲ್ಲೇ ಮುಸುಕು ತೆಗೆದು "ಹೋಗಲೇಬೇಕೇನೆ?" ಅಂದೆ, "ಅದೇ ರೀ, ನಾನೂ ಬರೊಕಾಗಲ್ಲ ಅಂತ ಎಷ್ಟೊ ಹೇಳಿದೆ, ಅವರು ಕೇಳ್ತಿಲ್ಲ, ಫೋನು ಮಾಡಿ ಹೇಳಿಬಿಡ್ಲ" ಅಂದ್ಲು. "ಲೇ ನಿಮ್ಮ ಚಿಕ್ಕಪ್ಪನ ಮಗ, ಮದುವೆ ಎಲ್ಲಾ ಒಂದೇ ಸಾರಿ ಆಗೋದು, ಮತ್ತೆಲ್ಲಿ ಹೊಗೋಕಾಗುತ್ತೆ, ಹೋಗಿ ಬಾ" ಅಂದೆ. " ಅಯ್ಯೊ! ಅದೇನ್ರಿ ಹಾಗಂತೀರ ಒಂದೇ ಸಾರಿ ಮದುವೆ ಅಂತಾ... ಇನ್ನೇನು ಎಲ್ರೂ ನಾಲ್ಕೈದು ಸಾರಿ ಆಗ್ತಾರಾ ನಂಗೂ ಗೊತ್ತು" ಅಂತ ಸಿಡುಕಿದ್ಲು. "ಏನು ಗೊತ್ತು ಬದನೆಕಾಯಿ, ನೀನು ಪರ್ಮಿಷನ್ನು ಕೊಟ್ರೆ ಸಾಕು ಈಗಲೇ ಇನ್ನೆರಡು ಮದುವೆ ಆಗಿ ಬಿಡ್ತೀನಿ ಏನಂತೀಯಾ" ಅಂತ ಕಿಚಾಯಿಸಿದೆ. ಪಾಕಶಾಲೆಯಲ್ಲಿ ಏನೊ ಮಾಡ್ತಿದ್ದೊಳು ಕೈತೊಳೆದು ಬಂದು ತಲೆದಿಂಬಿನಿಂದ ನಾಲ್ಕು ಬಾರಿಸಿದ್ಲು. ತಲೆದಿಂಬು ಕಸಿದುಕೊಂಡು "ಆಯ್ತು ಸರೀ ಬೇರೆ ಯಾರೂ ಬೇಡ ಬಿಡು, ನಿಮ್ಮಪ್ಪನ್ನ ಕೇಳು, ಮದುವೆ ಇನ್ನೊಮ್ಮೆ ಮಾಡ್ತಾರೆ ಅಂದ್ರೆ ನಿನ್ನೇ ಇನ್ನೊಮ್ಮೆ ಮದುವೆ ಆಗ್ತೀನಿ" ಅಂದೆ. ಮುಖ ಕೆಂಪಗಾಗಿ ಸಾಕ್ಷಾತ ಚಂಡಿ ಚಾಮುಂಡಿ ದೇವಿ ದರ್ಶನ ಆಯ್ತು, ಕೈಮುಗಿದು.. ಇಲ್ಲೇ ಇದ್ರೆ ಇನ್ನೇನು ಕೈಗೆ ಸಿಗುತ್ತೊ ಅದನ್ನೇ ತುಗೊಂಡು ಬಾರಿಸ್ತಾಳೆ ಅಂತ ಅಲ್ಲಿಂದ ಪಲಾಯನ ಮಾಡಿದೆ.

ಯಾವಾಗಲೂ ಹೀಗೆ ಸಿಟ್ಟಾಗಲ್ಲ, ಅವಳಿಗೂ ಹೋಗೊ ಮನಸಿಲ್ಲ, ಆದ್ರೂ ಹೋಗಬೇಕಿದೆ ಅದ್ಕೆ ಬೇಜಾರು ಅಷ್ಟೆ. ಇನ್ನೆರಡು ನಿಮಿಶಗಳಲ್ಲಿ ಮತ್ತೆ ಮಾಮೂಲಿ ತರಲೆ ಶುರು.. ಬ್ರಶು ಮಾಡುತ್ತಿದ್ದೊನಿಗೆ ಆಕಾಶವಾಣಿ ಆಯ್ತು!!! ಅಲ್ಲಲ್ಲ.. ಅವಳೇ ಇನ್ನೆರಡು ದಿನಗಳಿಗೆ ಏನೇನು ಅಂತ ಹೇಳುತ್ತಿದ್ಲು. "ರೀ, ಅಡುಗೆಮನೆ ಶೆಲ್ಫಿನ ಮೂರನೇ ಖಾನೇಲಿ ನಾಲ್ಕನೇ ಡಬ್ಬಿಲೀ ಚುರುಮುರಿ(ಮಂಡಕ್ಕಿ) ಇದೆ, ಅದು ಬೇಡ ಅಂದ್ರೆ ಎರಡನೇ ಡಬ್ಬೀಲಿ ಅವಲಕ್ಕಿ(ಪೋವೆ) ಇದೆ, ಸಂಜೆ ಟೀ ಜತೆ ತಿನ್ನೊಕೆ" ಇನ್ನೂ ಹೇಳೊಳಿದ್ಲು ನಾನೇ ತಡೆದು, "ಚೀಟಿ ಬರೆದು ಹಚ್ಚಿ ಬಿಡು ಅದೆಲ್ಲಿ ನೆನಪಿರತ್ತೆ" ಅಂದೆ, ಹೇಗೂ ಎಲ್ಲ ಡಬ್ಬಿ ಕಿತ್ತಾಡೊದು ಗ್ಯಾರಂಟಿ..."ಅರವತ್ತಕ್ಕೆ ಅರೆವು ಮರೆವು ಅಂತಾರೆ, ನಿಮ್ಗೆನು ಅರವತ್ತು ವಯಸ್ಸಾಯ್ತಾ?" ಅಂದ್ಲು, "ಹೂಂ ಮತ್ತೆ, ನಿನ್ಗಿಂತ ಎರಡೇ ವರ್ಷ ದೊಡ್ಡೊನು" ಅಂದೆ. "ಯಾಕ್ರೀ, ನಾನೇನು ಅಜ್ಜಿ ಆಗೊದ್ನಾ, ನಾನು ಚಿರಯೌವನೆ ಗೊತ್ತ" ಅಂದ್ಲು, "ಎಲ್ಲಾ ಹುಡುಗೀರು ಹೀಗೆ ಬಿಡು, ವಯಸ್ಸು ಕೇಳಿದ್ರೆ ಇಪ್ಪತ್ತೇ ಅಂತಾರೆ, ಎಲ್ಲ ಚಿರಯೌವನೆಯರೇ" ಅಂದೆ. "ಅದ ಬಿಡಿ, ನೀವ್ ವಾದ ಮಾಡೋಕೆ ಜಾಣರು... ಸಾಕ್ಸು ಕಬೊರ್ಡನಲ್ಲಿದೆ, ಇಲ್ಲ ಅಂತ ಅದೆ ಸಾಕ್ಸು ಹಾಕೊಂಡು ಹೊಗ್ಬೇಡಿ, ಎರಡು ಜತೆ ಶರ್ಟು ಪ್ಯಾಂಟು ತೆಗೆದು ಹೊರಗೇ ಇಟ್ಟೀದೀನಿ, ಬೀರು ಏನೂ ಕಿತ್ತಾಕೋದು ಬೇಕಿಲ್ಲ. ಅಡುಗೆ ಮಾಡೊ ಸಾಹಸ ಮಾಡ್ಬೇಡಿ, ಕೈ ಕುಯ್ದುಕೊಂಡ್ರೆ, ಆ ನಿಮ್ಮ ನರ್ಗೀಸ್!(ನರ್ಸ್) ಹತ್ರ ಬ್ಯಾಂಡೇಜು ಮಾಡ್ಸಕೊಂಡು ಬರೋಕೆ ನಾನಿರಲ್ಲ, ಅಡುಗೆಮನೆ ಬಚ್ಚಲುಮನೆ ಮಾಡಿ ಬಿಡ್ತೀರಿ ಸುಮ್ನೆ... ಇಂದು ರಾತ್ರಿವರೆಗೆ ಅಡುಗೆ ಇದೆ, ನಾಳೆ ಶಾಂತಿನೇ(ಶಾಂತಿ ಸಾಗರ ಹೊಟೆಲು) ಗತಿ" ಇನ್ನೂ ಉಪದೇಶ ಸಾಗಿರೊದು... ನಾನೇ ತಡೆದು "ಮೇಡಮ, ಎರಡೇ ದಿನದಲ್ಲಿ ಬರ್ತೀರ, ಹೊರಡಿ ಲೇಟಾಗುತ್ತೆ" ಅಂದೆ. ಮುಖ ತೊಳೆದು ಕಾಫೀ ಹೀರಿ, ಮೆಜೆಸ್ಟಿಕ್‌ಗೆ(ಬೆಂಗಳೂರಿನ ಬಸ್ ನಿಲ್ದಾಣ) ಬಿಟ್ಟು ಬಂದೆ.

ಬಸ್ಸಿನಲ್ಲು ಕೂತು, ನೀವೂ ಮದುವೆಗೆ ಬಂದಿದ್ರೆ ಚೆನ್ನಾಗಿತ್ತು ಅಂತಿದ್ಲು, **ಒಂದು ಕುರೀನಾ ಬಲಿ ಕೊಡೋದು ಇನ್ನೊಂದು ಕುರೀಗೆ ನೋಡೊಕಾಗಲ್ಲ** ಕಣೆ.. ಅಂತಂದು ಬೈಸಿಕೊಂಡು, ತಲುಪಿದ ಮೇಲೆ ಫೋನು ಮಾಡು ಅಂತ ಹೇಳಿ ಓಡಿದ್ದೆ... ಇನ್ನೂ ನಿಂತಿದ್ರೆ ಬಾರಿಸಿರೊಳು. ಮನೆಗೆ ಬಂದು, ಕೀಲಿ ತೆಗೆದು ಒಳ ಹೊಕ್ಕೆ, ಭೂತ ಬಂಗಲೆ ಹೊಕ್ಕಂತಾಯಿತು, ಮನೆಗೆ ದೀಪ ಹಚ್ಚೊಕೆ ಒಂದು ಹೆಣ್ಣಿರಬೇಕು ಅಂತ ಹಿರಿಯರು ಹೇಳಿದ್ದು ಇದಕ್ಕೆ ಇರಬೇಕು ಅನಿಸಿತು, ಯಾವಾಗಲೂ ಮನೆಗೆ ಬಂದ್ರೆ, ಮೊದಲು ಪ್ರತ್ಯಕ್ಷ ಆಗ್ತಾಳೆ, ಅದೇ ಮುಗುಳ್ನಗು, ತುಟಿಯಲ್ಲೊಂದು ತುಂಟ ಪ್ರಶ್ನೆ, ಎಲ್ಲಿದ್ದರೂ ಮನೆಗೆ ಓಡಿ ಬರಬೇಕೆನ್ನಿಸುತ್ತೆ. ಏನು ಮಾಡೋದು ಅಂತಿದ್ದವನಿಗೆ ಪೇಪರು ಕಣ್ಣಿಗೆ ಬಿತ್ತು, ಅಬ್ಬ ಸಧ್ಯ ಟೈಮ್ ಪಾಸ್ ಆಗುತ್ತೆ ಅಂತ ಓದಲು ಕುಳಿತೆ.

ಓದಲು ಕುಳಿತು ಘಂಟೆ ಆಗಿರಲಿಲ್ಲ, ಬೇಜಾರಾಯ್ತು. ಹಿಂದಿನಿಂದ ಬಂದು ತಲೆ ತೂರಿಸುವವಳು.. ನೀ ಓದಿ ಕೊಡೆ, ನಾನಾಮೇಲೆ ಓದ್ತೀನಿ ಅಂದ್ರೂ, ಕೇಳಲ್ಲ, ಎದೆಗಾತುಕೊಂಡು ಕೂತೊ, ಇಲ್ಲ ಹಿಂದಿನಿಂದ ಬಂದು ಹೆಗಲ ಮೇಲೆ ಗದ್ದ ಆಣಿಸಿಕೊಂಡು ಕೂತು ಜತೆಗೆ ಓದಿದಾಗಲೇ ಸಮಾಧಾನ. ಒಬ್ಬನೇ ಓದಲಾಗದೇ ಪೇಪರು ಬೀಸಾಕಿ ಮೇಲೆದ್ದೆ. ಎಲ್ಲಿದ್ದಾಳೆ ಕೇಳೋಣ ಅಂತ ಫೋನು ಮಾಡಿದೆ, "ಎಲ್ಲಿದೀಯ, ಫೋನೆ ಮಾಡಿಲ್ಲ" ಅಂದೆ... "ರೀ, ಇನ್ನೂ ಹೋಗಿ ತಲುಪಲು ಎರಡು ಘಂಟೆ, ಆಮೇಲೆ ಫೋನು ಮಾಡ್ತೀನಲ್ಲ" ಎಂದು ಮುನಿಸು ತೋರಿಸಿದೊಳು ಮರುಕ್ಷಣ, "ಯಾಕೆ ಒಬ್ರಿಗೆ ಬೇಜಾರಾ, ಅದ್ಕೆ

Copyright© Prabhuraj Moogi
www.telprabhu.com

ನಾನು ಹೋಗಲ್ಲ ಅಂದಿದ್ದು" ಅಂತ ಪ್ಲೇಟು ಚೇಂಜ ಮಾಡಿದ್ಲು "ಇಲ್ಲ, ತಲುಪಿದ್ಯಾ ಇಲ್ವಾ ಅಂತ ಮಾಡ್ದೆ ಬಿಡು" ಅಂದೆ ಅವಳಿಗೆ ಗೊತ್ತು, ಅದ್ಕೆ "ಯಾವುದಾದ್ರೂ ಫಿಲ್ಮಗೆ ಹೊಗ್ರಿ, ಟೈಮ್ ಪಾಸ ಆಗುತ್ತೆ" ಅಂತ ಸಲಹೆ ಬೇರೆ ಕೊಟ್ಲು, "ಆಯ್ತು" ಅಂತಿಟ್ಟೆ. ಎನು ಫಿಲ್ಮು ನೊಡ್ತೀರ ಹೇಳಿ, ಮನೇಲೆ ನೂರು ಟೀವೀ ಚಾನಲ್ಲಿನಲ್ಲಿ ಫಿಲ್ಮ ಬರ್ತವೆ ಅದೆ ಡಬ್ಬಾ ಸಾರವಿಲ್ಲದ ಪ್ರೀತಿ ಪ್ರೇಮ ಫಿಲ್ಮಗಳು, ಹೊಸತನ ಅನ್ನೊದೆ ಇಲ್ಲ, ಆ ಪ್ರೇಮಿಗಳಿಗಿಂತ ನಾವಿಬ್ಬರೇ ಎಷ್ಟೊ ವಾಸಿ, ದಿನಾ ಹೊಸ ಹೊಸ ಡೈಲಾಗು ಹೇಳುತ್ತ, ಮನೆಲೇ ಲೈವ್ ಫಿಲ್ಮ ನಮ್ದು. ಹಳೆ ಹಾಡು ನೆನಪು ಬಂತು "ವಿರಹಾ ನೂರು ನೂರು ತರಹ... ಕಹಿ ಬರಹ" ಅಂತಿದ್ದಂಗೆ ಬ್ಲಾಗಿಗೆ ಬರಹ ಬರೆಯೊದು ನೆನಪಾಗಿ, ತೊಚಿದ್ದು ಗೀಚಿ ಬೀಸಾಕಿದ್ದು ಆಯ್ತು.

ಹಾಗೂ ಹೀಗೂ ಮಾಡಿ ಮಧ್ಯಾಹ್ನದವರೆಗೆ ಕಾಲ ಕಳೆದದ್ದಾಯ್ತು, ಹೊಟ್ಟೆ ಹಸಿವಿಲ್ಲದೆ ಮೊಸರನ್ನ ಹಾಕಿಕೊಂಡು, ಉಪ್ಪಿನಕಾಯಿ ಹುಡುಕಿ ಹುಡುಕಿ ಬೇಸತ್ತು, ಸರಿಯಾಗಿ ಅದೇ ಸಮಯಕ್ಕೆ ತಲುಪಿದ್ದೀನೆಂದು ಹೇಳಲು ಫೊನು ಮಾಡಿದವಳ ಕೇಳಿ, ಎಲ್ಲಿದೆಯಂತ ಪತ್ತೆ ಹಚ್ಚಿ, ಉಪ್ಪಿನಕಾಯಿ ಜತೆ ಅವಳ ತರಲೆ ಮಾತುಗಳನ್ನೂ ನಂಜಿಕೊಂಡು, ಅನ್ನದ ಜತೆ ಅವಳ ತಲೆನೂ ತಿಂದು ತೇಗಿದ್ದಾಯ್ತು, ಮಾಡಲೇನೂ ಬೇರೆ ಕೆಲಸವಿಲ್ಲದ್ದರಿಂದ ಸಂಜೆ ಐದರವರೆಗೆ ಭರಪೂರ ನಿದ್ದೆ ಆಯ್ತು. ಎದ್ದು ಮುಖ ತೊಳೆದು, ಟೀ ಮಾಡಲಿಟ್ಟು, ತಿಂಡಿ ಹುಡುಕತೊಡಗಿದೆ, ಅದೊ ಅಲ್ಲಿ ಕನ್ನಡ ಮುದ್ದು ಮುದ್ದು ಅಕ್ಷರಗಳಲ್ಲಿ "ಅವಲಕಿ" ಅಂತ ಕಾಣಿಸಿತು, ಅಯ್ಯೊ, "ಕ" ಒತ್ತು ಕೊಡೊದು ಮರೆತು ಬಿಟ್ಟೀದಾಳೆ, ಇಲ್ಲ ಹಾಗೇ ಬರೆದಿರೊದೋ, ಏನೊ "ಅವ-ಲಕಿ" ಅಂದ್ರೆ... ಯಾರು ಲಕಿ(ಅದೃಷ್ಟವಂತ)... ಅವನ್ಯಾರೂ ಅಲ್ಲ ನಾನೇ!...

ಮನೆಯ ನಿಶಬ್ದ ನೋಡಿ ಚೀರಿ ಬಿಡಲೇ ಅನ್ನಿಸಿತು... ಹೋಗ್ಲಿ ಗೆಳೆಯನೊಂದಿಗೆ ಮಾತಾಡಿ ಬಹಳ ದಿನ ಆಯ್ತು ಸಂಜೆ ಮನೆಗಾದ್ರೂ ಬರ ಹೇಳೊನ ಅಂತ ಫೋನು ಮಾಡಿದೆ. ಒಬ್ನೆ ಬೇಜಾರಾಗ್ತಿದೆ, ಹೆಂಡ್ತಿ ಮನೇಲಿಲ್ಲ ಅಂದ್ರೆ, ಹೆಂಡ್ತಿ ಇಲ್ಲಾಂದ್ರೆ ಎಂಜಾಯ ಮಾಡೊ ಗೂಬೆ ಅಂತ ಬೈದ, ಅವನಿಗೇನು ಗೊತ್ತು ನನ್ನವಳ ಬಗ್ಗೆ, ಅವನಂತ ಹೆಂಡ್ತಿ ಇದ್ದಿದ್ರೆ ನಾನೂ ಹಾಗೆ ಅನಬಹುದಿತ್ತು, ಆದ್ರೆ ನನ್ನವಳಿಗಾರು ಸಾಟಿ.

**ಯಾವುದೇ ಒಂದು ವಸ್ತು ಇರಲಿ, ಇಲ್ಲ ವ್ಯಕ್ತಿ ಇರಲಿ ಅದು/ಅವರು ಇಲ್ಲದಾಗಲೇ ಅದರ ಬೆಲೆ ತಿಳಿಯೋದು**, ಅದಕ್ಕೆ ಅಲ್ವೆ ದೂರವಿದ್ದಷ್ಟು ಪ್ರೀತಿ ಜಾಸ್ತಿ ಅನ್ನೊದು. ಮನೆಗೆ ಫೊನು ಮಾಡಿ ಅಪ್ಪಾಜಿ ಅಮ್ಮನ ಒಂದು ಘಂಟೆ ಕೊರೆದದ್ದಾಯ್ತು, ಅದಾದ ಹತ್ತು ನಿಮಿಷಕ್ಕೇ ಇವಳ ಫೋನು ಬಂತು, ಅಮ್ಮ ಇವಳಿಗೆ ಫೊನು ಮಾಡಿರಬೇಕು... "ರೀ ಅತ್ತೆ ಫೋನು ಮಾಡಿದ್ರು, 'ಅದನ್ನೊಂದೆ' ಬಿಟ್ಟು ಯಾಕೇ ಹೊಗೀದೀಯಾ... ನೀನಿಲ್ಲದೆ ಒಂದುದಿನ ಇರಲ್ಲ ಅದು... ಅಂತ ನನ್ನ ಕಾಡಿಸಿದ್ರು, ಏನ್ ಬೇಜಾರಾ... ಪಕ್ಕದ ಮನೆ ಪದ್ದುಗೆ ಕಂಪನಿ ಕೊಡು ಅಂತ ಹೇಳ್ಲಾ" ಅಂತ ಕಿಲಕಿಲ ನಕ್ಳು... "ಏನ್ ಬೇಕಾಗಿಲ್ಲ, ಹಾಲು ತರಬೇಕು, ಹಾಲಿನಂಗಡಿ ಹಾಸಿನಿ ನೋಡ್ಕೊಂಡು ಬರ್ತೀನಿ" ಅಂದೆ, "ಅದ್ಯಾಕೆ, ಫ್ರಿಡ್ಜನಲ್ಲಿ, ಗುಡ್‌ಲೈಫ ಹಾಲು ಪ್ಯಾಕೆಟ್ ಎರಡು ಇದೆ" ಅಂತಂದು ಆ ಆಸೆಗೂ ತಣ್ಣೀರೆರಚಿ ಕಿಸಿ ಕಿಸಿ ನಗತೊಡಗಿದ್ಲು...

ಆ ಚಾನೆಲ್ಲು, ಈ ಚಾನೆಲ್ಲು ಅಂತ ರಿಮೊಟು ಬಟನ್ನು ಕಿತ್ತು ಬರೊ ಹಾಗೆ ಟೀವೀ ಚಾನೆಲ್ಲು ಬದಲಾಯಿಸಿ ನೋಡಿದ್ದಾಯ್ತು. ಯಾವುದೊ ಹಾಸ್ಯ ಕಾರ್ಯಕ್ರಮದ ಜೋಕಿಗೆ ನಕ್ರೆ, ನನ್ನದೇ ಧ್ವನಿ, ಪ್ರತಿಧ್ವನಿಯಾಗಿ ಮಾರ್ದನಿಸಿದಂತಾಯಿತು. ನಿದ್ದೆ ಬಂದಿರದಿದ್ರೂ ಹಾಸಿಗೆಯಲ್ಲಿ ಬಿದ್ದುಕೊಂಡೆ, ಅಬ್ಬಾ ನಾಳೆ ಆಫೀಸಿದೆ ಹೇಗೊ ದಿನ ಕಳೆದು ಹೋಗುತ್ತೆ, ಅಂತ ಖುಷಿಯಾಯ್ತು. ಅವಳು ಬಂದ ಮೇಲೆ ನೀನಿಲ್ಲದಾಗ ಹೀಗೆಲ್ಲ ಆಯ್ತು ಅಂತ ಹೇಳಿಕೊಂಡು ನಗಬಹುದು ಅನಿಸಿತು. ನನ್ನ ತಲೆದಿಂಬು ಆಕಡೆ ಬೀಸಾಡಿ, ಅವಳ ತಲೆದಿಂಬಿಗೆ ಒರಗಿದೆ, ಕಿವಿಯಲ್ಲಿ ಜೊಗುಳ ಹಾಡಿದಂತಾಗಿ ನಿದಿರೆಗೆ ಜಾರಿದೆ...

ಮತ್ತೆ ಸಿಗೊಣ...

Copyright© Prabhuraj Moogi
www.telprabhu.com

## ಆ ಒಂದು ದಿನ ನಿನಗೆಂದು...

ಇತ್ತೀಚೆಗೆ ಕೆಲಸದೊತ್ತಡ ಜಾಸ್ತಿಯಾಗಿ ವೀಕೆಂಡು ಸಿಗೋದೆ ಇಲ್ಲ, ವೀಕೆಂಡೂ ಆಫೀಸಿದೆ ಅಂತ ಹೊರಟರೆ, ಯಾವುದೊ ಮಂತ್ರಿ ನಿಧನರಾದರೆಂದು ಶಾಲೆಗೆ ರಜೆ ಎಂದುಕೊಂಡಿದ್ದು, ರಜೆ ಕ್ಯಾನ್ಸಲ್ಲು ಆಗಿದ್ದು ಕೇಳಿದ ಮಗುವಿನಂತಿರುತ್ತೆ ಅವಳ ಮುಖ. ಸ್ವಲ್ಪವೂ ಬೇಜಾರಿಲ್ಲದೆ ಅಂದೂ ಬೇಗ ಎದ್ದು ಏನೊ ಒಂದು ಬೇಯಿಸಿ ಹಾಕಿರುತ್ತಾಳೆ. ಅಂಥದ್ದರಲ್ಲಿ ಇಂದು ಶನಿವಾರ ಏನೂ ಕೆಲಸವಿರಲಿಲ್ಲ, ಬೇಗ ಎದ್ದು ಓಡುವ ಅವಸರವೇನಿರಲಿಲ್ಲ. ಆರಕ್ಕೇ ಎಚ್ಚರಾಗಿ ಮೇಲೆದ್ದಿದ್ದ ಇವಳ ಇವತ್ತೇನು ಬೇಗ ಏಳೋದು ಅಂತ ಬರಸೆಳೆದು ಬಿಗಿದಪ್ಪಿ ಮಲಗಿದ್ದೆ, ಹೊರಗಡೆ ಛಳಿ ಇನ್ನೂ ಜಾಸ್ತಿಯಿದ್ದದ್ದರಿಂದ ಬಿಸಿಯಪ್ಪುಗೆ ಹಿತವೆನಿಸಿರಬೇಕು ಏನೊ ಮುಲುಗುತ್ತ ಮುಸುಗೆಳೆದುಕೊಂಡಿದ್ದಳು. ಎಂಟಾದಾಗ ಮುಂಜಾನೆ ಎಳೆ ಬಿಸಿಲು ಕಿಟಕಿಯಿಂದ ಇಣುಕಿ ನೊಡತೊಡಗಿದಾಗಲೇ ಎಚ್ಚರವಾಗಿದ್ದು. ಎಚ್ಚರಾಗಿದ್ದರೂ ಏಳೊ ಮನಸು ಇಬ್ಬರಿಗೂ ಇದ್ದಂತಿರಲಿಲ್ಲ, ಏನೂ ಮಾತಾಡದೆ ಹಾಗಿ ಮೌನವಾಗಿದ್ದು ಬಿಡುತ್ತೇವೆ ಒಂದೊಂದು ಸಾರಿ, ಮೌನವೇ ಮಾತಾಡುತ್ತಿರುತ್ತೆ, ಇಲ್ಲಾ ಮನಸಿನಲ್ಲೇ ಏನೊ ಕೇಳಬೇಕೆಂದುಕೊಂಡಿದ್ದು, ಹೇಗೆ ಆರಂಭಿಸೋದು ಅಂತ ಯೋಚಿಸುತ್ತಿರುತ್ತೇವೆ. ಇಗಲೂ ಸ್ವಲ್ಪ ಹಾಗೇ ಆಗಿತ್ತು, ಇವತ್ತೇನು ಮಾಡೋದು ಅನ್ನೊ ಪ್ಲಾನುಗಳು ತಲೆಯಲ್ಲಿ ಒಡುತ್ತಿದ್ದವು.

ಎದೆಯ ಮೇಲೆ ತಲೆಯಿರಿಸಿ ಮಲಗಿದ್ದ ಅವಳ ತಲೆಯ ಮೇಲೆ ಕೈಯಿರಿಸಿದ್ದರಿಂದ ಕೈಗೆ ಆಟವಾಡಲು ಕಿವಿಯೋಲೆ ಸಿಕ್ಕಿತ್ತು, ನನ್ನ ಬೆರಳೊಂದು ಅವಳ ಕಿವಿಯ ಸುತ್ತ ಒಂದು ರೌಂಡು ಸುತ್ತು ಹಾಕಿ ಕಿವಿಯೋಲೆಯ ಜುಮಕಿಗೆ ಒಂದು ಸಾರಿ ಡಿಕ್ಕಿ ಹೊಡೆದು ಮತ್ತೆ ಮತ್ತೆ ಸುತ್ತು ಹಾಕುತ್ತಿತ್ತು, ದೇವಸ್ಥಾನದಲ್ಲಿ ಗರ್ಭ ಗುಡಿಯ ಸುತ್ತು ಪ್ರದಕ್ಷಿಣೆ ಹಾಕಿ ಬಂದು ಘಂಟೆ ಬಾರಿಸಿದಂತೆ. ಅವಳೋ ನನ್ನ ಅಂಗಿಯ ಅದೇ ಬಟನ್ನು ಹಾಕುವುದೂ ತೆಗೆಯುವುದೂ ಮಾಡುತ್ತಿದ್ದಳು, ಬಿಟ್ಟರೆ ಅತೀ ಹೆಚ್ಚು ಸಾರಿ ಬಟನ್ನು ಹಾಕಿ ತೆಗೆದ ಗಿನ್ನೆಸ್ ದಾಖಲೆ ಮಾಡಿರೊಳು, ಇನ್ನೇನು ಬಟನ್ನು ಕಿತ್ತು ಬರುವುದೆಂದು ಖಾತ್ರಿಯಾದ ಮೇಲೆ ಎಂದಿನಂತೆ ಅವಳೇ ಮೌನ ಮುರಿದು ಏನೊ ಹೇಳಬೇಕೆನ್ನುವಷ್ಟರಲ್ಲಿ ನಾನೂ ನಡುವೆ ಬಾಯಿ ತೆರೆದೆ.

ನೀನು ಹೇಳು ನೀವು ಹೇಳಿ ಅಂತ ಇಬ್ಬರೂ ಸ್ವಲ್ಪ ಹೊತ್ತು ಕಿತ್ತಾಡಿ, ಕೊನೆಗೆ ಮತ್ತೆ ಮೌನಿಗಳಾಗಿ, ಅವಳು ಪಟ್ಟು ಸಡಲಿಸದವರಂತೆ ಕಾಣದಾದಾಗ, ನಾನೇ ಮೊದಲು ಕೇಳಿದೆ, "ಏನಿಲ್ಲಾ, ಈವತ್ತು ರಜೆ ಏನು ಮಾಡೊದು ಅಂತ ಕೆಳೋನಿದ್ದೆ" ಅಂದೆ ಅಷ್ಟೇ... ನಮ್ಮ ಮ್ಯಾನೇಜರು ಪ್ರೊಜೆಕ್ಟು ಪ್ಲಾನು ಓದಿ ಹೇಳುವಂತೆ ಒಂದೇಟಿಗೆ ಮುಂಜಾನೆಯಿಂದ ಸಂಜೆವರೆಗೆ ಒಂದು ಪರ್‌ಫೆಕ್ಟು ಪ್ಲಾನು ಉಸುರಿದಳು, ಅದೇ ಪ್ಲಾನನ್ನೇ ಡೆವಲಪ್ಪರು ಏನು ಗತ್ಯಂತರವಿಲ್ಲದೇ ಒಪ್ಪಿಕೊಳ್ಳುವಂತೆ, ನಾನೂ ಒಪ್ಪಿದೆ. ವಾರದಲ್ಲಿ ಇಷ್ಟು ದಿನಾ ಕೆಲಸ ಕೆಲಸ ಅಂತ ಕಳೆದ ಮೇಲೆ ಅವಳಿಗೊಂದು ದಿನ ಮೀಸಲಿಡದಿದ್ದರೆ ಹೇಗೆ.

ಎದ್ದು ಬ್ರಷು ಮಾಡುತ್ತಿದ್ದರೆ, ಅವಳು ಆಗಲೇ ಚಹಕ್ಕಿಟ್ಟಿದ್ದಳು, ಚಹ ಕುಡಿದು ಬ್ಯಾಟರಿ ಚಾರ್ಜು ಆಯಿತೆಂದು ಕಾಣುತ್ತೆ ಹಾಡು ಹಾಕಿ ಹಾಗೆ ಸುಮ್ಮನೆ ಹೆಜ್ಜೆ ಹಾಕತೊಡಗಿದೆ... ಡ್ಯಾನ್ಸು ಎನೂ ಬರಲ್ಲ ಹಾಗೆ ಹೀಗೆ ಕಾಲು ಕೈ ಅಲ್ಲಾಡಿಸೋಕೇನು ಕಷ್ಟ... ಪಾಕಶಾಲೆಯಲ್ಲೇನೊ ವಗ್ಗರಣೆ ಹಾಕುತ್ತ ಹಾಡಿನ ತಾಳಕೆ ತಕ್ಕಂತೆ ಸೌಟು ತಿರುವುತ್ತಿದ್ದ ಅವಳ ಎಳೆದುಕೊಂಡು ಹಾಲ್‌ಗೆ ಬಂದೆ. ಅದೇ ಸೌಟಿನಂತೆ ಅವಳ ಎರಡು ಸಾರಿ ತಿರುಗಿಸಿ ಇಂಗ್ಲೀಷರ ಡ್ಯಾನ್ಸು ಕನ್ನಡ ಹಾಡಿಗೆ ತಂದದ್ದಾಯಿತು. ಕುಣಿದು ಕುಣಿದು ಸುಸ್ತಾಗಿ ನನ್ನ ಸ್ನಾನದ ಮನೆಗೆ ನೂಕಿದಳು, ಸ್ನಾನ ಮುಗಿಸಿ ಇನ್ನೆರಡು ಹೆಜ್ಜೆ(ಸ್ಟೆಪ್ಪು) ಹಾಕಿ, ಡ್ರೆಸ್ಸು ಹಾಕಿಕೊಂಡು ರೆಡಿಯಾದೆ. ಮಹರಾಣಿಯವರು ರೆಡಿಯಾಗುವುದು ಲೇಟೇನು ಆಗೊಲ್ಲ, ಇಂದಂತೂ ತುಂಬ ಸಿಂಪಲ್ಲಾಗೆ ಡಿಂಪಲ್ಲೊಂದೇ ಆಭರಣವೇನು ಅನ್ನುವಂತಿತ್ತು, ರಥ(ಬೈಕು) ಹೊರತೆಗೆದು ಸಾರಥಿಯಾದೆ...

Copyright© Prabhuraj Moogi
www.telprabhu.com

ಮೊದಲೇ ಅವಳು ನಿರ್ಧರಿಸಿದಂತೆ ದೇವಸ್ಥಾನಕ್ಕೆ ಮೊದಲ ಭೇಟಿ, ಪ್ರೊಜೆಕ್ಟಿನಲ್ಲಿ ತಲೆತಿನ್ನುತ್ತಿರುವ ನಾಲ್ಕು ಬಗ್‌ಗಳು(ಕಿರಿಕಿರಿಗಳು!) ಸರಿಹೊಗುವಂತೆ ಮಾಡಪ್ಪ ಅಂತ ಬೇಡಿಕೆ ಮಂಡಿಸಿ, ನೋಡಿದರೆ ಇವಳಿನ್ನೂ ಏನೊ ಕೈಮುಗಿದು ದೊಡ್ಡ ಅಹವಾಲು ಪತ್ರವನ್ನೇ ಸಲ್ಲಿಸುತ್ತಿರುವಂತಿತ್ತು, ಏನು ಕೇಳಿಕೊಂಡೆ ಅಷ್ಟೊತ್ತು ಅಂದ್ರೆ ನನ್ನೇ ಮರುಪ್ರಶ್ನಿಸಿದಳು, "ಎಲ್ಲ ನಿನಗಾಗೆ ವರ ಕೇಳ್ದೆ, ನಿನ್ನ ಗಂಡನ ಸುಖವಾಗಿಡು ಅಂತ" ಹಾಗೇ ಕುಟುಕಿದೆ... ತಿರುಗು ಬಾಣ ಬಂತು, "ನಾನೂ ಅಷ್ಟೇ, ನಿಮ್ಮ ಎಲ್ಲ ಗರ್ಲ್‌ಫ್ರೆಂಡಗಳನ್ನ ಸುಖವಾಗಿಡು ಅಂತ ಬೇಡಿಕೊಂಡೆ ಎಲ್ಲರ ಹೆಸರು ಹೇಳುತ್ತಿದ್ದೆ, ಲಿಸ್ಟು ದೊಡ್ಡದಿತ್ತಲ್ಲ, ಅಷ್ಟೊತ್ತಾಯ್ತು" ಅಂದ್ಲು... ಇವಳೀ ಉತ್ತರ ಕೇಳಿ ಇವಳ ನಾನೇ ಸೃಷ್ಟಿಸಿದ್ದಾ ಅಂತಾ ಆ ದೇವರಿಗೂ ಡೌಟು(ಸಂಶಯ) ಬಂದಿರಬೇಕು.

ಅದ್ಯಾವುದೊ ಮಾಲ್ ಒಳಗೆ ಹೊಕ್ಕು ಮೇಲೆ ಕೆಳಗೆ ಸುತ್ತಿದ್ದಾಯ್ತು, ಡಿಸ್ಕೌಂಟು ಒಂದಕ್ಕೊಂದು ಫ್ರೀ ಇದೆ ಅಂತ, ನನಗೆರಡು ಶರ್ಟು ಕೊಡಿಸಿದಳು, ತನಗೆಂದು ಏನೇನು ಕೊಂಡಿದ್ದಳೊ ಯಾರಿಗೆ ಗೊತ್ತು, ನೋಡಿ ನನಗೆ ಸುಸ್ತಾಗಿ ತಲೆ ಸುತ್ತಿ ಬೀಳುವ ಇಚ್ಛೆಯೆನಿಲ್ಲದಿದ್ದರಿಂದ ಸುಮ್ಮನೆ ಕ್ರೆಡಿಟ್ಟು ಕಾರ್ಡು ಉಜ್ಜಿ, ಹೊರಬಂದೆ. ಅಷ್ಟೊತ್ತಿಗಾಗಲೇ ಸೂರ್ಯ ನೆತ್ತಿ ಮೇಲೆ ಬಂದಿದ್ದ, ಹೊಟ್ಟೆ ತಾಳ ಹಾಕುತ್ತಿತ್ತು, ಹೊರಗೇ ಏನೊ ತಿನ್ನೊಣವೆಂದ್ರೂ ಬಿಡದೆ ಮನೆಗೆ ಗಾಡಿ ತಿರುಗಿಸಿದಳು, ಸುತ್ತಿ ಸುತ್ತಿ ಬೇಸತ್ತಿದ್ದರಿಂದ ಏನೊ ಅನ್ನ ಸಾರು ತಿಂದು ಹಾಗೆ ಸೊಫಾದ ಮೇಲೆ ಮೈ ಚಾಚಿದೆ. ತಂದ ಅರಿವೆಗಳ ತೆಗೆದು ಹಾಕಿ ಟ್ರಯಲ್ಲು ನೋಡುತ್ತ ಇವಳೇನೊ ಫ್ಯಾಶನ್ನು ಷೋ ನಡೆಸಿದ್ದಳು.

ಸಂಜೆಗೆದ್ದು ಬುಕ್ಕಿಂಗು ಮಾಡಿಟ್ಟಿದ್ದ ಎರಡು ಟಿಕೆಟ್ಟು ತೆಗೆದುಕೊಂಡು ಸಿನಿಮಾ ನೊಡಲು ಸವಾರಿ ಹೊರಟಿತು, ದಾರಿಯಲ್ಲಿ ಕಂಡ ಪಾನಿ ಪುರಿ ನೋಡಿ ಬೇಕೆಂದು ದುಂಬಾಲು ಬಿದ್ದಳು, ಎರಡು ಪ್ಲೇಟು ತೆಗೆದುಕೊಂಡ್ರೂ ನನ್ನ ಪ್ಲೇಟಿನಲ್ಲಿನ ನಾಲ್ಕು ಎತ್ತಿಕೊಂಡ್ಲು. ಇನ್ನೊಂದು ಪ್ಲೇಟು ತಂದು, ತಿಂದು ತಿನಿಸಿ ಅವಳ ಸಂತೃಪ್ತಿಪಡಿಸಿದೆ. ಪಾನಿ ಪುರಿ ಅಂದ್ರೆ ಇನ್ನೊಂದು ಎಕ್ಸ್ಟ್ರಾ ಹೊಟ್ಟೆ ಬಂದು ಬಿಡುತ್ತೆ ಇವಳಿಗೆ. ಅಂತೂ ಸಿನಿಮಾ ಹಾಲ್‌ಗೆ ತಲುಪಲ್ಲಿಗೆ ಸಿನಿಮಾ ಶುರುವಾಗಿತ್ತು, ಮತ್ತೊಮ್ಮೆ ಸಪ್ತಪದಿಗೆ ಹೆಜ್ಜೆಹಾಕುತ್ತಿರುವವರ ಹಾಗೆ ಒಬ್ಬರ ಕೈ ಇನ್ನೊಬ್ಬರು ಹಿಡಿದು ಕತ್ತಲೆಯಲ್ಲಿ ನಡೆದು ಸೀಟು ಹುಡುಕಿಕೊಂಡು ಕುಳಿತೆವು. ಇನ್ನೂ ಕೈ ಬಿಟ್ಟಿರಲಿಲ್ಲ, "ರೀ ಇದು ಸಿನಿಮಾ ಹಾಲ್" ಅಂತ ಚಿವುಟಿದಳು, ಕೈಬಿಟ್ಟೆ. ಯಾವುದೋ ಎಮೊಶನಲ್(ಭಾವನತ್ಮಕ) ಸೀನು ಬಂದಾಗ ಕಣ್ತುಂಬ ನೀರು ತುಂಬಿಕೊಂಡು, ಇನ್ನೇನು ಕಣ್ಣೀರ ಕಟ್ಟೆಯೊಡೆಯಿತೆನ್ನುವಷ್ಟರಲ್ಲಿ, "ಅದು ಫಿಲ್ಮು, ರೀಲು.. ರಿಯಲ್ಲು ಅಲ್ಲ ಅದ್ಯಾಕೆ ಹಾಗೆ ಮುಖ ಮಾಡ್ಕೊಂಡಿದೀರಾ..." ಅಂತ ತಡವಿದಳು. ಅದೇನೊ ಕೆಲವು ಫಿಲ್ಮುಗಳ ಸನ್ನಿವೇಶಗಳಲ್ಲಿ ಎಮೊಶನಲ್ಲು ಆಗಿ ಬಿಡ್ತೇನೆ, ಮೊದಲಿಂದ್ಲೂ ಹಾಗೇನೆ... ಅದೊಂಥರಾ ಹೇಳೊಕಾಗಲ್ಲ...

ಸಿನಿಮಾ ಮುಗಿದಾಗ ಹತ್ತು ಗಂಟೆಯಾಗಿತ್ತು, ಯಾವುದಾದರೂ ಒಳ್ಳೇ ಹೊಟೇಲಿಗೆ ಊಟಕ್ಕೆ ಕರೆದುಕೊಂಡು ಹೋಗೋಣ ಅಂದ್ರೆ, ಇಂಟರವಲ್ಲಿನಲ್ಲಿ ತಿಂದದ್ದೇ ಇನ್ನೂ ಕರಗಿಲ್ಲ, ಹಸಿವಿಲ್ಲ ಅಂದ್ಲು. ಈ ದಿನ ಅವಳದಾದ ಮೇಲೆ ಅವಳಿಗೇ ಹಸಿವಿಲ್ಲವೆಂದ್ರೆ ನನಗೆಲ್ಲಿಂದ... ಜ್ಯೂಸು ಕುಡಿದು ಹೋಗಿ ಬಿದ್ದುಕೊಂಡಾಗ ಹನ್ನೊಂದಾಗಿತ್ತು... ಹೀಗೆ ಇನ್ನೊಂದು ದಿನದ ಕೊನೆಯಾಗಿತ್ತು...

ಮತ್ತೊಂದಿಷ್ಟು ಮಾತಿನೊಂದಿಗೆ ಮತ್ತೆ ಸಿಕ್ತೀನೀ... ನಿಮ್ಮನಿಸಿಕೆ ಬರೀರಿ...

Copyright© Prabhuraj Moogi
www.telprabhu.com

## ಕೆಲಸದ ನಡುವೆ...

ಶನಿವಾರ ಎದ್ದು ಹಲ್ಲು ಉಜ್ಜದೇ ಹಾಗೆ ಹಾಸಿಗೆಯಲ್ಲಿ ಕುಳಿತೇ ಲ್ಯಾಪಟಾಪ್ ತೆಗೆದು ಏನೊ ಕುಟ್ಟುತ್ತಿದೆ ರಾತ್ರಿ ಎರಡೊ ಮೂರೊ ಮಲಗಿದ್ದು ಮತ್ತೆ ಆರಕ್ಕೇ ಎದ್ದಿದ್ದು, ಅದೇ ಬಗ್ಗುಗಳು(ಸಾಫ್ಟವೇರಿನಲ್ಲಿ ಬರುವ ದೋಷಗಳು), ಕ್ಲಿಕ್ ಮಾಡಿದರೆ ಪೇಜು ಬರುತ್ತಿಲ್ಲ, ಪೇಜು ಬಂದರೆ ಎಡಕ್ಕೆ ಬರಬೇಕಾದ ಗೆರೆಯೊಂದು ಬಲಕ್ಕೆ ಬಂದಿದೆಯೆಂದೊ, ಅದರಲ್ಲಿನ ಯಾವುದೊ ಲೆಕ್ಕದಲ್ಲಿ ಮೂರನೇ ದಶಾಂಶದಲ್ಲಿ ಉತ್ತರ ಸರಿ ಬರುತ್ತಿಲ್ಲವೆಂದೊ, ಸರಿಬಂದರೆ ಅದರ ಫಾಂಟು(ಅಕ್ಷರ) ಸರಿಯಿಲ್ಲ ಅನ್ನುವ ಸಣ್ಣ ಪುಟ್ಟ ತಪ್ಪುಗಳನ್ನೇ ಮಾರುದ್ದದ ಮೇಲ್ ಬರೆದು ದೊಡ್ಡ ದೊಡ್ಡ ರಾದ್ಧಾಂಥಗಳನ್ನು ಮಾಡಿ ಬಿಟ್ಟಿರುತ್ತಾರೆ... ಅದನ್ನು ಸರಿ ಮಾಡಲು ಶನಿವಾರ, ರವಿವಾರ ರಜೆಯೆನ್ನದೆ ಕೆಲಸ ಮಾಡಬೇಕು ಅದಕ್ಕೇ ಸಿಟ್ಟಿನಿಂದಲೇ ಕುಟ್ಟುತ್ತಿರಬೇಕು, ಸದ್ದು ಬಹಳ ಆಗಿ, ಅವಳೆದ್ದಳೆಂದು ಕಾಣುತ್ತದೆ. ಮಲಗಿದಲ್ಲೇ ಹೊರಳಿ ನೋಡಿದಳು, ನಾನೇನು ತಿರುಗಿ ನೋಡಲಿಲ್ಲ ಅಂತ ಮತ್ತೆ ಮುಸುಕೆಳೆದುಕೊಂಡು ಮಲಗಲು ನೋಡಿದ್ದು, ನಾನಿನ್ನೂ ಭರದಿಂದ ಕುಟ್ಟತೊಡಗಿದೆ, ಮಲಗಲಾಗದೇ ಮತ್ತೆ ಮುಸುಕು ತೆಗೆದು ನೋಡುತ್ತಿದ್ದು, ನನ್ನ ಪಾಡಿಗೆ ನಾನು ಕೆಲಸದಲ್ಲಿದ್ದೆ, ಮತ್ತೆ ಮುಸುಕಿನಲ್ಲಿ ಮುಳುಗಿದಳು, ಅತ್ತ ತಿರುಗಿ ನೋಡಿ ಈ ಸಾರಿ ನಾ ಅವಳ ಮುಸುಕೆಳೆದು, ಮತ್ತೆ ಏನೂ ಆಗಿಲ್ಲವೆನ್ನುವಂತೆ ಕುಟ್ಟತೊಡಗಿದೆ, ಸಿಟ್ಟಿನಿಂದ ಬುಸುಗುಡುತ್ತ ನೋಡತೊಡಗಿದ್ದು, ನಿದ್ರೆಯಂತೂ ಹಾರಿ ಹೋಗಿತ್ತು, ನಾನಿನ್ನು ಮಲಗಲು ಬಿಡುವುದಿಲ್ಲ ಅಂತ ಅವಳಿಗೂ ಗೊತ್ತಾಗಿತ್ತು. "ಏನೂ!!!" ಅಂದ್ಲು, ನಾನೂ ಏನು ಅನ್ನುವಂತೆ ಪ್ರಶ್ನಾರ್ಥಕವಾಗಿ ನೋಡಿ, ಮತ್ತೆ ಮೌಸ್ ಬೆನ್ನ ಚಪ್ಪರಿಸುವಂತೆ ಕ್ಲಿಕ್ಕಿಸುತ್ತ ಕುಟ್ಟತೊಡಗಿದೆ. ಕೈಯಲ್ಲಿದ್ದ ಮೌಸು ಬಿಡಿಸಿ ಕುಟ್ಟದಂತೆ ಕೈ ತಡೆದಳು, ಕೈ ಕೊಸರಿಕೊಂಡು ಮತ್ತೆ ಶುರುವಿಟ್ಟುಕೊಂಡೆ ಏನೊ ಕಿರಿಕ್ಕು ತಪ್ಪು ಸರಿಹೊಗದೇ ತಲೆ ತಿನ್ನುತ್ತಿತ್ತು, ತಲೆ ಬಿಸಿಯಾಗಿತ್ತು, ಅವಳೂ ರೇಜಿಗೆದ್ದಳು, "ರೀ ಮತ್ಯಾಕೆ ನನ್ನ ಎಬ್ಬಿಸಿದ್ದು, ಏನೀಗ ಟೀ ಬೇಕು ಅಷ್ಟೇ ತಾನೆ, ಈ ಆಫೀಸು ಮನೆಗೆ ಯಾಕೆ ತೆಗೆದುಕೊಂಡು ಬರುತ್ತೀರೊ" ಅಂತ ಬೈಯುತ್ತ ಎದ್ದು ಹೊದಿಕೆ ಕೂಡ ಮಡಿಚಿಡದೇ ಹೋದಳು... ಇತ್ತ ಏನೊ ಪ್ರಾಬ್ಲಮ ಸರಿ ಹೋಗುತ್ತಿಲ್ಲ ಅನ್ನೊ ತಲೆನೋವು, ಇವಳು ಬೇರೆ ಬೈದದ್ದು ಸೇರಿ ಮತ್ತಷ್ಟು ಟೆನ್ಷನ್‌ನಲ್ಲಿ ಬಂದೆ, ಏನೀಗ ನಾನೇನು ಟೀ ಬೇಕೆಂದು ಕೇಳಲಿಲ್ಲವಲ್ಲ, ತಾನೇ ಎಲ್ಲ ಕಲ್ಪಿಸಿಕೊಂಡು ನನ್ನ ಬೈಯುತಿದ್ದಾಳಲ್ಲ ಯಾರಿಗೆ ಬೇಕು ಇವಳ ಟೀ ಅಂತ ಮನಸಲ್ಲೇ ಬೈದುಕೊಂಡು ಮತ್ತೆ ಕೀಪ್ಯಾಡು ಕಿತ್ತು ಬರುವಂತೆ ಕುಟ್ಟತೊಡಗಿದೆ.

ಹೀಗೆ ಹೋದವಳು ಹತ್ತು ನಿಮಿಷದಲ್ಲಿ ಮತ್ತೆ ಹಾಜರಾದಳು, ಕೈಲಿ ಕಪ್ಪು ಟೀ ಇತ್ತು, ಸಾಸರು ಕಾಣಲಿಲ್ಲ, ತಂದು ಟೀಪಾಯಿ ಮೇಲಿಟ್ಟವಳೇ, ತೆಗೆದುಕೊಳ್ಳಲೂ ಹೇಳದೆ ಮತ್ತೆ ಹೊದಿಕೆ ಹೊಕ್ಕಳು. ಎಂದೂ ಕಪ್ಪು ಟೀ ಪೂರ್ತಿ ನನಗೇ ಕುಡಿಯಲು ಬಿಟ್ಟವಳಲ್ಲ, ಅವಳ ಸಾಸಿರಿಗೊಂದಿಷ್ಟು ಸುರಿಯಲೇಬೇಕು, ಅದನ್ನು ಹೀರಿ ನಗುವೊಂದು ಬೀರುವವಳು, ಇಂದೇನಿಲ್ಲ ಟೀಪಾಯಿ ಮೇಲಿಟ್ಟು ಮಾತಿಲ್ಲದೇ ಮಲಗಿದಳಲ್ಲ, ಅಂತ ಬೇಜಾರಾಯಿತು. ಯಾರಿಗೆ ಬೇಕು ಆ ಟೀ, ಸಿಟ್ಟಿನಿಂದ ಮಾಡಿ ತಂದಿಟ್ಟದ್ದು ಅಂತ ನಾ ಮೂಸಿ ಕೂಡ ನೋಡಲಿಲ್ಲ. ಟೀ ಅಲ್ಲೇ ಕುಳಿತಿತು, ನಾನಲ್ಲೇ ಕುಳಿತು ಹಾಗೆ ಕೆಲಸದಲ್ಲಿ ಮುಳುಗಿದೆ.

ಬಹಳ ಹೊತ್ತಿನ ನಂತರ ಎದ್ದವಳು, ಟೀಪಾಯಿ ಮೇಲಿದ್ದ ಟೀಯನ್ನು ನೋಡಿ ಹಾಗೆ ಎದ್ದು ಹೋದಳು, ಮಾತಿಲ್ಲ ಕಥೆಯಿಲ್ಲ... ಟೀ ಕಡೆ ನೋಡಿದರೆ ಅದು "ಕುಡಿಯೊ ಟೀ ಇಲ್ಲದಿರೆ ತಲೆನೊವು ಶುರುವಾಗುತ್ತೆ ನಿನ್ಗೆ" ಅಂತ ಬೈದಂತೆ ಭಾಸವಾಯಿತು, "ನೀ ಹೇಳಿದ್ರೆ ಕುಡಿಯಲಾಗುತ್ತಾ, ಹೇಳುವವರು ಹೇಳಬೇಕು" ಅಂತ ಅದನ್ನೇ ತಿರುಗಿ ಬೈದು, ಅದನಲ್ಲೇ ಬಿಟ್ಟು ಮೇಲೆದ್ದೆ. ಹಲ್ಲು ಉಜ್ಜಿ, ಮುಖ ತೊಳೆದು ಮುಖ ಒರೆಸಿಕೊಳ್ಳುತ್ತ, ಬಂದರೆ ಮತ್ತೆ ಲ್ಯಾಪಟಾಪನಲ್ಲಿ "ಟುಂಗ್ ಟುಂಗ್ ಟುಂಗ್..." ಅಂತ ಸದ್ದು ಬರುತ್ತಿತ್ತು ಅದೇ ಮತ್ತೆ ಯಾರೋ ಗೂಗಲ್ಲು ಟಾಕ್‌ನಲ್ಲಿ ಪಿಂಗ(ಮೆಸೇಜು) ಮಾಡುತ್ತಿರಬೇಕು, ಏನಾಯಿತು ಕೆಲಸ ಮುಗೀತಾ ಅಂದು. ಮತ್ತೆ ಕುಳಿತೆ...

ಮತ್ತೆ ಬಂದು ಮತ್ತೊಂದು ಸಾರಿ ಹಾಗೇ ವಿಚಿತ್ರವಾಗಿ ನೋಡಿದ್ದು, ಕಣ್ಣಿಗೆ ಕಣ್ಣು ಸೇರಿಸಿ ನೋಡಲಾಗದೆ ಮತ್ತೆ ತಲೆ ಕೆಳಗೆ ಮಾಡಿ ಕೆಲಸದಲ್ಲಿ ಮುಳುಗಿದೆ, ಏನೊ ಟಿಫಿನ್ನು ಮಾಡಿಟ್ಟಿರಬೇಕು, ಅವಳು ಯಾವುದೋ ಮನೆ ಫಂಕ್ಷನ್‌ಗೆ ಹೋಗುವವಳಿದ್ದು ನಿನ್ನೇನೆ ಹೇಳಿದ್ದಳಲ್ಲ, ಹೊರಟು ಹೋದ್ಲು. ಟಿಫಿನ್ನು ಮಾಡಬೇಕೆನಿಸಲಿಲ್ಲ, ಇನ್ನೂ ಟೀ ಕೂಡ ಹಾಗೆ ಕುಳಿತಿತ್ತು. ಈ ಕೆಲಸವೇ ಹೀಗೆ ಊಟ ತಿಂಡಿ ಏನೂ ಬೇಡ ಕೆಲಸ ಮುಗಿದರೆ ಸಾಕಪ್ಪ ಅನ್ನೋ ಹಾಗೆ ಮಾಡಿಬಿಡುತ್ತದೆ. ಆಫೀಸಿನಲ್ಲೂ ಹಾಗೆ ಟೀ ಕಾಫಿ ಕುಡಿಯುತ್ತ ಊಟವಿಲ್ಲದೇ ಹಲವು ಬಾರಿ ಕೆಲಸ ಮಾಡಿದ್ದಿದೆ. ಏನು ತಲೆ ಚಚ್ಚಿಕೊಂಡ್ರೂ ಇಂದು ಇದು ಮುಗಿಯುತ್ತಿಲ್ಲ.

ಮಧ್ಯಾಹ್ನ ಮೂರಾಗಿರಬೇಕು ತಲೆ ಸಿಡಿದು ಬರುವ ಹಾಗಾಗತೊಡಗಿತು, ಅಲ್ಲೇ ಸ್ವಲ್ಪ ಉರುಳಿದೆ, ರಾತ್ರಿ ಸರಿಯಾಗಿ ನಿದ್ದೆಯಿಲ್ಲ ಹಾಗೆ ಒಂದು ಜೊಂಪು ನಿದ್ದೆ ಹತ್ತಿತು. ಮತ್ತೆ ಮೊಬೈಲು ಚೀರತೊಡಗಿದಾಗಲೇ ಎಚ್ಚರವಾಗಿದ್ದು,

Copyright© Prabhuraj Moogi

ಅರೆನಿದ್ರೆಯಲ್ಲಿ ಎದ್ದು ಕೊಲೀಗು ಜತೆ ಮಾತಾಡುತ್ತಿದ್ದೆ ಇವಳು ಬಂದ್ಲು... ಕೊನೆಗೆ ಅವನ ಕೆಲಸವೂ ಮುಗಿದಿಲ್ಲ ನಾಳೆ ಆಫೀಸಿಗೇ ಹೊಗುತ್ತೇನೆ ಅಂದ, ಸರಿ ನಂದೂ ಅದೇ ಹಾಡು ನಾನೂ ಬರ್ತೇನೆ ಅಂದೆ ಇವಳೂ ಕೇಳಿಸಿಕೊಂಡ್ಲು. ಅಡುಗೆ ಮನೆಗೆ ಹೋಗಿ ನೋಡಿ ಬಂದಿರಬೇಕು ಟಿಫಿನ್ನು ಹಾಗೇ ಇದೆ, ಇಲ್ಲಿ ಟೀ ಹಾಗೆ ಕುಳಿತಿದೆ, ಅವಳಿಗೆ ನಾನೇನು ತಿಂದಿಲ್ಲ ಅಂತ ಗೊತ್ತಾಗಿತ್ತು. ಇನ್ನೂ ತಲೆ ನೋವು ಜಾಸ್ತಿಯಾಗಿತ್ತು... ಬಂದವಳೇ ಸಿಟ್ಟಿನಿಂದ "ಏನು ಮಾಡ್ತಿದೀರಾ, ನಿನ್ನೆಯಿಂದ ನೋಡ್ತಾ ಇದೀನಿ, ಆಫೀಸು ಕೆಲ್ಸ ಕೆಲ್ಸಾ ಅಂತಾ ಕೂತಿದೀರ, ಏನೂ ತಿಂದಿಲ್ಲ ಬೇರೆ, ಎನು ಮಾಡ್ತಿದೀರಾ ವಾರವೆಲ್ಲ ಕೆಲ್ಸ ಕೆಲ್ಸಾ ವಾರಾಂತ್ಯಕ್ಕದರೂ ಹೆಂಡತಿ ಮನೆ ಬೇಡವಾ, ಅಫೀಸನ್ನೆ ಮದ್ವೆ ಆಗಬೇಕಿತ್ತು" ಅಂತಾ ಬೈದ್ಲು "ಮತ್ತೆ ನಾಳೆ ಬೇರೆ ಆಫೀಸಿಗೆ ಹೋಗ್ತಾರಂತೆ" ಇನ್ನೂ ಏನೇನೊ ಅಂತಿದ್ಲು, ನನಗೋ ತಲೆ ಕಿತ್ತು ತೆಗೆದಿಡುವಂತಾಯಿತು, ಅರೆನಿದ್ದೆಯಲ್ಲಿ ಎದ್ದಿದ್ದೆ ಬೇರೆ, ಹೊಟ್ಟೇಲೇನಿಲ್ಲ, ಕೆಲಸ ಮುಗಿದಿಲ್ಲ, ನಾಳೆ ಬೇರೆ ರಜೆಯಿಲ್ಲ ಎಲ್ಲಾ ಸೇರಿ ಅವಳ ಮೇಲೆ ಹರಿಹಾಯ್ದುಬಿಡಬೇಕೆನಿಸಿತು, ಆದರೆ ಹಾಗೆ ಅಲ್ಲೇ ಉರುಳಿ, ನನ್ನ ತಲೆ ನಾನೇ ಒತ್ತಿಕೊಳ್ಳತೊಡಗಿದೆ. ಹೊರಗೆ ಹೋಗಿ ಅವಳೂ ಸುಮ್ಮನೆ ಕುಳಿತಿರಬೇಕು, ಮತ್ತೆ ಮಾತಿಲ್ಲ ಕಥೆಯಿಲ್ಲ... ನಿಶಬ್ದ ಹಿತವೆನಿಸಿತು.

ಮತ್ತೆ ಬಂದು ನೋಡಿ, ಪಕ್ಕದಲ್ಲಿ ಕುಳಿತು ತಲೆ ಒತ್ತಬೇಕೆಂದ್ಲು, ಅವಳ ಕೈ ನೂಕಿದೆ, "ಯಾಕೆ ಮಾತೆ ಆಡುತ್ತಿಲ್ಲ, ಸಿಟ್ಟಿದ್ದರೆ ಬೈದು ಬಿಡಿ, ಯಾಕೆ ಸುಮ್ಮನೇ ಇದ್ದು ಸತಾಯಿಸ್ತೀರಾ" ಅಂಥ ಭಾವನಾತ್ಮಕವಾಗಿ ಉಲಿದಳು, ಇನ್ನೂ ನಾನು ಮಾತಾಡದಿದ್ರೆ, ಅಷ್ಟೇ... ಅವಳ ನೋಡಿದೆ ಕಣ್ಣಲ್ಲೇ ಏನೆನೋ ಕೇಳುತ್ತಿದ್ಲು. ಉತ್ತರ ಮಾತ್ರ ನನ್ನಲ್ಲಿಲ್ಲ, ಅದರೂ ಮಾತನಾಡೋಣ ಅಂದು, "ಹಾಗೇನಿಲ್ಲ, ಸ್ವಲ್ಪ ಕೆಲ್ಸ ಬಹಳ ಇದೆ" ಅಂದೆ, ಅಷ್ಟೇ ಸಾಕಿತ್ತು ಅವಳಿಗೆ, ಏರಿ ಬಂದು ಕುಳಿತವಳೇ ಅವಳ ನೂಕದಂತೆ ಕೈ ಕಟ್ಟಿ ಹಾಕಿ ತಲೆ ಒತ್ತತೊಡಗಿಡಳು. ತಲೆ ಮೇಲೆ ಯಾರೋ ಕೀಬೊರ್ಡು ಕುಟ್ಟಿದಂತಾಗುತ್ತಿತ್ತು, ಅದರೂ ಏನೊ ಸುಖವೆನಿಸಿತು. ಅವಳ ಪ್ರಶ್ನೆಗಳಿನ್ನೂ ಮುಗಿದಿರಲಿಲ್ಲ, "ನಿಮಗೆ ಬಹಳ ಸಿಟ್ಟು ಬಂದಿದೆ ಅಲ್ವಾ, ಹೊರಗೆ ತೋರಿಸುತ್ತಿಲ್ಲ" ಅಂದ್ಲು, "ಹಾಗೇನಿಲ್ಲ" ಅಂದ್ರೆ "ಸುಳ್ಳು ಹೇಳ್ಬೇಡಿ" ಅಂತಂದ್ಲು. "ಹೌದು ಸಿಟ್ಟು ಬಂದಿದೆ ಈಗ, ಹಾಗಂತ ಯಾರನ್ನ ಬೈಯಲಿ, ಇಷ್ಟಕ್ಕೂ ಯಾರನ್ನು ಬೈದು ಏನು ಪ್ರಯೋಜನ, ನಿನಗೆ ಹೇಳಿದರೆ ಅರ್ಥವಾಗಲಿಕ್ಕಿಲ್ಲ ಬಿಡು" ಅಂದೆ "ತಾಳಿ, ಮೊದಲು ಊಟ ಆಮೇಲೆ ಮಾತು, ಅನ್ನ ಸಾರು ಮಾಡ್ತೇನೇ" ಅಂದ್ಲು, ಬೇಡ ಮುಂಜಾನೆ ಮಾಡಿಟ್ಟ ಟಿಫಿನ್ನು ಬಿಸಿ ಮಾಡಿದರೆ ಸಾಕು ಅಂದೆ, ಬಿಸಿಬಿಸಿ ಒಂದಿಷ್ಟು ಹೊಟ್ಟೆಗೆ ಬಿದ್ದ ಮೇಲೇ ಸ್ವಲ್ಪ ಹಾಯೆನಿಸಿತು.

ಮತ್ತೆ, ಲ್ಯಾಪಟಾಪ್ ಶುರು ಮಾಡಲು ಕೇಬಲ್ಗೆ ತಡಕಾಡುತ್ತಿದ್ದೆ, ಅವಳು ಬಂದ್ಲು "ಅದನ್ನ ತುಗೊಂಡು ಹೋಗಿ ಹೊರಗೆ ಎಸೆದು ಬರ್ತೀನಿ" ಅಂತ ಗದರಿದ್ಲು, ನಾ ನಕ್ಕೆ, "ಅಬ್ಬ ರಾಜಕುಮಾರ ಈಗ ನಕ್ಕ" ಅಂತ ಛೇಡಿಸಿದ್ಲು ಮತ್ತೆ ಮುಗುಳ್ನಕ್ಕೆ, "ಈಗ ಹೇಳಿ", ಅಂದ್ಲು ಏನು ಅನ್ನುವಂತೆ ನೋಡಿದ್ದಕ್ಕೆ "ಮುಂಜಾನೆಯಿಂದ ನಾನಿಷ್ಟು ಬೈದೆ, ಯಾಕೆ ನೀವೇನೂ ಅನ್ನಲಿಲ್ಲ" ಅಂದ್ಲು "ಓಹ್ ಅದಾ ಮೌನವ್ರತ ಮಾಡ್ತಾ ಇದ್ದೆ" ಅಂದೆ "ರೀ ಈಗ ಹೇಳ್ತೀರೊ ಇಲ್ವೊ" ಅಂತ ದುಂಬಾಲು ಬಿದ್ಲು. "ಮೊದಲು ನೀನು ಯಾಕೆ ಬೈದೆ ಅದನ್ನ ಹೇಳು" ಅಂದೆ "ನಾ ಬಯ್ಯಬಾರ್ದಿತ್ತು ಪ್ಚ್" ಅಂತ ಲೊಚಗುಟ್ಟಿದ್ಲು, "ಯಾಕೆ???" ನನ್ನ ಪ್ರಶ್ನೆ ಮತ್ತೆ ಬಿತ್ತು, "ಅಲ್ಲ ನಿನ್ನೆಯಿಂದ ನೋಡ್ತಿದೀನಿ ಒಂದೆ ಸಮನೆ ಕೆಲ್ಸ ಕೆಲ್ಸಾ, ಆರೋಗ್ಯ ಏನಾಗಬೇಡ, ವಾರವೆಲ್ಲ ಮನೆಯಲ್ಲಿ ನಾನೊಬ್ಬಳೇ ಈ ಗೋಡೆ ಕಿಡಕಿಗಳ ಜತೆ ಮಾತಾಡುತ್ತಿರಬೇಕು, ವಾರಂತ್ಯವಾದ್ರೂ ನನ್ನ ಜತೆ ಇರದೇ ಹೀಗೆ ಕೂತರೆ ನಾನಾದರೂ ಏನು ಮಾಡಲಿ, ನಿಮ್ಗೆ ಕೆಲಸದ ಮೇಲೆ ಪ್ರೀತಿ ಜಾಸ್ತಿ" ಅಂತ ಮನಬಿಚ್ಚಿ ಹೇಳಿದ್ಲು ಅವಳು ಹಾಗೆ ಮನಸಿನಲ್ಲಿ ಏನೂ ಇಟ್ಟುಕೊಳ್ಳಲ್ಲ, ಕಣ್ಣಲ್ಲಿ ಕಣ್ಣಿಟ್ಟು "ಏನು ನನಗೆ ಕೆಲಸದ ಮೇಲೆ ಪ್ರೀತಿ ಜಾಸ್ತಿನಾ?" ಅಂದೆ, ಸೀರೆ ಸೆರಗಿನ ತುದಿಯ ಚುಂಗ ತಿರುಗಿಸಿ ತೀಡುತ್ತ ನಾಚಿ "ಹಾಗೇನಿಲ್ಲಾ.." ಅನ್ನುತ್ತ ತಲೆ ಕೆಳಗೆ ಹಾಕಿದ್ಲು.

ನಾ ಹೇಳತೊಡಗಿದೆ "ನನಗೂ ಸಿಟ್ಟು ಬಂದಿದೆ ಹಾಗಂತ ನಿನ್ನ ಮೇಲೆ ಹಾರಾಡಿದೆ, ಕೂಗಾಡಿದೆ, ಅಂತ ಇಟ್ಕೊ, ಆಗ ನಾನೇನು ಸಾಧಿಸಿದೆ, ನಮ್ಮಿಬ್ಬರ ಸಂಭಂದ ಹಳಸುತ್ತೆ ಅಷ್ಟೇ, ಹೌದು ವಾರವೆಲ್ಲ ತಲೆ ತುರಿಸಿಕೊಂಡು ಕೆಲಸ ಮಾಡಿ ವಾರಂತ್ಯಕ್ಕೂ ಅದನ್ನೇ ಮಾಡಲು ನನಗೇನು ಹುಚ್ಚಾ, ಇಲ್ವಲ್ಲ. ಆದರೆ ಯಾಕೆ... ನನ್ನ ಕೆಲಸ ಹಾಗಿದೆ, ಪ್ರತೀ ಕ್ಷಣವೂ ಒತ್ತಡ, ತಲೆಬಿಸಿ, ಅದು ಇದ್ದದ್ದೆ. ಇತ್ತೀಚೆಗೆ ಅಭದ್ರತೆ ಕೂಡ ಕಾಡುತ್ತಿದೆ. ಆದರೆ ಇದು ನಾ ಆರಿಸಿಕೊಂಡ ವೃತ್ತಿ, ಅದರಲ್ಲೆ ಸಂತೋಷ ಕಾಣಬೇಕು, ನಾನು ಮಾಡುತ್ತಿರುವುದು ನಮ್ಮ ಕುಟುಂಬಕ್ಕಾಗಿಯೇ, ಗಳಿಸಿ ಸಿರಿವಂತನಾಗಲೇನಲ್ಲ ಇಷ್ಟಕ್ಕೂ ಈಗ ಈ ವಾರಂತ್ಯದ ಕೆಲಸಕ್ಕೆ ಎನು ಹೆಚ್ಚಿಗೆ ದುಡ್ಡು ಸಿಗುವುದಿಲ್ಲ, ಎಲ್ಲ ಕೆಲಸ ನಿರ್ಧಾರಿತ ಸಮಯದಲ್ಲಿ ಮುಗಿಸಲೇಬೇಕು, ಇಲ್ಲವೆಂದರೆ ಎಲ್ಲಿ ಕೆಲಸವಿಲ್ಲದಾದೀತೊ ಅನ್ನೊ ಭಯ, ಕೆಲವೊಮ್ಮೆ ಹೀಗೆ ಕೆಲಸ ಬರುವುದು ಸಹಜ ಆಗ ಹೊಂದಾಣಿಕೆ ಮುಖ್ಯ" ಅಂದೆ. ಅವಳಿಗೆ ಅರ್ಥವಾಯಿತೊ ಇಲ್ವೊ ಗೊತ್ತಿಲ್ಲ ಆದರೂ ನನ್ನ ಮನ ಹಗುರಾಯಿತು. "ಆದರೂ ಆರೋಗ್ಯದ ಕಡೆ ಗಮನ ಬೇಡವೇ" ಅಂದ್ಲು "ಅದು ಸರಿ ಅದಕ್ಕೆ ಬೈದು ಸರಿ ಮಾಡಲು ನೀನಿದ್ದೀಯಲ್ಲ, ನಿನ್ನ ಸಿಟ್ಟಿನ ಹಿಂದಿದ್ದದ್ದು ಕಾಳಜಿ ಅದಕ್ಕೇ ನಾ ಏನೂ ಅನ್ನಲಿಲ್ಲ" ಅಂದೆ. "ನಾಳೆ ಹೋಗಲೇಬೇಕಾ" ಅಂದ್ಲು, "ಈವತ್ತೂ ಹೋಗಬೇಕಿತ್ತು, ನಿನಗಾಗಿ ಕೆಲ್ಸ ಮನೆಗೆ ತಂದೆ, ಇಷ್ಟೆಲ್ಲ ರಾಧ್ಧಾಂತವಾಯಿತು" ಅಂದೆ. "ಸರಿ ಈಗ ಲ್ಯಾಪಟಾಪ ಬೇಕಾ,

Copyright© Prabhuraj Moogi
www.telprabhu.com

ಕೆಲ್ಸಾ ಮಾಡೋರಿದ್ರೆ ಮಾಡಿ ಕೊಡ್ತೀನಿ, ನಾ ಕಾಡಿಸಲ್ಲ" ಅಂದ್ಳು. "ಆ ಲ್ಯಾಪಟಾಪ ಎನೂ ಬೇಡ ಈ ಲ್ಯಾಪಟಾಪ ಬೇಕು" ಅಂತನ್ನುತ್ತ ಕೈ ಹಿಡಿದೆಳೆದೆ ತಟ್ಟನೆ ಜಿಗಿದು ಏರಿ ಬಂದು ನನ್ನ ಲ್ಯಾಪ ಮೇಲೆ ಕುಳಿತುಬಿಟ್ಳು. ಅವಳ ಹಣೆಗೆರಡು ಸಾರಿ ಕೀಬೊರ್ಡು ಕುಟ್ಟಿದಂತೆ ಮುಷ್ಟಿಯಿಂದ ಮೆಲ್ಲನೆ ಗುದ್ದು ಕೊಟ್ಟೆ. "ರೀ ತಲೆನೊವು ಕಡಿಮೆ ಆಯ್ತಾ" ಅಂದ್ಳು "ಇಲ್ಲ ಸ್ವಲ್ಪ ಇದೆ ಆದ್ರೂ ಪರವಾಗಿಲ್ಲ" ಅಂದದ್ದಕ್ಕೆ ಟೀ ಮಾಡಿ ತರಲಾ ಅಂದ್ಳು, ಪಕ್ಕದಲ್ಲಿ ನೋಡಿದ್ರೆ ಟೀಪಾಯಿ ಮೇಲೆ ಇನ್ನೂ ಮುಂಜಾನೆ ಅವಳು ಮಾಡಿ ತಂದಿಟ್ಟ ಕಪ್ಪು ಹಾಗೇ ಇತ್ತು, ಅದು "ಲೋ, ಮುಂಜಾನೆಯಿಂದ ಕಾಯ್ತಾ ಇದೀನಿ ಕುಡಿಯೋ ಬೇಗ, ನನ್ನ ಮೇಲೆ ಯಾಕೊ ನಿಂಗೆ ಸಿಟ್ಟು, ಇನ್ನೇನು ನನ್ನ ಬಿಸಿಯಿಲ್ಲ ಅಂತ ಬಚ್ಚಲಿಗೆ ಚೆಲ್ತೀರಾ ಬಿಡು" ಗೊಳಾಡುತ್ತಿದ್ದಂತೆ ಅನಿಸಿತು, ಪಾಪ ಅದೇ ಅಲ್ವಾ ನನ್ನ ಕೆಲ್ಸಕ್ಕೆ ಸ್ಫೂರ್ಥಿ, ತಾಜಾತನ ತುಂಬೊದು ಅದನ್ನ ಯಾಕೆ ಬೇಜಾರು ಮಾಡಿಸಲಿ ಅಂದು.  ಅವಳಿಗೆ ಅದನ್ನೇ ಎತ್ತಿ ಕೊಟ್ಟು ಬಿಸಿ ಮಾಡಿ ತಾ ಅಂದೆ, ಅವಳು ಮುಂಜಾನೆ ಮಾಡಿದ್ದು ಬೇಡ ಅಂದ್ಳು, ಅದೇ ಬೇಕು ಅಂತ ಹಟ ಹಿಡಿದೆ. "ಅದೇ ಬೇಕೆಂದರೆ ಆಗಲೇ ಕುಡಿಯಬೇಕಿತ್ತು, ಯಾಕೆ ಕುಡಿಯಲಿಲ್ಲ" ಅಂತ ಕೇಳಿದ್ಳು "ಅದರಲ್ಲಿ ಸಿಟ್ಟು ತುಂಬಿತ್ತು, ಪ್ರೀತಿಯಿರಲಿಲ್ಲ, ಈಗ ಪ್ರೀತಿಯಿಂದ ಬಿಸಿ ಮಾಡಿ ತಾ ಕುಡಿಯುತ್ತೇನೆ" ಅಂದೆ. "ಇಂಥ ಮಾತುಗಳಿಗೇನು ಕಮ್ಮಿಯಿಲ್ಲ" ಅಂತನ್ನುತ್ತ ಬಿಸಿ ಮಾಡಲು ಪಾಕಶಾಲೆಗೆ ಹೋದ್ಳು, ಇತ್ತ ಕೊಲೀಗು ಫೋನು ಮಾಡಿ ಯಾವುದೋ ಪ್ರಾಬ್ಲಂ ಒಂದು ಹೇಳಿದೆ, ಮತ್ತೆ ಲ್ಯಾಪಟಾಪ ತೆಗೆದು ಕುಳಿತೆ. ಈ ಸಾರಿ ಸಾಸರಿನೊಂದಿಗೆ ಬಿಸಿಬಿಸಿ ಟೀ ಬಂತು, ಸಾಸರಿಗೆ ಹಾಕಲ್ಲ ಅಂದ್ರೆ ಕಸಿದುಕೊಂಡು ತಾನೇ ಹಾಕಿಕೊಂಡು ನನಗೊಂದಿಷ್ಟು ಕೊಟ್ಟು ತಾನೂ ಗುಟುಕರಿಸಿದಳು. ಟೀ ಬಹಳ ರುಚಿಯಾಗಿತ್ತು, ಪ್ರೀತಿ ಸ್ವಲ್ಪ ಜಾಸ್ತಿಯಾಗಿತ್ತು ಅಂತ ಕಾಣುತ್ತದೆ.

ಮತ್ತೆ ಹುಮಸ್ಸಿನಿಂದ ಕೆಲಸಕ್ಕೆ ಶುರು ಮಾಡಿದೆ, ಇವಳೂ ನಡು ನಡುವೆ ಮೂಗು ತೂರಿಸುತ್ತಿದ್ಲು, "ಇಂಟ" ಅಂದ್ರೇನು, "ಕ್ಲಾಸ್" ಅಂದ್ರೇನು(ಕಂಪ್ಯೂಟರ ಪ್ರೋಗ್ರಾಮುಗಳಲ್ಲಿ ಬರುವ ಪದಗಳು). ಎರಡನೇ ಕ್ಲಾಸು ಮೂರನೇ ಕ್ಲಾಸು ಅಂತ ಮಕ್ಕಳು ಹೋಗ್ತಾರಲ್ಲ ಶಾಲೆಗೆ... ಅದಾ ಅಂತ ಗೊತ್ತಿದ್ದರೂ ಶುದ್ಧ ತರಲೆ ಪ್ರಶ್ನೆಗಳನ್ನು ಕೇಳುತ್ತಲೇ ಇದ್ಲು, ಅವಳಿಗೆ ತರಲೇ ಉತ್ತರಗಳ ಕೊಡುತ್ತ ಕೆಲಸ ಮುಗಿದದ್ದೇ ಗೊತ್ತಾಗಲಿಲ್ಲ, ನಾಳೆ ಒಂದೆರಡು ಗಂಟೆ ಆಫೀಸಿಗೆ ಹೋಗಿ ಬಂದರಾಯಿತು, ಬಹಳ ಇಲ್ಲ ಇನ್ನು ಅಂದದ್ದಕ್ಕೆ ಖುಷಿಯಾದ್ಳು. "ಕಂಪ್ಯೂಟರಿನ ಪ್ರೋಗ್ರಾಮುಗಳ ಮಾಡಿದ್ದು ಸಾಕು ಇನ್ನು ನಾಳೆ ನಮ್ಮದೇನು ಪ್ರೋಗ್ರಾಮು" ಅಂದೆ...  "ಬರೀ ಪ್ರೋಗ್ರಾಮು ಅಂತ ಕೆಲ್ಸ ಮಾಡಿ ಮಾಡಿ ಸಾಕಾಗಿಲ್ವಾ, ನಾಳೇನು ಪ್ರೋಗ್ರಾಮು ಇಲ್ಲ ಮನೆಯಲ್ಲೇ ರೆಸ್ಟು" ಅಂದ್ಳು, ಕೆಲಸವಂತೂ ಮುಗಿದಿತ್ತು, ಬಹಳ ಖುಶಿಯಾಗಿತ್ತು ಅವಳೊಂದಿಗೆ ತರಲೆಗಿಳಿದೆ, "ರೀ ನಿನ್ನೇನೂ ನಿದ್ದೆಯಿಲ್ಲ ಮಲಗಿ" ಅಂತ ಬಯ್ಯುತ್ತಿದ್ಲು,  ಅವಳ ಮಾತಿನ ತಾಳಕ್ಕೆ ತಕ್ಕಂತೆ ಮತ್ತೆ ಲ್ಯಾಪಟಾಪನಲ್ಲಿ ಗೂಗಲ್ಲು ಟಾಕನ ಮೆಸ್ಸೆಜುಗಳ ಸದ್ದು "ಟುಂಗ್ ಟುಂಗ್ ಟುಂಗ್..." ಎಂದು ಬರುತ್ತಲೇ ಇತ್ತು (ಮತ್ತೆ ಯಾವುದೊ ಪ್ರಾಬ್ಲಂ ಕೊಲೀಗು ಕಳಿಸುತ್ತಿರಬೇಕು) ನಾನು ಅವಾವುದರ ಅರಿವಿಲ್ಲದಂತೆ ಅವಳ ಮಡಿಲಲ್ಲಿ ನಿದಿರೆಗೆ ಜಾರುತ್ತಿದ್ದೆ... ಮತ್ತೆ ಮುಂಜಾನೆ ಎದ್ದರೆ ಅದೇ... ಕೆಲಸ ಇದೆಯಲ್ಲ ಹಾಗೂ ಕೆಲಸದ ನಡುವೆ ಇವಳ ಕೀಟಲೆಯೂ ಇದೆಯಲ್ಲಾ...

Copyright© Prabhuraj Moogi
www.telprabhu.com

## ಹಸಿರು ಕಾನನದೂರಿನಿಂದ...

"ರೀ ಇಲ್ಲಿ ನೋಡ್ರಿ ಕಂಪನಿಗಳೂ ಕೆಲಸಗಾರರಿಗೆ ಲವ್ ಲೆಟರ ಕೊಡ್ತಿವೆ, ಪಿಂಕ್ ಸ್ಲಿಪ್ ಅಂತೆ" ಅಂತ ಚೀರಿದ್ಲು, ಕುಡಿಯುತ್ತಿದ್ದ ನೀರು ಗಂಟಲಿನಲ್ಲೇ ಸಿಕ್ಕಿಕೊಂಡು ಕೆಮ್ಮುತ್ತ ಹೊರಗೋಡಿ ಬಂದೆ... "ಲೇ ಎನೇ ಹೇಳ್ತಿದೀಯಾ" ಅಂದ್ರೆ "ಅದೇ ಪಿಂಕ್ ಚಡ್ಡಿ ಅಂತ ಇಷ್ಟು ದಿನಾ ಅದೇನೊ ಲವರ್ಸ್ ಡೇ ವಿರುಧ್ಧ ಮಾಡಿದರಲ್ಲ ಹಾಗೆ ಪಿಂಕ್ ಸ್ಲಿಪ್ ಅಂತ ಎನೋ ಮಾಡ್ತಿದಾರ್ರೀ" ಅಂದ್ಲು. "ಹೂಂ ಪ್ರೀತಿಯಿಂದ ಮನೆಗೆ ಹೋಗಿ ಅಂತ ಹೇಳ್ತಿದಾರೆ" ಅಂದೆ "ಓಹ್ ರಜೇನಾ, ನಿಮಗೂ ಸಿಗುತ್ತಾ" ಅಂದ್ಲು "ಹೂಂ ಅದೊಂಥರಾ ಪರಮನಂಟ್ ರಜೆ" ಅಂದೆ. ಕೈಲಿದ್ದ ಪತ್ರಿಕೆ ಅಲ್ಲೇ ಬೀಸಾಡಿ ಹತ್ತಿರ ಬಂದು ಕೂತು "ಎನ್ರೀ ಇದು, ನನಗೊಂದೂ ಅರ್ಥ ಆಗ್ತಿಲ್ಲ" ಅಂದ್ಲು. "ಎನ್ ಮಾಡೋದು ಕೆಲ್ಸ ಇಲ್ಲ ಮನೆಗೆ ಹೊಗಿ ಅಂತ ಹೊರದಬ್ಬತಾ ಇದಾರೆ, ಅದೇ ಪಿಂಕ ಸ್ಲಿಪ್ಪು ಅಂದೆ" "ಹಾಳಾದೋರಿಗೆ, ಕಲರು ಪಿಂಕೇ ಬೇಕಿತ್ತಾ, ರೆಡ್ಡು ಸ್ಲಿಪ್ಪು ಅನ್ನೊಕೇನಾಗಿತ್ತು" ಅಂತ ಬೈಕೊಂಡು ಒಳಗೆ ಹೋದವಳು ಮತ್ತೆ ಬಂದ್ಲು, "ಅಂದ ಹಾಗೆ ಕಂಪನಿಗಳಿಗೆ ಇಷ್ಟೊಂದು ಪ್ರೀತಿ ಯಾಕೆ ಬಂತು' ಅಂತ ಅಂದಿದ್ದಕ್ಕೆ "ಅದೊಂದು ದೊಡ್ಡ ಕಥೆ ಬಿಡು" ಅಂದ್ರೆ "ಓಹ್ ಕಥೇನಾ, ರೀ ಹೇಳ್ರಿ ಅದನ್ನ ಪ್ಲೀಜ" ಅಂಥ ಗೋಗರೆದಳು. "ಮುಂದೆ ಎನ್ ಕಥೆ ಅಂತ ನಾ ಕೂತಿದ್ದರೆ ಇವಳದೊಂದು ಕಥೆಯಾಯ್ತು" ಅಂತ ಬೈದಿದ್ದಕ್ಕೆ ಮುನಿಸಿಕೊಂಡು ಕೂತ್ಲು. ಇನ್ನು ಹೇಳದಿದ್ರೆ ಅಷ್ಟೇ ಇವಳು ಪಟ್ಟು ಸಡಲಿಸಲೊಳ್ಳಲು ಅಂತ "ಆಯ್ತು ಹೇಳ್ತೀನಿ ಕೇಳು" ಅಂತಿದ್ದಂಗೆ ಮಗ್ಗಲು ಬಂದು ಮಗುವಿನಂತೆ ಕೂತು ಕೂತಹಲಭರಿತ ಕಣ್ಣುಗಳನ್ನು ನನ್ನೆಡೆಗೆ ನೆಟ್ಟಳು. "ಒಂದಾನೊಂದು ಕಾಲದಲ್ಲಿ..." ಶುರುವಿಟ್ಟುಕೊಳ್ಳುತ್ತಿದ್ದಂತೆ "ರೀ ಕೆಲಸದ ಕಥೆ ಹೇಳು ಅಂದ್ರೆ ಇದೇನ್ರಿ ಅಡಗೂಲಜ್ಜಿ ಕಥೆ ಹೇಳ್ತಿದೀರಾ" ಅಂತ ಬಾಯಿ ಬಿಟ್ಲು. "ನಾ ಹೇಳಲ್ಲ ಹೋಗೇ, ನಡುನಡುವೆ ಬಾಯಿ ಹಾಕ್ತಿಯಾ ನೀನು, ಕಥೆ ಅಂದ್ರೆ ಒಂದಾನೊಂದು ಕಾಲದಲ್ಲೇ ಶುರುವಾಗೊದು" ಅಂತ ಸಿಡುಕಿದೆ. "ಪ್ಲೀಜ್ ಪ್ಲೀಜ ಹೇಳಿ" ಅಂತ ಕೊರಳಿಗೆ ಜೋತು ಬಿದ್ಲು. ಹೀಗೊಮ್ಮೆ ಸಿಟ್ಟಿನಿಂದ ನೋಡಿದೆ... "ಒಕೇ, ಒಕೇ, ನಡುವೆ ಮಾತಾಡಲ್ಲ, ಆಮೇಲೆ ಮಾತಾಡ್ತೀನಿ," ಅಂತ ಬಾಯಿ ಮೇಲೆ ಬಟ್ಟಿಟ್ಟುಕೊಂಡು ಕೂತ್ಲು.

ಅದೊಂದು ಹಳ್ಳಿಯೂರು, ಹಸು ಕರುಗಳು ಹಾಯಾಗಿ ಒಡಾಡಿಕೊಂಡಿದ್ದವು, ಹಸಿರು ಮೇಯಲು ಅಷ್ಟಕ್ಕಷ್ಟೇ ಇತ್ತು, ಮಳೆ ಬಂದರೆ ಜೊಳ ರಾಗಿ ಬೆಳೆದರೆ ಹೆಚ್ಚು, ಊಟ ಒಪ್ಪತ್ತು ಆದರೂ ಚೆನ್ನಾಗಿತ್ತು. ಅದೊಂದು ದಿನ ಹಸಿರು ಕಾನನದೂರಿನಿಂದ ಕೆಲವರು ಬಂದರು, ಇಲ್ಲಿನ ಹಸು ಕರುಗಳು ಚೆನ್ನಾಗಿವೆ, ಚೆನ್ನಾಗಿ ತಿನಿಸಿದರೆ ಹಾಲು ಹೆಚ್ಚು ಕೊಡುತ್ತವೆ, ಅಂದರು. ನಮ್ಮಲ್ಲಿ ಹಸಿರಿದೆ ಹಸುಗಳಿಲ್ಲ, ನಿಮ್ಮ ಹಸುಗಳಿಗೆ ನಾವು ಹಸಿರು ಹುಲ್ಲು ಕೊಡುತ್ತೇವೆ ನಮಗೆ ನಿಮಗೆ ಹಾಲು ಹಂಚಿಕೊಳ್ಳೋಣ ಅಂದರು. ಹಸುಗಳಿಗೂ ಹುಲ್ಲಿನ ಬಗ್ಗೆ ಕೇಳಿ ಬಾಯಲ್ಲಿ ನೀರೂರಿತು, ಒಣ ದಂಟು ಸೊಪ್ಪು ತಿಂದ ದನಗಳು ಹಸಿರು ಹುಲ್ಲು ತಿನ್ನಲು ತುದಿಗಾಲಿನ ಮೇಲೆ ನಿಂತವು.

ಒಂದು ದೊಡ್ಡಿ(ದನದಮನೆ, ದನ ಕರು ಕಟ್ಟುವ ಜಾಗ) ಶುರುವಾಯಿತು, ಹಸಿರು ಕಾನನದೂರಿನಿಂದ ಹುಲ್ಲು ಬಂತು, ಹುಲ್ಲಿನೊಂದಿಗೆ ಎರಡು ಹಸುಗಳೂ ಬಂದವು. **ಅವು ಹುಚ್ಚೆದ್ದು ಹುಲ್ಲು ತಿನ್ನುತ್ತಿದ್ದವು ಹಂಡೆಗಟ್ಟಲೆ ಹಾಲು ಕರೆಯುತ್ತಿದ್ದವು.** ಅವನ್ನು ನೋಡಿ ಹಳ್ಳಿಯೂರಿನ ಹಸುಗಳು ಅವ್ವಾಕ್ಕಾದವು. ಹೆದರಿದ ಕೆಲವು ಹಸುಗಳು ದೊಡ್ಡಿ ಸೇರಲಿಲ್ಲ, ಕೆಲವು ಹಸಿರು ಹುಲ್ಲಿನಾಸೆಗೆ ಸೇರಿದವು. ಹಳ್ಳಿಯೂರಿನ ಹಸುಗಳಿಗೆ ಒಂದಿಷ್ಟು ಹುಲ್ಲು ಹಾಕಿದರು ಮೊದಮೊದಲು ಕಡಿಮೆ ಹಾಲು ಕರೆದರೂ, ಬರಬರುತ್ತಿದ್ದಂತೆ ಪೈಪೊಟಿಯಲ್ಲಿ ಹಾಲು ಕರೆಯತೊಡಗಿದವು. ಹಸಿರು ಕಾನನದೂರಿನವರು ಖುಶಿಯಾದರು ಕಡಿಮೆ ಹುಲ್ಲಿಗೆ ಹೆಚ್ಚು ಹಾಲು ಕರೆಯುವ ಹಸುಗಳಿಗೆ ಮೆಲ್ಲನೆ ಮೈ ಸವರಿ ಮತ್ತಷ್ಟು ಹುಲ್ಲು ಸುರಿದರು. ಅವರೆಷ್ಟು ಸುರಿದರೂ ಅದು ಹಸಿರು ಕಾನನದೂರಿನ ಹಸುಗಳಿಗಿಂತ ಕಡಿಮೆಯೇ. ಹಳ್ಳಿಯೂರಿನ ಹಸುಗಳು ಮತ್ತಷ್ಟು ಖುಶಿಯಾಗಿ ಹಾಲು ಕರೆದವು, ಹಸಿರು ಕಾನನದೂರಿನ ಹಸುಗಳು ಎರಡೇ ಎರಡು ಹೊತ್ತು ಸರಿಯಾಗಿ ಹಾಲು ಕರೆದರೆ, ಹಳ್ಳಿಯೂರಿನ ಹಸುಗಳು ಹಗಲು ರಾತ್ರಿಯೆನ್ನದೆ ಹಾಲು ಕರೆದವು. ಅವರು ಮತ್ತಷ್ಟು ಖುಶಿಯಾಗೆ ಒಮ್ಮೊಮ್ಮೆ ಹುಲ್ಲಿನೊಂದಿಗೆ ಧಾನ್ಯವನ್ನೂ ಹಾಕಿದರು ಅದರ ರುಚಿ ಹಚ್ಚಿಸಿದರು, ಧಾನ್ಯ ಬೇರೆ ಸಿಗುತ್ತದೆಂದು ಗೊತ್ತಾಗಿ ಹಸುಗಳು ಮತ್ತಷ್ಟು ಕರೆದವು.

ಹಸಿರು ಹುಲ್ಲು, ಧಾನ್ಯ ತಿಂದು ತಿಂದು ದೊಡ್ಡಿಯ ಹಸುಗಳು ದಷ್ಟಪುಷ್ಟವಾದವು, ಅವುಗಳ ನೋಡಿ ಮತ್ತಷ್ಟು ಹಸುಗಳು ದೊಡ್ಡಿ ಸೇರಲು ಬಂದವು, ಹೀಗೇ ಒಂದಿದ್ದ ದೊಡ್ಡಿ ಹತ್ತು ಹದಿನೈದು ದೊಡ್ಡಿಗಳಾದವು. ದೊಡ್ಡಿ ಸೇರುವ ಹಸುಗಳೂ ಹೆಚ್ಚಾದವು, ಹಸುಗಳಿಗೆ ದೊಡ್ಡಿ ಸೇರಲು ಮಾನದಂಡಗಳು ಜಾರಿಗೆ ಬಂದವು ಇಂತಿಷ್ಟು ಹಾಲು ಕರೆದರೆ ಮಾತ್ರ ಸೇರಿ ಅಂತ ಹೇಳಲಾಯ್ತು, ಹಸುಗಳು ಹಾಲು ಕರೆಯುವ ತರಬೇತಿ ಪಡೆಯತೊಡಗಿದವು, ಅದನ್ನು ಕಲಿಸುವ ಹಲವು ತರಬೇತಿ

ಸಂಸ್ಥೆಗಳು ತಲೆಯೆತ್ತಿದವು. ಮಾಲೀಕರು ತಮ್ಮ ತಮ್ಮ ಹಸುಗಳನ್ನು ಅಲ್ಲಿ ಸೇರಿಸಿದರು, ಕಡಿಮೆ ಹುಲ್ಲು ತಿಂದು ಹೆಚ್ಚು ಹಾಲು ಕರೆಯುವ ಹಸುಗಳು ತಯ್ಯಾರಾದವು.

ಹಸುಗಳು ಹೆಚ್ಚು ಹುಲ್ಲು ಕೊಡುವ ದೊಡ್ಡಿಗೆ ಸೇರತೊಡಗಿದವು, ದೊಡ್ಡಿಗಳು ಪೈಪೊಟಿಗಿಳಿದು ನಾ ಹೆಚ್ಚು ನೀ ಹೆಚ್ಚು ಅಂತ ಹುಲ್ಲು ಕೊಡತೊಡಗಿದರು. ಹಸುಗಳೂ ದೊಡ್ಡಿಯಿಂದ ದೊಡ್ಡಿಗೆ ಜಿಗಿದಾಡಿದವು. ಹಸು ಹಿಡಿದು ಕೊಡುವ ಕಮೀಷನ್ನು ಏಜೆಂಟ್ರು ತಯ್ಯಾರಾದರು, ಹೆಚ್ಚು ಹಾಲು ಕರೆಯುವ ಹಸುಗಳನ್ನು ಹಿಡಿದು ತಂದು ದೊಡ್ಡಿಗೆ ದೂಡಿದರು. ಹಸುಗಳನ್ನು ಹುಲ್ಲುಗಾವಲಿಗೆ, ಹುಲ್ಲುಗಾವಲಿನಿಂದ ದೊಡ್ಡಿಗೆ ಸಾಗಿಸಲು ಗಾಡಿಗಳು ಬಂದವು, ಹಸು ಸಾಗಿಸುವ ಗಾಡಿಗಳ ಮಾಡಿ ಕೆಲವರು ಜೀವನ ಮಾಡಿದರು. ಹಸುಗಳನ್ನು ಅಲಂಕರಿಸಲು ಅಂಗಡಿಗಳು ಬಂದವು, ಅವುಗಳು ಕೋಡುಗಳಿಗೆ ಬಣ್ಣ ಬಳಿದದ್ದೇನು, ಬಾಲದ ಕೂದಲು ಕತ್ತರಿಸಿದ್ದೇನು, ಬಲು ಅಂದದಿ ಅವು ಬಳಕುತ್ತ ನಡೆದದ್ದೇನು. ಹಸುಗಳ ಹಾಲಿನ ಡೇರಿಗಳನ್ನು ಕೆಲವರು ತೆರೆದು ಲಾಭ ಮಾಡಿಕೊಂಡರೆ, ಕೆಲವರು ಹಾಲು ಕರೆದು ಬೇಸತ್ತ ಹಸುಗಳಿಗೆ ಸ್ವಚ್ಛಂದವಾಗಿ ತಿರುಗಾಡಲು ಪಾರ್ಕು ಕಟ್ಟಿದರು. ದೊಡ್ಡಿಯವರೂ ಹಸುಗಳನ್ನು ತಿಂಗಳು ಎರಡು ತಿಂಗಳಿಗೊಮ್ಮೆ ಇಂಥ ಪಾರ್ಕುಗಳಿಗೆ ಕರೆದೊಯ್ದರು. ಹಿರಿ ಹಿರಿ ಹಿಗ್ಗಿದ ಹಸುಗಳು ಇನ್ನಷ್ಟು ಹಾಲು ಕರೆದವು.

ಹಸುವಿಗೆ ಆರೋಗ್ಯ ಸರಿಯಿಲ್ಲದಿರೆ ನೋಡುವ ಡಾಕ್ಟರುಗಳು, ಗೆಜ್ಜೆ ಗಂಟೆ ಮಾರುವ ಅಂಗಡಿಗಳು, ಕಾಲಿಗೆ ನಾಲು ಬಡೆಯುವ ಜನರು, ಅವುಗಳಿಗೆ ಕುಡಿಯಲು ನೀರು ಸರಬರಾಜು ಮಾಡಲು ಟ್ಯಾಂಕರುಗಳು, ಕುಣಿಕೆ, ಕಟ್ಟುವ ಹಗ್ಗಗಳ ತಯ್ಯಾರಿಸುವವರು, ಕೊನೆಕೊನೆಗೆ ಅವು ಹಾಕಿದ ಸಗಣಿಯ ಬೆರಣಿ ತಟ್ಟಿ ಲಾಭ ಮಾಡಿಕೊಂಡರು. ಹೀಗೆ ಬೇರೆಯೂರಿಂದ ಮತ್ತಷ್ಟು ಹಸುಗಳು ಬಂದವು, ಆ ಹಸುಗಳು ತಂಗಲು ಇನ್ನಷ್ಟು ದೊಡ್ಡಿಗಳಿಗೆ ಜಾಗ ಮಾರಾಟವಾದವು. ಒಟ್ಟಿನಲ್ಲಿ ಹಸುಗಳ ಹಾಲಿನ ಕ್ರಾಂತಿಯಾಯಿತು, ಸರಕಾರ ಹಾಲಿನ ಮೇಲೆ ಸುಂಕ ಹೇರಿ ತೃಪ್ತಿಪಟ್ಟಿತು, ಕೆಲ ಪೇಪರು, ಪತ್ರಿಕೆಗಳು ಹಸುಗಳನ್ನು ಕೊಂಡಾಡಿದವು. **ನಮ್ಮ ಹಸು ಇಷ್ಟು ಹುಲ್ಲು ತಿನ್ನುತ್ತದೆ, ನಮ್ಮದು ಇಷ್ಟು ಹೊರೆ ತಿನ್ನುತ್ತದೆ, ನಮ್ಮದು ಹತ್ತು ಲೀಟರು ಹಾಲು ಕರೆಯುತ್ತದೆ, ಒಹ್ ನಿಮ್ಮದು ಆರೇ ಲೀಟರಾ...** ಅನ್ನೊ ಮಾತುಗಳು ಹೆಚ್ಚಾದವು ಹಸುಗಳು ಹೆಮ್ಮೆಯಿಂದ ಹಿರಿ ಹಿಗ್ಗಿದವು, ಗೂಳಿಯಂತೆ ಹೂಂಕರಿಸಿದವು, ದೊಡ್ಡಿ ಸೇರದ ಹಸುಗಳ ಮುಂದೆ ಹೊಟ್ಟೆಕಿಚ್ಚುಪಡುವಂತೆ ಒಡಾಡಿದವು. ಕೆಲವು ಹಸುಗಳನ್ನು ಆರಿಸಿ ಹಸಿರು ಕಾನನದೂರಿಗೆ ಕಳಿಸಲಾಯಿತು, ಹಸಿರು ಕಾನನದಲ್ಲಿ ಸುತ್ತಿ ಕೆಲವು ಮರಳಿ ಬಂದರೆ ಕೆಲವು ಅಲ್ಲೇ ಯಾವುದೊ ದೊಡ್ಡಿ ಸೇರಿ ಸೆಟಲ್ಲು ಆದವು. ಅಲ್ಲಿ ಹೋಗಿ ಬಂದ ಹಸುಗಳು ಇಲ್ಲಿನ ಹಸುಗಳಿಗೆ ಅದರ ವರ್ಣನೆ ಮಾಡಿದ್ದೇ ಮಾಡಿದ್ದು, ಅಷ್ಟೊಂದು ಝರಿಗಳಿಗೆ, ಜಲಪಾತಗಳಿವೆ ಅಲ್ಲಿ, ಜುಳು ಜುಳು ಹರಿವ ಸ್ಪಟಿಕದಂತೆ ಶುಧ್ಧ ನೀರಿನ ಹರಿವುಗಳಿವೆ, ಹಸಿರು ತುಂಬಿ ತುಳುಕುತ್ತಿದೆ, ಹಸಿರು ಬಿಡಿ ಹೂವು ಪುಷ್ಪಗಳ ಬನಗಳಿವೆ, ಬಣ್ಣ ಬಣ್ಣದ ಕಾಮನ ಬಿಲ್ಲು ಕಾಣುತ್ತೆ ಅಂತನ್ನುವ ಹಲವು ಬಣ್ಣದ ಕಥೆಗಳ ಹೇಳಿದವು. ಹಸುಗಳ ಕಣ್ಣ ತುಂಬ ಹಸಿರು ಕಾನನದೂರಿನ ಕನಸುಗಳೆ ತುಂಬಿಕೊಂಡವು. ಹಸುಗಳಿಗೆ ಕಾನನದೂರಿಗೆ ಹೋಗಲು ಕಾನೂನುಗಳದವು, ದೊಡ್ಡಿ ಮಾಲೀಕರು ತಮ್ಮತಮ್ಮ ಹೆಚ್ಚು ಹಾಲು ಕರೆಯುವ ಹಸುಗಳನ್ನು ಸುತ್ತಾಡಿಸಿಕೊಂಡು ಬಂದರು. ಹಳ್ಳಿಯೂರಿನಿಂದ, ಹಸಿರು ಕಾನನದೂರಿಗೆ ದೊಡ್ಡ ದೊಡ್ಡ ಪೈಪುಗಳನ್ನು ಹಾಕಿದರು, ಇಲ್ಲಿ ಹಾಲು ಕರೆದರೆ ಅಲ್ಲಿ ಬೀಳುವಂತೆ ವ್ಯವಸ್ಥೆ ಮಾಡಿದರು. ಅಲ್ಲಿ ಕುಳಿತೆ ಇಲ್ಲಿನ ಹಸುಗಳ ಹಾಲು ಕರೆಯುವಂತೆ ವ್ಯವಸ್ಥೆಗಳಾದವು. ಹಾಲು ಕರೆಯುವ ಮಶೀನುಗಳು ಬಂದವು, ಹುಲ್ಲು ಕತ್ತರಿಸಲು, ಹಂಚಲು, ಎಲ್ಲ ಮಶೀನುಗಳು ಹಸಿರು ಕಾನನದೂರಿನಿಂದ ಬಂದವು. ಎಲ್ಲರೂ ಹಾಲು ಕರೆದರೇ ಹೊರತು ಯಾರೂ ಹುಲ್ಲುಗಾವಲು ಬೆಳೆಸಲಿಲ್ಲ, ಹಾಲು ಕರೆಯುವ ಮಶೀನು ತಂದರೇ ಹೊರತು ತಯಾರಿಸಲಿಲ್ಲ... ಹೇಗೊ ಇದ್ದ ಹಳ್ಳಿಯೂರು ಹೇಗೊ ಬದಲಾಗಿ ಹೋಯಿತು.

ಹುಲ್ಲು ಬಂದು ಬೀಳುವುದು, ಹಸುಗಳು ಕರೆದ ಹಾಲು ಅಲ್ಲಿಗೆ ಹೋಗುವುದು, ಅಲ್ಲಿಂದ ಮತ್ತೆ ಹಾಲಿನ ಹಲವು ಉತ್ಪನ್ನಗಳಾಗಿ, ಮೊಸರು, ಮಜ್ಜಿಗೆ, ಬೆಣ್ಣೆ ತುಪ್ಪ ಬಂದವು, ಇಲ್ಲೂ ತಯ್ಯಾರಾದವು, ಖೋವ, ಪೇಡೆ, ಕುಂದಾ, ಹಲ್ವಾ, ಹಾಲಿನ ಪುಡಿ, ಕೆನೆ, ಕುಲ್ಫಿಗಳು ಒಂದೊ ಎರಡೊ ಸಾಕಷ್ಟು ಬಂದವು, ಎಲ್ಲರೂ ತಿಂದರು ತೃಪ್ತಿಪಟ್ಟರು. ಬೇಡಿಕೆ ಹೆಚ್ಚಾಯಿತು ಹಸುಗಳು ಹಾಲು ಹೆಚ್ಚು ಹೆಚ್ಚು ಕರೆಯಬೇಕಾಯಿತು, ಹಾಲು ಹಿಂಡಿ ಹೀರಿ ಹಿಪ್ಪೆಯಂತಾದವು, ಬೇರೆ ಗತ್ಯಂತರವಿಲ್ಲದೆ ಒತ್ತಡದಲ್ಲಿ ಹಾಲು ಹಿಂಡಿ, ಹಾಲಿನೊಟ್ಟಿಗೆ ರಕ್ತ ಹಿಂಡಿದವು. ಹಳೆಯ ಹಸುಗಳನ್ನು ಕಸಾಯಿಖಾನೆಗೆ ದೂಡಲಾಯಿತು. ಮತ್ತೆ ಹೊಸ ಹಸುಗಳು ಅಲ್ಲಿ ತುಂಬಿಕೊಂಡವು. ಹೊಸ ಹಸುಗಳೂ ಹುರುಪಿನಿಂದ ಹಾಲು ಕರೆದವು ಕುಣಿದು ಕುಪ್ಪಳಿಸಿದವು, ಜಂಬದಿಂದ ಜಿಗಿದಾಡಿದವು, ಹಸುಗಳ ಹಾರಾಟ ಹೆಚ್ಚಾಯಿತೆಂದು ಹಲವರು ತಗಾದೆ ತೆಗೆದರು, ಹೀಯಾಳಿಸಿದರು, ಹೀಗಳೆದರು, ಕೆಲ ಪತ್ರಿಕೆಗಳೂ ಬರೆದವು ಜರಿದವು. ಹಸಿರು ಕಾನನದೂರಿನಲ್ಲೂ ಹಳ್ಳಿಯೂರಿನ ಹಸುಗಳು ಜಾಸ್ತಿಯಾದವೆಂದೂ, ನಮ್ಮ ಹಸುಗಳಿಗೆ ಹುಲ್ಲಿಲ್ಲ ಅಂತ ಕೂಗು ಕೇಳಿಬಂದವು.

ಹೀಗೇ ಎಲ್ಲ ಸರಿಯಾಗಿ ಹೋಗುತ್ತಿರಬೇಕಾದರೆ, ಅದೊಂದು ಸಾರಿ ಹಸಿರು ಕಾನನದೂರಿಗೆ ಬರಗಾಲ ಅಪ್ಪಳಿಸಿಬಿಟ್ಟಿತು. ಹಸಿರಿಲ್ಲ, ಹುಲ್ಲಿಲ್ಲ, ಹಾಲೇನು ಮಾಡೋಣ ಅಂದವು ದೊಡ್ಡಿಗಳು. ಹುಲ್ಲು ತಿನ್ನುತ್ತ ಹಾಯಾಗಿದ್ದ ಹಸುಗಳಿಗೆ ನಡುಕ

ಹುಟ್ಟಿತು. ಎಲ್ಲಿ ನೋಡಿದರೂ ಹಳ್ಳಿಯೂರಿನಲ್ಲಿ ಹಸಿರು ಕಾನನದ್ದೇ ಮಾತುಗಳು, ಕೋಲಾಹಲ ಶುರುವಾಯಿತು, ದೊಡ್ಡಿಗಳು ಹಳೆಯ ಹಸುಗಳನ್ನು ಹೊರದೂಡಿದವು, ಹೆಚ್ಚು ಹಾಲು ಕರೆಯುವ ಹಸುಗಳಿಗೆ ಮಾತ್ರ ಜಾಗ ಕಲ್ಪಿಸಲಾಯಿತು. ಇದೇ ಸಮಯದಲ್ಲಿ ಇದೇ ಗುಲ್ಲು, ಹುಲ್ಲು ಗದ್ದಲದಲ್ಲಿ ಕೆಲವು ದೊಡ್ಡಿಗಳು ಹುಲ್ಲಿದ್ದರೂ ಹಸುಗಳ ಹೊರದೂಡತೊಡಗಿದವು. ಹಲವು ದೊಡ್ಡಿಗಳು ಮುಚ್ಚಿದವು, ಕೆಲವು ಹುಲ್ಲು ಕಡಿಮೆ ಮಾಡಿದವು...

Copyright© Prabhuraj Moogi
www.telprabhu.com

ಹಸುಗಳು ಹೊರಬರುತ್ತಿದ್ದಂತೆ ಹುಚ್ಚರಂತಾದವು, ಎಲ್ಲೊ ಸಿಕ್ಕ ಸಿಕ್ಕ ದೊಡ್ಡಿ ಸೇರಿದವು, "ಗೂಳಿ ಬಿದ್ದರೆ ಆಳಿಗೊಂದು ಕಲ್ಲಂತೆ". ಗೂಳಿ ಹೂಂಕರಿಸಿ ಮೆರೆದಾಡಿರುತ್ತಲ್ಲ, ಕೆಳಗೆ ಬಿದ್ದಿದೆ ಅಂತಂದರೆ ಪ್ರತಿಯೊಬ್ಬನೂ ಕಲ್ಲು ಒಗೆಯುತ್ತಾನೆ, ಈಗಲೇ ಸಿಕ್ಕಿದೆ ಬಾ, ಕೆಳಗೆ ಬಿದ್ದಿದೆ ನೆಗೆದು ಬರಲಿಕ್ಕಿಲ್ಲವೆಂದು. ಕೆಲ ಪತ್ರಿಕೆ ಪೇಪರುಗಳು ಹಸುಗಳನ್ನೇ ಜರಿದವು, ಆ ದೊಡ್ಡಿಯಲ್ಲಿ ಹತ್ತು ಹಸುಗಳನ್ನು ತೆಗೆಯಲಾಗಿದೆ, ಈ ದೊಡ್ಡಿಯಿಂದ ನೂರು ಹಸುಗಳ ತೆಗೆಯಲಿದ್ದಾರೆ ಅಂತ ದೊಡ್ಡ ದೊಡ್ಡ ಸುದ್ದಿ ಮಾಡಿದರು, ಅಂಕಿಅಂಶಗಳ ಚಾರ್ಟು, ಟೇಬಲ್ಲುಗಳನ್ನು ಪ್ರಕಟಿಸಿದರು... ಹುಲ್ಲು ತಿಂದದ್ದೆ ತಪ್ಪೆಂದರು, ಹಸುಗಳಿಗೂ ಗೊತ್ತಿಲ್ಲ ಏನು ಮಾಡಬೇಕೆಂದು. ಇಷ್ಟು ದಿನ ಎಲ್ಲರಿಗೂ ಬೇಕಾಗಿದ್ದ, ಬಂದಾಗ ಲಾಭ ಮಾಡಿಕೊಂಡ ಎಲ್ಲರದೂ ಒಂದೇ ವರಾತ, ಎಲ್ಲರೂ ಬೀದಿಗೆ ಬಂದರು, ಹಸುಗಳೂ ಕೂಡ... ಯಾರ ತಪ್ಪು, ಯಾರನ್ನು ಬೈಯಬೇಕು, ಎಲ್ಲ ತಪ್ಪು ಹಸುಗಳದಾ, ಇಲ್ಲಿ ಯಾಕೆ ಯಾವುದೇ ಹುಲ್ಲುಗಾವಲು ಬೆಳೆಯಲಿಲ್ಲ, ಇಲ್ಲಿ ಹಳ್ಳಿಯೂರಲ್ಲೂ ಹಸಿರು ಕಾನನ ಬೆಳೆಸಬಹುದಿತ್ತಲ್ಲ, ಇಲ್ಲೇ ಹಾಲು ಕರೆಯಬಹುದಿತ್ತಲ್ಲ, ಹಾಲು ಕರೆಯುವ ಮಶೀನುಗಳ ನಾವೇ ರೆಡಿಮಾಡಬಹುದಿತ್ತಲ್ಲ. ಇಲ್ಲಿ ಯಾಕೆ ಅದಾಗಲಿಲ್ಲ ಎಲ್ಲದಕ್ಕೂ ಹಸಿರು ಕಾನನದೂರಿನ ಮೇಲೆ ಅವಲಂಬಿಸಿದೆವು, ಅಲ್ಲಿ ಬರಬಾರದ ಬರಗಾಲ ಬಂತು ಇಲ್ಲಿ ಎಲ್ಲ ಅಲ್ಲೊಲಕಲ್ಲೋಲವಾಯಿತು. ಈಗ ಹಸುಗಳು ಹೆಚ್ಚಾಗಿವೆ, ಹೆಚ್ಚು ಹುಲ್ಲು ತಿನ್ನುತ್ತವೆ ಅಂದರೆ... ಅದಕ್ಕೆ ಬೀದಿಗೆ ಬಂದಿವೆ ಅಂದರೆ... ಮನಸು ತೃಪ್ತಿಯಾಗುವವವರೆಗೆ ಕಲ್ಲು ಒಗೆಯಿರಿ, ಅಟ್ಟಿಸಿಕೊಂಡು ಹೋಗಿ ಚಾವಟಿಯಿಂದ ಬಾರಿಸಿ, ಬೀದಿಯಲ್ಲಿ ನಿಲ್ಲಿಸಿ ಗುಂಡು ಹಾಕಿ. ತಪ್ಪು ಹಸುಗಳದೆ ಅಂದಾದರೆ ಅದೇ ಸರಿ, ಅಲ್ಲಿಗೆ ಕಥೆ ಮುಗಿಯುತ್ತದೆ, ಮುಗಿಯಲ್ಲಿಲ್ಲವೆಂದಾರೆ ಮುಗಿದಿದೆ ಅಂದುಕೊಳ್ಳಿ...

"ಹೂಂ ನಿನಗೂ ಕಲ್ಲು ಒಗೆಯಬೇಕೆನಿಸುತ್ತಾ, ಒಗಿ, ಕೈಗೆ ಏನು ಸಿಗುತ್ತದೊ ಅದನ್ನೇ ತೆಗೆದುಕೊಂಡು ಒಗಿ, ಅದಕ್ಕೆ ಗುಂಡು ಹಾಕು" ಇನ್ನು ಏನೇನೊ ಅರಚುತ್ತಿದ್ದೆ, ಹುಚ್ಚುಹಿಡಿದಂತಾಗಿಬಿಟ್ಟಿತ್ತು... ಅವಳು ಬಾಯಿ ಮೇಲೆ ಬಟ್ಟಿಟ್ಟುಕೊಂಡು ಕೂತು ಕಥೆ ಕೇಳುತ್ತಿದ್ದವಳು... ನನ್ನ ಬಾಯಿಮೇಲೆ ಬಟ್ಟಿಟ್ಟಾಗಲೇ ಸುಮ್ಮನಾದೆ.. ಆದರೂ ಇನ್ನೂ ಜೋರಾಗಿ ಅರಚಬೇಕೆನಿಸುತ್ತಿತ್ತು... ಮನೆಯತುಂಬ ಸೂತಕ ಕಳೆ ಆವರಿಸಿತ್ತು, ಎಷ್ಟೊ ಹೊತ್ತು ಹಾಗೇ ಕುಳಿತಿದ್ದೆವು, ಭವಿಷ್ಯದಲ್ಲಿ ಇನ್ನೂ ಏನು ಕಾದಿದೆಯೊ.. ಸಮಯವೂ ಮುಂದೆ ಹೋಗದೇ ಹಾಗೆ ಕುಳಿತರೆ ಎಷ್ಟು ಚೆನ್ನಾಗಿರುತ್ತದೆ ಅನಿಸುತ್ತಿತ್ತು.

**ಸಮಯ ನಿಲ್ಲಲ್ಲ... ನಿಲ್ಲ ಕೂಡದು... ಸಂಜೆಯಾಯಿತು... ರಾತ್ರಿಯೂ ಆಗುತ್ತದೆ, ಮತ್ತೆ ಬೆಳಗಿದೆ ಅಷ್ಟೇ...** ಚಹ ಮಾಡಿ ತಂದಳು, ಹಾಲು ಜಾಸ್ತಿ ಹಾಕಿದ್ದಳು!. ಕುಡಿಯುತ್ತ ಕುಡಿಯುತ್ತ... "ಕಥೆ ಕಥೆಯೆನಿಸಲಿಲ್ಲ..." ಅಂದ್ಲು. "ಕಥೆಗಳೆಲ್ಲ ಹಾಗೇ, ವಾಸ್ತವದ ತಳಹದಿಯ ಮೇಲೆ ಕಟ್ಟಿದ ಮಂಜಿಲಗಳು" ಅಂದೆ. "ನಾಳೆ ಏನಾಗುತ್ತೊ ಗೊತ್ತಿಲ್ಲ, ಇಂದು ಖುಶಿಯಾಗಿರೋಣ, ಇಷ್ಟು ದಿನ ಯಾಕೆ ನನಗೆ ಹೇಳಲಿಲ್ಲ" ಅಂದ್ಲು. "ನನಗೇ ಗೊತ್ತಿರಲಿಲ್ಲ, ಗೊತ್ತಾದರೂ ಏನು ಅಗಬಹುದಿತ್ತು" ಅಂದೆ. "ಮತ್ತೆ ಬರಗಾಲ ಕಳೆದು, ಮಳೆ ಬರಬಹುದು ಆಗ ಇಲ್ಲೂ ಹುಲ್ಲು ಬೆಳೆಯಬಹುದು" ಅಂತಿದ್ದಳು ಏನೊ ಸಮಾಧಾನದ ಮಾತಿರಬೇಕು. "ಅದು ಬಿಡು ಏನಾದರಾಗಲಿ ನಾ ನಿನ್ನ ಚೆನ್ನಾಗಿ ನೋಡಿಕೊಳ್ಳುತ್ತೇನೆ, ಏನೊ ಮಾಡೋಣ" ಅಂದೆ. "ಏನೂ ವಿಚಾರ ಮಾಡಬೇಡಿ, ಎರಡು ಒಳ್ಳೆ ತಳಿ ಹಸು ಸಾಕಿ ಬಿಡೋಣ, ಜೀವನ ಹೇಗೊ ಸಾಗುತ್ತದೆ" ಅಂದ್ಲು ತರಲೆ. "ನಿನಗೇನು ಹಸು ಹಾಲು ಕರೆಯಲು ಬರ್ತದಾ" ಅಂದೆ "ನೀವಿದೀರಲ್ಲ, ನಾ ಚಹ ಮಾಡಿ ಕೊಡ್ತೇನೆ ಬೇಕಾದ್ರೆ" ಅಂದ್ಲು ನಗುತ್ತಿದ್ದೆ, "ಇನ್ನೊಂದು ಕಪ್ಪು ಹಾಲಿನಲ್ಲೇ ಮಾಡಿದ ಚಹ ಬೇಕಾ" ಅಂದ್ಲು, ತಲೆ ಸಿಡಿಯುತ್ತಿತ್ತು, "ಹಾಲು ಹಾಲಾಹಲವೆನಿಸುತ್ತಿದೆ, ಸ್ಟ್ರಾಂಗ ಚಹ ಮಾಡಿ ಕಡಿಮೆ ಹಾಲು ಹಾಕಿ ತಾ" ಅಂದೆ... ತರಲು ಒಳಗೆ ಹೋದ್ಲು... ಅಷ್ಟು ಸುಲಭ ಅಲ್ಲ ಹೇಳೊಕೇನು ಏನೊ ಹೇಳಬಹುದು... ಹೀಗೇ ಮತ್ತೆ ಏನೊ ಹೇಳುತ್ತ ಸಿಗೊಣ...

ಇತ್ತೀಚಿನ ವಿದ್ಯಮಾನಗಳನ್ನು ನೋಡಿ ಕೆಲ ಪತ್ರಿಕೆ, ಪೇಪರಿನಲ್ಲಿ ಬರುವ ಸುದ್ದಿಗಳ ಓದಿ ಅದೇ ಗುಂಗಿನಲ್ಲಿ ಮನಸಿಗೆ ತೊಚಿದ್ದು ಗೀಚಿದೆ... ಗೆಳೆಯ ಹೇಳುತ್ತಿದ್ದ ಅವನ ಮನೆಗೆ ಹಾಲು ಹಾಕುವವ ಕೇಳುತ್ತಿದ್ದನಂತೆ "ಏನ್ ಸಾಮಿ ಕಂಪ್ಯೂಟರು ಬಿದ್ದೊಗದಂತೆ" ಅಂತ ಅದಕ್ಕೆ ಇವ "ಹಾಂ ಬಿದ್ದಿತ್ತು ಈಗ ಎತ್ತಿ ಟೇಬಲ್ ಮೇಲೆ ಇಟ್ಟೀದೀನಿ" ಅಂದನಂತೆ. ಮೂವತ್ತು ನಲವತ್ತು ಸಾವಿರ ಸಂಬಳ ಅಂತ ಕೊಚ್ಚಿಕೊಳ್ಳುವವರನ್ನು, ಬ್ಯಾಕಪ್ಯಾಕ ಐಡಿ ಕಾರ್ಡು ನೋಡುತ್ತಿದ್ದಂತೆ, ಮಾರು ದೂರ ಹೋಗಲು ನೂರು ಕೇಳುವ ಆಟೊಗಳನ್ನು, ಗಾಯದ ಮೇಲೆ ಉಪ್ಪುಸವರುವಂತೆ ಕೆಲ ಪತ್ರಿಕೆಗಳು ಬರೆದಿರುವುದನ್ನು, ಎಲ್ಲವನ್ನೂ ನೋಡಿದ ಮೇಲೆ ಬರೆಯಬೇಕೆನಿಸಿತು. ತಪ್ಪು ಇದರಲ್ಲಿ ಯಾರದು ಅನ್ನುವುದಕ್ಕಿಂತ ಇದನ್ನು ಹೇಗೆ ಸರಿ ಮಾಡುವುದು ಅಂತ ಯೋಚಿಸಬೇಕೆನಿಸಿತು. ನನ್ನ ಕೈಲಿಂದ ಏನಾಗುತ್ತೊ ನಾ ಮಾಡುತ್ತೇನೆ, ನಾ ಪ್ರೀತಿಯಿಂದ ಆರಿಸಿಕೊಂಡ ವೃತ್ತಿ ಇದು,  ನನಗೇನು ನಾ ಕೆಲಸ ಮಾಡುತ್ತಿರುವ ಬಗ್ಗೆ ಹೆಮ್ಮೆಯೂ ಇಲ್ಲ, ಹೆಮ್ಮೆ ಪಡುವಂಥದ್ದು ಮಾಡಿರುವೆನೆಂದೂ ಅನಿಸೋದಿಲ್ಲ, ಏನೊ ಕೆಲಸ ಮಾಡುತ್ತಿದ್ದೇನೆ, ಖಾಲಿ ಕೂತಿಲ್ಲ, ಮೋಸ ಮಾಡಿ ಗಳಿಸಿಲ್ಲ, ಹೆಚ್ಚು ಗಳಿಸುತ್ತಿದ್ದೇನೆಂಬ ಜಂಭವಂತೂ ಇಲ್ಲವೇ ಇಲ್ಲ, ಇಷ್ಟಕ್ಕೂ ಅಷ್ಟು ಗಳಿಸುತ್ತಲೂ ಇಲ್ಲ. ಏನೇನೊ ಕನಸುಗಳು, ಏನೊ ಸಾಧಿಸಬೇಕೆಂದುಕೊಂಡಿದ್ದು, ಎಲ್ಲ ಕಣ್ಣ ಮುಂದೆ ಕರಗಿಹೋಗುತ್ತಿರುವುದನ್ನು ನೋಡುತ್ತಿದ್ದೇನೆ. ಅದೇ ಅಂತಾರಲ್ಲ "ಎತ್ತು ಏರಿಗೆಳೆದರೆ, ಕೋಣ ಕೆರೆಗೆ ಎಳೆಯಿತಂತೆ" ಹಾಗೆ ಒಂದಕ್ಕೊಂದು ಸಂಬಂಧವಿಲ್ಲದವು ತಳಕು ಹಾಕಿಕೊಂಡು ಜೀವನದ ಬಂಡಿ ಎತ್ತೊ ಸಾಗುತ್ತಿದೆ ಅನ್ನೊ ಹಾಗಿದೆ. ಜೀವನದಲ್ಲಿ ಇನ್ನೇನು ಸೆಟಲ್ಲು ಆಗಬೇಕು ಅನ್ನೊ ಹೊತ್ತಿಗೆ, ಮತ್ತೆ ಸ್ಟ್ರಗಲ್ಲು

Copyright© Prabhuraj Moogi

ಶುರುವಾಗಿದೆ. ಜೀವನವೇ ಹಾಗೆ ಕಾಲಚಕ್ರ ತಿರುಗುತ್ತಿರುತ್ತದೆ, ಮೇಲೇರಿದ್ದು ಕೆಳಗಿಳಿಯಲೇಬೇಕು, ಕೆಳಗಿಳಿದದ್ದು ಮತ್ತೆ ಮೇಲೇರಲೇಬೇಕು ಅಲ್ಲಿಯವರೆಗೆ ಸಮಾಧಾನ ಸಹನೆ ಬೇಕು. ಎನೊ ನನಗನಿಸಿದ್ದು ಬರೆದಿದ್ದೇನೆ ನಿಮಗೂ ಸರಿಯೆನಿಸಬೇಕಿಲ್ಲ, ಸರಿಯೆನಿಸದೆ ಕಲ್ಲೆಸೆಯಬೇಕೆನಿಸಿದರೆ ಎಸೆಯಿರಿ ಅದರಿಂದಲೇ ಮನೆ ಕಟ್ಟಿಕೊಳ್ಳುತ್ತೇನೆ!...

**ಕೊನೆಯಲ್ಲಿ ಎಂದೊ ಬರೆದ ಎರಡು ಸಾಲುಗಳು ನೆನಪಾದವು...**

*ಬದುಕೊಂದು ದಾರಿಯಂತೆ*
*ದೂರ ದೂರಕೆ ಹರಡಿದೆ.*
*ದಾರಿ ಪಕ್ಕದ ಮರದ ನೆರಳಲಿ ನಿಂತೆ*
*ಹಣ್ಣು ಕಿತ್ತು ತಿಂದು ಸಿಹಿಯೆಂದೆ.*
*ಸಿಹಿಯೆಂದು ಅಲ್ಲೇ ನಿಲ್ಲಲಾದೀತೆ*
*ಸಾಗಲಿನ್ನೂ ಸಾವಿರ ಮೈಲಿ ಕಾದಿದೆ.*

*ನಾಳೆ ದೀಪಾವಳಿಯೆಂದು ಇಂದು*
*ಕತ್ತಲೆಯಲ್ಲಿರಬೇಕೆ.*
*ಮೊನ್ನೆಯ ಅಮವಾಸ್ಯೆಯ ನೆನೆದು ಇಂದಿನ*
*ಬೆಳದಿಂಗಳಿಗೆ ಖುಷಿಯಾಗಬೇಕೆ.*
*ನಾಳೆ ಹೊಳೆಯುವ ನಕ್ಷತ್ರದ*
*ಕನಸು ಇಂದೇ ಯಾಕೆ.*
*ಇಂದು ಒಂದು ಮಿಣುಕು*
*ದೀಪವಾದರೂ ಇರದೇ ಇರಬೇಕೆ.*

Copyright© Prabhuraj Moogi
www.telprabhu.com

## ತಿರುವಿನಲ್ಲಿ ದಾರಿ ತಪ್ಪಿ...

ಅದೋ ಎಲ್ಲೊ ಅಪರೂಪಕ್ಕೆ ಸಿಕ್ಕಿತ್ತು, ನೀಟಾಗಿ ಟಾರು ಹಾಕಿ, ಗುಂಡಿಗಳಿಲ್ಲದಂತೆ ನಿರ್ವಹಿಸಿರುವ ಒಂದು ಉದ್ದ ನೇರ ರೋಡು, ಯಾರೂ ಇಲ್ಲ ಕೂಡ, ಮುಂಜಾನೆ ಏಳಕ್ಕೆ ಯಾರಿರುತ್ತಾರೆ ಹೇಳಿ, ಅರವತ್ತು ಎಪ್ಪತ್ತು ಸ್ಪೀಡಿನಲ್ಲಿ ಹೋಗುತ್ತಿದ್ದೆ ಆಗಾಗ ಎಂಬತ್ತು ಕಿಲೊ ಮೀಟರೂ ಮುಟ್ಟಿರಬಹುದು, ಅದಕ್ಕಿಂತ ಜಾಸ್ತಿ ಹೋದರೆ ಇವಳು ಉಸಿರುಗಟ್ಟುವಂತೆ ಗಟ್ಟಿಯಾಗಿ ಅಪ್ಪಿಕೊಂಡು ನಿಧಾನ ಅಂತಾಳೆ. ಭಾನುವಾರ ಆದರೂ ಸ್ವಲ್ಪ ಏನೊ ಕೆಲಸ ಇತ್ತು ಅಂತ ಆಫೀಸಿಗೆ ಹೊರಟಿದ್ದೆ, ಇತ್ತೀಚೆಗೆ ನನ್ನ ಹಸಿರು ಕಾನನದೂರಿನಿಂದ(http://blog.telprabhu.com/2009/02/blog-post_28.html) ಕಥೆ ಕೇಳಿದಾಗಿನಿಂದ ಕೆಲಸಕ್ಕೆ ಹೋಗಲು ಅವಳು ಬೇಡವೆನ್ನುವುದಿಲ್ಲ, ಮನೆಯಲ್ಲಿ ಕೂತಿದ್ದರೆ ಕೆಲಸದ ನಡುವೆಯೇನಾಗುತ್ತದೆಂದೂ (http://blog.telprabhu.com/2009/02/blog-post_21.html) ಅವಳಿಗೆ ಗೊತ್ತು, ಇವಳು ಒಬ್ಬಳೆ ಮನೆಯಲ್ಲಿ ಕೂತು ಏನು ಮಾಡಲಿ ನನ್ನ ಗೆಳತಿಯ ಮನೆಗೆ ಬಿಡಿ ಅಂತಂದಿದ್ದಕ್ಕೆ ಆಕಡೆ ಬೆಳೆದಿತ್ತು ಪ್ರಯಾಣ. ಮನೆಯಿಂದ ಹೊರಡುವಾಗಲೇ ಹೇಳಿದ್ದೆ ನನಗೆ ದಾರಿ ಗೊತ್ತಿಲ್ಲ ನೀ ಹೇಳುತ್ತ ಹೋದರೆ ಸರಿ ಅಂತ, ಅವಳೀಗೂ ಗೊತ್ತು ನನಗೆಷ್ಟು ದಾರಿಗಳು ನೆನಪಿರುತ್ತವೆ ಅಂತ. "ಇಲ್ಲಿ ಎಡಕ್ಕೆ, ಅಲ್ಲಿ ರೈಟು.." ಅಂತ ಹೇಳುತ್ತಲೇ ಇದ್ದಳು, ಈ ರೋಡು ಭಾರಿ ನೇರ ಇದೆ, ತಿರುವುಗಳೆಲ್ಲೂ ಹತ್ತಿರದಲ್ಲಿಲ್ಲ ಅಂತ ಭಲೇ ಜೋರಿನಲ್ಲೇ ಆಕ್ಸಲರೇಟರ್ ತಿರುವುತ್ತಿದ್ದೆ, ಒಮ್ಮೆಲೆ ಹಿಂದಿನಿಂದ ಚೀರಿದ್ಲು, "ರೀ ಇಲ್ಲೇ ಲೆಫ್ಟ್ ತುಗೊಳ್ಳಿ" ಅಂತ. ಆಗೇನಾದ್ರೂ ನಾ ಎಡಕ್ಕೆ ತಿರುವಿದ್ದರೆ, ನಾವಿಬ್ಬರೂ ಎಡಕ್ಕೆ ಹೋಗದೆ ಮೇಲಕ್ಕೆ ಹೋಗಿರ್ತಿದ್ವಿ!. ಅಲ್ಲೇ ದಾರಿ ತಪ್ಪಿದ್ದು...

ಹೀಗೆ ಎಷ್ಟು ಸಾರಿ ಆಗಿಲ್ಲ, ಇದೇ ಮೊದಲ ಬಾರಿಯೇನಲ್ಲ. ಇಂದು ಕೆಲಸವಿದೆ ಹೊರಡಬೇಕು ಅಂತಿದ್ದಂಗೆ "ನನ್ನ ಗೆಳತಿಯ ಮನೆಗೆ ಬಿಡಿ" ಅಂದ್ಲು, "ಒಹ್ ಗೆಳತೀನಾ, ಯಾರು ನಂಗೆ ಗೊತ್ತೇ ಇಲ್ಲ! ನೊಡೋಕೆ ಹೇಗಿದಾಳೆ" ಅಂದ್ರೆ ಅಸಂಭದ್ದ ಉತ್ತರ ಬಂತು "ಮದುವೆಯಾಗಿದೆ ಅವಳಿಗೆ" ಅಂತ "ನಾನೆಲ್ಲಿ ಮದುವೆ ಬಗ್ಗೆ ಕೇಳಿದ್ದು" ಅಂದ್ರೆ "ಗೊತ್ತಿದ್ರೆ ಒಳ್ಳೇದು ಅಂತ ಹೇಳಿದೆ" ಅಂದ್ಲು. "ರೀ ಸ್ನಾನ ಮುಗಿಸಿ ಬೇಗ ರೆಡಿಯಾಗಿ, ಏನು ಬಹಳ ಠೀಕು ಠಾಕು ಮೇಕಪ್ಪು ಎಲ್ಲ ಬೇಕಿಲ್ಲ, ನನ್ನ ಅಲ್ಲಿ ಡ್ರಾಪ್ ಮಾಡಿ ಜಾಗ ಖಾಲಿ ಮಾಡಬೇಕು ಅವಳ ಮನೆಗೆ ಏನೂ ನಿಮ್ಮನ್ನ ಕರೆದುಕೊಂಡು ಹೋಗಲ್ಲ" ಅಂತಂದ್ಲು, ಸ್ನಾನ ಮಾಡುತ್ತಿದ್ದವನು ಮೊದಲೇ ನೆನೆದಿದ್ದೆ, ಆಸೆಗೆ ಇನ್ನಷ್ಟು ತಣ್ಣೀರು ಎರಚಿದಂತಾಯ್ತು. "ಲೇ ಪಕ್ಕದ ಮನೆ ಪದ್ದುಗೆ ಮದುವೆ ಆಗಿಲ್ವ! ಅವಳ ಪರಿಚಯ ಮಾಡಿಸಿದ್ದು ನೀನೇ ಅಲ್ವಾ.. ನಿನ್ನ ಫ್ರೆಂಡು ನಂಗೆ ಪರಿಚಯ ಮಾಡಿಸಲ್ವಾ" ಅಂತೆಲ್ಲ ಗೊಗರೆದರೂ ಅವಳೇನು ಜಪ್ಪಯ್ಯ ಅನಲಿಲ್ಲ. ಹಾಗೂ ಹೀಗೂ ರೆಡಿ ಆದಾಗ ಮುಂಜಾನೆ ಏಳು ಆಗಲೇ ಹೊರಟಿದ್ದೇ ಹೀಗೆ ದಾರಿ ತಪ್ಪಿದರೂ ಸರಿ ಸಮಯಕ್ಕೆ ತಲುಪಬಹುದೆಂದು.. ಸರಿ ದಾರಿ ಗೊತ್ತಿದ್ದರೆ ಒಂದು ಘಂಟೆ ಸಾಕು, ನನ್ನ ಸ್ಪೀಡು, ದಾರಿಯ ಪ್ರತಾಪಗಳಿಂದಾಗಿ ಎಲ್ಲೇ ಹೊರಟರೂ ಬಹಳ ಮುಂಚಿತವಾಗಿಯೇ ಮನೆ ಬಿಡುವುದು ಇಂದು ಕೂಡ ಹಾಗೇ, ಅದೊ ರಿಂಗ್ ರೊಡು, ರೇಸು ಕೊರ್ಸಿನಲ್ಲಿ ಕುದುರೆ ಓಡಲು ಮಾಡಿದ ರಿಂಗನಂತೆ, ತಿರುವುಗಳು ಬಲು ಕಡಿಮೆ ಇಲ್ಲಿ ತಪ್ಪಿದರೆ ಮೈಲು ದೂರ ಹೋಗಿ ತಿರುಗಿ ಬರಬೇಕು. ಇವಳು ಸ್ಪೀಡಿನಲ್ಲಿರುವಾಗ ತಿರುವು ಅಂದ್ರೆ?.. ಅದಕ್ಕೇ ಹಾಗೆ ನೇರ ಮುಂದೆ ಬಂದೆ "ಮೊದಲೇ ಹೇಳೊಕೇನಾಗಿತ್ತು" ಅಂತ ತಿರುಗಿದೆ, "ಮೊದಲೇ ಹೇಳಿದರೆ ತಿರುವಿಲ್ಲದಲ್ಲಿಯೂ ತಿರುಗಿ ಬಿಡ್ತೀರ" ಅಂದ್ಲು. **"ಈಗ ತಿರುಗಿದ್ದರೆ ಅಷ್ಟೆ ಮತ್ತೆ ಒಬ್ಬರೊನ್ನೊಬ್ಬರು ತಿರುಗಿ ನೋಡುತ್ತಿರಲಿಲ್ಲ, ಮೇಲೆ ಸ್ವರ್ಗ ಲೋಕದಲ್ಲಿ ಡ್ಯೂಯೆಟ್ಟು ಹಾಡಬೇಕಾಗುತ್ತಿತ್ತು"** ಅಂದೆ, "ಅಷ್ಟು ಜೊರಾಗಿ ಹೋಗುವ ಅವಶ್ಯಕತೆಯೇನಿತ್ತು? ಮೊದಲೇ ರಿಂಗ್ ರೋಡು ಇಲ್ಲಿ ನಿಮ್ಮ ನೊಡೋಕೆ ಯಾರು ಹುಡುಗೀರು ಇರ್ತಾರೆ ಅದೂ ಇಷ್ಟೊತ್ತಿನಲ್ಲಿ, ಸ್ಟೈಲ್ ಮಾಡೊದೇ ಆಯ್ತು" ಅಂತ ತಿರುಗಿ ಬಿದ್ದಳು. "ಇಲ್ಲ ನಿನ್ನ ಬೇಗ ಬಿಟ್ಟು ಆಫೀಸಿಗೆ ಬೇಗ ಹೋದರಾಯಿತೆಂದು" ಅಂತ ಏನೊ ಸಮಜಾಯಿಸಿ ಹೇಳುತ್ತಿದ್ದರೆ "ಅಲ್ಲಿ ಆ ಸ್ಕೂಟಿ ಹಿಂದೆ ಹಾಕಿದ್ಯಾರು, ನಂಗೊತ್ತಿಲ್ವ" ಅಂದ್ಲು, ಸುಮ್ಮನಾದೆ, ಹೆಚ್ಚು ಮಾತಾಡಿದರೆ ನನಗೇ ಸಮಸ್ಯೆಯೆಂದು. ಮೈಲು ದೂರ ಹೋದ ಮೇಲೇ ಸಿಕ್ಕಿದ್ದು ಒಂದು ಯು ಟರ್ನ, ಅಲ್ಲಿಂದ ತಿರುಗಿ ಬಂದು ಅವಳ ಗೆಳತಿಯ ಮನೆಗೆ ಬಿಟ್ಟು ಆಫೀಸಿಗೆ ಹೊರಟೆ.

ದಾರಿ ತಪ್ಪೋದು ಎಲ್ಲರಿಂದ ಬೈಸಿಕೊಳ್ಳೊದು ನನಗೆ ಮಾಮೂಲು, ಅದೇನೊ ನನಗೆ ನೆನಪೇ ಉಳಿಯುವುದಿಲ್ಲ, ನಾ ಆಫೀಸಿಗೆ ದಿನಾ ದಾರಿ ತಪ್ಪದೇ ಹೋಗಿ ಬರೋದೆ ನನ್ನವಳ ಪಾಲಿಗೆ ನನ್ನ ದೊಡ್ಡ ಸಾಧನೆ. ಆಫೀಸಿನಲ್ಲಿಯೊಬ್ಬರು ಕೊಲೀಗು ಇದ್ದಾರೆ ಬೆಂಗಳೂರಿನ ಇಂಚು ಇಂಚು ಗೊತ್ತು, ಅದ ಬಿಡಿ ಬುಲೆಟ್ಟು ತೆಗೆದುಕೊಂಡು ವಿಕಿಮ್ಯಾಪಿಯಾದಲ್ಲಿ ದಾರಿ ನೋಡಿಕೊಂಡು ಅದೊಂದು ದಿನ ಜಮ್ಮು ಕಾಶ್ಮೀರ, ಕಾರ್ಗಿಲ್ಲಿಗೆ ಹೊರಟು ನಿಂತದ್ದು, ನಾನೆಲ್ಲಿ ಈ ಆಸಾಮಿ ದಾರಿ ತಪ್ಪಿ ಎಲ್ಲೊ ಹೋಗಿ ಸೇರುತ್ತೊ, ಇಲ್ಲ ಇಡೀ ಭಾರತ ಸುತ್ತಿ ಬರುತ್ತೊ ಅಂದಿದ್ದರೆ, ಸರಿಯಾಗಿ ಹೋಗಿ ಬಂದಿದ್ದಲ್ಲದೇ ಮತ್ತೆ ಹೋಗುವವರಿಗೆ ಇಲ್ಲೇ ಕುಳಿತು ದಾರಿ ಹೇಳುತ್ತಿರುತ್ತಾರೆ, ಅಂಥವರ ನಡುವೆ ನಾನೊಬ್ಬ, ಅವರೊಬ್ರೆ ಅಲ್ಲ ಹೆಂಡತಿಯನ್ನೂ ಕರೆದುಕೊಂಡು ಇನ್ನೂ ನಕ್ಷೆಯಲ್ಲಿ ದಾಖಲಾಗಿರದ ಎಷ್ಟೋ ಊರೂರು ಸುತ್ತಿ ಬರುತ್ತಾರೆ. ಅವರ

ಸ್ಪೂರ್ಥಿಯಿಂದ ನಾನೂ ಒಮ್ಮೆ ಇವಳ ಕರೆದುಕೊಂಡು ನಮ್ಮೂರಿಗೆ ನನ್ನ ಗಾಡಿಯಲ್ಲಿ ಹೋಗಿ ಬರೋಣ ಅಂತಿದ್ದೆ, "ರೀ ನನಗಿನ್ನೂ ತೀರ್ಥಯಾತ್ರೆ ಮಾಡುವಷ್ಟು ವಯಸ್ಸಾಗಿಲ್ಲ" ಅಂತ ಆಡಿಕೊಂಡಿದ್ದಳು. "ಈ ವಿದೇಶಗಳಲ್ಲಿನ ಹಾಗೆ ಅದೇ ಕಾರಿನಲ್ಲಿ ಕೂರಿಸಿರುತ್ತಾರಲ್ಲ ಮ್ಯಾಪ್ ಹಾಗೆ ಇಲ್ಲೂ ಜೀ.ಪಿ.ಎಸ್ ಇದ್ದಿದ್ರೆ, ನಾನೆಲ್ಲಿದ್ರೂ ಎಲ್ಲಿ ಬೇಕಾದ್ರೂ ಹೋಗಬಹುದಿತ್ತು ಅದೂ ದಾರಿ ತಪ್ಪದೇ" ಅಂದರೆ **"ನೀವೆಲ್ಲೊ ಫಾರಿನನಲ್ಲೇ ಹುಟ್ಟಬೇಕಾದವರು ದಾರಿ ತಪ್ಪಿ ಇಲ್ಲಿ ಬಂದು ಹುಟ್ಟೀದೀರಾ"** ಅಂತ ಅಲ್ಲೂ ದಾರಿ ತಪ್ಪಿದವನಾಗಿಸಿಬಿಟ್ಟಳು. (ಜೀ.ಪಿ.ಎಸ್ ಈಗ ಭಾರತದಲ್ಲೂ ಬಂದಿವೆ, ಇನ್ನೂ ಬಹಳ ಚಾಲ್ತಿಯಲ್ಲಿಲ್ಲ) ನನ್ನ ದಾರಿ ತಪ್ಪುವ ಲೀಲೆಗಳೇ ಹಾಗೆ.

ಅದೊಂದು ದಿನ, ದಾರಿಯಲ್ಲಿ ಸಿಕ್ಕ ಸ್ಕೂಟಿ ಬೆನ್ನತ್ತಿ, ಅದೆಲ್ಲೋ ಮಾರಥಹಳ್ಳಿಯ ಮೂಲೆಗೆ ಹೋಗಿ ತಲುಪಿದ್ದೆ, ತಿರುಗಿ ಬರಲು ದಾರಿಯೆಲ್ಲಿ ಗೊತ್ತು, ಕೊಲೀಗಿಗೆ ಫೋನು ಮಾಡಿದ್ರೆ "ಹಾಗೆ ಅಲ್ಲೇ ಮಣ್ಣ ದಾರಿಯಲ್ಲಿ ಮುಂದೆ ಬಂದ್ರೆ ಅಲ್ಲೊಂದು ಪಾನ ಶಾಪ್ ಬರುತ್ತೆ, ನಾಲ್ಕಾರು ಜನ ನಿಂತಿರ್ತಾರೆ ಅಲ್ಲಿ ಕಾರ್ನರಿನಲ್ಲಿ ಟೆಲಿಫೊನು ಬೂತು ಕಾಣುತ್ತದೆ, ಅಲ್ಲಿ ಲೆಫ್ಟ ತುಗೊಂಡು ಮುಂದೆ ಬಂದ್ರೆ ಟಾರು ರೋಡು, ಲೇಡೀಸ ಹಾಸ್ಟೆಲ್ ಇದೆ, ಅಲ್ಲಿ ಅವರ ನೋಡುತ್ತ ನಿಲ್ಬೇಡ, ಅಲ್ಲಿ ರೈಟು.. ಮುಂದೆ ಇದೆ ಸಿಗ್ನಲ್ಲು ಅಲ್ಲಿಂದ ನೇರ ಬಂದ್ರೆ ದೊಮ್ಮಲೂರು" ಅಂತ ಹೇಳಿದ್ದು ಇನ್ನೂ ಕೇಳಿದ್ದರೆ ದಾರಿಯಲ್ಲಿ ಬರುವ ಗುಂಡಿ, ರಸ್ತೆತಡೆ, ಎಲ್ಲ ಹೇಳಿರೋರು. ಆದರೂ ಹಾಸ್ಟೆಲ್ಲಿನ ಹತ್ತಿರ ಒಂದು ಸ್ಟಾಪು ಹಾಕಿ, ಲೆಫ್ಟ ಬಂದು ದಾರಿ ತಪ್ಪಿ ಮತ್ತೆ ಫೋನು ಮಾಡಿ ದಾರಿ ಕೇಳಿ ಬಂದು ತಲುಪಿದ್ದು. ಎಷ್ಟೊ ಜನರಿಗೆ ದಾರಿ ತೋರಿದರೂ ನನಗೆ ಮಾತ್ರ ಸರಿ ದಾರಿ ನೆನಪಿಟ್ಟು ಬರುವುದು ಹೇಳಿಕೊಡಲಾಗಿಲ್ಲ... ಆ ಮಟ್ಟಿಗೆ ಇದೆ ನನ್ನ ಇಮೇಜು, ಎಲ್ಲಿ ಹೋಗಬೇಕಾದರೂ, ಯಾರಾದರೂ ದಾರಿ ಹೇಳುತ್ತ ಮೂರಕ್ಕಿಂತ ಹೆಚ್ಚು ಲೆಫ್ಟ ರೈಟು ಹೇಳಿದರೆ, ಹಲ್ಲು ಕಿರಿಯುತ್ತೇನೆ, ಒಂದೊ ದಾರಿ ಗೊತ್ತಿರುವವರೊ ನನ್ನ ಜತೆಗೆ ಬರುತ್ತಾರೆ ಇಲ್ಲ, ಯಾರನ್ನಾದರೂ ನಾ ಹಿಂಬಾಲಿಸಬೇಕು.

ಹಿಂಬಾಲಿಸಿಯಾದರೂ ಸರಿಯಾಗಿ ಬಂದು ತಲುಪುತ್ತೀನಾ ಅದೂ ಇಲ್ಲ, ಮೊನ್ನೆ ಅದೊಂದು ಹೊಟೇಲಿಗೆ ಹೋಗಬೇಕಿತ್ತು, ಹಿಂಬಾಲಿಸುತ್ತ ಹೊರಟವ, ನಡುವೆ ಲಾರಿಯೊಂದು ಬಂದು ಅವರೆಲ್ಲೋ ಮುಂದೆ ಹೋಗಿರಬಹುದೆಂದು, ಓಡಿಸಿದ್ದೇ ಓಡಿಸಿದ್ದು ಆಮೇಲೆ ಮತ್ತೆ ಮಾಮೂಲು ಯು ಟರ್ನ... ಲಾರಿ ಪಕ್ಕದಲ್ಲೇ ಹೊಟೇಲು ಇತ್ತು ಅವರು ಅಲ್ಲೇ ನಿಲ್ಲಿಸಿದ್ದರು, ನಾ ಮುಂದೆ ಹೋಗಿರುವರೆಂದು, ಹುಡುಕಿದ್ದೇ ಹುಡುಕಿದ್ದು... ಮತ್ತೆ ಯಾರನ್ನೊ ಕೇಳಿದೆ ಅವನೊ ಎಡಕ್ಕೆ ಕೈ ತೊರಿಸುತ್ತಾನೆ ರೈಟು ಟರ್ನು ಅಂತಾನೆ, ಮೊದಲೇ ಗೊಂದಲಕ್ಕೀಡಾದವ ಇನ್ನಷ್ಟು ಗೊಂದಲ... ಆದರೂ ಬೆಂಗಳೂರಿನಲ್ಲಿ ಅದೊಂದು ಒಳ್ಳೆಯದು, ಯಾರು ಕೇಳಿದರೂ ಬೇಜಾರಿಲ್ಲದೆ ದಾರಿ ಹೇಳುತ್ತಾರೆ, ಗೊತ್ತಿಲ್ಲದಿದ್ದರೆ ಪಕ್ಕದವರನ್ನು ಕೇಳಿಯಾದರೂ ಸರಿ. ಎಷ್ಟೋ ಸಾರಿ ನಾ ಹೋಗಬೇಕಾದ ಸ್ಥಳದವರೆಗೂ ಬಂದು ಬಿಟ್ಟೂ ಹೋಗಿದ್ದಾರೆ. ಹಾಗೆ ದಾರಿ ಕೇಳುತ್ತ ಎಲ್ಲರೂ ಊಟ ಮುಗಿಸಿ ಕೈ ತೊಳೆಯುವ ಮುಂಚೆ ಅಲ್ಲಿ ಹೊಟೇಲಿಗೆ ತಲುಪಿದ್ದೆ.

ಇನ್ನೊಂದು ದಿನ ಇವಳ ಎಂ ಜೀ ರೋಡಿಗೆ ಕರೆದುಕೊಂಡು ಹೊರಟಿದ್ದೆ, ಅದ್ಯಾವುದೋ ಸೇಲು ಬಂದಿದೆ ಅಂತ, ದಾರಿ ಗೊತ್ತಿತ್ತು, ಸೇಲು ಎಲ್ಲಿದೆ ಗೊತ್ತಿರಲಿಲ್ಲ, ಎಡಕ್ಕೆ ಗಾಡಿಗಳ ನಡುವೆ ಸಿಲುಕಿರುವಾಗ ಇವಳಿಗೆ ಅದು ಬಲಕ್ಕೆ ಕಂಡು ಬಿಡಬೇಕೇ, ಎಡದಿಂದ ಬಲಕ್ಕೆ ನಾ ಬರಲು ಈ ಟ್ರಾಫಿಕ್ಕಿನಲ್ಲಿ ಆಗಬೇಕಲ್ಲ. ನೇರ ಹೊರಟೆ "ರೀ ರೈಟಿನಲ್ಲಿದೆ" ಅಂದದ್ದು ಕೇಳದಂತೆ ಹೊರಟೆ, ನಾಕು ತಲೆಗೆ ಇಕ್ಕಿದಳು, ಹೆಲ್ಮೆಟ್ಟು ಇತ್ತು ಬಚಾವಾದೆ, ಅದೊ ಅಲ್ಲಿ ಎಲ್ಲೊ ದೂರ ಬ್ರಂಟನ್ ಟಾವರು ಹತ್ತಿರ ನಿಲ್ಲಿಸಿ ನಡೆದು ಬರುವಾಗ ಬಯ್ಯುತ್ತಲೇ ಇದ್ದಳು, ನನಗೊ ನಗು ಅಂದ್ರೆ ನಗು, ಬಿಸಿಲಿನಲ್ಲಿ ಬುರ್ಕಾದಂತೆ ದುಪಟ್ಟ ಹೊದ್ದು. ನಡೆದದ್ದೆ ನಡೆದದ್ದು. ಅವಳಿಗೊ ಈ ಎಂ ಜೀ ರೋಡಿನಲ್ಲಿ ಕಾಣುವ ಸುಂದರಿಯರ ನೋಡಲು ನಾ ಹಾಗೆ ಮಾಡಿದೆನೆಂದು ಗುಮಾನಿ, ಬಯ್ಯುತ್ತ ಬಡಿಯುತ್ತ ಅಷ್ಟು ದೂರ ಬಂದವಳು, ಮತ್ತೆ ಬಿಸಿಲಿದೆ ಬನ್ನಿ ಅಂತ ತನ್ನ ದುಪಟ್ಟಾದಲ್ಲಿ ನನಗೂ ನೆರಳು ಕಲ್ಪಿಸ ನೋಡಿದಳು.. ಕ್ಷಣದಲ್ಲಿ ಸಿಡುಕು, ಕ್ಷಣದಲ್ಲಿ ಮತ್ತೆ ಪ್ರೀತಿ ಅವಳಿಗ್ಯಾರು ಸಾಟಿ...

Copyright© Prabhuraj Moogi
www.telprabhu.com

ಅಂತೂ ಅದೇ ಯೋಚನೆಗಳಲ್ಲಿ ಆಫೀಸಿಗೆ ಬಂದೆ, ಕೊಲೀಗ್‌ಗೆ ದಾರಿ ತಪ್ಪಿದ್ದು ಹೇಳಿದರೆ, "ಅಲ್ಲಿ ತನಕ ಹೋಗಿ ಯಾಕೆ ಯು ಟರ್ನ ತೆಗೆದುಕೊಂಡೆ, ಅಲ್ಲೇ ಇನ್ನೊಂದು ಲೆಫ್ಟು ತೆಗೆದುಕೊಂಡು ರೈಟಿಗೆ ಬಂದಿದ್ರೆ ಸಾಕಿತ್ತು" ಅಂದ... ನಾ ಹಲ್ಲು ಕಿರಿದೆ, ಅವ ನಗತೊಡಗಿದೆ, "ನನ್ನ ಬಗ್ಗೆ ಗೊತ್ತಲ್ಲ" ಅನ್ನುತ್ತ ಕೆಲಸದಲ್ಲಿ ಲೀನವಾದೆ, ಸಂಜೆ ಮತ್ತೆ ಅವಳ ಪಿಕ್ ಮಾಡಬೇಕು, ಬೇಗ ಹೊರಟೆ.

ಈ ರೋಡುಗಳು ಯಾಕೆ ಹೀಗೆ ಅಂತೀನಿ, ಹೋಗೋಕೊಂದು ದಾರಿಯಾದರೆ ಬರೋಕೊಂದು. ಮತ್ತೆ ದಾರಿ ಹೇಳುತ್ತ ಮನೆಗೆ ತಲುಪಿಸಿದಳು. ಮನೆಗೆ ಬಂದು ಶರ್ಟು ಬಿಚ್ಚುತ್ತ, "ನಾನೇ ಯಾಕೆ ಹೀಗೆ ದಾರಿ ತಪ್ಪುತ್ತೀನಿ ಅಂತೀನಿ" ಅಂದೆ, ಅದಕ್ಕವಳು ಒಂದು ಅಸಂಬದ್ಧ ಪ್ರಶ್ನೆ ಕೇಳಿದಳು "ದಾರಿಯಲ್ಲಿ ಆ ಹೊಂಡ ಆಕ್ಟಿವಾ ಮೇಲೆ ಕಂಡ ಹುಡುಗಿ ನೋಡಿದ್ರಾ" ಅಂತ. "ಯಾವುದು ನಂಜಪ್ಪ ಸರ್ಕಲ್ಲಿನಲ್ಲಿ ಕಂಡದ್ದೊ, ಇಲ್ಲ ಆ ಬಿಗ್ ಬಾಜಾರಿನ ಹತ್ತಿರ ಕಂಡದ್ದೊ" ಅಂದೆ, "ನೋಡಿ, ಪ್ರತೀ ತಿರುವಿನಲ್ಲಿ ಕಾಣುವ ಹುಡುಗಿ ನೆನಪಿರ್ತಾಳೆ ದಾರಿ ಯಾಕಿಲ್ಲ? ಗಮನ ಅಲ್ಲಿರಬೇಕಲ್ಲ" ಅಂತ ಬೈದಳು ಹಲ್ಲು ಕಿರಿದೆ. "ನಿಜ ಹೇಳೆ ನಾನೇನು ಬೇಕೇಂದೆ ಮಾಡ್ತೀನಾ?" ಅಂದ್ರೆ "ಮದುವೆಗೆ ಮುಂಚೆ, ನಿಮ್ಮಕ್ಕನ ಮನೆಗೆ ಕರೆದುಕೊಂಡು ಹೊಗ್ತೀನೀ ಅಂತ ಬೇಕೆಂದಲೇ ದಾರಿ ಗೊತ್ತಿಲ್ಲ ಅಂತ ಇಡೀ ಬೆಂಗಳೂರು ಸುತ್ತಿಸಿರಲಿಲ್ವಾ, ಕಿಲಾಡಿ ನೀವು ನಂಗೊತ್ತಿಲ್ವಾ" ಅಂತಂದ್ಲು. "ಅದ್ ಹೇಗೆ ನಿಂಗೆ ಗೊತ್ತಾಯ್ತು" ಅಂದ್ರೆ, "ಮಾಗಡಿ ರೋಡು ಅಂತ ನೀಟಾಗಿ ಬರೆದಿರೋ ಬೋರ್ಡು ಇದ್ರೂ ಅಲ್ಲಿ ತಿರುವು ತೆಗೆದುಕೊಂಡು ಬಂದಿದ್ರಿ, ನಂಗೂ ಸುತ್ತಬೇಕಿತ್ತು ಸುಮ್ಮನಿದ್ದೆ" ಅಂದ್ಲು ನಗುತ್ತ. "ಈಗ ಕಿಲಾಡಿ ನೀನೂ ಅಲ್ವಾ" ಅಂತಿದ್ದರೆ "ಸಾಕು ಬನ್ನಿ ಟೀ ಮಾಡ್ತೀನಿ" ಅಂತ ಪಾಕ ಶಾಲೆಗೆ ಹೊರಟಳು. ಅವಳು ಟೀ ಮಾಡುತ್ತಿದ್ದರೆ ಬರ್ಶನ್ನು ಕಟ್ಟೆ ಮೇಲೆ ಕೂತು ತಿರುವುಗಳೇ ತುಂಬಿರುವ ಚಕ್ಕಲಿ ತಿನ್ನುತ್ತ "ಅಂದೇನೊ ಸರಿ ಬೇಕೆಂತಲೇ ಮಾಡಿದ್ದು, ಆದರೆ ನನಗೇಕೊ ಈ ತಿರುವುಗಳು ನೆನೆಪೇ ಇರುವುದಿಲ್ಲ, ನನಗೆ ನಾನೇ ಗೊಂದಲಕ್ಕೀಡಾಗಿ ಬಿಡುತ್ತೇನೆ, **ತಿರುವು ತುಂಬಿರುವ ಸಂದಿಗೊಂದಿಗಳಲ್ಲಿ ಹಾದು ಬರುವುದಕ್ಕಿಂತ ನೇರ ದೂರ ರಿಂಗ ರೊಡುಗಳೇ ಬೇಕೆನಿಸುತ್ತವೆ**, ಈ ಶಾರ್ಟ್‌ಕಟ್‌ಗಳನ್ನು ಬಳಸಿ ಎಲ್ರೂ ನನಗಿಂತ ಮುಂದೆ ಹೋಗಿ ಬಿಡ್ತಾರೆ ನನಗೋ ದೂರ ದಾರಿ ಅಷ್ಟೆ ಗೊತ್ತಿರೋದು..." ಅಂತ ಭಾಶಣ ಬಿಗಿದೆ, ಅವಳೂ ನಗುತ್ತ, "ಈ ಟಾರು ರೋಡುಗಳಲ್ಲಿ ಎಷ್ಟು ದಾರಿ ತಪ್ಪಿದರೂ ನೀವು ನನಗೆ ಬೇಜಾರಿಲ್ಲ, ಬದುಕಿನ ದಾರಿ ಎಂದೂ ತಪ್ಪಿಲ್ಲ, ಎಷ್ಟು ತಿರುವುಗಳಿದ್ದವು ನಿಮ್ಮ ಮುಂದೆ, ಆದ್ರೆ ನೀವು ನೇರ ನೇರಕೆ ಇಷ್ಟು ದೂರ ಬಂದಿರುವಿರಿ, ಎಲ್ಲೂ ತಪ್ಪಿಲ್ಲ ಅದೇ ನನಗೆ ಹೆಮ್ಮೆ ನನಗಷ್ಟೆ ಸಾಕು" ಅಂತ ಭಾವನಾತ್ಮಕ ಮಾತುಗಳಾಡಿದಳು, ನನಗೊ ಖುಶಿ "ಆದರೂ ಎಲ್ಲಿ ಎಲ್ಲರೂ ಬಳಸಿದ ದಾರಿಯಲ್ಲಿ ಬಂದು ಹೊಸದನ್ನೇನು ಮಾಡಲಿಲ್ಲ ನಾ, ಆ ಮಣ್ಣ ದಾರಿ ಬಳಸಲೇ ಇಲ್ಲ, ಹೊಸದೇನೊ ಇರ್ತಿತ್ತು ಅನ್ನೊ ಪ್ರಶ್ನೆ ನನ್ನ ಕಾಡಿದೆ" ಅಂದೆ, "ಎಲ್ಲರಿಗೂ ಒಂದೊಂದು ದಾರಿಯಿದೆ, ನಿಮಗೆ ನೇರವಾದರೆ ಮತ್ತೊಬ್ಬರಿಗೆ ತಿರುವು, ಯೋಚನೆ ಬಹಳ ಬೇಡ, ಪಕ್ಕದ ಮನೆ ಪದ್ದು ಹತ್ರ ತಿರುವಿಬಿಟ್ಟೀರಿ, ನಮ್ಮನೆ ಈ ಕಡೆ ನೇರ ಇದೆ" ಅಂತ ತುಂಟಾಟಕ್ಕಿಳಿದಳು. ಅವಳ ಬಾಯಿಗೊಂದು ಚಕ್ಕಲಿಯ ತುಂಡಿನ ತಿರುವಿಟ್ಟೆ ಆಕಡೆಯ ತಿರುವು ಅವಳ ಬಾಯಲ್ಲಿದ್ದರೆ ಈಕಡೆ ತಿರುವಿನಿಂದ ನಾ ತಿನ್ನುತ್ತಿದ್ದೆ, ತಿರುವು ಕಡಿಮೆಯಾಗುತ್ತ ಬಂತು, ನಮ್ಮಿಬ್ಬರ ನಡುವಿನ ದೂರ ಕಡಿಮೆಯಾಗುತ್ತಿತ್ತು, ತಿರುವುಗಳಿಲ್ಲದೇ ನಮ್ಮ ಸಂಭಂಧ ಇನ್ನಷ್ಟು ನೇರ ನಿಶ್ಚಿತ ನಿಷ್ಕಲ್ಮಶವಾಗುತ್ತಿತ್ತು... ತಿರುಗಿ ಬರುತ್ತಿರಿ ಮತ್ತೆಲ್ಲೊ ತಿರುವಿನಲ್ಲಿ ದಾರಿ ಕೇಳುತ್ತ ಸಿಗುತ್ತೇನೆ...

Copyright© Prabhuraj Moogi
www.telprabhu.com

## ನಶೆಯೇರದೆ ನಟಿಸಿದಾಗ...

ಮುಂಜಾನೆ ಬ್ರೆಕ್‌ಫಾಸ್ಟ ಮಾಡ್ತಿದ್ದೆ, ಬ್ರೆಡ್ ಟೋಸ್ಟ ಮಾಡಿದ್ಲು ಫಾಸ್ಟ ಆಗಿ ಆಗುತ್ತಲ್ಲ ಅಂತ. ನಾ ಬೇಗ ಹೊರಟಿದ್ದೆ, ಏನಾದ್ರೂ ಬೇಗ ಮಾಡು ಅಂದಿದ್ದಕ್ಕೆ ಟೋಸ್ಟ ಸಿಕ್ಕಿತ್ತು, ಬಹಳಾನೇ ಬೇಗ ಆಯ್ತು ಅಂತ ಕಾಣುತ್ತೆ, ಆಫೀಸಿಗೆ ಹೋಗಲು ಇನ್ನೂ ಸಾಕಷ್ಟು ಟೈಮು ಇತ್ತು, ಡೈನಿಂಗ ಟೇಬಲ್ ಮೇಲೆ ಕೂತು ತಿನ್ನುತ್ತ ಹಾಗೆ ಮಾತಿಗೆಳೆದೆ...

"ರಾತ್ರಿ ಬರೋದು ಲೇಟ್ ಆಗಬಹುದು, ಪಾರ್ಟಿ ಇದೆ, ಊಟ ಅಲ್ಲೇ ಆಗುತ್ತೆ" ಅಂದೆ, "ಏನ್ ವಿಶೇಷ, ಯಾರದಾದ್ರೂ ಎಂಗೇಜಮೆಂಟು, ಮದುವೆ ಏನಾದ್ರೂ ಆಯ್ತಾ" ಅಂದ್ಲು. "ಛೇ, ಅಂಥ ದುಃಖಕರ ಸುದ್ದಿಗಳನ್ನೆಲ್ಲ ಸೆಲೆಬ್ರೇಟ್ ಮಾಡೋಕಾಗಲ್ಲ ಹ ಹ ಹ, ಪ್ರೊಜೆಕ್ಟ ರಿಲೀಸ್ ಅಂದ್ರೆ ಒಂದು ಹಂತದ ಕೆಲ್ಸ ಮುಗಿದ ಖುಶಿಗೆ ಪಾರ್ಟಿ" ಅಂತ ಕಿಚಾಯಿಸಿದೆ. "ಯಾಕ್ರೀ, ಅದೆಲ್ಲ ದುಃಖಕರ ಸುದ್ದಿ ಅಂತೀರಾ" ಅಂತ ದುರುಗುಟ್ಟಿದ್ಲು," ಮತ್ತಿನ್ನೇನೆ ಮೊನ್ನೆ ಮೊನ್ನೆ ಎಂಗೇಜಮೆಂಟಾದ ಹುಡುಗನ ಮುಖ ನೋಡಿದ್ರೆ, ಆಕಾಶಾನೇ ಕಡಿದುಕೊಂಡು ತಲೆ ಮೇಲೆ ಬಿದ್ದಿದೆಯೇನೊ ಅನ್ನೊ ಹಾಗಿರ್ತಾನೆ"... ಮತ್ತೊಂದು ಟೊಸ್ಟ್ ಬಾಯಿಗಿಟ್ಟೆ.. ಸ್ವಲ್ಪ ಹೊತ್ತು ಮೌನ ಮತ್ತೆ ಮಾತು ಶುರುವಾಯ್ತು... "ಎಂಗೇಜಮೆಂಟ್ಗೆ ಬೇರೆ ಪಾರ್ಟಿ ಇದೆ, ಸತ್ಯನಲ್ಲಿ" ಅಂದೆ, "ಸತ್ಯ, ಏನೂ ರೆಸ್ಟೊರೆಂಟಾ" ಮರುಪ್ರಶ್ನೆ ಬಂತು. "ಅಲ್ಲ ಅಲ್ಲ.. ಬಾರ್ ಆ್ಯಂಡ್ ರೆಸ್ಟೊರೆಂಟ್" ಅಂದೆ. "ಒಹೋ, ದುಃಖ ಎಲ್ಲ ಮರೆಯೋಕೆ ಅನ್ನಿ" ಅಂತಂದ್ಲು "ಹಂ.... ಅದೂ ಸರಿ ಆದ್ರೆ ಇಂದೂ ಇರುತ್ತೆ, ಪಾರ್ಟಿ ಅಲ್ವ, ಆದ್ರೆ ಇಂದು ಖುಶಿಯಲ್ಲಿ, ಒಟ್ಟಿನಲ್ಲಿ ಏನು ನೆಪ ಸಿಕ್ಕರೂ ಆಯ್ತು" ಅಂದೆ. "ಲೇಟು ಅಂದ್ರೆ ಎಷ್ಟೊತ್ತಿಗೆ ಬರ್ತೀರ" ಅಂದ್ಲು. "ನೋಡೋಣ ಫೋನು ಮಾಡ್ತೇನೆ" ಅಂತನ್ನುತ್ತ ಟಿಫಿನ್ನು ಮುಗಿಸಿ ಎದ್ದೆ.

ಬಿಸಿ ಬಿಸಿ ಟೀ ಹೀರುತ್ತ, "ಕೊಲೀಗು ಬರ್ತಾಳಲ್ಲ ಜತೆಗೆ, ಅವಳ ಮನೆಗೆ ಬಿಡಬೇಕು, ಬೇಗ ಬರ್ತೀನಿ ಬಿಡು" ಅಂದೆ, "ಹುಡುಗೀರು ಪಾರ್ಟಿಗೆ ಬರ್ತಾರ" ಅಂದ್ಲು, "ಲೇ ಪ್ರಾಜೆಕ್ಟ ಪಾರ್ಟಿ ಅಂದ್ರೆ ಎಲ್ರೂ ಬರ್ತಾರೆ" ಅಂದೆ. ಇನ್ನೂ ಅವಳ ಪ್ರಶ್ನೆಗಳು ಮುಗಿದಿರಲಿಲ್ಲ, "ಮತ್ತೆ ಮನೆಗೆ ಹೇಗೆ ಹೋಗ್ತಾರೆ?"... "ಲೇಟಾದ್ರೆ, ನಾನೀದಿನಲ್ಲ, ಎಲ್ರನ್ನೂ ಮನೆಗೆ ತಲುಪಿಸ್ತೀನಿ" ಅಂದೆ "ಒಳ್ಳೇ ನಿಮ್ಮನ್ನ ನಂಬ್ತಾರಲ್ಲ ಎಲ್ರೂ" ಅಂತ ಕೀಟಲೆಗಿಳಿದ್ಲು... ನಾ ದುರುಗುಟ್ಟಿ ನೋಡಿ ಹೊರಟು ನಿಂತೆ, "ನೀವು ಡ್ರಿಂಕ್ಸ ಮಾಡಿ ಟೈಟ ಆದ್ರೆ (ಭಾರಿ ನಶೆಯೇರೊದಕ್ಕೆ ಹಾಗೆ ಟೈಟಾಗೋದು ಅಂತಾರೆ)" ಅಂದ್ಲು, "ಅದಾಗಲ್ಲ ಬಿಡು" ಅಂದೆ. **"ರೀ ರೀ ಪ್ಲೀಜ್ ಒಂದು ಸಾರಿ ಡ್ರಿಂಕ್ಸ್ ಮಾಡಿ ಟೈಟಾಗಿ ಬನ್ರಿ"** ಅಂದ್ಲು. ಅಯ್ಯೋ ಇದೊಳ್ಳೆ ರಗಳೆ ಆಯ್ತಲ್ಲ, ಎಲ್ರೂ ಕುಡೀದೇ ಗಂಡ ಮನೆಗೆ ಬರ್ಲಿ ಅಂದ್ರೆ ಹೋಗೀ ಹೋಗೀ ಇವಳು ಬರೀ ಕುಡಿದಲ್ಲ, ಟೈಟಾಗಿ ಬನ್ರೀ ಅಂತೀದಾಳಲ್ಲ. "ಯಾಕೇ ನಿಂಗೆ ಇಂಥ ದುರ್ಬುಧ್ಧಿ ಬಂತು" ಅಂದ್ರೆ ನಗುತ್ತ "ಏನಿಲ್ಲ ಕುಡಿದ್ರೆ ಎಲ್ರೂ ನಿಜ ಹೇಳ್ತಾರಂತೆ, ನಿಮಗೆಷ್ಟು ಗರ್ಲಫ್ರೆಂಡ್ಸು, ಅವರ ಹೆಸರೇನು, ಎಲ್ಲ ಬಯೊಡಾಟ ಹೊರಹಾಕಿಸಬಹುದು ಅಂತಾ..." ಅಂತಿದ್ದಂಗೆ "ತರಲೆ" ಅಂತ ಬಯ್ದು ಹೊರಬಿದ್ದೆ...

ಅದೇ ಯೋಚಿಸುತ್ತ ಅಫೀಸಿಗೆ ನಡೆದೆ, ಮದುವೆಗೆ ಮುನ್ನ ಹುಡುಗ ಇಂಜನೀಯರು ಅಂತಿದ್ದಂಗೆ ಯಾರೋ ಡ್ರಿಂಕ್ಸ ಮಾಡೇ ಮಾಡ್ತಾರೆ ಅಂತ ಇವಳ ಕಿವಿಯೂದಿದ್ದರು, ಇವಳೊ ನಾ ಮದುವೆಯಾಗಲ್ಲ ಹುಡುಗ ಕುಡಿತಾನಂತೆ ಅಂತ ರಚ್ಚೆ ಹಿಡಿದಿದ್ಲಂತೆ, ಅವಳಿಗೇನೊ ಗೊತ್ತಿತ್ತು ನಾ ಸುಪಾರಿ ತಿನ್ನಲೂ ಹಿಂದೆ ಮುಂದೆ ನೋಡ್ತೀನಿ ಅಂತ, ಹಾಗೂ ಹೀಗೂ ಇವಳಪ್ಪ, ಅದೇ ನಮ್ಮ ಮಾವ, ಈಗ ಯಾರು ಡ್ರಿಂಕ್ಸ್ ಮಾಡಲ್ಲ, ಎಲ್ಲ ಸೋಷಿಯಲ್ಲಾಗಿ ಪಾರ್ಟಿಗಳಲ್ಲಿ ಮಾಡ್ತಾರೆ, ಅದಕ್ಯಾಕೆ ಅಷ್ಟು ಯೊಚಿಸ್ತೀಯಾ ಅಂತ ಸಮಾಧಾನಿಸಿದಾಗಲೇ ಒಪ್ಪಿದ್ದಂತೆ, ಹೀಗಿದ್ದವಳು ಇಂದು ಟೈಟಾಗಿ ಬನ್ರೀ ಪ್ಲೀಜ ಅಂದ್ರೆ ಏನ್ ಕಥೆ ಅಂತೀನಿ... ಇವಳಿಗೆ ಇಂದು ಶಾಕ್ ಕೊಡಲೇ ಬೇಕು ಅಂತ ತೀರ್ಮಾನಿಸಿದೆ.

ಕೊಲೀಗಗೆ ಹೇಳಿದ್ರೆ, "ಒಹ್, ಗ್ರೇಟ್ ಈಗ್ಲೆ ಸತ್ಯಾಜಗೆ(ಬಾರ್) ಹೊರಡೋಣ್ವ" ಅಂದ, ನಾ ನಕ್ಕೆ, "ಮತ್ತಿನ್ನೇನು" ಅಂದ "ಏನಿಲ್ಲ ಸುಮ್ನೆ ಶಾಕ ಕೊಡಬೇಕು.. ಕರೆಂಟ ಇಲ್ದೇ" ಅಂದೆ "ಗೊತ್ತಾಯ್ತು ಬಿಡು, ಓಕೇಜ ನೊ ಪ್ರಾಬ್ಲಮ್ಸ" ಅಂದ. ಪಾರ್ಟಿಗೆ ಹೋಗಿ ಕೂತದ್ದಾಯ್ತು, ಒಂದು ರೌಂಡು, ಎರಡು, ಮೂರು... ಅಷ್ಟರಲ್ಲಿ ನಾನೂ ಎರಡು ಸ್ಪ್ರೈಟ್ (ಕೂಲಡ್ರಿಂಕ್ಸ್) ಖಾಲಿ ಮಾಡಿದ್ದೆ, ಲಾಸ್ಟ ಲಾಸ್ಟ ಅನ್ನುತ್ತ ನಾಲ್ಕು ಐದು ಆಯ್ತು... ಈ ದೊಡ್ಡ ದೊಡ್ಡ ಹೊಟೆಲುಗಳಲ್ಲಿರುವ ಮೆನು ನನಗಂತೂ ಅರ್ಥ ಆಗಲ್ಲ, ಅದ್ಯಾವ ಹೆಸರಿನ ತಿಂಡಿಗಳಿರುತ್ತವೊ ದೇವರೇ ಬಲ್ಲ, ಅಂತೂ ಎರಡು ರೋಟಿ, ಮೊಸರನ್ನ, ಮುಗಿಸಿ ಮೇಲೆದ್ದೆ.

Copyright© Prabhuraj Moogi
www.telprabhu.com

ಶಾಕ ಕೊಡಬೇಕು ಕರೆಂಟು ಇಲ್ದೇ ಅಂದಿದ್ದೆನಲ್ಲ, ಅದಕ್ಕೇ **ಪೂಜಾರಿ ತೀರ್ಥ ಪ್ರೋಕ್ಷಣೆ ಮಾಡುವ ಹಾಗೆ ವಿಸ್ಕಿನೊ ರಮ್ಮೋ ಯಾರಿಗೆ ಗೊತ್ತು, ತೀರ್ಥ ಶರ್ಟಿಗೆ ಸಿಂಪಡಿಸಿದರು**, ಘಂಮ್ಮೆಂದು ವಾಸನೆ ಬಂತು, ವಾಸನೆ ಹೋಗದಂತೆ ಮೇಲೆ ಜಾಕೆಟ್ಟು ಹಾಕಿಕೊಂಡು, ಬಾಯಿಗೊಂದು ಪಾನ್(ಬೀಡ, ಎಲೆ ಅಡಿಕೆ) ಹಾಕಿ, ಕುಡಿದು ಮರೆಮಾಚುವವರಂತೆ ತಯ್ಯಾರಾದೆ. ಟೆಸ್ಟ ಮಾಡೋಣಾಂತ, ನಾನೆಂದೂ ಕುಡಿಯಲಿಕ್ಕಿಲ್ಲ ಎನ್ನುವ ಕೊಲೀಗ ಒಬ್ಬರಿದ್ದಾರೆ ಅವರ ಮುಂದೆ ಹೋಗಿ ನಿಂತೆ, "ಒಹ್ ಏನಿದು ನೀನೂ ಇವತ್ತು ಡ್ರಿಂಕ್ಸ ಮಾಡೀದೀಯಾ?" ಅಂತತಿದ್ದಂಗೆ ಅವಳೂ ಅನುಮಾನಿಸಿದಳೆಂದರೆ, ತಯ್ಯಾರಿ ಸರಿಯಾಗಿದೆ ಅಂತಾಯಿತು... ಮನೆಯ ದಾರಿ ಹಿಡಿದೆ.

ಮನೆ ತಲುಪುತ್ತಿದ್ದಂತೆ ಕಣ್ಣು ತೀಡಿ ಕೆಂಪು ಮಾಡಿಕೊಂಡು, ಗೇಟ್ ತೆರೆಯುತ್ತ ದೊಡ್ಡ ಸದ್ದು ಮಾಡಿದೆ, ಕುಡಿದರೆ ಹಾಗೆ ಏನೂ ಕಾಣಲ್ಲವಲ್ಲ ಹಾಗೆ... ನಟನೆ ಮನೆ ಹೊರಗಿನಿಂದಲೇ ಶುರುವಾಯ್ತು.. ಮನೆಯಲ್ಲಿನ ಲೈಟು ಉರಿಯಿತು, ಅವಳು ಕೇಳಿಸಿಕೊಂಡಿರಬೇಕು, ಹೊರಗೆ ಬಂದ್ಲು, ಬೈಕು ಅಡ್ಡಾದಿಡ್ಡಿಯಾಗಿ ನಿಲ್ಲಿಸಿದೆ, ಸರಿಯಾಗಿ ನಿಲ್ಲಿಸಿದರೆ ಹೇಗೆ, ಅವಳಿಗೆ ಅನುಮಾನ ಬರಬೇಕಲ್ಲ. ಮನೆಯೊಳಗೆ ನಡೆದೆ ಹಿಂಬಾಲಿಸಿದಳು, ಬಾಗಿಲು ತೆರೆಯಲು ಹಿಡಿದೆಳೆಯತೊಡಗಿದೆ... "ರೀ ನೂಕಿ" ಅಂದ್ಲು "ಒಹ್ ಇದು ಮನೆ ಅಲ್ವ, ಪುಷ್(ನೂಕುವ) ಡೋರು ಆಫೀಸು ಪುಲ್(ಎಳೆಯುವ) ಡೋರು" ಅಂದೆ ನಗುತ್ತ "ಯಾಕ್ರೀ ಏನಾಯ್ತು ನಿಮ್ಗೆ" ಅನ್ನುತ್ತ ಬಾಗಿಲು ನೂಕಿ ಮನೆಯೊಳಗೆ ಬಂದ್ಲು, ಈಗ ಅನುಮಾನ ಬಂದಾಗಿತ್ತು.

ನಿಲ್ಲಲಾಗದವರಂತೆ ಕುಸಿದು ಸೋಫಾದ ಮೇಲೆ ಕುಳಿತೆ, ಅವಳು ಹತ್ತಿರ ಬರುತ್ತಿದ್ದಂತೆ ಜಾಕೆಟ್ಟು ತೆಗೆದೆ, ಸುವಾಸನೆ ಹರಡಿತು, ಪಾನು ತಿಂದು ಕೆಂಪಾಗಿದ್ದ ಬಾಯಲ್ಲಿ ಮೂವತ್ತೆರಡೂ ಕಾಣುವಂತೆ ಹಲ್ಲು ಕಿರಿದೆ... ಮೂಗು ಮುಚ್ಚಿಕೊಂಡು ದೂರ ಸರಿದು ಕೂತಳು, ಅವಳ ಮುಖ ನೋಡಬೇಕಿತ್ತು ಆಗ, ಯಾಕಾದ್ರೂ ಮುಂಜಾನೆ ಕುಡಿದು ಟೈಟಾಗುವಂತೆ ಹೇಳಿದೆನೋ ಅಂತ ಯೋಚಿಸುತ್ತಿರಬೇಕು. ನಾ ಮತ್ತೆ ಶುರುವಿಟ್ಟುಕೊಂಡೆ "ಊಟ ಆಯ್ತಾ ಡಾರ್ಲಿಂಗ!!!" ಅಂದೆ ಜೀವನದಲ್ಲಿ ಮೊದಲ ಬಾರಿಗೆ ಡಾರ್ಲಿಂಗ ಅಂದಿರಬೇಕು, ಲೇ, ತಗಡು, ತರಲೇ, ತುಂಟಿ ಅಂತಾ ಕರೆಯೋನು ಈವತ್ತು ಸ್ಪೇಶಲ್ ಎಫೆಕ್ಟ ಕೊಟ್ಟಿದ್ದೆ. ಈಗಂತೂ ಅವಳಿಗೆ ಪಕ್ಕಾ ಖಾತ್ರಿಯಾಯ್ತು, ನಶೆಯೇರಿರಬೇಕೆಂದು. ಉತ್ತರ ಬರಲಿಲ್ಲ, ಬರುವುದಿಲ್ಲವೆಂದೂ ಗೊತ್ತಿತ್ತು.

"ಡ್ರಿಂಕ್ಸ ಮಾಡೀದೀರಾ ತಾನೆ" ಅಂದ್ಲು, ಹಾಗೇ ಒಪ್ಪಿಬಿಟ್ಟರೆ ಹೇಗೆ, ಅದಕ್ಕೆ "ಓ ಇಲ್ಲಪ್ಪಾ" ಅಂದೆ, "ಮತ್ತೇನು ಘಮ ಘಮ ಅಂತೀದೀರಲ್ಲ" ಅಂದ್ಲು. "ಪಾರ್ಟಿ ಇದ್ದದ್ದು ಬಾರ್ ಆ್ಯಂಡ್ ರೆಸ್ಟೊರಂಟ ಅಲ್ವ ಅದಕ್ಕೆ.. ಹೀ ಹೀ ಹೀಹ್ ಹೀ" ಮತ್ತೆ ಹಲ್ಲು ಕಿರಿದೆ, "ಯಾಕ್ರೀ ಸುಳ್ಳು ಹೇಳ್ತೀರಾ ನಿಲ್ಲೊಕಾಗ್ತಾ ಇಲ್ಲ ನಿಮ್ಗೆ" ಅಂದ್ಲು ಸುಮ್ನೇ ವಾದ ಮಾಡುವರ ಹಾಗೆ "ನನಗೆ ನಿಲ್ಲೋಕೆ ಆಗ್ತಿಲ್ವಾ, ನನ್ನ ಕಾಲ ಮೇಲೆ ನಾ ನಿಂತ್ಕೊಂಡಿದೀನಿ, ಯಾರಿಗೂ ಭಾರ ಆಗಿಲ್ಲ..." ಅಂತೇನೇನೋ ಬಡಬಡಿಸಿದೆ... "ನನ್ನಾಣೆಗೂ..." ಅಂದ್ಲು "ಇದ್ಕೆಲ್ಲ ಆಣೆ ಯಾಕೆ" ಅಂತ ಮತ್ತಷ್ಟು ವಾದವಿಟ್ಟೆ. ಅವಳೇನೂ ಮಾತಾಡದೇ ಮೌನವಾಗಿ ಕೂತೊಡನೆ ನಿಜ ಹೇಳುವರ ಹಾಗೆ ಮೆಲ್ಲಗೆ ಉಲಿಯತೊಡಗಿದೆ.

"ಸ್ವಲ್ಪ ಮಾತ್ರ... ಜಾಸ್ತಿ ಇಲ್ಲ, ಫಸ್ಟ್ ಟೈಮ ಅಲ್ವಾ ಜಾಸ್ತಿ ಕಿಕ್ಕು(ನಶೆ) ಕೊಟ್ಟಿದ್ದೆ ಐ ಆ್ಯಮ್ ಓಕೇ... ಓಕೆ" ಅಂತ ಇಂಗ್ಲೀಷನಲ್ಲೂ ಹೇಳಿದೆ. ಕುಡಿದಾಗ ಇಂಗ್ಲೀಷು ಜಾಸ್ತಿ ಬರುತ್ತೆ ಅಂತಾರಲ್ಲ ಅದಕ್ಕೆ.... ಹಾಗೆ ವಾದ ಸಮರ್ಥಿಸಿಕೊಳ್ಳಲು... "ನೀನೇ ಹೇಳಿದೆಯಲ್ಲ ಮುಂಜಾನೆ ಅದಕ್ಕೆ.. ಯು ಟೋಲ್ಡ್ ಮೀ..." ಅಂದು ಸುಮ್ಮನಾದೆ. "ನಾನ್ ಸುಮ್ನೇ ಜೋಕಿಗೆ ಹೇಳಿದ್ದು, ಹೀಗಾಗತ್ತೆ ಅಂತ ಗೊತ್ತಿರಲಿಲ್ಲ.." ಅನ್ನುತ್ತ ತಲೆಗೆ ಕೈ ಹಿಡಿದುಕೊಂಡು ಕೂತ್ಲು... ಈಗ ಒಂದು ಭಾಶಣ ಕೊಡಬಹುದು ಅಂತ ಅನ್ಕೊಂಡು "ಕುಡಿಯೊದು ತಪ್ಪಲ್ಲ, ಯಾಕೆ ತಪ್ಪು ಅಂತೀನಿ, ಕುಡಿದ್ರೆ ದುಡ್ಡು ಸರ್ಕಾರಕ್ಕೆ ಹೋಗುತ್ತೆ ಅದರಿಂದ ದೇಶ ಉಧ್ಧಾರ ಆಗ್ತಿದೆ, ಮಲ್ಯ ಅಂಕಲ್ಲು(ಅದ್ಯಾವಾಗ ನಮ್ಮ ಅಂಕಲ್ ಆದ್ರೊ), ಗ್ರೇಟ್ ಅಂಕಲ್ಲು!!! ಗಾಂಧಿಜೀ ಸಾಮಾನುಗಳನ್ನು ಕೊಂಡು ತಂದರಲ್ಲ ದುಡ್ಡು ಎಲ್ಲಿಂದ ಬಂತು...(ಮದ್ಯದ ಬಿಜಿನೆಸ್ ಮಾಡುವ ಮಲ್ಯ, ಇತ್ತೀಚೆಗೆ ಗಾಂಧೀಜಿಯವರ ಸಾಮಾನುಗಳನ್ನು ಹರಾಜಿನಲ್ಲಿ ಕೊಂಡು ತಂದರು) ದೇಶ ಪ್ರೇಮ ನಮ್ದು" ಅಂದು "ಜೈ ಕರ್ನಾಟಕ್ ಮಾತೆ, ವಂದೇಮಾತರಂ, ಟಿಪ್ಪುಸುಲ್ತಾನ" ಅಂತ ರಂಗಾಯಣ ರಘುರವರ ಫಿಲ್ಮ್ ಡೈಲಾಗೂ ಹಾಕಿದೆ... ಅಂತೂ ಒಳ್ಳೆ ಸೀನು ಮಾಡಿಟ್ಟೆ.

ಈಗ ವಾತಾವರಣ ರಂಗೇರಿತ್ತು, ಅವಳ ನೋಡಿದ್ರೆ ಎಲ್ಲ ಹೇಳಿಬಿಡೋಣ ಅನ್ನಿಸುತ್ತಿತ್ತು, ಆದರೂ ಮತ್ತೆ ಮುಂದುವರೆಸಿದೆ, "ಡಾರ್ಲಿಂಗ, ಗರ್ಲಫ್ರೆಂಡ್ಸ ಎಣಿಸೋಣ ಓಕೇ..." ಅಂದು... "ಒಂದು ಎರಡು ನಾಲ್ಕು (ಕುಡಿದಾಗ ಎಣಿಕೇನು ತಪ್ಪುತ್ತಲ್ಲ ಅದಕ್ಕೆ.. ಎರಡು ಆದ ಮೇಲೆ ಸೀದಾ ನಾಲ್ಕು)" ಅಂತ ಕೈ ಬೆರಳಲ್ಲಿ ಎಣಿಸತೊಡಗಿದೆ... "ಒಹ ಬಹಳ ಜನ ಇದಾರೆ, ನನ್ನ ಬೆರಳು ಸಾಕಗ್ತಿಲ್ಲ, ನಿನ್ನ ಬೆರಳೂ ಕೊಡು" ಅನ್ನುತ್ತ ಅವಳತ್ತ ಮುಂದುವರೆದೆ, "ಹತ್ತಿರ ಬಂದ್ರೆ ನೋಡಿ" ಅಂತ ಮತ್ತಷ್ಟೂ ದೂರ ಸರಿದಳು. "ನಿಮ್ಗೆ ಜೋಕು ಮಾಡೊದು ಅರ್ಥ ಆಗಲ್ವಾ ನಾ ಸುಮ್ನೆ ಹೇಳಿದ್ದು, ನಿಜವಾಗ್ಲೂ ಮಾಡಿಬಿಡೊದಾ.." ಅನ್ನುತ್ತ ಬೆಡ್‌ರೂಮಿಗೆ ಹೊರಟಳು... "ಒನ್ ಸೆಕೆಂಡ್... ಕೇಳಿಲ್ಲಿ... ನೀ ಹೇಳಿದ ಮೇಲೆ ಹೇಗೆ ಮಾಡದಿರಲಿ".... "ಐ

Copyright© Prabhuraj Moogi

ಲವ್ಸ್ ಯು" ಅಂತ ಪ್ರಕಾಶ ರಾಜ್(ರೈ) ಅವರ ಫಿಲ್ಮ ಡೈಲಾಗೂ ಎಸೆದೆ.... ಬೆಡ್‌ರೂಮಿನ ಬಾಗಿಲು ದಢ್ ಅಂತ ಸದ್ದಿನೊಂದಿಗೆ ಹಾಕಿದಳು. ಪ್ಲಾನು ಚೆನ್ನಾಗಿ ಕಾರ್ಯಗತವಾಗಿತ್ತು...

ಸ್ವಲ್ಪ ಹೊತ್ತು ಯಾವುದೊ ಹಳೆ ಚಿತ್ರ ಗೀತೆಗಳ ಗುನುಗುನಿಸುತ್ತಿದ್ದೆ, "ಸಾಕು ಅಲ್ಲೆ ಮಲಗಿ ಇನ್ನ, ಅಕ್ಕಪಕ್ಕ ಏನು ಅನ್ಕೊತಾರೆ, ಜಾಸ್ತಿ ಗಲಾಟೆ ಮಾಡಬೇಡಿ" ಅಂತಂದ್ಲು ಅಷ್ಟೇನೂ ಜೋರಾಗಿ ಸದ್ದು ಮಾಡುತ್ತಿರಲಿಲ್ಲ ಬಿಡಿ ಆದರೂ ಅವಳು ಸುಮ್ಮನಾಗಿಸಲು ಹಾಗೆ ಹೇಳಿದ್ದು... "ಯಾರು ಏನಂತಾರೆ, ನಮ್ಮ ಮನೆ ನಾ ಹಾಡ್ತಿದೀನಿ, ಯಾರ್ ಕೇಳ್ತಾರೆ ಈಗ್ಲೆ ಬಾಗಿಲು ತೆಗೆದು ಹೇಳಿ ಬರ್ತೀನಿ. ಧೈರ್ಯ ಇದ್ರೆ ಯಾರಾದ್ರೂ ಬರ್ಲಿ" ಅಂತ ಬಾಗಿಲೆಡೆಗೆ ನಡೆದ ಹಾಗೆ ಮಾಡಿದೆ.. ಅಯ್ಯೋ ಇನ್ನು ದೊಡ್ಡ ರಾದ್ಧಂತ ಮಾಡಿಬಿಡುತ್ತೆ ಇದು, ಅಂತ ಹೊರಬಂದು ತಡೆದಳು, ಮತ್ತೆ ಅವಳ ಹೊರಗೆ ಕರೆತರುವಲ್ಲಿ ಸಫಲನಾದೆ. "ಮಲ್ಕೊಳ್ಳಿ ಇನ್ನ ಸಾಕು ನಾಳೆ ಮಾತಾಡೋಣ" ಅಂತಿದ್ದಂಗೆ "ಈಗ್ಲೆ ಮಾತಾಡೊಣ, ರಾತ್ರಿ ಎಲ್ಲ ಟೈಮಿದೆ... ಕೂಲ್ ಡ್ರಿಂಕ್ಸ ಏನಾದ್ರೂ ಇದೆನಾ" ಅಂತ ಫ್ರಿಡ್ಜ್ ತಡಕಾಡಲು ಹೋದೆ "ಕೂಲ್ ಡ್ರಿಂಕ್ಸ ಯಾಕೆ ಆ ಹಾಳು ಹಾಟ್ ಡ್ರಿಂಕ್ಸೇ ತುಗೊಂಬನ್ನಿ" ಅಂತ ಬಯ್ಯುತ್ತ ಒಳಗೆ ಹೋಗಿ ತಲೆದಿಂಬೂ ಒಂದು ಹೊದಿಕೆ ಎಸೆದು ಬಾಗಿಲು ಕುಕ್ಕಿಕೊಂಡ್ಲು... "ಲೇ ಡಾರ್ಲಿಂಗ.." ಅಂತ ಏನೋ ಹೇಳ ಹೋದ್ರೆ.. "ಈವತ್ತು ಸೋಫಾನೆ ಗತಿ, ಏನೂ ಕೇಳೊದಿಲ್ಲ, ಸೊಫಾನೆ ನಿಮ್ಮ ಡಾರ್ಲಿಂಗ್ ಹೋಗೀ" ಅಂತ ಒಳಗಿಂದಲೇ ರೇಗಿದ್ಲು...

ಇನ್ನು ಹೇಳದಿದ್ರೆ ಸೊಫಾನೇ ಗತಿ ಅನ್ನೊದು ಗೊತ್ತಾದ ಮೇಲೆ, ಹೇಳೊದು ವಾಸಿ ಅವಳ ಗೊಳು ಹೊಯ್ದುಕೊಂಡಿದ್ದು ಸಾಕಿನ್ನು, ಅಂದು ಬಾಗಿಲು ತಟ್ಟಿದೆ, "ರೀ ಸುಮ್ನೆ ಮಲಗ್ತೀರಾ ಇಲ್ಲ ಅತ್ತೆಗೆ ಫೊನು ಮಾಡ್ತೀನಿ ನೋಡಿ" ಅಂತ ಹೆದರಿಸಿದ್ಲು. ಅಮ್ಮನಿಗೆ ಗೊತ್ತಾದ್ರೆ ಅಷ್ಟೆ ನನ್ನ ಕಥೆ... ಅನ್ನುತ್ತ, ಹೇಗೆ ಅವಳ ಹೊರಗೆ ಕರೆಯುವುದು ಅಂತ ಯೊಚಿಸಿ ಅವಳ ಬಾಣ ಅವಳಿಗೇ ತಿರುಗಿಸಿದೆ, "ಅಮ್ಮನಿಗೆ ಫೊನು ಮಾಡ್ತೀಯಾ, ನಿಮ್ಮ ಅಪ್ಪನಿಗೆ ಫೋನು ಮಾಡಿ ತರಾಟೆಗೆ ತುಗೊತೀನೀ ತಾಳು, ಮೊಬೈಲು ಎಲ್ಲಿ ಸಿಕ್ತಾ ಇಲ್ಲ" ಅಂತ ಮೊಬೈಲು ಹುಡುಕುವವರ ಹಾಗೆ ಮಾಡಿದೆ, ಎಲ್ಲಿ ಫೋನು ಮಾಡಿ ಬಿಡ್ತೀನೊ ಅಂತ... ಓಡಿ ಬಂದು  ಬಾಗಿಲು ತೆರೆದ್ಲು.

ಬಹಳ ಹೆದರಿದ್ಲು ಅನಿಸತ್ತೆ, ಅವಳ ಮುಖ ನೋಡಿದ್ರೆ... ನನಗೆ ನಗು ತಡೆಯಲಾಗಲಿಲ್ಲ, ಹೊಟ್ಟೆ ಹಿಡಿದು ಬಿದ್ದು ಬಿದ್ದು ನಗತೊಡಗಿದೆ... ಮತ್ತಿನ್ನೇನಾಯ್ತಪ್ಪ ಇದಕ್ಕೆ ಅಂತ ಅವಳು ಯೋಚಿಸುತ್ತಿರಬೇಕು... ಗೊತ್ತಾಯ್ತು ಅವಳಿಗೆ.. "ನೀವ್ ಡ್ರಿಂಕ್ಸ ಮಾಡಿಲ್ಲ ತಾನೆ, ಸುಳ್ಳ ಹೇಳ್ತೀರಾ... ನನ್ನ ಗೊಳಾಡಿಸ್ತೀರಾ!!!" ಅನ್ನುತ್ತ ಕೈಗೆ ಸಿಕ್ಕ ತಲೆದಿಂಬು ತೆಗೆದುಕೊಂಡು ಅಟ್ಟಿಸಿಕೊಂಡು ಬಂದು ಮನೆ ತುಂಬ ಓಡಾಡಿಸಿ ಕೊಟ್ಲು... ಓಡಾಡಿ ಓಡಾಡಿ ಸುಸ್ತಾಗಿ ಸೊಫಾದ ಮೇಲೆ ಕುಳಿತೆ, ತಲೆದಿಂಬು ಕಸಿದು ಬೀಸಾಡಿದೆ, ಇನ್ನೂ ಬರಿಗಯ್ಯಿಂದ ಬಡಿಯುತ್ತಿದ್ಲು, ಸ್ವಲ್ಪ ಸಮಯ ನಂತರ ಸುಮ್ಮನಾದ್ಲು, ಅವಳ ಕೈ ಬೆರಳು ಹಿಡಿದು ಗರ್ಲಫ್ರೆಂಡ್ಸ ಎಣಿಸೊಣ ಬಾ ಅಂದೆ... ಇನ್ನೊಂದು ಕೊಟ್ಲು...

ಏಳು ಮೊದಲು ಡ್ರೆಸ್ ಚೇಂಜ್ ಮಾಡ್ತೀನಿ ಅಂತ ಎದ್ದು ಮುಖ ತೊಳೆಯಲು ನಡೆದೆ... ಮೊದಲು ಆ ಶರ್ಟ ತೆಗೆದು ನೀರಲ್ಲಿ ಹಾಕಿ ಅಂತ ತಾಕೀತು ಮಾಡಿದ್ಲು. "ಹಾಟ ಡ್ರಿಂಕ್ಸ ಸಿಗುತ್ತಾ" ಅಂದೆ "ರೀ..." ಅಂತ ಗುರಾಯಿಸಿದ್ಲು, "ಲೇ ಹಾಟ್ ಟೀ ಕೇಳಿದ್ದು ಓಡಾಡಿ ಸುಸ್ತಾಗಿದೆ ಅದ್ಕೆ" ಅಂದೆ, ಖುಶಿ ಖುಶಿಯಾಗಿ ಪಾಕಶಾಲೆಗೆ ಓಡಿದ್ಲು... ಮುಖ ತೊಳೆದು ಟೀ ಕುಡಿದು ಸೋಫಾದ ಮೇಲೆ ಕುಳಿತೆ... ಬಂದು ಎದೆಗಾತು ಅಂಟಿಕೊಂಡು ಕೂತ್ಲು, "ಏನು ಇಷ್ಟೊತ್ತು ಹತ್ತಿರಾನೆ ಬರ್ತಿರಲಿಲ್ಲ" ಅಂದ್ರೆ ಇನ್ನಷ್ಟು ಹತ್ತಿರ ಬಂದ್ಲು, ನಾ ಮುಸಿ ಮುಸಿ ನಗ್ತಿದ್ದೆ, ಇಷ್ಟೊತ್ತು ಆಗಿದ್ದು ಮರು ಮೆಲಕು ಹಾಕುತ್ತ... "ನಗ್ತೀರಾ... ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ ಅಂತಾರಲ್ಲ ಹಾಗಾಯ್ತು, ಎಷ್ಟು ಬೇಜಾರಾಗಿತ್ತು ಗೊತ್ತಾ" ಅಂದ್ಲು "ಸೊರಿ.. ಸೊರಿ.. ಸುಮ್ನೆ ತಮಾಶೆಗೆ ಕಾಡಿಸೋಣ ಅಂತ ಹಾಗೆ ಮಾಡಿದೆ" ಅಂದೆ "ನಿಮ್ಗೆ ಎಲ್ಲ ತಮಾಷೇನೆ" ಅಂತನ್ನುತ್ತ ಇನ್ನೊಂದು ಗುದ್ದು ಕೊಟ್ಲು, ತರಲೆ ಮತ್ತೆ ಶುರುವಾಯ್ತು "ರೀ ಡ್ರಿಂಕ್ಸ್ ಟೇಸ್ಟ ಹೇಗಿರುತ್ತೆ" ಅಂತ ಕೇಳಿದ್ಲು "ಅಯ್ಯೊ ಒಳ್ಳೆ ನನ್ನ ಕೇಳ್ತಿದೀಯಲ್ಲ, ಒಂದು ಸಾರೀನು ಒಂದು ಹನಿ ಕೂಡ ಟೇಸ್ಟ ನೋಡಿಲ್ಲ, ಏನೋ ಓಂಥರಾ ಹುಳಿ ಒಗರು ಇದ್ದಂಗೆ ಇರ್ತದಂತೆ ಅಂತಾರೆ"... ಅಂದೆ **"ಒಂದು ಸಾರಿ ಟೇಸ್ಟ ನೋಡ್ಬೇಕ್ರಿ"** ಅಂದ್ಲು... ಇಷ್ಟೊತ್ತು ನನ್ನ ಬಯ್ದವಳು ಈಗ ತಾನೇ ಟೇಸ್ಟ ನೋಡ್ಬೇಕು ಅಂತಾಳೆ, ಅರ್ಥಾನೇ ಆಗಲ್ಲ ಇವಳು... "ಹೂಂ ಒಂದು ಬಾಟಲ್ಲು ತರ್ತೀನಿ, ಇಬ್ರೂ ಕುಡಿದು ಟೈಟಾಗಿ ಬಿಡೋಣಾಂತೆ.. ಸರಿಯಾಗಿರತ್ತೆ ಜೋಡಿ ಆಗ" ಅಂದೆ...

"ಯಾಕ್ರೀ ಕುಡೀತಾರೆ ಅದನ್ನ ರುಚಿನೇ ಇರಲ್ಲ ಅಂದ್ರೆ" ಅಂತಂದ್ಲು. "ಏನೊ ಎಲ್ಲಾ ಮರೆತು ಹೋದ ಹಾಗಾಗಿ ಓಂಥರಾ ಮನಸು ರಿಲ್ಯಾಕ್ಸ ಆಗತ್ತಂತೆ ಅದಕ್ಕೇ... ಒಂಥರ ಕಿಕ್ಕು ಕೊಡತ್ತೆ ಅಂತಾರೆ ಯಾರಿಗೆ ಗೊತ್ತು ಏನಾಗತ್ತೆ ಅಂತ" ಅಂದೆ "ಕುಡಿದ್ರೆ ಸಮಸ್ಯೆ ಏನೂ ಪರಿಹಾರ ಅಗಲ್ಲ ಅಲ್ವಾ, ಮರೆತು ಹೋಗತ್ತೆ ಅದೂ ಕ್ಷಣಿಕ ಆಮೇಲೆ ಮತ್ತೆ ಅದೇ ಸಮಸ್ಯೆಯೊಂದಿಗೆ ಏಗಬೇಕಲ್ಲ" ಅಂದ್ಲು "ಅದೂ ಸರಿ ಆದ್ರೆ ಪಾಪ ಈ ದಿನಗೂಲಿ ಮಾಡೊರು, ಕಷ್ಟದ ಕೆಲಸ ಮಾಡಿ ಬಂದು ರಾತ್ರಿ ನಿದ್ದೆ ಹತ್ತಲ್ಲ, ಪಾಪ ನಿದ್ದೆ ಹತ್ತಲ್ಲ ಅಂತ ಕುಡೀತಾರೆ, ದೇವದಾಸನಂಥವರು ಪ್ರೇಯಸಿ ಮರೆಯಲು

ಕುಡೀತಾರೆ, ಕೆಲವರು ದುಡ್ಡಿರತ್ತೆ ಸ್ಟೈಲಿಗೆ ಅಂತ ಕುಡೀತಾರೆ... ಅವರವರಿಗೆ ಅವರದೇ ಕಾರಣಗಳಿರುತ್ತವೆ, ದೇವರೇ ಸೋಮರಸ ಪಾನ ಮಾಡ್ತಿದ್ರು ಅಂತಾರೆ ಯಾವುದು ತಪ್ಪು ಯಾವುದು ಸರಿ ಎಂದು ಹೇಗೆ ಹೇಳೋದು, ನನಗೆ ಇಷ್ಟ ಇಲ್ಲ, ಮನೇಲೂ ಶಾಂತಿ, ನೆಮ್ಮದಿಯಿದೆ, ಅದು ಯಾವ ಸಮಸ್ಯೆಗೂ ಪರಿಹಾರ ಅಂತ ನನಗನಿಸಲ್ಲ, ಹಾಗಾಗಿ ನಾ ಮಾಡಲ್ಲ, ಮಾಡೊರಿಗೆ ಬೇಡ ಅನ್ನಲ್ಲ"... ನನ್ನ ಅಭಿಪ್ರಾಯ ಯಾರ ಮೇಲೋ ಒತ್ತಾಯದಿಂದ ನಾನು ಯಾಕೆ ಹಾಕಬೇಕು "ಆದ್ರೂ ಎಲ್ಲ ಮಿತಿಯಲ್ಲಿದ್ದರೆ ಸರಿ ಅತಿಯಾದ್ರೆ ಅಮೃತಾನೂ ವಿಷವಂತೆ" ಅಂದೆ...

"ಕರೆಕ್ಟು ಬಿಡಿ... ದಾರಿ ತಪ್ಪಿ(http://blog.telprabhu.com/2009/03/blog-post.html) ಪಕ್ಕದ ಪದ್ದು ಮನೆಗೆ ಹೋಗಿಲ್ಲ ಅಷ್ಟು ಸಾಕು... ಕುಡಿದ್ರೂ ನನಗೇನು ಓಕೆ... ಅಲ್ಲ ಆ ವಾಸನೆ ಬರೋ ಹಾಗೆ ಮಾಡಿಕೊಂಡು ಬಂದು ಸುಪರ ಆಗಿ ನಟಿಸಿದ್ರಲ್ಲ, ಹೇಗೆ" ಅಂದ್ಲು "ತೀರ್ಥ ಪ್ರೋಕ್ಷಣೆಯಿಂದ ಹಿಡಿದು ಮಾಡಿದ ಒಂದೊಂದು ವಿಚಾರಾನೂ ಹೇಳ್ತಿದ್ರೆ, ಮನಪೂರ್ತಿ ನಗ್ತಿದ್ಲು... ನಂಗೆ ಕಂಠಪೂರ್ತಿ ಕುಡಿದು ಬಂದಿದ್ರೂ ಇಷ್ಟು ನೆಮ್ಮದಿ ಸಿಕ್ತಿರಲಿಲ್ಲ ಅನಿಸ್ತು. "ಏನು ನನ್ನ ಹೊರಗೆ ಹಾಕ್ತೀಯಾ, ಸೋಫಾನೆ ಗತೀನಾ" ಅಂತ ತಲೆಗೆರಡು ಏಟು ಕೊಟ್ಟೆ, ಹೌದು ಸೋಫಾನೇ ಗತಿಯೆನ್ನುತ್ತ, ಇಕ್ಕಟ್ಟಿನಲ್ಲಿ ಜಾಗ ಮಾಡಿಕೊಂಡು ಅಲ್ಲೇ ಮಲಗಿದ್ಲು, ಇಕಟ್ಟಿದ್ದರೂ ಅದೇ ಇಷ್ಟವಾಯ್ತು ಮತ್ತೆ ಡೈಲಾಗು ಹಾಕಿದೆ "ಐ ಲವ್ಸ್ ಯು" ಅಂತ ನಗುತ್ತ. ಬಾಚಿ ತಬ್ಬಿಕೊಂಡ್ಲು, "ಟೈಟಾಗಿ!"... ನಶೆಯೇರತೊಡಗಿತು... ಮತ್ತೆ ಸಿಗೋಣ.. ಯಾವುದೋ ಬಾರಿನಿಂದ ಕುಡಿಯದೇ ಹೊರಗೆ ಬರುತ್ತ...

ಕುಡಿಯೊದು ತಪ್ಪೊ ಸರೀನೊ ನನಗೆ ಗೊತ್ತಿಲ್ಲ, ಬೇಡ ಅಥವಾ ಮಾಡಿ ಅಂತ ನಾನೇನು ಉಪದೇಶ ಕೊಡಲ್ಲ... ನಾ ಮಾಡಲ್ಲ ಅದು ನನ್ನ ವೈಯಕ್ತಿಕ ಆಯ್ಕೆ.. ಆದ್ರೆ ಮಿತಿಯಲ್ಲಿರಲಿ ಎನೇ ಆದ್ರೂ... ಕೆಲವರು ಕುಡಿದು ತೂರಾಡುವಾವರು, ಗಟರು, ಚರಂಡಿ ಪಕ್ಕ ಬಿದ್ದಿರುವವರು, ನಶೆಯೇರಿ ಹೆಂಡತಿ ಮಕ್ಕಳ ಹೊಡೆಯುತ್ತಿರುವವರನ್ನು ಎಲ್ಲ ಕಂಡಾಗ ಮನಸಿಗೆ ಬೇಜಾರಾಗುತ್ತದೆ. ಮನೆಯಲ್ಲಿ ಶಾಂತಿ ನೆಮ್ಮದಿ ವಾತಾವರಣ ಕಲ್ಪಿಸಿ, ಯಾರೂ ಬೇಕೆಂದಲೇ ಹಾಗೆ ಮಾಡಲ್ಲ(ಕೆಲವು ಅಪವಾದಗಳನ್ನು ಹೊರತುಪಡಿಸಿ), ಅದನ್ನ ಗೃಹಿಣಿಯರೂ ಅರ್ಥ ಮಾಡಿಕೊಂಡ್ರೆ ಅಷ್ಟೇ ಒಳ್ಳೆಯದು. ಸಮಸ್ಯೆಯ ಪರಿಹಾರ ಮಾಡಲು ಪ್ರಯತ್ನಿಸೋಣ ಕ್ಷಣಿಕವಾಗಿ ಮರೆತು ಬಿಡಲಲ್ಲ. ಇದನ್ನು ಬರೆಯುವಾಗ ನೀವೆಲ್ಲ ಹೇಗೆ ಸ್ವೀಕರಿಸುವಿರೊ ಅನ್ನೊ ಅಳುಕು ನನ್ನ ಕಾಡಿದೆ, ಯಾಕೇಂದ್ರೆ ನನ್ನ ವೈಯಕ್ತಿಕ ಅಭಿಪ್ರಾಯಗಳು ಎಲ್ರಿಗೂ ಇಷ್ಟವಾಗಬೇಕೆಂದೇನಿಲ್ಲ.

ಹಾಗೆ ಒಬ್ಬರು ಪತ್ರ(ಇಂಚೆ) ಬರೆದು ಇಂಗ್ಲೀಷು ಪದಗಳನ್ನ ಬಹಳ ಉಪಯೋಗಿಸ್ತೀಯ ಅಂತ ಅಂದಿದ್ದರೂ, ಬೇಕೇಂತಲೇ ಪದಗಳನ್ನು ಉಪಯೊಗಿಸುವುದಿಲ್ಲ ಸಮಯ ಸನ್ನಿವೇಶಕ್ಕೆ ತಕ್ಕ ಹಾಗೆ ಕೆಲವು ಕಡೆ ಅದೇ ನೈಜ ಅನಿಸಿದಾಗ ಹಾಗೆ ಬರೆದಿರುತ್ತೇನೆ, ಹಾಗೆ ನನ್ನ ಪದ ಭಂಡಾರವೂ ಎಲ್ಲ ಭಾವನೆಗಳನ್ನು ಹಿಡಿದಿಡಿವಷ್ಟು ದೊಡ್ಡದಿಲ್ಲ ಏನು ಮಾಡಲಿ... ಆದರೂ ಪ್ರಯತ್ನಿಸುತ್ತೇನೆ ಕಂಗ್ಲೀಷು ಕಮ್ಮಿ ಮಾಡಲು... ಹೀಗೆ ಬರುತ್ತಿರಿ ಹಾಗೂ ಬರೆಯುತ್ತಿರಿ...

Copyright© Prabhuraj Moogi
www.telprabhu.com

## ಬೇವು ಬೆಲ್ಲ ಬೇಕೇನಿಲ್ಲ...

ಇಂದೇ ಯುಗಾದಿಯಲ್ವ... ಯುಗ ಯುಗ ಕಳೆದರೂ ಮತ್ತೆ ಮತ್ತೆ ಬರುತಿದೆ ಅಂತ ಅಸಡ್ಡೆಯೇನೊ?.. ಮರೆತುಬಿಟ್ಟವರ ಹಾಗೆ ಕೇಳಿದೆ... ಹಾಗೆ ಅಲ್ವೇ ಮತ್ತೆ.. ನಮ್ಮ ಹೊಸ ವರ್ಷ ಯುಗಾದಿಯಿಂದ ಶುರು, ಎಲ್ರಿಗೂ ಜನೇವರಿ ಒಂದು ಗೊತ್ತು, ಯುಗಾದಿ ಮರೆತೇ ಬಿಟ್ಟಿರೊ ಹಾಗಿದೆ. ಹಬ್ಬಕ್ಕೆ ರಜೆ ಸಿಕ್ಕಿತ್ತು ಊರಲ್ಲಿದ್ದೆ ಒಬ್ಬನೇ... ಇವಳು ತವರುಮನೆಗೆ ಹೋಗೀದಾಳೆ...

ಬೇಡ ಬೇಡ ಈಗಲೇ ಕರಿದ ಹಪ್ಪಳದ ಹಾಗಿದೀನಿ ಅಂದ್ರೂ ಕೇಳದೇ ಅಮ್ಮ ಎಣ್ಣೆ ಸುರಿದು ಅಭ್ಯಂಜನ ಸ್ನಾನ ಮಾಡಿಸಿ ಆರತಿ ಮಾಡಿ, ಊಟಕ್ಕಿಟ್ಲು. ತರಹೇವಾರಿ ತಿಂಡಿ ಮಾಡಿಟ್ಟಿರ್ತಾಳೆ ಅಮ್ಮ, ತಿನ್ನೋಕೆ... ಎರಡು ಕಣ್ಣು, ಎರಡು ಕಿವಿ, ಕೊಟ್ಟ ದೇವ್ರು ಎರಡು ಹೊಟ್ಟೆ ಯಾಕೆ ಕೊಡಲಿಲ್ಲ ಅಂತ ಬಯ್ಕೋಬೇಕು ಅಷ್ಟು ಚೆನ್ನಾಗಿತ್ತು ಲಿಮಿಟ್ಟು ಮೀರಿ ತಿಂದೆ, ಹೊಟ್ಟೆ ಪಾಡಿನ ಚಿಂತೆಯಿಲ್ದೇ. ಬೇವು ಬೆಲ್ಲ ಜತೆಗೆ ತುಪ್ಪ ಶಾವಿಗೆ ಸೇರಿಸಿ ತಿಂದಿದ್ದು, ಬೇವು ಹಾಕಿ ಕಾಸಿದ ಬಿಸಿ ಬಿಸಿ ನೀರು ತಲೆ ಮೇಲೆ ಬಿದ್ದದ್ದು ಎಲ್ಲ ಸೇರಿ ಕೂತಲ್ಲೇ ತೂಕಡಿಸುತ್ತಿದ್ದೆ, ಇವಳ ಫೋನು ಬಂತು, ಬೆಲ್ಲದಂತ ಸಿಹಿ ನಿದ್ದೇಲಿ ಬೇವಿನಂತಾ ಕಹಿ ಕನಸು ಬಿದ್ದ ಹಾಗೆ.

ಅದೆಲ್ಲಿತ್ತೊ ಮೊಬೈಲು, ಊರಿಗೆ ಹೋದ್ರೆ ಎಲ್ಲಾದ್ರೂ ದೂರ ಬೀಸಾಡಿ ಬಿಟ್ಟಿರ್ತೇನೆ, ಅಮ್ಮ ಹುಡುಕಿ ಮಾತಾಡುತ್ತಿದ್ಲು, ಅವರಿಬ್ಬರ ಮಾತು ಮುಗಿಯೋ ಹೊತ್ತಿಗೆ ನನ್ನ ಇನ್ನೊಂದು ಜೊಂಪು ನಿದ್ದೆ ಮುಗಿಸಬಹುದು. ಅಂತೂ ಮೊಬೈಲು ಕೈಗೆ ಬಂತು, "ಯುಗಾದಿ ಹಬ್ಬದ ಹಾರ್ಧಿಕ ಶುಭಾಶಯಗಳೂಊಊ..." ನರಿ ಊಳಿಟ್ಟಂಗೆ! ಚೀರಿದ್ಲು. "ನಿಂಗೂ ನಂದು ಒಂದು ಅಂಥದ್ದೆ ಶುಭಾಶಯ ಇಟ್ಕೊ" ಅಂದೆ. "ಬಾಯಿಬಿಟ್ಟು ಶುಭಾಶಯ ಹೇಳಿದ್ರೆ ಏನು ಗಂಟು ಹೊಗತ್ತೇ, ನಾನೇ ಫೋನು ಮಾಡ್ಬೇಕು, ಆವಾಗ್ಲೂ ಹೀಗೆ" ಅಂತ ದಬಾಯಿಸಿದ್ಲು, "ಗಂಟು ಖರ್ಚಾಗತ್ತೆ, ಮೊಬೈಲು ಬಿಲ್ಲು ಬರತ್ತಲ್ಲ" ಅಂದೆ, ಇಂಥ ಹಬ್ಬ ಹರಿದಿನಗಳಂದು ಹತ್ತಿಪ್ಪತ್ತು ಫೋನು ಮಾಡಿರ್ತಾಳೆ, ಮೊಬೈಲು ಬಿಲ್ಲು ಬರದೇ ಏನು.

ಮಾತು ಸಾಗಿತ್ತು, "ಮತ್ತೆ ಏನು ಊಟ ಆಯ್ತಾ?" ಅಂದ್ಲು, "ಇಲ್ಲ ಈವತ್ತು ಉಪವಾಸ" ಅಂದೆ, ಮತ್ತಿನ್ನೇನು ಹಬ್ಬ ಊಟ ಮಾಡದೇ ಇರೋಕಾಗುತ್ತಾ, ಕೇಳೊದು ನೋಡಿ... "ನಿಮ್ಮ ಉಪವಾಸ ನಂಗೆ ಗೊತ್ತಿಲ್ವ, ಅಮ್ಮ ಮಾಡಿದ್ದು ಅಂತ ಗಡದ್ದಾಗಿ ತಿಂದು ಹೊಟ್ಟೆ ಇನ್ನಷ್ಟು ಊದಿಸಿಕೊಂಡು ಬರ್ತೀರ, ಬೆಂಗಳೂರಲ್ಲಿ ನೋಡ್ತೀನಿ" ಅಂದ್ಲು "ಇಲ್ಲ ಹಾಗೇನಿಲ್ಲ ಬಿಡು, ಎನ್ ಹೊಟ್ಟೆ ಅಳತೆನಾ ಮಾಡಿಟ್ಟುಕೊಂಡೀದೀಯಾ, ನಿಂಗೆ ಹೇಗ್ ಗೊತ್ತಾಗತ್ತೆ" ಅಂದ್ರೆ, "ಓಹ್ ಅಳತೆ ಇದೆಯಲ್ಲ, ಹಿಂದಿನಿಂದ ತಬ್ಬಿಕೊಂಡ್ರೆ, ಎರಡೂ ಕೈ ಸೇರಿ ಮೇಲೆ ನಾಲ್ಕು ಬೆರಳು ಜಾಗ ಉಳಿಯತ್ತೆ, ಒಂದೇ ಲೆಕ್ಕ ತಪ್ಪಿದ್ರೆ ನಾಲ್ಕು ದಿನಾ ಊಟಾನೇ ಹಾಕಲ್ಲ" ಅಂದ್ಲು ಊರಿಗೆ ಹೊದಮೇಲೆ ಇದ್ದೆ ಇದೆಯಲ್ಲ ನಿನ್ನ ಕೈ ಕಿರಿದಾಗಿವೆ ಅಂತ ವಾದಕ್ಕಿಳಿಯೋದು ಅಂತ ಸುಮ್ಮನಾದೆ. "ರೀ ಬೇವು ಬೆಲ್ಲ ತಿಂದ್ರಾ" ಅಂದ್ಲು. "ಓಹ್ ಅಮ್ಮ ಮಾಡಿದ್ಲು ಸೂಪರ್" ಅಂದೆ, "ನಾನೂ ಮಾಡೀದೀನಿ ಆದ್ರೆ ನೀವಿಲ್ಲಿ ಇಲ್ಲ ಕೊಡಬೇಕೆಂದ್ರೆ" ಅಂದ್ಲು. "ಇಷ್ಟೊತ್ತು ಬಯ್ದು ಬಯ್ದು ಬೇವು ಕೊಟ್ಟೀದೀಯಾ, ಇನ್ನು ಮುದ್ದೊಂದು ಕೊಡು ಬೆಲ್ಲದಂತೆ, ಬೇವು ಬೆಲ್ಲ ಸರಿಯಾಗತ್ತೇ" ಅಂದೆ, "ಛೀ ತುಂಟ" ಅಂತ ನಾಚಿ ಫೋನಿಟ್ಟವಳು ಮತ್ತೊಂದಿಷ್ಟು ಹೊತ್ತಿಗೆ ಮತ್ತೆ ಫೋನು ಮಾಡಿ ಬೆಲ್ಲ ಕೊಟ್ಲು!!!

ಹೀಗೆ ಬೇವು ಬೆಲ್ಲದಂತೆ ನಮ್ಮ ಜೀವನ ಸಾಗಿದೆ, ಮೊದಲೇ ವಿರೋಧಿ ನಾಮ ಸಂವತ್ಸರ, ವಿರೋಧಿಗಳು ಹೆಚ್ಚಾಗದಿರಲಿ, ನಮ್ಮಿಬ್ಬರ ನಡುವೆಯಂತೂ ಯಾವ ವಿರೋಧ ಬರದೇ ಹೀಗೆ ಚೆನ್ನಾಗಿರಲಿ ಎಂಬ ಆಶಯದೊಂದಿಗೆ,
ನಿಮಗೆಲ್ಲರಿಗೂ, ಯುಗಾದಿಯ ಹಾರ್ಧಿಕ ಶುಭಾಶಯಗಳುಊಊ....

Copyright© Prabhuraj Moogi
www.telprabhu.com

## ನಾಯಿ ಬೆಕ್ಕು, ನಾವು...

ಊರಿಂದ ಬರ್ತಿದ್ದಂಗೆ, ಅಲ್ಲೇನೇನಾಯ್ತು ಅಂತ ಹೇಳಿ ಅಂತ ದುಂಬಾಲುಬಿದ್ದಳು, ಹೇಳ್ದಿದ್ರೆ ಎಲ್ಲಿ ಬಿಡ್ತಾಳೆ... "ಅಪ್ಪ ಅಮ್ಮ ಚೆನ್ನಾಗಿದಾರೆ, ನಿನ್ನ ತುಂಟಾಟಗಳ ಕೇಳಿ ಮನಸಾರೆ ನಕ್ಕರು, ತಂಗಿ ಚೆನ್ನಾಗಿ ಓದ್ತಿದ್ದಾಳೆ, ಮತ್ತೊಂದು ಸಾರಿ ನಿನ್ನ ಬಿಟ್ಟು ಬಂದ್ರೆ ಅಷ್ಟೇ ಊರಲ್ಲಿ ಕಾಲು ಇಡಲು ಬಿಡಲ್ಲ ಅಂತ ತಾಕೀತು ಮಾಡಿದಾಳೆ, ಮತ್ತೆ ಚಿನ್ನು ಕೂಡ ಚೆನ್ನಾಗಿದಾಳೆ" ಅಂದೆ, "ಆಂ ಚಿನ್ನು!!! ಯಾರ್ರೀ ಅದು, ನಾ ಬರಲಿಲ್ಲ ಅಂತ ಮನೇಲಿ ನಿಮ್ಗೆ ಇನ್ನೊಂದು ಮದುವೆಯೇನಾದ್ರೂ ಮಾಡಿ ಬಿಟ್ರೊ ಏನ್ ಕಥೆ" ಅಂದ್ಲು. "ಒಹೋ ನಾನಂದೆ.. ಅವಳಿಲ್ಲಾ... ಅದ್ಕೆ ಟೆಂಪರರಿ ಒಂದು ಹತ್ತು ದಿನಕ್ಕೆ ಅಂತ ಇನ್ನೊಂದು ಮದುವೆ ಇಲ್ಲೇ ಮಾಡಿ ಅಂತ, ಅಮ್ಮಾನೆ ಮಾಡಲಿಲ್ಲ.. ಛೆ!" ಅಂತ ಬಾಯಿಬಿಟ್ಟೆ... ಕಿವಿ ಹಿಂಡುತ್ತ "ಹೂಂ ಆಸೆ ನೋಡು, ಚಿನ್ನು ಯಾರು ಅಂತ ಹೇಳ್ತೀರೊ ಇಲ್ವೊ?" ಅಂದ್ಲು. "ನಿನಗೆ ಇನ್ನೊಬ್ಬ ನಾದಿನಿ(ಗಂಡನ ತಂಗಿ) ಅವಳು" ಅಂದೆ, ಅವಳು ಬಿಡಬೇಕಲ್ಲ ಬಿಡಿಸಿ ಹೇಳೊವರೆಗೆ ಇನ್ನಷ್ಟು ತಿರುವಿದಳು ಕಿವಿ ಕಿತ್ತು ಬರುವ ಹಾಗೆ..."ಅಮ್ಮ ಬೆಕ್ಕು ಸಾಕಿದಾಳೇ, ಮಗಳಂಗೆ ನೊಡ್ಕೊತಾ ಇದ್ರೆ ನಿಂಗೆ ನಾದಿನಿನೇ ತಾನೆ"... ಅಂತ ಚೀರಿದೆ ಬಿಟ್ಲು.

ಕಿವಿ ಕೆಂಪಗಾಗಿತ್ತು! ಮತ್ತೆ ಅವಳೇ ನೀವುತ್ತಿದ್ಲು, ಹಿತವಾಗಿತ್ತು... ಹೇಗಿದೆ ಅದು ಅಂದದ್ದಕ್ಕೆ ಫೊಟೊ ತೆಗೆದು ತೋರಿಸಿದೆ, "ಥೇಟ ನಿಮ್ಮ ಹೋಲಿಕೆ, ಎಷ್ಟೇ ಅಂದ್ರು ನಿಮ್ಮ ತಂಗಿ ಅಲ್ವೆ!" ಅಂದ್ಲು, "ಅದ್ಯಾವ ಆ್ಯಂಗಲ್ಲಿನಲ್ಲಿ ನಾ ಹಾಗೆ ಕಾಣ್ತಿನೋ ತಮಗೆ" ಅಂದ್ರೆ ಕಿಲಕಿಲ ನಕ್ಳು. "ಎಲ್ಲಿಂದ ತಂದೀದಾರೆ" ಅಂದ್ಲು. ಅದೊಂದು ದೊಡ್ಡ ಕಥೆ ಅಂತಿದ್ದಂಗೆ ಅವಳ ಕಿವಿ ನೆಟ್ಟಗಾಯಿತು, ಕಥೆ ಅಂದ್ರೆ ಬಿಡ್ತಾಳಾ, ಹೇಳದಿದ್ರೆ ನನ್ನ ಕಿವಿ ಇನ್ನಷ್ಟು ಕೆಂಪಗಾಗುತ್ತೆ.

ಮನೇಲಿ ಇದು ಎಷ್ಟನೇ ಬೆಕ್ಕು ಗೊತ್ತಿಲ್ಲ, ಮೊದಲಿದ್ದದ್ದು "ಮೀನೂ(ಮಿನ್ನು)" ಅದು ತಂದು ಸಾಕಿದ್ದು, ಆಮೇಲೆ ಬಂದದ್ದು "ಜಾನಿ", ಆಗಾಗ ಬಂದು ಹೋಗುತ್ತಿದ್ದುದು "ಜಾಫ್ರಿ"(ಜಾಫ್ರಾಣಿ ಅಂತ ಒಂದು ಬೆಕ್ಕಿನ ತಳಿ), ಹೀಗೆ ಸಾಕಷ್ಟು ಬೆಕ್ಕು ಸಾಕಿ ಆಗಿದೆ ಈಗ ಎಲ್ಲಿಂದಲೊ ಬಂದು ನೆಲೆಯೂರಿರುವುದು "ಚಿನ್ನಿ ಅಲಿಯಾಸ ಚಿನ್ನು". ನಾವೆಲ್ಲ ಈಕಡೆ ಬಂದ ಮೇಲೆ **ಅಮ್ಮನಿಗೆ ಜತೆಯಾಗಿದ್ದು ಅವೇ, ಅವನ್ನೇ ಮಕ್ಕಳಂತೆ ಸಾಕಿದ್ದಾಳೆ**, ಹೀಗಾಗಿ ಅವು ನಮ್ಮ ಮನೆಯ ಸದಸ್ಯರ ಲಿಸ್ಟು ಸೇರಿಕೊಂಡಿದ್ದು. ಮೊದಲಿಗೆ ಒಂದೊಂದು ಬೆಕ್ಕು ಸತ್ತಾಗಲೂ ಅತ್ತಿದ್ದಾಳೆ ಅಮ್ಮ, ಅದೊಂಥರಾ ಭಾವನಾತ್ಮಕ ಸಂಭಂಧ. ಇತ್ತೀಚೆಗೆ ಆಸ್ತಿ, ಮನೆ ಅಂತ ವಿವಾದಗಳಿಂದ ಕೆಟ್ಟು ಹಳಸಿದ ಸಂಭಧಗಳಿಗಿಂತ ಅವೇ ನನಗೆ ಎಷ್ಟೋ ಚೆನ್ನಾಗಿವೆ ಅನಿಸತ್ತೆ, ಏನೂ ಬಯಸದೇ ನಿಸ್ವಾರ್ಥ ಪ್ರೀತಿ ನೀಡುವ ಅವು ನಿಜವಾದ ಸಂಭಂಧಿಗಳು.

ಆದರೂ ನನಗೆ ಬೆಕ್ಕುಗಳೆಂದರೆ ಅಷ್ಟಕ್ಕಷ್ಟೇ, ಮೊದಲಿಂದಲೂ ನಾಯಿ ಅಂದ್ರೆ ಅಚ್ಚುಮೆಚ್ಚು. ಆದರೆ ಅಮ್ಮ ಸಾಕಿದಾಗ ಬೇಡವೆಂದಿಲ್ಲ ಹಾಗೂ ಅವನ್ನೇನೂ ದೂರ ತಳ್ಳಿಲ್ಲ, ಆದರೂ ಬೆಕ್ಕಿಗೆ ಅಷ್ಟೊಂದು ಮನೆ ಮೇಲೆ ನಂಬುಗೆ ಕಡಿಮೆ ಅಂಥ ನನ್ನ ಭಾವನೆ, ಚೆನ್ನಾಗಿ ತಿನ್ನಲು ಸಿಗುವವರೆಗೆ ಇರುತ್ತವೆ ಇಲ್ಲದಿದ್ದರೆ ಇನ್ನೊಂದು ಮನೆ ಅಂಥ ಹೊರಡುತ್ತವೆ, ನಾಯಿ ಹಾಗಲ್ಲ ಒಂದು ರೊಟ್ಟಿ ತುಣುಕು ಹಾಕಿದ್ದರೂ, ಅದಕ್ಕೆ ನಂಬುಗೆ ಯಾವಾಗ್ಲೂ ಇದ್ದೆ ಇರುತ್ತೆ. ಮನೆಗೆ ನಾಯಿಯೊಂದು ಕೂಡ ಬರುತ್ತೆ, ಸೀದಾ ನಮ್ಮ ಮನೆಗೆ ಬರುತ್ತೆ ನೆನಪಿಟ್ಟುಕೊಂಡು, ಅದಕ್ಕೆ ಅಪ್ಪ "ಮಲ್ಲು" ಅಂತ ಹೆಸರಿಟ್ಟಿದ್ದಾರೆ, ಒಂದು ರೊಟ್ಟಿ ಹಾಕಿದ್ರೆ ಕೂತು ಒಂದು ಘಂಟೆ ಮನೆ ಕಾದು ಹೋಗತ್ತೆ, ಮನೇಲಿರೊ ಬೆಕ್ಕು ಹಾಲು ಹಾಕೊವರೆಗೆ ಮಾತ್ರ ಕಾಲ ಕಾಲಲ್ಲಿ ಬರುತ್ತೆ, ಆಮೇಲೆ ಕೈಗೆ ಸಿಕ್ಕರೆ ಕೇಳಿ. ಅಜ್ಜ ಸಾಕಿದ ನಾಯಿ "ಟಿಪ್ಪು" (ಟಿಪ್ಪುಸುಲ್ತಾನ) ಊರಿಗೆ ಪ್ರಸಿದ್ದ, ಅಜ್ಜ ಇರುವರೆಗೆ ಮಾತ್ರ ಮನೇಲಿದ್ದದ್ದು, ಆಮೇಲೆ ಮರಳಲೇ ಇಲ್ಲ, ಹಾಗೆ ನಂಬುಗೆಗೆ ಸಾಕ್ಷಿಯಾಗಿರುವ ಇವೆಲ್ಲ ನನ್ನ ನಾಯಿ ಪ್ರೀತಿ ಇನ್ನಷ್ಟು ಗಟ್ಟಿ ಮಾಡಿದ್ದವು.

"ರೀ ನಾವು ಸಾಕಿದ್ರೆ ಹೇಗೆ" ಅಂದ್ಲು ಇದನ್ನೆಲ್ಲ ಕೇಳಿ, "ಏನು" ಅಂದ್ರೆ "ಬೆಕ್ಕು ಬೇಕು" ಅಂದ್ಲು, "ಬೆಕ್ಕು ಬೇಡ ನಾಯಿ ಆದ್ರೆ ಓಕೇ" ಅಂತ ನಾನು. ಶುರುವಾಯಿತು ಮಾತಿನ ಚಕಮಕಿ... "ಅಮ್ಮ ಸಾಕೀದಾರೆ, ನಂಗೂ ಬೇಕು" ಅಂತ ಇವಳು, "ಅಮ್ಮ ಬೆಕ್ಕು ಸಾಕಿದ್ರೆ, ನಾವು ನಾಯಿ ಸಾಕೊಣ" ಅಂತ ನಾನು. ದೊಡ್ಡ ಕೊಳೀಜಗಳವೇ ಶುರುವಾಯ್ತು. ವಿರೋಧಿ ನಾಮ ಸಂವತ್ಸರ ದೊಡ್ಡ ವಿರೊಧವನ್ನೇ ಸೃಷ್ಟಿಸಿತ್ತು, "ಸಾಕಿದರೆ ನಾಯಿ, ಇಲ್ಲಾಂದ್ರೆ ಇಲ್ಲ" ಅಂತ ನಾನೂ ಪಟ್ಟು ಹಿಡಿದೆ.

"ಲೇ ಚಿಕ್ಕ ನಾಯಿಮರಿ ನಿನ್ನ ಹಿಂದೆ ಹಿಂದೆ ಓಡಾಡುತ್ತಿದ್ರೆ ಊಹಿಸಿಕೊಳ್ಳು ಎಷ್ಟು ಚೆನ್ನಾಗಿರ್ತದೆ ನೋಡು, ಬೆಕ್ಕು ಬರೀ ಹಾಲು, ಇಲ್ಲ ತಿನ್ನಲು ಏನಾದ್ರೂ ಬೇಕೆಂದಾಗ ಮಾತ್ರ ಬರುತ್ತೆ" ಅಂದೆ, "ನೀವಿದೀರಲ್ಲ ಹಿಂದೆ ಹಿಂದೆ ಓಡಾಡೋಕೆ, ಅದ್ಯಾಕೆ ಬೇಕು" ಅಂತಂದ್ಲು, "ರೀ... ಬೆಕ್ಕು ಹಾಗೆ ಮಡಿಲಲ್ಲಿ ಕೂತು, ತಲೆ ಸವರುತ್ತಿದ್ರೆ ಅದು ನಿದ್ದೆ ಹೋಗುತ್ತೆ, ಏನ್ ಚೆನ್ನಾಗಿರತ್ತೆ ಊಹಿಸಿ" ಅಂದ್ಲು "ಅದಕ್ಕೆ ಬೆಕ್ಕೇ ಯಾಕೆ ಬೇಕು ನನ್ನ ತಲೇನೆ ಸವರು ನಿದ್ದೆ ಹೋಗ್ತೀನಿ" ಅಂದೆ. ಫೋನು ಮಾಡಿ ಅಮ್ಮನ ಸಲಹೆ ಕೇಳಿದ್ಲು, ಅಮ್ಮ ಇವಳ ಸಪೊರ್ಟಿಗೆ ಬಂದ್ಲು, "ನಾಯಿ ಅಂದ್ರೆ ನ್ಯಾಯ" ತಿಳಿಸಿ ಹೇಳು ಅಂತ

Copyright© Prabhuraj Moogi
www.telprabhu.com

ಅಮ್ಮ. "ಅಲ್ಲ ನಾಯಿ ಅಂದ್ರೆ ನಂಬುಗೆ" ಅಂತ ನಾನು, "ಯಾರನ್ನಾದ್ರೂ ಕಚ್ಚಿದ್ರೆ" ಅಂದ್ರೆ, "ಕಚ್ಚೊ ನಾಯಿ ಬೇಡ, ಬೊಗಳೊ ನಾಯಿ ತರೋಣ" ಅಂತಂದೆ, "ರಾತ್ರಿಯೆಲ್ಲ ಬೊಗಳುತ್ತೆ, ನಿದ್ದೆ ಹೇಗೆ" ಅಂತ ಇವಳು ವಾದಕ್ಕಿಳಿದ್ಲು, ಹೌದಲ್ವ ರಾತ್ರಿ ಬೊಗಳತ್ತೆ ಅದೊಂದು ಪ್ರಾಬ್ಲಂ... ಆದರೆ ಸೋಲೊ ಹಾಗಿಲ್ಲ "ಬೆಕ್ಕು ರಾತ್ರಿಯೆಲ್ಲ ಅಲ್ಲಿ ಇಲ್ಲಿ ಇಲಿ ಸಿಗುತ್ತೇನೊ ಅಂತ ಹುಡುಕಾಡತ್ತೆ, ಮನೇಲೇ ಸಾಮಾನು ಚೆಲ್ಲಾಪಿಲ್ಲಿಯಾಗತ್ತೆ" ಅಂತ ನಾನು, "ಅದೂ ಸರಿ ಸ್ವಲ್ಪ ಅಡ್ಜಸ್ಟ ಮಾಡ್ಕೊಬೇಕಪ್ಪ" ಅಂದ್ಲು ನಾನೂ "ನಾಯಿ ಬೊಗಳಿದ್ರೆ, ಸ್ವಲ್ಪ ಅಡ್ಜಸ್ಟ ಮಾಡ್ಕೊಬೇಕಪ್ಪ" ಅಂದೆ.

ಇದು ಮುಗಿಯದ ವಿವಾದ, ನಾಯಿ ಕಚ್ಚತ್ತೆ ಅಂದ್ರೆ ಬೆಕ್ಕು ಪರಚತ್ತೆ, ಹೀಗೆ ಆಯ್ತು... ಮಧ್ಯಾನದ ಹೊತ್ತಿಗೆ ಹೊಟ್ಟೆ ಹಸಿಯಿತು, ಅವಳೊ ಧರಣಿಗಿಳಿದಳು, ಬೆಕ್ಕಿನಂತೆ ಏನೊ ಸ್ವಲ್ಪ ತಿಂದು ಸುಮ್ಮನಾದ್ಲು, ನನಗೊ ನಾಯಿಯಂತೆ ಬ್ರೆಡ್ಡು ಬಿಸ್ಕಿಟ್ಟೆ ಗತಿಯಾಗುತ್ತೆ ಅನ್ನಿಸಿತು. ನಾನೂ ಯೋಚಿಸಿದೆ ಈ ನಾಯಿ ಸಾಕಿದ್ರೆ, ಬೊಗಳತ್ತೆ, ಕಚ್ಚಬಹುದು, ನಂಬುಗೆ ಪ್ರಾಣಿ, ಆದ್ರೆ ಊರಿಗೆ ಹೊರಟ್ರೆ ಎಲ್ಲಿ ಬಿಟ್ಟು ಹೋಗೋದು, ಬೆಕ್ಕಾದ್ರೆ ಮನೇಲಿರತ್ತೆ, ಮತ್ತೊಬ್ಬರಲ್ಲಿ ಕೊಟ್ಟು ಹೋದ್ರೂ ಇಟ್ಕೊತಾರೆ, ಬೊಗಳಲ್ಲ, ಕಚ್ಚೊದು ಕಮ್ಮಿ ತನ್ನ ಪಾಡಿಗೆ ತಾನಿರತ್ತೆ.

ಅವಳೂ ಯೋಚಿಸಿರಬೇಕು... ನಾಯಿ ಹಾಗೆ ಬೆಕ್ಕು ನಂಬಿಕೆಗೆ ಅರ್ಹವಲ್ಲ, ಹಾಲು ಎಲ್ಲ ಕದ್ದು ಕುಡಿಯತ್ತೆ, ನಾಯಿ ಹಾಕೊವರೆಗೆ ಸುಮ್ನೆ ಕೂತಿರತ್ತೆ ಆದ್ರೆ ದ್ರೊಹ ಮಾಡಲ್ಲ, ಮನೆ ಬೇರೆ ಕಾಯುತ್ತೆ, ನಾನೂ ಒಬ್ಬೆ ಇರ್ತೀನಿ ಜತೆಗೆ ಒಳ್ಳೆ ಸೆಕ್ಯೂರಿಟಿ ಆದ ಹಾಗಾಗುತ್ತೆ, ಬೆಕ್ಕು ಮನೇಲಿ ಒಂದು ಗಾಜಿನ ಸಾಮಾನೂ ಉಳಿಸಲಿಕ್ಕಿಲ್ಲ ಅಂತ.

ಸಂಜೆಗೆ ಮತ್ತೆ ಸಭೆ ಸೇರಿದಂತಿತ್ತು, "ರೀ" ಅಂದ್ಲು ಮೆಲ್ಲಗೆ ಬೆಕ್ಕು "ಮ್ಯಾಂ" ಅಂದ ಹಾಗೆ. "ಹೂಂ" ಅಂದೆ ನಾಯಿ "ಗುರ್ರ್" ಅಂದ ಹಾಗೆ, "ಟೀ, ಬೇಕಾ" ಅಂದ್ಲು, "ನಿನ್ನ ಬೆಕ್ಕಿಗೆ ಹಾಲು ಹಾಕಲು ಬೇಕಲ್ಲ, ನಮಗೆಲ್ಲಿ ಇನ್ನು ಟೀ ಸಿಗೊದು" ಅಂದೆ, ಟೀ ಮಾಡಿ ಜತೆಗೆ ಬಿಸ್ಕಿಟ್ಟು ತಂದಿಟ್ಟು "ನಾಯಿ ಬಿಸ್ಕಿಟ್ಟೇನಲ್ಲ ತುಗೊಳ್ಳಿ" ಅಂದ್ಲು. ಮೆಲ್ಲಗೆ ಒಂದೊಂದು ಬಿಸ್ಕಿಟ್ಟು ಚಹದಲ್ಲಿ ಅದ್ದಿ ತಿನ್ನುತ್ತ "ಅಮ್ಮನಿಗೇ ಹೇಳು, ಬೆಕ್ಕಿನ ಮರಿಯೊಂದನ್ನ ಕಳಿಸೊಕೇ!!!" ಅಂದೆ ನಾ ರಾಜಿಯಾಗಿದ್ದೆ... ಅವಳು ಎನ್ ಬೇಡ "ನಾಯಿಮರಿ ತುಗೊಂಬನ್ನಿ, ಯಾವುದಾದ್ರೂ ಒಳ್ಳೆ ಜಾತೀದು" ಅಂದ್ಲು, ಅಯ್ಯೋ ಇದೊಳ್ಳೆ ಕಥೆಯಾಯ್ತಲ್ಲ, ಇಷ್ಟೊತ್ತು ಬೆಕ್ಕು ಅಂತಿದ್ದವಳು ಈಗ ನಾಯಿ ಅಂತೀದಾಳೇ, ನಾನೋ ನಾಯಿ ಬಿಟ್ಟು ಬೆಕ್ಕಿಗೆ ಸೈ ಅಂದರೆ.

"ನೀನೇನು ನನಗಾಗಿ ತ್ಯಾಗ ಮಾಡಬೇಕಿಲ್ಲ, ಬೆಕ್ಕೆ ತರೋಣ ಬಿಡು" ಅಂದ್ರೆ, ನಾಯಿಮರಿ ಅಂತ ಹಠಕ್ಕಿಳಿದಳು, ಮತ್ತೆ ವಾದ ವಿವಾದವಾಯ್ತು, ಇಬ್ಬರ ನಿಲುವುಗಳು ಈ ಸಾರಿ ಅದಲು ಬದಲಾಗಿದ್ದವು. ಮಾವನಿಗೆ ಫೋನು ಮಾಡಿ ಕೇಳಿದ್ರೆ, **"ನಾಯಿ ಬೆಕ್ಕು ಎನ್ ಸಾಕ್ತೀರ, ಎರಡು ಕೋಳೀನೊ ಎಮ್ಮೇನೊ ಸಾಕಿ, ಮೊಟ್ಟೆ, ಹಾಲಾದ್ರೂ ಆದೀತು"** ಅಂದ. ಇವಳು ಸಗಣಿ ಬಳಿಯೋದು, ಹಾಲು ಕರೆಯಲು ಹೋಗಿ ಒದೆಸಿಕೊಳ್ಳೊದು... ನಾ ಕೊಳಿ ಹಿಡಿಯಲು ಒಡಾಡೊದು, ಹಿಡಿದು ಕುಕ್ಕಿಸಿಕೊಳ್ಳೊದು... ಊಹಿಸಿಯೇ ನಗು ಬಂತು. ಅದ ಕೇಳಿ, ಅವಳು "ಬೆಳ್ಳಿ ಮೂಡಿತೊ ಕೋಳಿ ಕೂಗಿತೊ" ಅಂತ ಹಾಡಿ ನಕ್ಕರೆ, "ಎಮ್ಮೇ ನಿನಗೆ ಸಾಟಿ ಯಾರು, ಅರೆ ಹೊಯ್ಂ ಅರೆ ಹೊಯ್ಂ..." ಅಂತನ್ನುತ್ತ ಬಿದ್ದುಬಿದ್ದು ನಕ್ಕೆ.

ಕೊನೆಗೆ "ಎರಡೂ ಸಾಕಿದರೆ ಹೇಗೆ" ಅಂತಂದೆ... "ಎಮ್ಮೆ ಕೊಳೀನಾ" ಅಂದ್ಲು, ದುರುಗುಟ್ಟಿ "ನಾಯಿ ಬೆಕ್ಕು" ಅಂದೆ... "ರೀ ಒಂದಕ್ಕೊಂದು ಕಚ್ಚಾಡಿದರೆ, ಈಗ ನಾವೇ ಇಲ್ವಾ ನಾಯಿ ಬೆಕ್ಕು ಅಂತ ಆಗಿಂದ ಕಾದಾಡುತ್ತಿದ್ದೇವೆ, ಇನ್ನು ಅವೆರಡೂ ಸೇರಿದ್ರೆ ಮುಗೀತು" ಅಂದ್ಲು. "ಎಲ್ಲ ಜತೆಯಾಗಿರ್ತವೆ ಎನಾಗಲ್ಲ" ಅಂದೆ. "ಹಾಗೆ ಎಮ್ಮೆ ಕೊಳೀನೂ ಸಾಕಿ ಚೆನ್ನಾಗಿರತ್ತೆ" ಅಂದ್ಲು, "ಏನ್ ಮನೇನಾ ಪ್ರಾಣಿ ಸಂಗ್ರಹಾಲಯ ಮಾಡ್ಬೇಕು ಅಂತೀದೀಯ, ಎಲ್ಲ ಸಾಕಿ" ಅಂತ ರೇಗಿದೆ.

ಹಾಗೂ ಹೀಗೂ ಮಾತಿನಲ್ಲೇ ರಾತ್ರಿಯಾಯ್ತು, ಬೆಕ್ಕಿನಂತೆ ಮಡಿಲಲ್ಲಿ ಬಿದ್ದುಕೊಂಡು ಮಾತಾಡುತ್ತಿದ್ಲು, ತಲೆ ಸವರುತ್ತಿದ್ದೆ, "ಲೇ ಹುಲಿ ಸಾಕಿದ್ರೆ ಹೇಗೆ' ಅಂದೆ, ಹೆದರಿ ಬಾಚಿ ತಬ್ಬಿಕೊಂಡ್ಲು ಗಟ್ಟಿಯಾಗಿ, "ಸಿಂಹ ಸಾಕಿದ್ರೆ" ಅಂದೆ, "ಏನ್ ಹೆದರಿಸಿದ್ರೂ ಅಷ್ಟೇ, ಇನ್ನೂ ಗಟ್ಟಿಯಾಗಿ ತಬ್ಬಿಕೊಳ್ಳೊದು ಏನ ಸಾಧ್ಯ ಇಲ್ಲ", ಅಂದ್ಲು ಹೆದರಿಸಿದ್ರೆ ಇನ್ನೂ ಗಟ್ಟಿ ತಬ್ಬಿಕೊಳ್ಳುವಳೆಂದು ಮಾಡಿದ್ದೆ!.. "ಹೂಂ ಮತ್ತೆ ಎನ್ ಸಾಕೊದು ತೀರ್ಮಾನ ಆಯ್ತು" ಅಂದೆ, 'ಕೊಳೀನೂ ಬೇಡ ಕುರೀನೂ ಬೇಡ" ಅಂದ್ಲು.. "ಕುರೀ ಬಗ್ಗೆ ಇನ್ನೂ ನಾವು ಮಾತಾಡಿಲ್ಲ" ಅಂದೆ, "ರೀ ಸಾಕು, ಯಾವ ಪ್ರಾಣಿನೂ ಬೇಡ ನಾವೇ ಇಬ್ಬರು ಇದೀವಲ್ಲ" ಅಂದ್ಲು "ಅದೇ ನಾಯಿಮರಿ ಹಾಗೆ ನಿನ್ನ ಹಿಂದ್‌ಹಿಂದೆ ಸುತ್ತಲು, ಕಚ್ಚಲು" ನಾನಿದೀನಲ್ಲ ಅಂತ ಗಲ್ಲ ಕಚ್ಚಿದೆ, ಚೀರಿ "ನಾನೂ ಇದೀನಲ್ಲ, ಬೆಕ್ಕಿನ ಹಾಗೆ ಪರಚಲು" ಅಂತ ತನ್ನ ಇಷ್ಟುದ್ದ ಉಗುರು ತೋರಿಸಿದಳು... ಅಲ್ಲಿಂದ ಓಟಕ್ಕಿತ್ತೆ...

Copyright© Prabhuraj Moogi
www.telprabhu.com

## ಹಿಂಜರಿತ ಆರ್ಥಿಕವಾಗಿ, ಮಾನಸಿಕವಾಗಿ...

ಸ್ನಾನ ಮಾಡಿ ತಲೆ ಒರೆಸಿಕೊಳ್ಳುತ್ತಾ ಪಡಸಾಲೆಗೆ(ಹಾಲ್) ಬಂದೆ ಗಡಿಯಾರದತ್ತ ಕಣ್ಣು ಹಾಸಿದರೆ ಆಗಲೇ ಏಳೂವರೆಯಾಗಿತ್ತು, ಅಯ್ಯೋ ಇನ್ನು ತಯ್ಯಾರಾಗಿ ಹೊರಡಬೇಕೆಂದರೆ ಎಂಟಾಗುತ್ತದೆ, ಆಫೀಸಿನಲ್ಲಿ ಕೆಲಸ ಒಟ್ಟಿದೆ, ವಾರ ರಜೆ ತೆಗೆದುಕೊಂಡಿದ್ದರ ಪರಿಣಾಮ ಅಲ್ವೇ, ಅಂತ ಗಡಬಡಿಸಿದೆ, ಅವಳಿಗೂ ಟಿಫಿನ್ನು ಮಾಡುತ್ತೀನೊ ಇಲ್ವೋ ಅಂತ ಗುಮಾನಿ ಎದ್ದಿರಬೇಕು, ಮಾಡಿದ ಚಪಾತಿಗೆ ಸ್ವಲ್ಪ ತುಪ್ಪ ಶೇಂಗಾ(ನೆಲಗಡಲೆ)ಚಟ್ನಿ ಸವರಿ ಸುರುಳಿ ಮಾಡಿ ಕೊಟ್ಟಳು, ಮೆಚ್ಚಿಗೆಯಿಂದ ಮುಗುಳ್ನಕ್ಕು ಅದನ್ನೇ ಮೆಲ್ಲುತ್ತ ಹಾಗೇ ಬ್ಯಾಗಿಗೆ ಏನೇನೋ ತೂರಿಸಿಕೊಳ್ಳುತ್ತಿದ್ದೆ. "ಇಂದೂ ಕರೆಂಟ ಬಿಲ್ಲು ತುಂಬೊದು ಆಗಲ್ಲ ಅಲ್ವಾ, ಬಾಡಿಗೆ ಕೊಟ್ಟಿಲ್ಲ, ಗ್ಯಾಸ್ ಬೇರೆ ಬರುತ್ತೆ." ಅಂದ್ಲು. ಕಳೆದ ನಾಲ್ಕು ದಿನಗಳಿಂದ ಇದೇ ಆಗಿದೆ, ಕೆಲಸದೊತ್ತಡದಲ್ಲಿ ಏನೂ ಮಾಡಲಾಗಿಲ್ಲ, ಇಂದು ಬಿಡಲಾಗಲ್ಲ, ಎಲ್ಲ ಆನಲೈನ ತುಂಬಿ ಕೈತೊಳೆದುಕೊಳ್ಳುತ್ತಿದ್ದ ನನಗೆ ಇದೊಂದು ಕರೆಂಟು ಬಿಲ್ಲು ಆನಲೈನ ಮಾಡಿಕೊಳ್ಳಲಾಗಿರಲಿಲ್ಲ, ಅಲ್ಲದೇ ಮನೇಲೂ ದುಡ್ಡಿರಲಿಲ್ಲ. "ಒಂದು ಕೆಲ್ಸ ಮಾಡು ಈ ಕಾರ್ಡ್ ತುಗೊ, ಪಿನ್ ****(ನಿಮಗೆ ಹೇಳ್ತೀನಿ ಅನ್ಕೊಂಡ್ರಾ!!) ದುಡ್ಡು ತೆಗೆಸಿಕೊಂಡು ಬಂದು ಬಿಲ್ ತುಂಬಿ, ಬಾಡಿಗೆ ಕೊಡು, ನನಗೆ ಬಹಳ ಲೇಟಾಗುತ್ತದೆ, ಮೀಟಿಂಗ ಬೇರೆ ಇದೆ" ಅಂತಂದೆ. ಅವಳು ಆಕಾಶವೇ ತಲೆ ಮೇಲೆ ಬಿದ್ದವರ ಹಾಗೆ ಮುಖ ಮಾಡಿ "ನಂಗೆಲ್ಲ ಗೊತ್ತಾಗಲ್ಲ, ನಾಳೆ ನೊಡೋಣ" ಅಂದ್ಲು. ಸಿಟ್ಟು ಬಂತು ಆದರೆ ತಡೆದುಕೊಂಡು ಏನೂ ಮರು ಮಾತಾಡದೇ ಹೊರಟೆ.

ಅವಳಿಗೆ ಗೊತ್ತಿಲ್ಲ ಅಂತಲ್ಲ, ಪ್ರಶ್ನೆ ಅದಲ್ಲ ಇಲ್ಲಿ, ಕೇಳಿದರೆ ಹೇಗೆಂದು ನಾ ಹೇಳುತ್ತಿದ್ದೆ, ಆದರೆ ಅವಳಿಗೆ ಅದೆಲ್ಲ ಮಾಡಲು ಹೆದರಿಕೆ ಒಂಥರಾ ಹಿಂಜರಿತ. ತನ್ನಿಂದ ಮಾಡಲಾಗಲಿಕ್ಕಿಲ್ಲ ಎನ್ನೊ ಭಯ, ಒಬ್ಬಳೇ ಹೋಗಬೇಕಲ್ಲ ಅಂತ ಹಿಂದಡಿಯಿಡುತ್ತಿದ್ದಾಳೆ ಅಷ್ಟೇ. ಇದೇ ನಾ ಹೋಗಲಾಡಿಸಬೇಕಿತ್ತು. ಅವಳಲ್ಲಿ ಆತ್ಮವಿಶ್ವಾಸ ತುಂಬಿ ನನ್ನ ಮೇಲಿನ ಅವಲಂಬನೆ ಕಡಿಮೆ ಮಾಡಿಸಬೇಕಿತ್ತು.

ರಾತ್ರಿ ಬಂದಾಗ ಲೇಟಾಗಿತ್ತು, ದುಡ್ಡು ತೆಗೆಸಿಕೊಂಡು ಬಂದಿದ್ದೆ, ಅವಳಿಗೆ ಕೊಟ್ಟು ಗ್ಯಾಸಗೆ ಕೊಡು ಅಂಥೇಳಿ ಉಳಿದದ್ದು ನಿನ್ನಹತ್ರ ಇರ್ಲಿ ಬೀರುನಲ್ಲಿಡು ಅಂದೆ. ಮತ್ತೇನು ಮಾತಾಡಲಿಲ್ಲ, ಅವಳಿಗೆ ಗೊತ್ತಾಗಿತ್ತು ತಾನು ಮಾಡಲ್ಲ ಅಂದಿದ್ದು ಸಿಟ್ಟು ತರಿಸಿದೆಯೆಂದು, ಆದ್ರೆ ಮಾತಾನಾಡಲಾಗದೇ ಸುಮ್ಮನಾದ್ಲು. ಮರುದಿನ ಬಿಲ್ಲು ತುಂಬಿ ಬಾಡಿಗೆ ಕೊಟ್ಟು ಮುಗಿಸಿದೆ.

ಅಂತೂ ಕೆಲಸ ಒಂದು ಹಂತಕ್ಕೆ ಬಂದು, ಸ್ವಲ್ಪ ಬಿಡುವಾಯಿತು. ಅಂದು ಶುಕ್ರವಾರ, ಸಂಜೆ ಟೀವೀ ನೊಡುತ್ತಾ ಕುಳಿತಿರಬೇಕಾದರೆ, ಹತ್ತಿರ ಬಂದು ಕುಳಿತಳು, ಬೇರೆ ಯಾವಾಗಲೂ ಹಾಗೆ ಆಕೆ ಬಂದು ಕುಳಿತರೆ ಜಾರಿ ಮಡಿಲಲ್ಲಿ ಬಿದ್ದು ಬಿಡುವವ, ಇಂದು ಬೇಕೆಂದಲೇ ಸುಮ್ಮನಿದ್ದೆ ತಾನೇ ಎಳೆದು ಮಡಿಲಲ್ಲಿ ಬೀಳಿಸಿಕೊಂಡು, "ಏನು ನನ್ನ ಮೇಲೆ ಬೇಜಾರಾ... ಒಂಥರಾ ಇದೀರಾ, ನಾ ಬ್ಯಾಂಕಿಗೆ ಹೋಗಿ ಬರಲ್ಲ ಅಂದಿದ್ದಕ್ಕೆ ತಾನೇ, ನಂಗೊತ್ತು" ಅಂತ ತಾನೇ ಪ್ರಶ್ನೆ ಕೇಳಿ ಉತ್ತರವನ್ನೂ ಹೇಳಿದಳು, ಸುಮ್ಮನೇ ನಕ್ಕೆ ರೇಜಿಗೆದ್ದಳು "ರೀ ಬಯ್ಯೋದಿದ್ರೆ ಬಯ್ದು ಬಿಡಿ, ಆದರೆ ಹೀಗೆ ಸುಮ್ಮನಿದ್ದು ಸತಾಯಿಸಬೇಡಿ" ಅಂತ ಮುಖ ತಿರುಗಿಸಿದಳು, ಈಗ ಮತ್ತೆ ನಕ್ಕಿದ್ರೆ ಹಿಡಿದುಕೊಂಡು ನಾಲ್ಕು ಬಾರಿಸಿರೋಳು ಅದಕ್ಕೇ ಬಾಯಿ ತೆರೆದೆ "ಹೂಂ, ಮತ್ತೆ ನಾ ಹೇಳಿದ್ದೊಂದು ಮಾತು ಕೇಳುತ್ತಿಯೆಂದಾದರೆ ಮಾತ್ರ" ಅಂದೆ "ನಾನ್ಯಾವಾಗ ಕೇಳಿಲ್ಲ?" ಅಂತ ಮರುಪ್ರಶ್ನೆ ಬಂತು "ಹಾಗಾದ್ರೆ ಬಯ್ಯಲಾ" ಅಂದೆ "ಏನು ನೀವೀಗ ಬಯ್ಯಲು ನಾನ್ ನಿಮ್ಮ ಮಾತು ಕೇಳ್ಬೇಕಾ" ಅಂತ ಕಚಗುಳಿಯಿಟ್ಟಳು, ಎದ್ದು ಕುಳಿತೆ. "ನಾಳೆ ನಿನಗೊಂದು ಬ್ಯಾಂಕ ಅಕೌಂಟ ತೆಗೆಯೋಣ" ಅಂದೆ, "ನನಗ್ಯಾಕೆ ಬ್ಯಾಂಕ ಅಕೌಂಟ ಎಲ್ಲಾ, ನಾನೇನು ಮಾಡಿ ಅದನ್ನ, ಅದೆಲ್ಲ ನಂಗೆ ಗೊತ್ತಾಗಲ್ಲ ಬಿಡಿ" ಅಂದ್ಲು ಮತ್ತದೇ ವರಸೆ... "ನಾನ್ಯಾವಾಗ ಕೇಳಿಲ್ಲ ಅಂತನ್ನೋದು, ಹೇಳಿದ್ದಕ್ಕೆಲ್ಲ ಸುಮ್ನೆ ವಾದ ಹಾಕೋದು" ಅನ್ನುತ್ತ ಎದ್ದು ಹೊರಟೆ. ಹಿಡಿದೆಳೆದು ಕೂರಿಸಿ **"ಜೀ ಹುಜೂರ, ತಮ್ಮ ಅಪ್ಪಣೆಯಂತಾಗಲಿ"** ಅಂದ್ಲು. ತಲೆಮೇಲೆ ಇನ್ನೂ ಪ್ರಶ್ನಾರ್ಥಕ ಚಿಹ್ನೆಯಿನ್ನೂ ಕಾಣುತ್ತಿತ್ತು...

ಮರುದಿನ ಫೊನು ಮಾಡಿದರೆ, ಬ್ಯಾಂಕಿನ ಹುಡುಗನೊಬ್ಬ ಬಂದು ಫಾರ್ಮು ತುಂಬಿಸಿದ, ಅವಳ ಸಹಿ ಮಾಡಿ ಕಳಿಸಿದ್ದಾಯ್ತು. ಓಹ್ ಅಕೌಂಟ್ ಅಂದ್ರೆ ಇಷ್ಟೇನಾ ಅಂತ ಅವಳೂ ಖುಶಿಯಾದಳು, ಅವಳಿಗೇನು ಗೊತ್ತಿತ್ತು ಇನ್ನೂ ಏನೇನು ಕಾದಿದೆಯೆಂದು...

ಶುರುವಾಯಿತು ನೋಡಿ... ಐನೂರು ಕೈಗಿತ್ತೆ, "ಬ್ಯಾಂಕಿಗೆ ಹೋಗಿ ತುಂಬಿ ಬಾ" ಅಂದೆ, ಇದ್ಯಾಕೆ ಅನ್ನುವಂತೆ ನನ್ನತ್ತ ನೋಡಿದಳು, ಮತ್ತೆ ಅಕೌಂಟ್ ತೆಗೆದದ್ದು ಯಾಕೆ... ಅವಳ ಸಿದ್ಧ ಉತ್ತರ ಬಂತು "ನಂಗೊತ್ತಿಲ್ಲ" ಅಂತ, "ನಾ ಹೇಳುತ್ತೀನಲ್ಲ" ಅಂತ ನಾ, "ರೀ ನೀವೂ ಜತೆಗೆ ಬನ್ನಿ, ಪ್ಲೀಜ ನಂಗೊತ್ತಾಗಲ್ಲ" ಅಂತಂದ್ಲು, "ಒಬ್ಬಳೇ ಹೋಗಬೇಕು

Copyright© Prabhuraj Moogi
www.telprabhu.com

ತುಂಬಿ ಬರಬೇಕು" ಅಂತ ನಿರಾಕರಿಸಿದರೆ, "ನಂಗೊತ್ತಿಲ್ಲ ನನಗ್ಯಾಕೆ ಇದೆಲ್ಲ, ಬೇಡ, ಅಕೌಂಟ ತೆಗೆಯಲು ಹೇಳಿದಿರಿ ಮಾಡಿದೆ, ಇದೆಲ್ಲ ನನ್ನ ಕೈಲಾಗಲ್ಲ" ಅಂತ ಕೈಚೆಲ್ಲಿದಳು. ನಾ ಬಿಡಬೇಕಲ್ಲ. "ಯಾಕೆ ನಿನ್ನ ಕೈಲಾಗಲ್ಲ, ಇದೇ ನಿನ್ನ ತೊಂದ್ರೆ, ಬರೀ ಎಲ್ಲದಕ್ಕೂ ಹಿಂಜರಿತ, ಮಾಡಾಕಾಗಲ್ಲ, ಗೊತ್ತಿಲ್ಲ, ಕೈಲಾಗಲ್ಲ... ಇದೇ ಮಾತು, ಮಾಡಬೇಕೆಂದರೆ ಎಲ್ಲ ಆಗುತ್ತದೆ, ನಾ ಹೇಳುತ್ತೇನೆ ಹೇಗೆ ಎಲ್ಲ ಅಂತ, ನಡೆ" ಅಂತಂದೆ. "ನಾನೊಲ್ಲೆ, ನಾ ಉಳಿಸಿ ಮಾಡಬೇಕೇನಿದೆ ಈಗ" ಅಂತ ಮತ್ತದೇ ರಾಗ, "ಪ್ರಶ್ನೆ ಉಳಿಸುವುದಲ್ಲ, ನೀ ಮುಂದೆ ಹೋಗಿ ಮಾಡುವುದು, ಇಷ್ಟಕ್ಕೂ ಆರ್ಥಿಕ ಹಿಂಜರಿತದಿಂದ ಎಲ್ಲ ತತ್ತರಿಸಿರುವಾಗ ಉಳಿಸಿದರೇನು ಕೇಡು, ಆ ಆರ್ಥಿಕ ಹಿಂಜರಿತಕ್ಕಿಂತ ನನಗೆ ನಿನ್ನ ಮಾನಸಿಕ ಹಿಂಜರಿತ ಬಹಳ ತಲೆ ತಿನ್ನುತ್ತಿದೆ" ಅಂದೆ. ಪಾಕಶಾಲೆಗೆ ಹೋಗಿ ಯಾವುದೊ ಒಂದು ಸ್ಟೀಲ ಡಬ್ಬಿ ಎತ್ತಿಕೊಂಡು ಬಂದು ನನ್ನ ಮುಂದೆ ಸುರಿದಳು, ಒಂದು ಎರಡು ಹತ್ತು ಐವತ್ತು ನೂರು ರೂಪಾಯಿಗಳ ರಾಶಿ. ನನಗೆ ಮನೆಯಲ್ಲಿ ಅಷ್ಟು ದುಡ್ಡಿದೆ ಅಂತ ಗೊತ್ತಾಗಿದ್ದೆ ಆವಾಗ. "ಎಲ್ಲೀ ಇತ್ತು ಇದೆಲ್ಲ" ಅಂದರೆ, "ಅದೇ ನೀವು ಕೊಟ್ಟಿದ್ದರಲ್ಲೇ ಉಳಿದದ್ದು ಸೇರಿಸಿ ಇಟ್ಟಿದ್ದು, ನಾನು ಉಳಿಸಲ್ವಾ, ಈಗ ಹೇಳಿ ಬ್ಯಾಂಕ ಯಾಕೆ" ತಿರುಗಿ ಬಿದ್ಲು. ಒಂದು ನೂರು ರೂಪಾಯಿ ನೋಟು ಎತ್ತಲು ಹೋದೆ, ಛಟೀರೆಂದು ಏಟು ಬಿತ್ತು, ಹಲ್ಲು ಕಿರಿದೆ... ಎಲ್ಲ ಎತ್ತಿ, ಅದರಲ್ಲಿ ತುಂಬಿ, "ನಾಳೆ ಇದೇ ಡಬ್ಬದಲ್ಲಿ ಇರುತ್ತೆ ಎತ್ತಬಹುದು ಅನ್ಕೋಬೇಡಿ, ಜಾಗ ಬದಲಾಗತ್ತೆ" ಅಂತ ತಾಕೀತು ಬೇರೆ ಮಾಡಿದಳು, ಅವಳ ಜಾಣ್ಮೆಗೆ ನಿಜವಾಗಲೂ ಮೆಚ್ಚಿದೆ.

ಆದರೆ ನಾ ಅಷ್ಟಕ್ಕೇ ಬಿಡಬೇಕಲ್ಲ, "ರೆಡಿ ಆಗ್ತೀಯಾ" ಅಂದೆ, "ರೀ ನಿಮಗೆ ಏನ್ ತೊಂದ್ರೆ, ಯಾಕೆ ಸುಮ್ನೆ ಕಾಡ್ತಾ ಇದೀರಾ, ನಾ ಹೋಗಲ್ಲ" ಹಠ ಹಿಡಿದಳು. "ಯಾಕೆ" ಅಂದ್ರೆ, "ನೀವ್ ಹೇಳಿ ಯಾಕೆ" ಅಂತ ವಾಪಸ್ಸು ನನಗೇ ಕೇಳಿದಳು. "ನಾಳೆ ನನಗೇ ಏನಾದ್ರೂ ಆದ್ರೆ, ಏನ್ ಮಾಡ್ತೀಯಾ" ಅಂತಿದ್ದಂಗೆ "ರೀ ಬಿಟ್ಟು ಅನ್ನಿ" ಅಂತ ನಡುವೆ ಬಾಯಿ ಹಾಕಿ, ಬಾಯಿ ಮೇಲೆ ಬೆರಳಿಟ್ಟಳು, ಬೆರಳಿನೊಂದಿಗೆ ಅವಳನ್ನೂ ಹತ್ತಿರ ಎಳೆದು ಕೂರಿಸಿಕೊಂಡು "ನೀನ್ ಬಿಟ್ಟು ಅನ್ನು ಅಂದ್ರೆ ಆಗೋದು ಬಿಡುತ್ತಾ, ಕೆಟ್ಟದ್ದನ್ನೇ ಯೋಚನೆ ಮಾಡು, ಆದರೆ ಏನು ಮಾಡ್ತೀಯಾ, ನೀನೇ ನಿನ್ನ ಪಾಡಿಗೆ ನಿನ್ನೆಲ್ಲ ಕೆಲಸ ಮಾಡಿಕೊಳ್ಳೊದು ಹೇಗೆ, ನಂಗೊತ್ತಿಲ್ಲ ಅಂತ ಕೂರುತ್ತೀಯಾ" ಹೀಗೆ ಹೇಳುತ್ತಿದ್ದರೆ ತಲೆಗೆ ಇಳಿಯುತ್ತಿತ್ತು ಅಂತ ಕಾಣುತ್ತದೆ. ಕೊನೆಗೂ ಸ್ವಲ್ಪ ರಾಜಿಯಾಗಿ, ಬರಲು ತಯ್ಯಾರಾದರೂ, "ರೀ ಅಲ್ಲಿ ಎಲ್ಲ ನನ್ನೇ ನೋಡುತ್ತಾರೆ, ನಂಗೊಂಥರಾ ಆಗುತ್ತೆ, ಹೆದರಿಕೆ ಆಗತ್ತೆ" ಅಂತಂದಳು, "ಅಷ್ಟು ಅಂದವಾಗಿದೀಯಾ ಮತ್ತೆ ನೊಡದೇ ಇರ್ತಾರಾ" ಅಂದ್ರೆ ಮುಖ ನಾಚಿ ಕೆಂಪಾಯಿತು. ಆದರೂ ಇನ್ನೂ ಹೆದರುತ್ತಲೇ ಇದ್ದಳು, ಕೊನೆಗೆ ನಾನೂ ಬರುತ್ತೇನೆ ಆದರೆ ನನ್ನ ಅಲ್ಲಿ ಏನೂ ಕೇಳೋ ಹಾಗಿಲ್ಲ ಎಲ್ಲ ನೀನೆ ಮಾಡಬೇಕು , ನಾನ್ಯಾರೊ ನೀನ್ಯಾರೊ ಅನ್ನೊ ಹಾಗೆ, ಏನಾದ್ರೂ ತೊಂದ್ರೆ ಆದ್ರೆ ಬರ್ತೀನಿ, ಇದೊಂದು ಸಾರಿ ಮಾತ್ರ ಅಂತ ಹೊರಡಿಸಿದೆ, ಯಾವ ಸ್ಲಿಪ್ ತುಂಬ ಬೇಕು ಹೇಗೆ, ತೊಂದ್ರೆಯಾದ್ರೆ, ಹೆಲ್ಪಡೆಸ್ಕಗೆ ಕೇಳೊದು, ಎಲ್ಲ ಹೇಳಿಕೊಟ್ಟೆ.

ಬ್ಯಾಂಕಿನೆದರು ಗಾಡಿ ನಿಲ್ಲಿಸಿದಾಗ, ಬೆವತಿದ್ದಳು, ಬಿಸಿಲಿಗೊ, ಹೆದರಿಯೊ ಗೊತ್ತಿಲ್ಲ, ಅವಳು ಮುಂದೆ ಹೋದರೆ, ನಾ ನಂತರ ಒಳ ಸೇರಿದೆ. ದೂರ ಕುಳಿತು ಅವಳು ಮಾಡುವುದು ನೋಡತೊಡಗಿದೆ. ಒಳಗೆ ಹೋದವಳು, ಅಲ್ಲಿ ಇಲ್ಲಿ ತಡಕಾಡಿ ಸ್ಲಿಪ್ ತಂದು ಬರೆದಳು, ಅದೇನು ಬರೆದಳೊ, ಹೇಳಿಕೊಟ್ಟಿದ್ದು ನೆನಪಿತ್ತೊ ಇಲ್ವೊ, ಯಾರಿಗೆ ಗೊತ್ತು, ನನಗೆ ಮಾತ್ರ ಹಿಗ್ಗು ಅಂತೂ ಅವಳು ಆತ್ಮ ವಿಶ್ವಾಸದಿಂದ ಮಾಡುತ್ತಿದಾಳಲ್ಲ ಅಂತ, ಅಷ್ಟರಲ್ಲೇ ಎಡವಟ್ಟಾಯಿತು, ಅವಳಿಗೆ ಏನೊ ತಿಳಿಯದಾಯಿತು, ಯಾರನ್ನ ಕೇಳೊದು ಅನ್ನುವಂತೆ ನನ್ನೆಡೆಗೆ ನೋಡಿದಳು, ಆಕಡೆ ಹೆಲ್ಪ್ ಡೆಸ್ಕಿನೆಡೆಗೆ ನೋಡಿದೆ, ಎರಡು ಅಂತ ಸನ್ನೆಯಲ್ಲೆ ಎರಡನೇ ಹೆಲ್ಪಡೆಸ್ಕಗೆ ಹೋಗಲು ಸೂಚಿಸಿದೆ, ಮೇಡಮ್ಮು ಕೂತಿದ್ದರಲ್ಲ ಅಲ್ಲಿ ಅದಕ್ಕೆ, ಯಾಕೆಂದರೆ, ಈಕಡೆ ಹುಡುಗ ಇದ್ದ, ಇವಳಂದವ ನೋಡಿ ಆ ಮಹಾಶಯ ಹೆಲ್ಪು ಮಾಡಲೆಂದು ಪೂರ್ತಿ ಸ್ಲಿಪ್ಪ ತುಂಬಿ ಕೊಡಬಹುದಿತ್ತು, ಆದರೆ ನನಗದು ಬೇಕಿರಲಿಲ್ಲ. ಮೇಡಮ್ಮು ಹಾಗೆ ಮಾಡಲ್ಲ ಅನ್ನುವುದು ಖಾತ್ರಿಯಿತ್ತು. ಅಂತೂ ಅಲ್ಲಿಗೆ ಹೋಗಿ ಕೇಳಿ ಏನೊ ತುಂಬಿ, ಕ್ಯೂನಲ್ಲಿ ನಿಂತಳು ದುಡ್ಡು ಕಟ್ಟಲು. ಅದೋ ಅಲ್ಲಿ ಅವಳ ಮುಂದೆ ನಿಂತ ಸುಂದರಿಯ ನಾ ನೊಡುತ್ತಿದ್ದಂತೆ ಅವಳಿಗೆ ಗೊತ್ತಾಗಬೇಕೆ, ಅವಳು ಕಾಣದಂತೆ ಮರೆ ಮಾಡಿ ನಿಂತ ಹಲ್ಲು ಕಿರಿದಳು. ಅಂತೂ ಇಂತೂ ತುಂಬಿ ಹೊರಬಂದಳು. ಅವಳ ಮುಖದಲ್ಲಿ ಆನಂದ ನೋಡಬೇಕಿತ್ತು, ಏನೊ ಸಾಧಿಸಿದ ತೃಪ್ತಿ, ಆತ್ಮವಿಶ್ವಾಸ ತುಂಬಿದಂತೆ ಕಾಣುತ್ತಿತ್ತು.

ಹೊರ ಬಂದವಳೇ "ನೋಡಿದ್ರಾ ಹೇಗೆ ತುಂಬಿ ಬಂದೆ" ಅಂತ ಹೆಮ್ಮೆಯಿಂದ ಹೇಳುತ್ತಿದ್ದಳು, **ನನಗೆ ಅವಳ ಮೇಲೆ ವಿಶ್ವಾಸವಿತ್ತು, ಅವಳಿಗೆ ತನ್ನ ಮೇಲೆ ತನಗಿರಲಿಲ್ಲ**, ಅದು ಈಗ ಅಲ್ಪಸ್ವಲ್ಪವಾದರೂ ಬಂದಾಗಿತ್ತು. ನೋಡಿ ನಾ ಸುಮ್ಮನೇ ನಕ್ಕೆ "ನಾಳೆ ನೀನೊಬ್ಬಳೇ ಬರ್ತೀಯಾ" ಅಂದ್ರೆ "ಓಹ್ ನಾನೊಬ್ಬಳೇ ಬರ್ತೀನಿ, ನೀವು ಬೇಡ, ಬ್ಯಾಂಕನಲ್ಲೂ ಹುಡುಗೀರ ನೋಡ್ತೀರಾ" ಅಂತ ಗುದ್ದಿದ್ದಳು, ಮುಂಜಾನೆಯಿಂದ ಏಟು ತಿನ್ನುವುದೇ ಆಗಿತ್ತು. ಏನಾದ್ರೂ ತಿನ್ನೋಣವೆಂದು ಅಲ್ಲೇ ಹೊಟೇಲಿಗೆ ನುಗ್ಗಿ ತಿಂದು ಮನೆ ಸೇರಿದೆವು.

Copyright© Prabhuraj Moogi
www.telprabhu.com

"ನಾಳೆ ಡಿಡಿ ಮಾಡಿಸುವಂತೆ" ಅಂತಂದೆ ದುರುಗುಟ್ಟಿ ನೋಡಿದ್ಲು, "ಆಗಲ್ಲ ಅಂದ್ರೆ ಬಿಡು" ಅಂತ ಅಹಂಗೆ ಚುಚ್ಚಿದೆ. "ಯಾಕೆ ಆಗಲ್ಲ, ಮಾಡಿ ತರ್ತೀನಿ ಬಿಡಿ" ಅಂದ್ಲು. ಇದೇ ಉತ್ತರಕ್ಕಾಗಿ ಕಾದಿದ್ದೆ ನಾನು... ಅವಳಿಗೀಗ ನಾನೂ ಮಾಡಬಹುದು ಅಂತ ಧೈರ್ಯ ಬಂದಿತ್ತು, ಮೊದಲೂ ಮಾಡಬಹುದಿತ್ತು ಆದರೆ ಆರಂಭ ಶುರುವಿಡದಿರಲು ಹಿಂಜರಿತ ಕಾರಣವಾಗಿತ್ತು, ಮೊದಲ ಅಡಿಯಿಟ್ಟ ಮೇಲೆ, ಮುಂದೆ ಹೊದೀನೆಂಬ ಅತ್ಮವಿಶ್ವಾಸ ಬಂದಿತ್ತು. "ಇದೇ ಘಂಟೆ ಮೊದಲು, ಆಗಲ್ಲ ಅಂತಿದ್ದೆ" ಅಂದೆ. "ರೀ ಇಷ್ಟು ಸಲೀಸೆಂದು ಗೊತ್ತಿರಲಿಲ್ಲ, ನೀವಿದೀರಲ್ಲ, ನನ್ನಿಂದ ಏನೆಲ್ಲ ಮಾಡಿಸುತ್ತೀರಿ ಅಂತೀನಿ" ಅಂತ ಬಹುಮಾನವೆನ್ನುವಂತೆ ಮುತ್ತಿಕೊಂಡು ಗಲ್ಲಕೊಂದು ಮುತ್ತನಿಟ್ಟಳು. "ಮಾಡಬೇಕೆಂದರೆ ಎಲ್ಲ ಆಗತ್ತೆ, ಕೇಳಿ ತಿಳಿದುಕೊಂಡು ಮಾಡಲು ಮುಂದಡಿಯಿಡು ಸಾಕು, ಎಲ್ಲ ಆಗತ್ತೆ, ನಾಳೆ ನಾನೇನು ಹೇಳಲ್ಲ, ಅಲ್ಲೇ ಕೇಳಿ, ಡಿಡಿ ಮಾಡಿಸಿ ತರಬೇಕು" ಅಂದರೆ, ಸ್ವಲ್ಪ ಅನುಮಾನದ ಗೆರೆಯಾಡಿತು ಆದ್ರೂ ಧೈರ್ಯ ಮಾಡಿದ್ಲು. ಮರುದಿನ ಡಿಡಿ ನನ್ನ ಕೈ ಸೇರಿತ್ತು.

ಇಂದು ಬ್ಯಾಂಕಿನಲ್ಲಿ ಎಲ್ಲ ಕೆಲಸ ಮಾಡಿಕೊಂಡು ಬರುತ್ತಾಳೆ, ಎಷ್ಟೋ ಸಹಾಯವಾಗಿದೆ. ಅವಳ ಉಳಿತಾಯ ಖಾತೆ ಎಷ್ಟು ತುಂಬಿದೆಯೋ, ಆರ್ಥಿಕ ಹಿಂಜರಿತದಲ್ಲಿ ನಮಗೂ ಕೂಡಿಡುವುದು ಕಲಿತಾಗಿದೆಯೋ ಅದಕ್ಕಿಂತ ಅವಳ ಆತ್ಮವಿಶ್ವಾಸದ ಖಾತೆ ದ್ವಿಗುಣಗೊಳ್ಳುತ್ತ ಸಾಗಿ ಆರ್ಥಿಕ ಹಾಗೂ ಮಾನಸಿಕ ಹಿಂಜರಿತಗಳು ಹಿಂಜರಿದಿವೆ. ಬ್ಯಾಂಕಿನ ಮೇಡಮನೊಂದಿಗೆ ಇವಳ ಗೆಳೆತನವಾಗಿದೆ, ಹೋದಾಗೊಮ್ಮೆ ಒಂದರ್ಧ ಘಂಟೆ ಹರಟೆ ಹೊಡೆದು ಬಂದಿರುತ್ತಾಳೆ. ಅವಳ ದುಡ್ಡಿನ ಡಬ್ಬಗಳು ಬ್ಯಾಂಕಿಗೆ ವರ್ಗವಾಗಿವೆ,  ನಿನ್ನೇನೇ ಸಾವಿರ ತುಂಬಿ ಬಂದವಳು, ಇಂದು ಮತ್ತೆ ಮತ್ತೆ ತುಂಬುತ್ತೇನೆಂದು ಜೇಬಿಗೆ ಕೈಹಾಕಿದ್ಲು, ಇವಳಿಗೆ ಕಲಿಸಿದ್ದೆ ತಪ್ಪಾಯಿತೇನೊ ಅಂತ ನಾನೂ ಕೈಗೊಂದು ಏಟು ಕೊಟ್ಟೆ, ಕಳ್ಳಿ ಹಾಗೆ ಕೈ ಜಾರಿಸಿ ಹಿಂದಿನಿಂದ ಹೊಟ್ಟೆ ಸುತ್ತ ಅಮರಿಕೊಂಡು ಕಟ್ಟಿಹಾಕಿದಳು..

Copyright© Prabhuraj Moogi
www.telprabhu.com

## ನಾನ್ಯಾಕೆ?... ನನ್ನಾಕೆ...

ಮಧ್ಯಾಹ್ನ ಅದೇ ಆಗ ಮಲಗಿದ್ದೆ, ತಲೆ ನೋವು, ನೋವಲ್ಲ ಸಿಡಿತ ಅಂದ್ರೇನೇ ಸರಿ. ತಲೆ ನೋವು ಬಂದ್ರೆ ಅದೂ ನನಗೆ ಅಂತೂ ತಡೆದುಕೊಳ್ಳಲಾಗಲ್ಲ, ಸ್ವಲ್ಪ ಮಲಗಿ ಎದ್ರೆ ಸರಿ ಹೋಗುತ್ತದೆ ಇಲ್ಲಾಂದ್ರೆ, ಇವಳು ತಲೆ ಒತ್ತಬೇಕು, ಹಿತವಾಗಿರುತ್ತೆ. ಅವಳು ಇರಲಿಲ್ಲ, ಅದೇ ಪಕ್ಕದ ಮನೆ ಪದ್ದು ಹತ್ರ ಹರಟೆ ಹೊಡೀತಿರಬೇಕು. ಅದಕ್ಕೆ ಹಾಗೆ ಉರುಳಿದ್ದೆ, ಇನ್ನೇನು ನಿದ್ರೆ ಹತ್ತುತ್ತಿರಬೇಕು. ಒಳಗೆ ಬಂದವಳೇ ಧಡ್ ಅಂತ ಬಾಗಿಲು ಹಾಕಿದ್ಲು. ಹತ್ತುತ್ತಿದ್ದ ನಿದ್ರೆ ಹಾರಿ ಹೊಯ್ತು, ಸಿಟ್ಟು ಬಂದಿತ್ತು ಆದರೂ ತಡೆದುಕೊಂಡು, ಮತ್ತೆ ಮಲಗೋಣ ಅಂತ ಪ್ರಯತ್ನಿಸುತ್ತಿರಬೇಕಾದ್ರೆ, ಬಂದು ಪಕ್ಕ ಬಿದ್ದುಕೊಂಡವಳೇ ಸೀರೆ ಸೆರಗಿನ ತುದಿಯ ಚುಂಗವನ್ನು ತಿರುಗಿಸಿ ತೀಡಿ ಉದ್ದಮಾಡಿ ಕಿವಿಯಲಿ ಕಚಗುಳಿಯಿಟ್ಲು. "ಲೇ ತಲೆ ನೊಯ್ತಿದೆ, ಮಲಗೀದೀನಿ ಬಿಡು" ಅಂದೆ, ಅವಳಿಗೆ ಸುಳ್ಳು ಹೇಳಿದೆನೆಂದು ಅನಿಸಿರಬೇಕು. ಮತ್ತೆ ಅಲುಗಾಡಿಸಿ ಕೀಟಲೆಗಿಳಿದಳು. ಸಿಟ್ಟು ನೆತ್ತಿಗೇರಿತು, "ತಲೆ ನೋವಿದೆ ಅಂದ್ರೆ ಅರ್ಥ ಆಗಲ್ಲ, ಒಂದಿಷ್ಟೊತ್ತು ಮಲಗೋಣ ಅಂದ್ರೂ ಬಿಡಲ್ಲ, ಬಾಗಿಲು ಧಡಾರಂತ ಬಡಿದೆ, ಈಗ ನೋಡಿದ್ರೆ ಬಂದು ತರಲೇ ಬೇರೆ, ಸಾಕಾಗಿ ಹೋಗಿದೆ ನಂಗೆ" ಅಂತ ಬಯ್ದು, ಎದೆ ಮೇಲೆ ಇರಿಸಿ ಮಲಗಿದ್ದ ಅವಳ ಕೈ ಎತ್ತಿ ಆಕಡೆ ಹಾಕಿ, ತಿರುಗಿ ಮಲಗಿದೆ. ಸುಮ್ಮನೇ ಎದ್ದು ಹೊರ ನಡೆದಳು. ಬಾಗಿಲು ಹಾಕಿದ್ದೇ ಗೊತ್ತಾಗಲಿಲ್ಲ ಆ ರೀತಿ ಎಳೆದುಕೊಂದು ಹೋಗಿದ್ದಳು.

ಸ್ವಲ್ಪ ಜಾಸ್ತಿಯೇ ಬಯ್ದೆ, ತಲೆ ನೋವಿತ್ತಲ್ಲ, ಸಿಟ್ಟು ತಾಳಲಾಗಲಿಲ್ಲ, ಅದು ಹಾಗೇನೆ ನನಗೆ ನಿದ್ದೆ ಹತ್ತುತ್ತಿದೆ ಅನ್ನುವಾಗ ಹೀಗೆ ಯಾರಾದ್ರೂ ಹಾಳು ಮಾಡಿದ್ರೆ ಎಲ್ಲಿಲ್ಲ ಇಲ್ಲದ ಕೋಪ ಬರುತ್ತದೆ, ಏನು ಮಾಡೋದು ತಡೆದುಕೊಳ್ಳಲಾಗಲ್ಲ, ಆದರೂ ಆ ರೀತಿ ಎಂದೂ ಬಯ್ದಿರಲಿಲ್ಲ, ಅದಕ್ಕೆ ಅವಳ ಮನಸ್ಸಿಗೆ ನಾಟಿತ್ತು. ಒಳ್ಳೇದೇ ಆಯ್ತು ಸ್ವಲ್ಪ ಹೊತ್ತು ಶಾಂತವಾಗಿ ಮಲಗಬಹುದು ಅಂತ ಮಲಗಲು ಪ್ರಯತ್ನಿಸಿದೆ ಆಗಲಿಲ್ಲ, ಅವಳಿಗೆ ಬಯ್ದ ಅಪರಾಧೀ ಭಾವನೆ ಕಾಡತೊಡಗಿತು, ನಿಜವಾಗಲೂ ಮನಸು ನೋಯಿಸಿದೆನೆ, ಅವಳೇನು ಅಂದುಕೊಂಡಿರಬಹುದು. ಹೀಗೆ ಯೊಚನೆಗಳೇ ಸಾಗಿತ್ತು ಮನದಲ್ಲಿ ನಿದ್ರೆ ಎಲ್ಲಿಂದ ಬಂದೀತು.

ಸ್ವಲ್ಪ ಹೊತ್ತಾದ ಮೇಲೆ ಇನ್ನು ನಿದ್ರೆ ಬರಲಿಕ್ಕಿಲ್ಲ ಅಂತ ಗೊತ್ತಾದ ಮೇಲೆ, ಎದ್ದೆ. ಮುಖ ತೊಳೆಯಲು ಬಾತರೂಮಿಗೆ ಹೋಗುತ್ತ ಅವಳೆಲ್ಲಿದ್ದಾಳೆ ಅಂತ ನೋಡಿದೆ, ಹಿತ್ತಿಲಲ್ಲಿ ನಿಂತು ಒರಳಿನಲ್ಲಿ ಏನೊ ಕುಟ್ಟುತ್ತಿದ್ದಳು, ಎಲ್ಲಿ ಮತ್ತೆ ನನಗೆ ಶಬ್ದವಾದೀತೆಂದು ಅಲ್ಲಿ ಹೋಗಿರಬೇಕು. ಹಾಗೆ ಮುಖ ತೊಳೆದು ಹಿತ್ತಲಿಗೆ ನಡೆದೆ, ನನ್ನ ನೋಡಿಯೂ ನೋದದವರಂತೆ ಹಾಗೆ ಒಳಗೆ ಬಂದು ಪಾಕಶಾಲೆ (ನಮ್ಮ ಅಡುಗೆಮನೆ, ನಾ ಹಾಗೆ ಕರೆಯೋದು) ಸೇರಿದಳು. ಬೇಜಾರಾಗಿತ್ತು, ಅದಕ್ಕೆ ಮುನಿಸಿಕೊಂಡಿದ್ದಾಳೆ ಮಾತಾಡುತ್ತಿಲ್ಲ, ನೋಡುತ್ತಲೂ ಇಲ್ಲ. ಸ್ವಲ್ಪ ಹೊತ್ತಾದಮೇಲೆ ಎಲ್ಲ ಸರಿಹೋಗುತ್ತದೆ ಅಂದುಕೊಂಡು, ಒಳ ಬಂದು ಆರಾಮ್ ಕುರ್ಚಿಯಲ್ಲಿ ಒರಗಿದೆ, ಇನ್ನೂ ತಲೆ ನೋಯುತ್ತಿತ್ತು. ಹೊರಬಂದವಳು, ಟೀಪಾಯಿ ಮೇಲೆ ಗ್ಲಾಸಿನಲ್ಲಿ ಟೀ ಇಟ್ಟು ಹೋದಳು. ಏನೂ ಹೇಳಲೇ ಇಲ್ಲ, ತೆಗೆದುಕೊಳ್ಳಲೊ ಬೇಡವೋ ಅಂತ ಯೋಚಿಸಿದೆ, ಮಸಾಲೆ ಟೀ ಘಂ ಅಂತ ಸುವಾಸನೆ ಬಂತು, ಇನ್ಯಾವಾಗಲೋ ಆಗಿದ್ದರೆ ಬಿಡಬಹುದಿತ್ತು, ನಾನ್ಯಾಕೆ ಸೋಲಲಿ ಅಂತ, ಆದ್ರೆ ಈಗ ಟೀ ಅತ್ಯಂತ ಅವಶ್ಯಕವಾಗಿತ್ತು, ತಲೆ ಸಿಡಿತಕ್ಕೆ ಮಸಾಲೆ ಟೀ ಅಂದ್ರೆ ಕೇಳ್ತೀರಾ. ಸುಮ್ನೆ ಏನೂ ಆಗದಿರುವಂತೆ ಟೀ ತೆಗೆದುಕೊಂಡು ಹೀರತೊಡಗಿದೆ, ಆಹಾ ಸೂಪರ್, ಆದ್ರೆ ಹೇಳೋ ಹಾಗಿಲ್ಲ!.

ಗ್ಲಾಸು ಎತ್ತಿಕೊಂಡು ಹಾಗೆ ತೊಳೆಯಲಿಟ್ಟವರ ಹಾಗೆ ಮಾಡಿ ಏನು ಮಾಡುತ್ತಿದಾಳೋ ನೋಡಿದರಾಯ್ತು ಅಂತ ಪಾಕಶಾಲೆಗೆ ನಡೆದೆ. ಏನೊ ತೊಳೆಯುತ್ತಿದ್ಲು, ಅದೂ ಸದ್ದಿಲ್ಲದ ಹಾಗೆ, ಒಂದೊಂದೇ ತೊಳೆದು ಬೊರಲಾಗಿ ಶಬ್ದವಾಗದಂತೆ ಮೆಲ್ಲನೆ ಇಡುತ್ತಿದ್ದಳು. ಅಲ್ಲೇ ಇದನ್ನೊಂದು ಇಟ್ಟು ನಿಂತೆ, ನನ್ನೆಡೆಗೆ ನೋಡಲೂ ಇಲ್ಲ, ಇನ್ನೂ ಕಾವೇರಿದ ವಾತಾವರಣವಿದೆ ಅಂತ ಹೊರಗೆ ಬಂದು, ಕೂತೆ. ಇನ್ನೂ ತಲೆ ನೋವಿತ್ತು. ತಲೆ ನೊವಿಗೆಲ್ಲ ಮಾತ್ರೆ ಯಾವಾಗಲೂ ತೆಗೆದುಕೊಳ್ಳೋದಿಲ್ಲ, ಇಂದು ಯಾಕೊ ಜಾಸ್ತಿಯೇ ಆಗಿತ್ತು, ತಡೆಯಲಾಗದೇ, ಮಾತ್ರೆ ಎಲ್ಲಿದೆ ಅಂತ ಡ್ರಾವರ ತೆಗೆದು ಹುಡುಕತೊಡಗಿದೆ, ಎಲ್ಲಿ ಸಿಗುತ್ತದೆ?... ಹುಡುಕಿ ಗೊತ್ತಿದ್ದರೆ ತಾನೇ, ಏನು ಸಿಗಲಿಲ್ಲವೆಂದರೂ... ಲೇ ಅದು ಎಲ್ಲಿದೆ, ಲೇ ಇದು ಎಲ್ಲಿದೆ ಅಂತ ಕೇಳಿ ಗೊತ್ತೇ ಹೊರತು, ಹುಡುಕಿಯಲ್ಲ, ಈಗ ಕೇಳಲಾಗಲ್ಲ, ಮತ್ತದು ಸಿಗಲಿಲ್ಲ.

ಬೆಡ್‌ರೂಮಿನಲ್ಲಿ ಎಲ್ಲಾದ್ರೂ ಇರಬಹುದೆಂದು ಅಲ್ಲಿ ಕಿತ್ತಾಡುತ್ತಿದ್ದೆ, ಅಲ್ಲೂ ಸಿಗಲಿಲ್ಲ ಮತ್ತೆ ಹೊರಬಂದು ಕೂತೆ ಹಾಗೆ ಟೀಪಾಯಿ ಕಡೆ ನೋಡಿದ್ರೆ, ಒಂದು ಮಾತ್ರೆ, ನೀರು ಇತ್ತು!!!. **ಅವಳಿಗೇನು ನನ್ನ ತಲೆಯಿಂದ ನೇರ ಸಂಪರ್ಕವಿದೆಯೇನೋ**, ನಾ ಯೋಚಿಸುತ್ತಿರುವುದೆಲ್ಲ ಹೇಗೆ ಗೊತ್ತಾಗುತ್ತದೆ ಅಂತ, ನಾನೀಗ ಮಾತ್ರೆ

Copyright© Prabhuraj Moogi
www.telprabhu.com

ಹುಡುಕುತ್ತಿರುವೆ ಅಂತ, ಹೇಳೇ ಇಲ್ಲ ಆದ್ರೆ ಅದ್‍ಹೇಗೆ ಗೊತ್ತಾಯ್ತು. ಅಂತೂ ಮಾತ್ರೆ ಸಿಕ್ಕಿತಲ್ಲ ಅಂತ ಗಂಟಲಿಗಿಳಿಸಿ ಗುಟುಕರಿಸಿದೆ.

ರಾತ್ರಿ ಎಂಟಾಯಿತು ಅಲ್ಲೇ ಬಿದ್ದುಕೊಂಡಿದ್ದೆ, ದಿನಾಲೂ ಅದ್ಯಾವುದೊ ಧಾರಾವಾಹಿಯೋ ಇಲ್ಲ ಪ್ರೊಗ್ರಾಮೊ ಇದೆಯಂತ ನೋಡುತ್ತ ಟೀವೀ ಮುಂದೆ ಕೂರುತ್ತಿದ್ದವಳು ಹೊರಗೆ ಹೋಗಿ ಕೂತಿದ್ದಳು, ಮನೆಯಲ್ಲಿ ಬಹಳ ಸೆಕೆ ಅಲ್ವಾ ಹೊರಗೆ ತಂಗಾಳಿ ಅಂತ ಕೂತಿರಬೇಕು ಅಂತ ನನ್ನ ನಾನೇ ಸಮಾಧಾನಿಸಿಕೊಂಡೆ, ನನಗೂ ಗೊತ್ತು ಮುನಿಸಿಕೊಂಡಿದಾಳೆ ಅಂತ, ಅದರೂ ಮನಸು ಏನೊ ಒಂದು ನೆಪ ಸೃಷ್ಟಿಸಿಕೊಳ್ಳುತ್ತಿತ್ತು. ಮೊದಲೇ ಬಾಗಿಲು ಹಾಕಿದ್ದಕೆ ಬಯ್ದಿ ಇನ್ನು, ಟೀವೀ ಹಾಕಿ ಶಬ್ದ ಮಾಡಿದರೆ ಹೇಗೆ ಅಂತ ಅವಳು ಯೋಚಿಸಿರಬೇಕು, ಏನೊ ತಲೆ ತುಂಬಾ ಯೋಚನೆಗಳು, ತಲೆ ನೋವಿಗಿಂತ ಅವೇ ಜಾಸ್ತಿಯಾಯ್ತು.

ಸ್ವಲ್ಪ ಸಮಯದ ನಂತರ ಬಂದು ಮತ್ತೆ ಪಾಕಶಾಲೆ ಸೇರಿದಳು, ರಾತ್ರಿಗೆ ಅಡಿಗೆ ಮಾಡುತ್ತಿರಬೇಕು, ಅಯ್ಯೋ ಪಜೀತಿ ಆಯ್ತಲ್ಲ, ಈಗ ನನಗೆ ಊಟ ಮಾಡಲು ಮನಸಿಲ್ಲ, ಹಾಗೇ ನಾಲಗೆ ರುಚಿಸಲೊಲ್ಲದು, ಹುಶಾರಿಲ್ಲದಾಗ ಏನೂ ತಿನ್ನಲು ಮನಸಿರುವುದಿಲ್ಲ, ಅಡಿಗೆ ಮಾಡಿದ ಮೇಲೆ ತಿನ್ನಲ್ಲ ಅನ್ನಲಾಗಲ್ಲ, ಈಗ ಹೇಳುವುದು ಹೇಗೆ. ಮಾತನಾಡಿಸಿಬಿಡಲೇ ಅಂತ ಯೋಚಿಸಿದೆ, ಆದರೆ ಪ್ರತೀ ಬಾರಿ ರಾಜಿಯಾಗುವುದು ನಾನೇ, ಮತ್ತೆ ಇಂದೂ ಕೂಡ "ನಾನ್ಯಾಕೆ?", ಹೌದು ನಾನೇ ಯಾಕೆ, ಅವಳು ಮಾತನಾಡಿಸಿದರೇನು ಗಂಟು ಹೋಗುತ್ತೆ, ಹೌದು ಬಯ್ದಿ ಏನೀಗ, ಬೇಕೆಂತಲೇ ಬಯ್ದಿಲ್ಲವಲ್ಲ, ತಲೆ ನೋವಿತ್ತು, ಹಾಗಾಯ್ತು ಅದನ್ನ ಅವಳೂ ಅರ್ಥ ಮಾಡಿಕೊಳ್ಳಬೇಕಲ್ಲ ಅಂತ ನನ್ನದೇ ವಾದಗಳನ್ನು ಹುಟ್ಟಿಸಿಕೊಂಡು ಸುಮ್ಮನಾದೆ.

ಅವಳೂ ಹಾಗೇ ಯೊಚಿಸಿರಬೇಕು, ಏನು ನನಗೆ ಹೇಗೆ ಗೊತ್ತಾಗಬೇಕು ತಲೆ ನೋವಿದೆಯೆಂದು, ಹೇಳಿದರೆ ತಾನೆ, ನಾನೇನು ಬೇಕೆಂತಲೇ ಬಾಗಿಲು ನೂಕಿ ಸದ್ದು ಮಾಡಿದೆನೆ, ಹಾಗೇ ಯಾವಾಗಲೂ ತೆರೆಯುವಂತೆ ತೆರೆದೆ... ಸದ್ದು ಮಾಡಿದರೆ ನಾನೇನು ಮಾಡಬೇಕು, **ಬಾಗಿಲಿಗೂ ಇವರಿಗೆ ತಲೆನೋವಿದೆ ಸದ್ದು ಮಾಡಬಾರದು ಅಂತ ಯೋಚಿಸಲು ತಲೆಯಿದೆಯೇ**. ನನಗೇನೊ ಹೇಳಿದರು, ಸುಮ್ನೆ ಸುಳ್ಳು ಹೇಳುತ್ತಿರಬೇಕೆಂದು ಮತ್ತೆ ತುಂಟಾಟಕ್ಕಿಳಿದೆ, ಮತ್ತೊಮ್ಮೆ ನಿಜಾವಾಗ್ಲೂ ತಲೆ ನೋವಿದೆ ಅಂದಿದ್ರೆ ಇವರ ಗಂಟೇನು ಹೋಗುತ್ತಿತ್ತು, ತಪ್ಪೆಲ್ಲ ಅವರದೇ.. ಅವರೇ ಮಾತಾಡಿಸಲಿ "ನಾನ್ಯಾಕೆ?" ಮಾತಾಡಿಸಲಿ, ಅಂತ ಅವಳೂ ವಾದಗಳ ಸೃಷ್ಟಿಸಿಕೊಂಡಿರಬೇಕು. ಅದಕ್ಕೇ ಮಾತನಾಡಿಸಿಲ್ಲ.

ಈ "ನಾನ್ಯಾಕೆ" ಅಂತ ಯಾವಾಗ ಶುರುವಾಗತ್ತೊ ಆಗ, "ನಾವು" ಅನ್ನೊದಕ್ಕೆ ಅರ್ಥ ಕಡಿಮೆಯಾಗತೊಡಗುತ್ತೆ. "ನಾನು" ಅನ್ನೋದೆ ಅಹಂಭಾವದ ಮೊದಲ ಪದ, ಅದಕ್ಕೆ "ಯಾಕೆ" ಸೇರಿದರೆ ಮುಗೀತು, ಅದೇ ಮುಂದುವರಿದು "ನಾವ್ಯಾಕೆ" ಅಂತಾಗಿ, "ನಾನು", "ನೀನು" ಅಂತ ಬೇರೆಯಾಗೋಣ ಬಿಡು, "ನಾವು" ಯಾಕೆ ಅನ್ನೊ ಹಂತಕ್ಕೆ ಬಂದು ತಲುಪುತ್ತೆ. ಇದೆಲ್ಲ ಗೊತ್ತಿದ್ದರೂ ಪ್ರತೀ ಬಾರಿ ರಾಜಿಯಾಗಿದ್ದ ನನಗೆ ಈ ಸಾರಿ ಸೋಲಲು ಮನಸಿರಲಿಲ್ಲ, ಸೋಲಲ್ಲಿ ಗೆಲುವಿದ್ದರೂ, ಗೆಲ್ಲಲು ಹೊರಡುವ ನ್ಯಾಯಾಲಯದ ಕಟ್ಟೆಯೇರಿದ ಶ್ರೀಸಾಮಾನ್ಯನಂತೆ ಯೋಚಿಸುತ್ತಿದ್ದೆ, ನ್ಯಾಯದ ಕಟ್ಟೆಯಲ್ಲಿ ಗೆದ್ದವನು ಸೋತ, ಸೋತವನು ಸತ್ತ ಅಂತಾರೆ ಹಾಗಿದ್ದರೂ ವಾದ, ವಿವಾದ, ವ್ಯಾಜ್ಯಗಳು ನಿಂತಿಲ್ಲ. ನಾನಿಲ್ಲಿ ಗೆಲ್ಲುವುದಕ್ಕಿಂತ "ನಾನ್ಯಾಕೆ" ಅನ್ನೊದು ಹೆಚ್ಚಾಗಿ, ಸೋಲಲ್ಲಿ ಗೆಲುವಿದ್ದರೂ, ಗೆದ್ದು ಸೋಲಲು ನಿರ್ಧರಿಸಿದಂತಿತ್ತು.

ಊಟಕ್ಕೆ ತಟ್ಟೆ ಡೈನಿಂಗ್ ಟೇಬಲ್ಲಿನ ಮೇಲೆ, ತಂದಿಟ್ಟಳು, ಅಡಿಗೆ ತಯ್ಯಾರಾಗಿದೆ ಊಟ ಮಾಡಬಹುದು ಅನ್ನೋದರ ಸೂಚನೆಯೆನ್ನುವಂತೆ. ಅವಳ ಮೇಲಿನ ಸಿಟ್ಟು ಅನ್ನದ ಮೇಲೆ ಯಾಕೆ ಅಂತ ಕೈತೊಳೆದು ಕೂತೆ, ಬಿಸಿ ಅನ್ನ ತಂದು ಪ್ಲೇಟಿಗೆ ಹಾಕಿದಳು, ಸ್ವಲ್ಪ ಹಾಕುತ್ತಿದ್ದಂತೆ ಸಾಕೆನ್ನುವಂತೆ ಕೈ ಮಾಡಿದೆ ಆದರೆ, ನನ್ನ ಮೇಲೆ ಸಿಟ್ಟಿಗೆ ಹೊಟ್ಟೆ ಯಾಕೆ ಹಸಿದುಕೊಂಡಿರುತ್ತೀರಿ ಅನ್ನೋ ಹಾಗೆ ಸುಮ್ಮನೆ ಇನ್ನೂ ಜಾಸ್ತಿ ಹಾಕಿದಳು, ಕೊನೆಗೆ ಅನ್ನದ ಚಮಚೆ ಕಸಿದು ಕೆಳಗಿಟ್ಟೆ. ಒಳಗಿನಿಂದ ತುಪ್ಪ ತೆಗೆದುಕೊಂಡು ಬಂದ್ಲು, ಇಷ್ಟೇ ಇಷ್ಟು ಸುರಿದಳು, ಇನ್ನೂ ಜಾಸ್ತಿ ಬೇಕಾಗಿತ್ತು, ಆದ್ರೆ ಕೇಳೋದು ಹೇಗೆ, ಬೇಕೆಂದದ್ದು ಸಿಗಲ್ಲ, ಬೇಡವೆಂದದ್ದು ಜಾಸ್ತಿ. ಇನ್ನು ಸಾರು ತರುತ್ತಾಳೆ, ತಿನ್ನಲು ಮನಸಿಲ್ಲ, ಏನು ಮಾಡೊದು ಅಂತಿದ್ದಂಗೆ, ನಿಂಬೆ ಹಣ್ಣಿನ ಎರಡು ಹೋಳು ತಂದು, ಇಟ್ಟಳು. ಹಿರಿ ಹಿರಿ ಹಿಗ್ಗಿದೆ...ಯಾಕೆ ಗೊತ್ತಾ, ಅಮ್ಮ ನನಗೆ ಹುಶಾರಿಲ್ಲದಾಗೆ ಹೀಗೆ ಅನ್ನಕ್ಕೆ ಸ್ವಲ್ಪ ತುಪ್ಪ ಹಾಕಿ, ನಿಂಬೆ ಹಿಂಡಿ, ಕಲಸಿ ಉಂಡೆ ಮಾಡಿ ಕೊಡುತ್ತಿದ್ಲು, ಬೇಕೆಂದರೆ ನಂಜಿಕೊಳ್ಳಲು ನಿಂಬೆ ಉಪ್ಪಿನಕಾಯಿ ಜತೆಯಿರುತ್ತಿತ್ತು, ಪ್ರಯತ್ನಿಸಿ ನೋಡಿ, ಎಲ್ಲ ಸರಿಯಾದ ಪ್ರಮಾಣದಲ್ಲಿ ಹದವಾಗಿ ಬೆರೆಸಿ ಬಿಸಿಬಿಸಿ ಅನ್ನ ಇದ್ದರೆ ಅದರ ರುಚಿಯೇ ಬೇರೆ. ಅದು ಇವಳಿಗೆ ಗೊತ್ತಾದದ್ದೆಲ್ಲಿ, ಅಮ್ಮ ಸೊಸೆಗೆ ನಾಲೇಜು ಟ್ರಾನ್ಸಫರ್(ಈ ಸಾಫ್ಟವೇರಿನ ಉದ್ಯೊಗದಲ್ಲಿ ಒಬ್ಬ ಕೆಲಸ ಬಿಡಬೇಕಾದ್ರೆ ಮಾಡಿದ ಎಲ್ಲ ಪ್ರೊಜೆಕ್ಟಿನ ಮಾಹಿತಿ ಮತ್ತೊಬ್ಬನಿಗೆ ನೀಡುತ್ತಾನೆ ಅದೇ ಇದು..) ಮಾಡಿದ್ದು ಯಾವಾಗ??. ಖುಶಿಯಾಗೆ ಬರಸೆಳೆದು ಮುತ್ತಿಕ್ಕಲೇ ಅನ್ನಿಸಿತು, ಮತ್ತೆ ನೆನಪಾಯಿತು.. "ನಾನ್ಯಾಕೆ?"...

Copyright© Prabhuraj Moogi
www.telprabhu.com

ಚೆನ್ನಾಗಿ ಕಲಸಿ ತಿನ್ನುತ್ತಿದ್ದರೆ ಉಪ್ಪಿನಕಾಯಿ ಕಳೆದುಕೊಂಡಂತಾಯಿತು, ಬೇಕೆಂತಲೇ ತಂದಿಲ್ಲ ಅವಳು ಕೇಳಿದರೆ ಕೊಡೋಣವೆಂದು, ನಾ ಕೇಳಬೇಕಲ್ಲ?. ಮೊದಲು ಉಪ್ಪಿನಕಾಯಿ ಬಾಟಲಿ ಇರುತ್ತಿದ್ದ ಜಾಗದಲ್ಲಿ ಹುಡುಕಾಡಿದಂತೆ ಮಾಡಿದೆ, ಅವಳಿಗೆ ಗೊತ್ತಾಗಲಿ ಅಂತ, ಕ್ಷಣ ಮಾತ್ರದಲ್ಲಿ ಉಪ್ಪಿನಕಾಯಿ ಪ್ರತ್ಯಕ್ಷ! ತಂದಿಟ್ಟಿಳಲ್ಲ, ತಟ್ಟೆ ನೆಕ್ಕಿ ತೊಳೆಯೊದೇ ಬೇಡ ಹಾಗೆ ಮಾಡಿಟ್ಟೆ. ಇನ್ನೂ ಕೈ ನೆಕ್ಕುತ್ತಿದ್ದೆ, ಆಸೆಗಣ್ಣಿನಿಂದ ನೊಡುತ್ತ, ಅವಳಿಗೆ ನಗು ಬಂದಿರಬೇಕು, ಹಾಗೇ ತಡೆದುಕೊಂಡು ಮತ್ತಿಷ್ಟು ನೀಡಿದಳು, ಅವಳ ಮುಖದಲ್ಲಿ ಮುಗುಳ್ನಗು ಹೊರ ಬರಲು ಕಾಯುತ್ತಿತ್ತು, ಅವಳು ಬಿಟ್ಟರೆ ತಾನೆ, "ನಾನ್ಯಾಕೆ??" ಅಂತ ಅವಳೂ ಕೂಡ...

ಅಂತೂ ಊಟ ಮುಗಿಸಿ, ಹೋಗಿ ಹಾಸಿಗೆಯಲ್ಲಿ ಬಿದ್ದುಕೊಂಡೆ, ಇನ್ನೂ ಸ್ವಲ್ಪ ತಲೆ ನೋವಿತ್ತು, ಅವಳೂ ಬಂದು ಉರುಳಿದಳು, ನಡುವೆ ಅಂತರವಿತ್ತು, ನಿದ್ರೆ ಮಾತ್ರ ಬರುತ್ತಿಲ್ಲ, ಆಕಡೆ ಈಕಡೆ ಹೊರಳಾಡುತ್ತಿದೆ, ಬಹಳ ಹೊತ್ತಿನವರೆಗೆ... ನಾಳೆ ನಾನೇ ಮಾತಾಡಿಸಿಬಿಡೋಣ ಎನು ಮಹಾ ವಿಷಯ, ತಪ್ಪು ನಂದೇ ಅಲ್ಲವೇ, ಇನ್ನೊಂದು ಬಾರಿ ನಾನೇ ರಾಜಿಯಾದರೆ ಏನಾಗುತ್ತೆ, ಈಗ ಮಲಗಿದ್ದಾಳೆ ಇಲ್ಲದಿದ್ರೆ ಈಗಲೇ... ಅಂತ ಯೊಚನೆಯಲ್ಲೇ ಇದ್ದೆ. ಅವಳೀಗೂ ಪಾಪ ತಲೆ ನೋವು ಇನ್ನೂ ಕಡಿಮೆಯಾಗಿಲ್ಲವೇನೋ ಅನಿಸಿರಬೇಕು, ಪ್ರತೀ ಬಾರಿ ನಾನೇ ಹಠ ಸಾಧಿಸುತ್ತೇನೆ, ಇಂದು ನಾನೇ ಯಾಕೆ ಸೋಲಬಾರದು, ಅದೇ ಯಾವಾಗ್ಲೂ "ಅವರ್ಯಾಕೆ" ಅಂತ... ನಿಧಾನವಾಗಿ ಹತ್ತಿರ ಬಂದಳು, ಹಣೆಮೇಲೆ ಕೈಯಿಟ್ಟು ನಿಧಾನವಾಗಿ ಒತ್ತತೊಡಗಿದಳು, "ನಿದ್ರೆ ಬರ್ತಿಲ್ವಾ" ಅಂತಿದ್ಲು... ಬಾಯಿಮೇಲೆ ಕೈಯಿಟ್ಟೆ, ನಾ ಸೋತು ಗೆಲ್ಲಬೇಕೆಂದಿದ್ದರೆ, ಸೋತು ಗೆದ್ದುಬಿಟ್ಟಿದ್ಲು, ಕಣ್ಣಾಲಿಗಳು ತುಂಬಿ ಬಂದವು ಸಧ್ಯ ಕತ್ತಲೆಯಿತ್ತು ಅವಳಿಗೆ ಕಾಣಲಿಕ್ಕಿಲ್ಲ, "ನಿನ್ಮೇಲೆ ಸುಮ್ನೇ ರೇಗಿದೆ.. " ಅಂತ ಏನೋ ಹೇಳ ಹೋದೆ, ಅವಳು ಬಾಯಿ ಮುಚ್ಚಿಬಿಟ್ಲು, ಇಷ್ಟೊತ್ತು ಮಾತಾಡಲು ಹಾತೊರೆಯುತ್ತಿದ್ದವರಿಗೆ ಮಾತೇ ಬೇಡವಾಗಿತ್ತು, ಎದೆ ಮೇಲೆ ಎರಡು ಹನಿ ಬಿದ್ದಂತಾಯಿತು, ನನ್ನದೋ??? ಅವಳದೂ ಜಿನುಗಿರಬಹುದು, ಯಾರದಾದರೇನು ಯಾರು ಸೋತರು, ಯಾರು ಗೆದ್ದರು, ಅದೆಲ್ಲ "ನಾನ್ಯಾಕೆ" ಯೋಚಿಸಲಿ, ಅಲ್ಲಲ್ಲ ಅದೆಲ್ಲ "ನಮಗ್ಯಾಕೆ"... "ನಾನ್ಯಾಕೆ?" ಅಂತ **"ನಾನ್ಯಾಕೆ" ಹಠ ಸಾಧಿಸಲಿ, ಎಷ್ಟೆಂದರೂ ಅವಳು "ನನ್ನಾಕೆ"...**

ಹೀಗೇ ಬರುತ್ತಿರಿ, ನನ್ನಾಕೆಯೊಂದಿಗೆ ಮತ್ತೆ ಸಿಗುತ್ತೇನೆ...

Copyright© Prabhuraj Moogi
www.telprabhu.com

## ನಾ ಚುನಾವಣೆಗೆ ನಿಂತರೆ...

ಬ್ರೆಕಫಾಸ್ಟ ಮುಗಿಸಿ ಬಾಲ್ಕನಿಯಲ್ಲಿ ನಿಂತು ಹಸಿರು ಗಾರ್ಡನಿನಲ್ಲಿ ಬಂದು ಚಿಲಿಪಿಲಿ ಎನ್ನುತ್ತಿರುವ ಹಕ್ಕಿ ಪಕ್ಕಿಗಳ ನೋಡುತ್ತಿದ್ದೆ. "ಕೀಈಈಈಈಈ ರ್..." ಅನ್ನುವ ದನಿಯೊಂದಿಗೆ ಧ್ವನಿವರ್ಧಕವೊಂದು ಶುರುವಿಟ್ಟುಕೊಂಡಿತು, ಹಕ್ಕಿಗಳು ಹಾರಿಹೋದವು. "ಬಡವರ ಬಂಧು, ದೀನ ದಲಿತರ ಹಿತರಕ್ಷಕ, ಕಾಯಕಯೋಗಿ, ಸಮಾಜಸೇವಕ ****ಅವರಿಗೆ ತಮ್ಮ ಅತ್ಯಮೂಲ್ಯ ಮತ ನೀಡಬೇಕು ಮತದಾರ ಬಂಧು ಬಾಂಧವರೆ, ಅಕ್ಕತಂಗಿಯರೇ ಅಣ್ಣತಮ್ಮಂದಿರೆ..." ಅಂತ ಚೀರತೊಡಗಿತು. ಒಳಗಿದ್ದ ಇವಳೂ ಹೊರಬಂದು ನಿಂತಳು, ನಾ ಮುಂಜಾನೆ ಮುಂಜಾನೆ ಶಾಂತಿ ಹಾಳು ಮಾಡಿದರೆಂದು ಸಿಟ್ಟಿನಿಂದ ನೋಡುತ್ತಿದ್ದರೆ, ಇವಳು ನಗುತ್ತಿದ್ದಳು.

"ಏನ್ ನಗ್ತಾ ಇದೀಯಾ?" ಅಂದೆ, ಮತ್ತೆ ನಗುತ್ತ ಒಳಗೆ ಹೋದ್ಲು. ನಾನೂ ಒಳಗೆ ಬಂದು ಕೂತು "ಚುನಾವಣೆ ಬಂದ್ರೆ ಸಾಕು.. ಈ ಲೌಡಸ್ಪೀಕರ ಉಪಯೋಗಿಸಬಾರದು ಅಂತ ಕಾನೂನು ಮಾಡಬೇಕು, ಆಗ ಚೆನ್ನಾಗಿರತ್ತೆ" ಅಂದೆ. "ನೀವೇ ಯಾಕೆ ಚುನಾವಣೆಗೆ ನಿಂತು ಗೆದ್ದು ಬಂದು ಕಾನೂನು ಮಾಡಬಾರದು" ಅಂತ ನಕ್ಕಳು. ಪಾಕಶಾಲೆಗೆ ಹೊಕ್ಕೆ, ಗ್ಯಾಸ ಕಟ್ಟೆ ಮೇಲೆ ಪ್ರತಿಷ್ಠಾಪಿತನಾದೆ, ಏನೋ ಬೋಗುಣಿಯಲ್ಲಿ ಹಾಕಿಟ್ಟು ತಿರುವುತ್ತಿದ್ಲು. "ಅಲ್ಲಾ ಚುನಾವಣೆ ಅಂದ್ರೆ ಏನು ಅಂತ ತಿಳಿದಿದೀಯಾ, ಎನ್ ಈ ಸೌಟು ತಿರುವಿದ ಹಾಗಾ?, ನಾ ಚುನಾವಣೆಗೆ ನಿಂತರೆ ಅಷ್ಟೇ..." ಅಂದೆ, "ಎನೀಗ ನಿಮಗೇನು ಚುನಾವಣೆಗೆ ನಿಲ್ಲೋಕೆ" ಅಂದ್ಲು "ಅದಕ್ಕೂ ಅರ್ಹತೆ ಬೇಕೆ" ಅಂದೆ "ಏನು ಅರ್ಹತೆ ಹಾಂ, ಒಂದು ಅರ್ಹತೆ ನಿಮಗಿದೆ ಮೊದ್ಲೇ, ಗುಡಾಣದಂತಾ ಹೊಟ್ಟೆ!" ಅಂತ ಮುಗುಳ್ನಕ್ಕಳು. "ಲೇ ಹೋಗೀ ಹೋಗೀ ನನ್ನ ಹೊಟ್ಟೇ ಮೇಲೆ ಯಾಕೇ ನಿನ್ನ ಕಣ್ಣು" ಅಂತ ಕಿವಿ ಹಿಂಡಿದೆ. ಚೀರಿದ್ಲು. ಕೈಬಿಟ್ಟೆ, ಗ್ಯಾಸ ಆಫ್ ಮಾಡಿ ಹೊರಬಂದ್ಲು. "ನಾಯಕರೇ ಹೊರಬನ್ನಿ" ಅಂದ್ಲು "ಏನ ನಾಯಿ ಕರು ಅಂತೀದೀಯಾ, ನಾಯಕರೆಲ್ಲ ನಾಯಿ ಕರುಗಳೇ ಬಿಡು" ಅಂತನ್ನುತ್ತ ಹೊರಬಂದೆ. ಇನ್ನೇನು ಆರಾಮ ಕುರ್ಚಿಯಲ್ಲಿ ಕೂರಬೇಕೆನುವಷ್ಟರಲ್ಲಿ ಇವಳು ಆಕ್ರಮಿಸಿಬಿಟ್ಲು. "ಲೇ ಜಾಗ ಬಿಡೇ ಕೂರಬೇಕು" ಅಂದ್ರೆ. "ಇಲ್ಲೇನು ಕುರ್ಚಿಗಾಗಿ ಜಗಳಾಡ್ತೀರಾ ದಿಲ್ಲೀಲೀ ಅಸೆಂಬ್ಲೀನಲ್ಲಿ ಕುರ್ಚಿಗಾಗಿ ಹೋರಾಡಿ" ಅಂತ ಬಾಣ ಬಿಟ್ಲು. ಇವಳು ನನ್ನ ಚುನಾವಣೆಗೆ ನಿಲ್ಲಿಸಿಯೇ ಕೈಬಿಡುವ ಹಾಗೆ ಕಾಣ್ತಿದೆ. ಅವಳನ್ನು ಸ್ವಲ್ಪ ಆಕಡೆ ತಳ್ಳಿ ಅದರಲ್ಲೇ ಜಾಗ ಮಾಡಿಕೊಂಡು ನಾನೂ ಕೂತುಕೊಂಡೆ, ಮೈತ್ರೀ ಸರ್ಕಾರ ಸೀಟು ಹಂಚಿಕೊಂಡಂತೆ. "ಮುಖ್ಯಮಂತ್ರಿಯ ಪತ್ನಿ ಅನ್ನಿಸಿಕೋಬೇಕಿದೇಯಾ" ಅಂದೆ "ನನಗೆ ಅದೆಲ್ಲ ಬೇಡ ಹೋಮ್ ಮಿನಿಸ್ಟರೀ ಸಾಕು" ಅಂದ್ಲು. ಅಲ್ಲಾ **ನಾನೇ ಇನ್ನೂ ಚುನಾವಣೆಗೆ ನಿಂತಿಲ್ಲ, ಆಗಲೇ ಇವಳು ಗೃಹಖಾತೆ ಮೇಲೆ ಕಣ್ಣೀಟ್ಟಿದಾಳಲ್ಲ** ಭಲೇ ಅಂತ "ನಿನಗ್ಯಾಕೆ ಮಂತ್ರಿಗಿರಿ ಎಲ್ಲಾ" ಅಂದ್ರೆ "ರೀ ಹೋಮ್ ಮಿನಿಸ್ಟರೀ ಅಂದ್ರೆ ಮನೆ ಕೆಲ್ಸಾ" ಅಂತ ಸಬೂಬು ಹೇಳಿದ್ಲು.

"ನಾ ಚುನಾವಣೆಗೆ ನಿಂತರೆ ಯಾರೇ ಓಟು ಹಾಕ್ತಾರೆ" ಅಂದೆ, "ಒಂದು ಓಟಂತೂ ಗ್ಯಾರಂಟೀ" ಅಂದ್ಲೂ "ಓಹ್ ನಿಂದಾ" ಅಂದೆ, "ಯೇ ಇಲ್ಲಾಪ್ಪಾ, ಸೀರೆ ಬಂಗಾರ ಎನಾದ್ರೂ ಕೊಟ್ಟು ಮನೆಗೆ ಟೀವೀ ಕೊಟ್ರೆ ಮಾತ್ರ ನಾ ಓಟು ಹಾಕೊದು". "ಆಹಾ ಆಸೆ ನೋಡು" ಅಂತ ತಿವಿದೆ. "ಮತ್ತಿನ್ನೇನ್ರೀ ಈಗೆಲ್ಲಾ ಚುನಾವಣೆ ಅಂದ್ರೆ ಸುಮ್ನೆನಾ ಮನೆಗ ಬಂದು ಅರಿಷಿಣ ಕುಂಕುಮಾ ಹಚ್ಚಿ ಸೀರೆ ಕೊಟ್ಟು ಟೀವೀ ಎಲ್ಲಾ ಕೊಡ್ತಾರೆ, ನಿಮ್ಮ ಮತ ಅತ್ಯಮೂಲ್ಯ ಅಂತ, ಸುಮ್ನೇನಾ ಹೇಳ್ತಾರೆ" ಅಂತ ತಿರುಗು ಬಿದ್ಲು. "ಲೇ ನಾ ನಿಂತರೆ ನಿಯತ್ತಿಂದಾ ಮತ ಕೇಳ್ತಿನಿ" ಅಂದೆ. "ಅಂದ್ರೆ ಒಂದೇ ಓಟು ಅಷ್ಟೇ" ಅಂದ್ಲು. "ನಂದೊಂದೇ ಓಟು ಅಲ್ವಾ" ಅಂದೆ ಮತ್ತೆ ಮನಸು ಕರಗಿ ತಾನೂ ಓಟು ನಿಮಗೆ ಹಾಕ್ತೀನೀ ಅಂತಾಳೇನೊ ಅಂತ. "ನಿಮ್ಮದಲ್ಲಾರೀ, ನೀವು ಮೊದಲೇ ವಾಜಪೇಯೀ ಅಭಿಮಾನಿ, ನೀವ ಅವರ ಪಾರ್ಟಿಯಿಂದ ಯಾರು ನಿಲ್ತಾರೆ ಅವರಿಗೇ ಹಾಕಿ ಬರ್ತೀರಾ, ನಿಮ್ಮ ಓಟೂ ನಿಮಗಿಲ್ಲಾ" ಅಂದ್ಲು. "ಲೇ ವಾಜಪೇಯಿ ವ್ಯಕ್ತಿತ್ವ ಅಂದ್ರೆ ನನಗೆ ಅಷ್ಟು ಇಷ್ಟ ಕಣೇ, ಅವರನ್ನು ಬೇರೆ ಪಕ್ಷದವರೂ ಇಷ್ಟ ಪಡ್ತಾರೆ, ಆದ್ರೆ ನನ್ನ ಓಟು ನನಗೇ" ಅಂದೆ. "ಹಾಗಾದ್ರೆ ಎರಡು ಓಟು ಗ್ಯಾರಂಟಿ" ಅಂದ್ಲು. "ಓಹ ಒಂದು ನಂದು ಇನ್ನೊಂದು ನಿಂದು, ನಂಗೊತ್ತಿತ್ತು ನೀನ್ ನನಗೇ ಓಟು ಹಾಕ್ತೀಯಾ ಅಂತಾ" ಅಂತ ಚುನಾವಣೇಲೀ ಗೆದ್ದೇ ಬಂದೆನೇನೂ ಅನ್ನೋವಂತೆ ಮುಖ ಇಷ್ಟಗಲ ಮಾಡಿಕೊಂಡು ಹಲ್ಲು ಗಿಂಜಿದೆ. "ರೀ ನಂದು ಅಂತ ನಾನೆಲ್ಲಿ ಹೇಳಿದೆ, ಅದು ಪಕ್ಕದ ಮನೆ ಪದ್ದೂದೂ, ನಿಮ್ಮ ದೊಡ್ಡ ಫ್ಯಾನ್ ಅಲ್ವಾ ನೀವು ಕೇಳದಿದ್ರೂ ನಿಮ್ಗೇ ಓಟು ಹಾಕ್ತಾಳೆ" ಅಂದ್ಲು, ವಿಶ್ವಾಸಮತದಲ್ಲಿ ಸರ್ಕಾರ ಉರುಳಿದಾಗ ಸೋತ ಮಂತ್ರಿಯ ಥರ ಆಗಿತ್ತು ನನ್ನ ಮುಖಾ, ಸಿಗಬಹುದಾಗಿದ್ದ ಸ್ವಂತ ಪಾರ್ಟಿಯ ಒಂದು ಮತ ಸಿಗಲಿಲ್ಲವಲ್ಲ, ಸಿಕ್ಕರೆ ಸರ್ಕಾರ ಉರುಳುತ್ತಿರಲಿಲ್ಲವಲ್ಲ ಅನ್ನೋ ಹಾಗೆ.

Copyright© Prabhuraj Moogi
www.telprabhu.com

"ನಾ ಚುನಾವಣೆಗೆ ನಿಂತು ಏನಾಗಬೇಕಿದೆ ಹೋಗು, ಬೀಳೊದೇ ಎರಡು ಓಟು ಅಂದಮೇಲೆ" ಅಂತ ಎದ್ದೆ, ಎಳೆದು ಕೂರಿಸಿಕೊಂಡ್ಲು, ಪಕ್ಷ ಬಿಟ್ಟು ಹೋಗುತ್ತಿನೆನ್ನುವವನಿಗೆ ಏನೊ ಖಾತೆ ಕೊಟ್ಟು ಕೂರಿಸಿದಂತೆ. "ನಾನೂ ನಿಮಗೇ ಓಟು ಹಾಕ್ತೀನಿ ಆಯ್ತಾ" ಅಂದ್ಲು, "ಸಿಗೋ ಮೂರು ಓಟಿಗೆ ಚುನಾವಣೆಗೆ ನಿಲ್ಬೇಕಾ ಠೇವಣಿ ಕಳ್ಕೋತೀನೀ ಅಷ್ಟೇ" ಅಂದೆ. "ರೀ, ನಿಮ್ಮ ಬ್ಲಾಗಿನಲ್ಲಿ ಓಟು ಹಾಕಿ ಅಂತ ಪ್ರಚಾರಾ ಮಾಡೋಣ ಬಹಳ ಓಟು ಬರ್ತವೆ" ಅಂದ್ಲು. "ರಾತ್ರಿ ನಿದ್ದೆಗೆಟ್ಟು ಬರೆದಿರೋ **ಲೇಖನಕ್ಕೇ ಇಪ್ಪತ್ತು ಕಾಮೆಂಟು ಬರಲ್ಲ, ಇನ್ನು ಓಟು ಬರ್ತಾವಾ**, ಚುನವಣೆಗೆ ನಿಂತೆ ಅಂದ್ರೆ ಬರೂ ನಾಲ್ಕು ಓದುಗರೂ ಕಮ್ಮಿಯಾಗಿ ಹೋಗ್ತಾರೆ ಅಷ್ಟೇ" ಅಂದೆ. "ಇರ್ಲಿ ಬಿಡಿ ಬೇರೆ ಪ್ರಚಾರಾ ಮಾಡೊಣಾ, ನಾನು ಮನೆಮನೆಗೆ ಹೋಗಿ ಮತ ಕೇಳ್ತೀನಿ" ಅಂದ್ಲು "ಅರಿಶಿಣ ಕುಂಕುಂಮ ಹಚ್ಚಿ ಸೀರೆ ಕೊಟ್ಟು ಮತ ಕೇಳ್ತೀಯಾ, ನಿನಗೇ ಒಂದು ಸೀರೆ ಕೊಡಿಸೋಕೆ ಆಗ್ತಿಲ್ಲ ನನ್ನ ಕೈಲಿ ಇನ್ನು ಎಲ್ರಿಗೂ!!!" ಅಂತ ನಿಟ್ಟುಸಿರು ಬಿಟ್ಟೆ. "ಏನಾದ್ರೂ ಮಾಡಿ ಪ್ರಚಾರ ಮಾಡೊಣ, ಲೌಡಸ್ಪೀಕರನಲ್ಲಿ, ಬಡವರ ಬಂಧು ಹಳೆಯದಾಯ್ತ್ರು... 'ಹುಡುಗಿಯರ ಹೃದಯ ಚೋರ, ಕನ್ಯೆಯರ ಕಲ್ಪನೆಯ ಹುಡುಗ, ಮಾತಿನ ಮಲ್ಲನಿಗೆ ನಿಮ್ಮ ಮತ' ಅಂತ ಹೊಸಾ ಸ್ಟೈಲಿನಲ್ಲಿ ಪ್ರಚಾರಾ ಮಾಡೋಣ ಎಲ್ಲಾ ಹುಡುಗೀರ್ ಓಟೂ ನಿಮ್ಗೇ" ಅಂತ ಬಾಂಬಿಟ್ಟಳು. "ಅಹಾಹಾ.. ಮೊದಲೇ ಹೇಳಬಾರದಿತ್ತಾ ಈ ಲೋಕಸಭೆಗೆ ನಿಂತ್ಕೊತಾ ಇದ್ದೆ, ನಾಮಿನೇಶನ ಟೈಮ ಆಗಿ ಹೋಯ್ತು, ಚುನಾವಣೇನೇ ಹತ್ರ ಬಂತು" ಅಂದೆ. "ಅಹಾ ಆಸೆ ನೋಡು, ರೀ ಮೊದ್ಲು ಬಡಾವಣೆಯ ಮುನ್ಸಿಪಲ್ ಕಾರ್ಪೊರೇಶನ್ನಿಗೆ ಆಯ್ಕೆ ಆಗಿ ಆಮೇಲೆ ಹಾಗೆ ಒಂದೊಂದೇ ಹೆಜ್ಜೆ" ಅಂದ್ಲು "ಓಹ್ ಹಾಗಾದ್ರೆ ನಾನು ಪ್ರಧಾನ ಮಂತ್ರಿ ಆಗೋಷ್ಟೊತ್ತಿಗೆ ಮುದುಕಾ ಆಗಿರ್ತೀನಿ" ಅಂದೆ. "ಇನ್ನೇನು ನೀವ್ ಗಾಂಧಿ ಮೊಮ್ಮಗನಾ, ಇಂದು ಹುಟ್ಟೀ ನಾಳೆ ಪ್ರಧಾನೀ ಆಗೋಕೇ, ಆ ಅದೃಷ್ಟ ನಿಮಗೆಲ್ಲಿ ಇಲ್ಲ ಬಿಡಿ" ಅಂದ್ಲು. "ಆಯ್ತು ನೀನು ಹೇಳಿದ ಹಾಗೆ ಆಗ್ಲಿ" ಅಂದೇ. "ಆಗ್ಲಿ ಅಂದ್ರೆ ಆಯ್ತಾ, ಬಡಾವಣೆಯಲ್ಲೇ ಜನರಿಗೆ ಹೆಲ್ಪ ಆಗೋ ಹಾಗೆ ಕೆಲ್ಸ ಮಾಡಬೇಕು, ನೀರು ಬರದಿದ್ರೆ, ಬರೋ ಹಾಗೆ ಮಾಡೋದು, ಕರೆಂಟು, ರೋಡು ಹೀಗೆ ಏನಾದ್ರೂ ಸಮಾಜ ಸೇವೆ ಮಾಡಿ ಹೆಸರು ಮಾಡ್ಬೇಕು ಆಮೇಲೇ ನಿಂತ್ಕೊಳ್ಳೊದು". "ಓಹ್ ಹೌದಾ, ನೀರು ಬಂದು ಮೂರು ದಿನಾ ಆಯ್ತಲ್ಲ, ಪಾಪ ಪಕ್ಕದ ಮನೆ ಪದ್ದೂಗೆ ತೊಂದ್ರೆ ಆಗಿರಬೇಕು ಹೆಲ್ಪ ಮಾಡಿ ಬರ್ಲಾ" ಅಂದೆ. "ಮೊದಲು ನಮ್ಮ ಮನೇಲಿ ನೀರಿಲ್ಲ ಅದನ್ನ ನೋಡಿ" ಅಂತ ದುರುಗುಟ್ಟಿದ್ಲು.

ಹತ್ತು ಕೊಡ ನೀರು ಹೊತ್ತು ತಂದು ಹಾಕಿದ್ದಾಯ್ತು, ಉಸ್ಸಪ್ಪಾ ಅಂತ ಕೂತೆ, "ಲೇ ಚುನಾವಣೆಗೆ ನಿಲ್ಲಕಾಗಲ್ಲ ಕಣೇ ಕೂತ್ಕೋಬಹುದಾ" ಅಂತ ಕಿಚಾಯಿಸಿದೆ, "ಗೆದ್ದು ಬಂದ ಮೇಲೆ ಸೀಟಿನಲ್ಲಿ ಕೂರೋದೇ ಇರ್ತದೆ, ಚುನಾವಣೆಲಾದ್ರೂ ನಿಂತೊಕೊಳ್ಳಿ ಅಂತಾ ಇರೋದು, ನೀತಿ ಸಂಹಿತೆ ಉಲ್ಲಂಘನೆ ಮಾಡೋಕೆ ಆಗಲ್ಲಾ" ಅಂತ ಅವಳು. "ಅಂದ ಹಾಗೆ ಯಾವ ಪಕ್ಷ ನಿಮ್ದು" ಅಂದ್ಲು. "ಪಕ್ಷನೂ ಇಲ್ಲ ಏನೂ ಇಲ್ಲ ಪಕ್ಷೇತರ ನಾನು" ಅಂದೆ. "ಹಾಗಾದ್ರೆ ಚಿಹ್ನೆ?"... "ಹೌದಲ್ವಾ, ಚಿಹ್ನೇ ಬೇಕು, ಹೂಂ.... ಕಂಪ್ಯೂಟರ್...." ಅಂತ ಹಲ್ಲುಕಿರಿದೆ. "ಯಾವಾಗ ನೋಡಿದ್ರೂ ಕಂಪ್ಯೂಟರ್.. ಅದನ್ನ ಚಿಹ್ನೆ ಮಾಡಿಕೊಂಡ್ರೆ, ಅಷ್ಟೇ ನಿಮ್ಮ (ಕೆಲವು)ಐಟೀನವ್ರು ನಾಲ್ಕು ಜನ ಓಟು ಹಾಕಬಹುದು, ಅದೂ ವೀಕೆಂಡು ಇದ್ರೆ ಮಾತ್ರ, ರೀ ಚಿಹ್ನೆ ಅಂದ್ರೆ ಹೇಗಿರಬೇಕು, ಗೌಡರ ಪಕ್ಷದ್ದು ನೋಡಿ, ಹೊರೆ ಹೊತ್ತ ಮಹಿಳೆ, ರೈತರು, ಮಹಿಳೆಯರು ಇಬ್ರನ್ನೂ ಹಿಡಿದುಕೊಂಡು ಬಿಟ್ರು, ಒಂದೇಟಿನಲ್ಲಿ ಎರಡು ಹಕ್ಕಿ, ಇನ್ನು ಹಸ್ತ, ಪೊಲಿಂಗ್ ಬೂತ್ ಮುಂದೆ ನಿಂತೂ ಕೈ ತೊರಿಸಿ, ನಮಗೇ ಮತ ಹಾಕಿ ಅಂತ ಕೇಳಬಹುದು, ಯಾವ ನೀತಿಸಂಹಿತೆಯೂ ಏನೂ ಮಾಡೋಕೆ ಆಗಲ್ಲ, ಇನ್ನು ಕಮಲ, ಕೆಸರಿನಲ್ಲಿ ಅರಳಿದ ಕಮಲ, ಈ ರಾಜಕೀಯ ಕೆಸರನಲ್ಲಿ ಅರಳಿದ ಹೂವು ನಾವು ಅಂತ ಹೇಳಿಕೊಳ್ಳಬಹುದು... ಹಾಗಿರಬೇಕು ಗುರುತು ಅಂದ್ರೆ" ಅಂತ ನೀತಿ ಬೋಧನೆ ಮಾಡಿದ್ಲು, ಇವಳೇನು ಯಾವ ರಾಜಕೀಯ ನಾಯಕರಿಗಿಂತ ಕಮ್ಮಿಯಿಲ್ಲ ಅನಿಸಿತು. "ಹಾಗಾದ್ರೆ, **ಕಂಪ್ಯೂಟರ ಆಪರೇಟ್ ಮಾಡುತ್ತಿರುವ ರೈತ**" ಹೇಗಿರ್ತದೆ ಅಂದೆ. ಬುಸುಗುಡುತ್ತ ನೋಡಿದ್ಲು... "ನೇಗಿಲು ಹೊತ್ತ ಸಾಫ್ಟವೇರ ಇಂಜನೀಯರು, ರಿಸೆಷನ್ ಟೈಮಿನಲ್ಲಿ ಚೆನ್ನಾಗಿರತ್ತೆ" ಅಂದೆ, ಅಟ್ಟಿಸಿಕೊಂಡು ಬಂದ್ಲು, ಓಡಾಡಿ ಸುಸ್ತಾಗಿ ಬಂದು ಕುಳಿತೆವು. "ರೀ ನಿಜವಾಗ್ಲೂ ಚುನಾವಣೆಗೆ ನಿಂತು ಹೀಗೆಲ್ಲ ಮಾಡಿದ್ರೆ" ಅಂದ್ಲು, "ನಿನ್ನ ಚುನಾವಣೇನೂ ಬೇಡಾ... ನಾ ನಿಲ್ಲೋದು ಬೇಡ.. ಮಲಗ್ತೀನಿ ಬಿಡು" ಅಂದೆ, "ಎದ್ದೇಳಿ ಯುವಕರೇ ದೇಶ ಕಟ್ಟಲು ಎದ್ದೇಳಿ" ಅಂತ ಎಬ್ಬಿಸಲು ಪ್ರಯತ್ನಿಸಿದ್ಲು, ನಾ ಏಳಲೇ ಇಲ್ಲ.

ಚುನಾವಣೆ ಅಂತಿದ್ದಂಗೆ ಹೇಸಿಗೆ ಬರುವಷ್ಟು ರಾಜಕೀಯ ಗಬ್ಬೆದ್ದು ಹೋಗಿದೆ, ಯಾರಾದ್ರೂ ಎಲ್ಲ ಒಮ್ಮೇಲೇ ಸರಿ ಮಾಡಲು ಹೋಗಬೇಕೆಂದ್ರೆ. ಕೊಳಚೆಗೆ ಫಿನಾಯ್ಲು ಸುರಿದಂತೇ ಸರಿ, ಕೊಳಚೆಗೇನೂ ಆಗಲ್ಲ, ಅದಕ್ಕೇ ಕೊಳಚೆ ಹರಿದು ಹೋಗಿ ಹೊಸ ಹರಿವು ಬರಬೇಕು, ಆಗ ಹೊಸ ತಿಳಿನೀರು ಎಲ್ಲ ತೊಳೆಯುತ್ತ ಹೋಗುತ್ತದೆ, ಇತ್ತೀಚೆಗೆ ಕೆಲವು ಪ್ರತಿಭಾನ್ವಿತರು, ನಿಜ ನಾಯಕರು ಹೊರಹೊಮ್ಮುತ್ತಿರುವುದೇ ಅದರ ಲಕ್ಷಣ, ಆದರೆ ಎಲ್ಲ ಸರಿಯಾಗುವವರೆಗೆ ಈ ಕೊಳಚೆ ಸ್ವಲ್ಪ ನಾರುವುದೇ...

Copyright© Prabhuraj Moogi
www.telprabhu.com

ಮಧ್ಯಾಹ್ನ ಗಡದ್ದಾಗಿ ನಿದ್ದೆ ಹೊಡೆದು ಎದ್ದೆ, ಬಿಸಿಬಿಸಿ ಟೀ ಸಿಕ್ಕಿತ್ತು, ಮತ್ತೆ ಕೇಳಿದ್ಲು, "ಚುನಾವಣೆಗೆ ನಿಲ್ಲದಿದ್ರೂ ಸರಿ, ಓಟಾದ್ರೂ ಹಾಕ್ತೀರಲ್ವಾ" ಅಂತ... "ಏನಂತ ಹಾಕಲಿ, ಯಾರಿಗೆ ಹಾಕಲಿ, ಎಲ್ಲ ನಾಯಕರು, ನಾಲಾಯಕರೇ ನಿಂತಿದ್ದರೆ... ಈ ಪ್ರಶ್ನೆಗೆ ಉತ್ತರಿಸಿ ಅಂತ, ನಾಲ್ಕು ಆಯ್ಕೆ ಕೊಟ್ಟಿರ್ತಾರಲ್ಲ, ಅಲ್ಲಿ ಕೊನೇ ಆಯ್ಕೆ "ಮೇಲಿನದಾವೂದೂ ಅಲ್ಲ(none of the above)" ಅಂತ ಇರುತ್ತಲ್ಲ ಹಾಗೇ ಇಲ್ಲೂ "ಮೇಲಿನವರಾರೂ ಅಲ್ಲ" ಅಂತ ಕೊನೇ ಆಯ್ಕೆ ಅಂತಿದ್ದರೆ ಚೆನ್ನಾಗಿತ್ತು ಅದನ್ನೇ ಒತ್ತಿ ಬರುತ್ತಿದ್ದೆ" ಅಂದೆ ನಗುತ್ತಿದ್ಲು. "ಹೌದು ಹಾಗೆ ಮಾಡಿದ್ರೆ ಹೇಗಿರುತ್ತದೆ ಒಟ್ಟು ಮತದಾನದ ಪೈಕಿ ಅರ್ಧಕ್ಕಿಂತ ಜಾಸ್ತಿ ಪಡೆದರೆ ಮಾತ್ರ ಗೆಲುವು, ಹೆಚ್ಚಿಗೆ ಜನ "ಮೇಲಿನವರಾರೂ ಅಲ್ಲ" ಅಂದು ಯಾರೂ ಗೆಲ್ಲದಿದ್ರೆ, ಈಗ ನಿಂತವರು ಬಿಟ್ಟು ಮತ್ತೆ ಹೊಸಬರು ನಿಲ್ಲಬೇಕು ಅವರಲ್ಲಿ ಆಯ್ಕೆ ನಡೆಯಬೇಕು, ಹಾಗಿದ್ದರೆ ಹೇಗೆ, ಈ ರೀತಿ ಮಾಡಿದರೂ ಲೋಪದೋಷಗಳಿವೆ, ಎಷ್ಟು ಸಾರಿಯಂತ ಚುನಾವಣೆ ಮಾಡೊದು?, ಹಾಗೆ ಮತ್ತೆ ಹೊಸಬರು ನಿಲ್ಲದಿದ್ರೆ? ಆದರೂ ಏನೋ ಆಗ ಎಲ್ರೂ ಓಟು ಮಾಡಬಹುದು ಅಂತ ನನಗನ್ನಿಸುತ್ತದೆ, ಈಗ ಆಗುತ್ತಿರುವ ಐವತ್ತು ಅರವತ್ತು ಪ್ರತಿಶತಕ್ಕಿಂತ ಹೆಚ್ಚು ಮತಾದಾನವಾಗಬಹುದೇನೊ... ಬಹಳ ಜನರಿಗೆ ಓಟು ಹಾಕಬಾರದೆಂದಿಲ್ಲ, ಸರಿಯಾದ ಅಭ್ಯರ್ಥಿಗಳಿಲ್ಲದೇ ಓಟು ಹಾಕಲು ಮುಂದೆ ಬರುತ್ತಿಲ್ಲ ಅಷ್ಟೇ..." ಅಂದೆ. "ರೀ ಒಳ್ಳೇ ಭಾಷಣ ಮಾಡ್ತೀರ್ರೀ, ನೀವು ಚುನಾವಣೆಗೆ ನಿಂತರೆ..." ಅಂತ ಇವಳು ಮತ್ತೆ ಶುರುವಿಟ್ಟುಕೊಂಡ್ಲು...

ಹೀಗೇ ಬರುತ್ತಿರಿ, ಬ್ಲಾಗ್ ಬಂಧು ಬಾಂಧವರೇ!!! ಓಟು ಹಾಕದಿದ್ರೂ ಪರವಾಗಿಲ್ಲ, ಕಾಮೆಂಟಾದರೂ ನನಗೇ ಹಾಕಿ... :)

ಎಲ್ಲ ವಿಚಾರಗಳೂ ಕೇವಲ ಹಾಸ್ಯಕ್ಕಗಿ ಬರೆದಿದ್ದು, ಯಾರಿಗೂ ನೋವುಂಟು ಮಾಡುವ ಉದ್ದೇಶವಿರುವುದಿಲ್ಲ, ಇವೆಲ್ಲ ಕೇವಲ ಲೇಖಕರ ವೈಯಕ್ತಿಕ ಅಭಿಪ್ರಾಯಗಳು, ಎಲ್ಲರೂ ಒಪ್ಪಬೇಕೆಂದಿಲ್ಲ, ಇಷ್ಟವಾದರೆ ಓದಿ ಇಲ್ಲವಾದ್ರೆ, ಹುಚ್ಚು ಹುಡುಗನ ಹತ್ತು ಮಾತುಗಳೆಂದು ಮರೆತುಬಿಡಿ.

Copyright© Prabhuraj Moogi
www.telprabhu.com

# ರಂಗೋಲಿ

ಹಾಸಿಗೆಯಲ್ಲೇ ಬಿದ್ದು ಹೊರಳಾಡುತ್ತಿದ್ದೆ, ಯಾವ ಯಾವ ಕೋನ ತ್ರಿಕೋನಾಕಾರಗಳಲ್ಲಿ ಮೈಮುರಿಯಲು ಸಾಧ್ಯವಿತ್ತೊ ಅದೆಲ್ಲ ಮಾಡಿಯಾಗಿತ್ತು, ಆದರೂ ಇನ್ನೂ ಅವಳೇಕೇ ಬಂದು ಎಬ್ಬಿಸುತ್ತಿಲ್ಲ ಅಂತ ಯೋಚಿಸುತ್ತ ಬಿದ್ದುಕೊಂಡಿದ್ದೆ, ಏನಿಲ್ಲ ಎಬ್ಬಿಸಲು ಬಂದರೆ ಸ್ವಲ್ಪ ಕೀಟಲೆ ಮಾಡಿ ಎದ್ದರೆ ದಿನವೆಲ್ಲ ಚೆನ್ನಾಗಿರುತ್ತದಂತ. ಅವಳೂ ಹಾಗೆ ಒಂದೊಂದು ದಿನ ಒಂದೊಂದು ಥರ ಏಳಿಸೊದು, ಒಂದು ದಿನ ಬಯ್ದು, ಬಡಿದು ಎಬ್ಬಿಸಿದರೆ, ಮತ್ತೊಂದು ದಿನ ಮಗು ಎಬ್ಬಿಸಿದ ಹಾಗೆ ಮೆಲ್ಲನೆ ಬಂದು ಮೈದಡುವವಳು. ಮಗುದೊಂದು ದಿನ "ಏಳಿ ಎದ್ದೇಳಿ.." ಅಂಥ ವಿವೇಕಾನಂದರ ಶೈಲಿಯಲ್ಲಿ ಹೊಸ ಹುರುಪುತುಂಬಿ ಎಬ್ಬಿಸೋದು... ಈ ವೈವಿಧ್ಯತೆಯಲ್ಲಿ ಏಕತೆ ಅನ್ನೊ ಹಾಗೆ ನಮ್ಮದು ವೈವಿಧ್ಯತೆಯಲ್ಲಿ ಏಳುವಿಕೆ. ಹೀಗೆ ಬರೆದರೆ ಏಳುವ ಬಗ್ಗೆ ನಾ ಪ್ರಬಂಧ ಮಂಡಿಸಬಹುದು.

ಇನ್ನೇನು ಅವಳು ಬರುವ ಹಾಗೆ ಕಾಣದಾದಾಗ ಎದ್ದೆ, ಎಲ್ಲಿರುವಳೆಂದು ಹುಡುಕಿದೆ ಮನೆಯೆಲ್ಲ ಹುಡುಕಿದೆ ಎಲ್ಲೂ ಸಿಗಲಿಲ್ಲ, ಅಯ್ಯೊ ದೇವದೂತರು ಬಂದು ದೇವಕನ್ಯೆಯೆಂದು ಎಲ್ಲಾದರೂ ಎತ್ತಿಕೊಂಡು ಹೋದರೋ ಅಂತ ಚಿಂತಿತನಾದೆ ಕೂಡ. ಮನೆ ಬಾಗಿಲು ಸ್ವಲ್ಪ ತೆರೆದಿರುವಂತೆ ಕಾಣಿತು, ಹೊರಬಂದು ನೋಡಿದರೆ ಅಲ್ಲಿರುವಳಲ್ಲ!!! ರಂಗೋಲಿ ಹಾಕುತ್ತಿದ್ದಾಳೆ. ಕುಕ್ಕರಗಾಲಿನಲ್ಲಿ ಕೂತು ಅದೇನೋ ಗಹನ ವಿಚಾರದಲ್ಲಿರುವಂತೆ ತನ್ಮಯತೆಯಿಂದ ಒಂದೊಂದೇ ರೇಖೆ ಎಳೆಯುತ್ತಿದ್ದಾಳೆ, ನಾನು ಸಾಫ್ಟವೇರ ಪ್ರೋಗ್ರಾಮ ಕೂಡ ಅಷ್ಟು ತನ್ಮಯತೆಯಿಂದ ಬರೆದಿರಲಿಕ್ಕಿಲ್ಲ. ಆದರೆ ರಂಗೋಲಿ ಬಿಡಿಸುತ್ತಿರುವುದು ಮತ್ತದೇ ನಾ ಬೇಡವೆಂದ ಜಾಗದಲ್ಲೇ! ಅದೇ ಗೇಟಿನ ಮುಂದೆ, ನನ್ನ ಬೈಕು ಹೊರ ತೆಗೆಯಲಾಗದಂತೆ...

ಇಂದಲ್ಲ ಇದು ನಿನ್ನೆ ಮೊನ್ನೆಯಿಂದಲೇ ನಡೆದಿರುವ ಶೀತಲ ಸಮರ, ಅದೊಂದು ದಿನ ನಾ ಬೇಗ ಆಫೀಸಿಗೆ ಹೋಗಬೇಕಿತ್ತು ಗೇಟಿನ ಮುಂದೆ ಇಷ್ಟು ಅಡ್ಡಗಲ ರಂಗೋಲಿ ಹಾಕಿಬಿಟ್ಟಿದ್ದಳು, ಅದನ್ನ ತುಳಿಯಲು ಮನಸಿಲ್ಲ, ಆದರೂ ಇನ್ನೇನು ಮಾಡಲಾಗುತ್ತೆ ಹಾಗೆ ಬೈಕು ಹೊರ ತೆಗೆದೆ, ರಂಗೊಲಿಯೆಲ್ಲ ಹಾಳಾಯಿತು, ಅಷ್ಟು ಇಷ್ಟಪಟ್ಟು ತೆಗೆದದ್ದು ಹಾಳಾಗಿದ್ದರಿಂದ ಅವಳೂ ಸಿಟ್ಟಿಗೆದ್ದು ಬಯ್ದಳು, ಅವಸರದಲ್ಲಿ ನಾ ಹಾಗೆ ಮಾಡಿದ್ದೆಂದರೂ, ಮುಂಜಾನೆಯೇ ಎದ್ದು ಬೈಕು ಹೊರಗಿಡಬೇಕಿತ್ತೆಂದು ಅವಳ ವಾದ, ನನಗೂ ಲೇಟಾಗಿದ್ದರಿಂದ ಆಕಡೆಯೆಲ್ಲಾದರೂ ಬಿಡಿಸಬೇಕಿತ್ತು ನಡೆದಾಡುವ ದಾರಿಯಲ್ಲಿ ಹಾಕಿದರೆ ಹೇಗೆ ಅಂತ ನಾನು, ಅಂತೂ ಮನಸ್ತಾಪವಾಗಿತ್ತು. ಹೀಗೆ ಕೆಲದಿನ ಅವಳು ಮತ್ತದೇ ಜಾಗದಲ್ಲಿ ರಂಗೋಲಿ ಬಿಡಿಸುವುದು.. ಮತ್ತದೇ ರಾಗ ಮತ್ತದೇ ತಾಳ... ಇಂದು ಅವಳು ತಾದ್ಯಾತ್ಮತೆಯಿಂದ ಆ ರಂಗೋಲಿ ಬಿಡಿಸುತ್ತಿರುವುದ ನೋಡುತ್ತಿದ್ದರೆ ಏನಿದು? ಏನಿದೆ ಈ ರಂಗೋಲಿಯಲ್ಲಿ, ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲೇಬೇಕು ಅಂತ ತೀರ್ಮಾನಿಸಿದೆ.

ಅವಳು ನನ್ನ ನೋಡಿರಲಿಲ್ಲ, ನೋಡಲೆಂದೇ ಜೋರಾಗಿ ಆಕಳಿಸಿ ಮೈಮುರಿದೆ, "ಏನೊ ಮಹರಾಜರಿಗೆ ಈಗ ಏಳೊಣವಾಯಿತೋ!" ಅಂತಂದಳು. ಹಲ್ಲುಜ್ಜದ ಹಲ್ಲುಗಳನ್ನೇ ತೆರೆದು ಹೀ.. ಅಂತ ಹಲ್ಲು ಗಿಂಜಿದೆ. "ಬಂದೆ ಟೀ ಇನ್ನೂ ಮಾಡಬೇಕು" ಅಂತ ಮತ್ತೆ ಉಲಿದಳು, "ಏನು ಮಹರಾಣಿಯವರು ಸ್ವತ: ಖುದ್ದಾಗಿ ರಾಜಬೀದಿಯನ್ನು ಅಲಂಕರಿಸುವಂತಿದೆ" ಅಂತ ಅವಳಿಗಿಂತ ನಾನೇನು ಕಮ್ಮಿ ಅನ್ನುವಂತೆ ಡೈಲಾಗು ಹೊಡೆದೆ. ಮುಖವೆತ್ತಿ ನೋಡಿದವಳು, ಹಲ್ಲು ಗಿಂಜುತ್ತಿದ್ದ ನನಗೆ "ಮೊದಲು ಹಲ್ಲು ಉಜ್ಜಿ ಹೋಗಿ, ಬರ್ತೇನೆ" ಅಂತ ಖಾರವಾದಳು. ಹಲ್ಲುಜ್ಜಿ ಬಂದವನು ಮತ್ತೆ ಹಾಗೇ ನೋಡತೊಡಗಿದೆ, ಬಹಳ ಅಂದವಾಗಿ ಬಿಡಿಸಿದ್ದಳು, **ನಡುವೆಯೊಂದು ಗುಲಾಬಿ ಹೂವಿನ ತೊಟ್ಟು, ಸುತ್ತಲೂ ಹರಡಿರುವ ಪಕಳೆಗಳು, ಅಲ್ಲೊಂದು ಇಲ್ಲೊಂದು ಅನ್ನುವಂತೆ ಎಲೆಗಳು.** ಮೊದಲೆಲ್ಲ ಅಷ್ಟು ಗಮನಿಸಿರಲಿಲ್ಲ, ನನ್ನ ಬೈಕು ತೆಗೆಯುವುದೇ ನನಗೆ ಹೆಚ್ಚಾಗಿತ್ತು. ಅವಳು ಬಿಡಿಸುತ್ತಿದ್ದಲ್ಲಿಗೇ ಹೋಗಿ ಕುಳಿತೆ, ಓರೆಯಾಗಿದ್ದ ಎಲೆಯ ಎಸಳೊಂದನ್ನು ಸರಿಪಡಿಸಿದೆ, ಅಷ್ಟರಲ್ಲಿ "ರೀ ಎದ್ದೇಳ್ರಿ, ಸಾಕು ನೀವೇನಿದು, ಯಾರಾದರೂ ಏನಂದುಕೊಂಡಾರು" ಅಂತ ಎದ್ದೇಳಿಸಿಯೇಬಿಟ್ಟಳು.

ಒಳಗೆ ಬಂದಮೇಲೆ ಬಿಸಿ ಬಿಸಿ ಟೀ ಸಿಕ್ಕಿತು, ಸ್ನಾನ ಮಾಡದೇ ಹಾಗೆ ಎದ್ದು ಹೊರಗೆ ಹೊರಟೆ, ಶರ್ಟು ಹಾಕಿಕೊಳ್ಳುತ್ತಿದ್ದಂತೇ "ಎಲ್ಲಿ" ಅಂತ ಬಂದು ಕೇಳಿದಳು, "ಈಗ ಬಂದೆ" ಅಂತ ಸುಮ್ಮನೇ ಏನೂ ಹೇಳದೇ ಹಾಗೆ ಹೊರಟೆ, ಹೊರಬಂದು ಹಲಗೆಯೊಂದು ತಂದು ಸ್ವಲ್ಪ ಎತ್ತರಿಸಿ ರಂಗೋಲಿ ಮೇಲಿಟ್ಟು ಅದು ಸ್ವಲ್ಪವೂ ಹಾಳಾಗದಂತೆ ಹರಸಾಹಸ ಮಾಡಿ ಬೈಕು ಹೊರತೆಗೆದೆ. ಅವಳು ನಿಂತು ಕಿಟಕಿಯಲ್ಲಿ ನೋಡುತ್ತಿದ್ದಳು, ಹೊರಗೆ ಬಂದು "ಪರವಾಗಿಲ್ಲ ಹಾಗೇ ಅದರ ಮೇಲೆ ಹೋಗಿ ಏನಾಗಲ್ಲ" ಅಂದ್ಲು ಆದ್ರೂ ರಂಗೋಲಿಗೇನೂ ಆಗದಂತೆ ಹೊರಬಂದೆ. ಸೀದಾ ಅಂಗಡಿಗೆ

Copyright© Prabhuraj Moogi

ಹೋಗಿ ನಾಲ್ಕು ಥರ ಕಲರು, ಅದನ್ನ ಹಾಕಿಡಲು ಚೌಕಾಕಾರದ ಖಾನೆಗಳಿರುವ ಡಬ್ಬಿ ಎಲ್ಲ ತೆಗೆದುಕೊಂಡು ಮನೆಗೆ ಬಂದು, ರಂಗೋಲಿಗೆ ಬಣ್ಣ ಮಿಶ್ರಣ ಮಾಡಿ ಅವಳ ಕೈಗಿತ್ತು ಅದರಲ್ಲಿ ಬಣ್ಣ ತುಂಬೆಂದೆ. ಒಂಥರ ನನ್ನ ಬದುಕೆಂಬ ರಂಗೊಲಿಯಲ್ಲಿ ಬಣ್ಣ ತುಂಬು ಅಂದಂಗಿತ್ತು.

"ಆಂ ಅಲ್ಲಿ ಹಸಿರು, ಅಲ್ಲಿ ತಿಳಿ ಹಸಿರು, ಗುಲಾಬಿ ಸ್ವಲ್ಪ ತಿಳೀಯಾದರೆ ಚೆನ್ನಾಗಿರುತ್ತದೆ" ಅಂತನ್ನುತ್ತ ಅವಳು ಬಣ್ಣ ತುಂಬುತ್ತಿರಬೇಕಾದರೆ ಅಲ್ಲೇ ಹತ್ತಿರ ಕುಳಿತಿದ್ದೆ, ಪಕ್ಕದ ಮನೆ ಪದ್ದು ನೋಡಿ ಅಸೂಯೆಪಟ್ಟಿದ್ದೆ ಪಟ್ಟಿದ್ದು. ಅಂತೂ ರಂಗೋಲಿ ತುಂಬ ಬಣ್ಣ ಬಳಿದದ್ದಾಯ್ತು. ಬಾಗಿಲು ತೆರೆದೇ ಇಟ್ಟಳು ರಂಗೋಲಿ ಕಾಣುತ್ತಿರಲೆಂದು, ಮತ್ತೊಂದು ರೌಂಡು ಅಂತ ಟೀ ಹೀರುತ್ತ ಅದೇ ರಂಗೋಲಿ ನೋಡುತ್ತ ಕುಳಿತವನ ಹತ್ತಿರ ಬಂದು ಅಂಟಿಕೊಂಡು ಕುಳಿತಳು, "ರೀ ಏನ್ ನೀವ್ ಇಷ್ಟೆಲ್ಲ ಮಾಡಿದ್ರೆ, ನಾ ಅಲ್ಲಿ ರಂಗೋಲಿ ಹಾಕದೇ ನಿಮ್ಮ ಬೈಕಿಗೆ ದಾರಿ ಬಿಡ್ತೀನಿ ಅನ್ಕೊಂಡಿದೀರಾ?" ಅಂತ ತಣ್ಣಗೆ ಕೇಳಿದಳು ಅವಳ ಅನುಮಾನವು ಸರಿಯಾಗಿತ್ತು, ದಿನಾಲೂ ರಂಗೊಲಿ ಹಾಕಿದ್ದಕ್ಕೆ ಬಯ್ಯೊವರು ಇಂದು ಅದರಲ್ಲಿ ಬಣ್ಣ ತುಂಬುತ್ತಾರೆಂದ್ರೆ ಅನುಮಾನ ಬಾರದಿರುತ್ತದೆಯೇ, ಇವಳು ಅಂತ ಕೇಳಿ ಪರೀಕ್ಷಿಸ್ತೀದಾಳೆ, ಬೇರೆಯವರಾಗಿದ್ರೆ, ಹಾಗೇ ಅಂದುಕೊಂಡು ಸುಮ್ಮನಾಗಿರುವವರು. "ಮರದ ಹಲಗೆ ಇದೆ, ಏನ್ ಪ್ರಾಬ್ಲಂ ಇಲ್ಲಾ, ನೀನೆಲ್ಲೇ ರಂಗೋಲಿ ಹಾಕು ನನಗೇನೂ ಅಭ್ಯಂತರವಿಲ್ಲ" ಅಂದೆ, "ನಂಗೊತ್ತು ಇಂದು ನಿಮಗೆ ರಂಗೋಲಿ ಇಷ್ಟವಾಗಿದೆ, ಇಲ್ಲಾಂದ್ರೆ ಬಣ್ಣ ಎಲ್ಲ ತಂದಿದ್ದು ಯಾಕೆ" ಅಂದ್ಲು... ನಾನೇನೂ ಹೇಳದೇ ನನಗೆ ರಂಗೋಲಿ ಇಷ್ಟವಾಗಿದ್ದನ್ನು ತಿಳಿಯಪಡಿಸಿದ್ದೆ. "ಮೊನ್ನೇನೂ ನೀನು ಚೆನ್ನಾಗೆ ಬಿಡಿಸಿರಬೇಕು, ನನಗೆ ನೋಡುವ ವ್ಯವಧಾನವಿರಲಿಲ್ಲ ಅಷ್ಟೇ, ನನಗೆ ಬೈಕು ತೆಗೆಯುವುದು ಮುಖ್ಯವಾಗಿತ್ತೇ ಹೊರತು ನೀ ಕಷ್ಟಪಟ್ಟು ಬಿಡಿಸಿದ ರಂಗೋಲಿಯನ್ನೆಲ್ಲ ನೋಡುವುದಲ್ಲ" ಅಂದೆ. "ಅಯ್ಯೊ ಅದರಲ್ಲೇನು ಮಹಾ, ಕಷ್ಟಪಡೋದು, ಸುಮ್ನೇ ಹಾಕಿದ್ದು" ಅಂದ್ಲು "ಯಾವಾಗ ಕಲಿತೆ" ಅಂದೆ. "ಅದಕ್ಕೇನು ಸ್ಕೂಲಾ ಟೀಚರಾ ಅಮ್ಮ ಬಿಡಿಸುವುದ ನೋಡಿ ಕಲಿತೆ" ಅಂದ್ಲು, ಮತ್ತೆ ಯಾವ ಯಾವ ಡಿಸೈನು ಹಾಕುತ್ತಾಳೆ, ಏನಾದ್ರು ಅಚ್ಚುಗಳನ್ನು ತಂದಿಟ್ಟಿದ್ದಾಳಾ, ಅಂತೆಲ್ಲ ಕೇಳಿ ತಿಳಿದುಕೊಂಡೆ, ಅವಳೂ ಬಲು ಹುರುಪಿನಿಂದ ಹೇಳಿದಳು, ಅದು ಬರೀ ಹೊಗಳಿಕೆಗಾಗಿ ಆಗಿರಲಿಲ್ಲ, ಅವಳ ಕಲೆಗೆ ನನ್ನ ಪ್ರಶಂಸೆಯಾಗಿತ್ತು, ಅದರಲ್ಲಿ ನಾ ಆಸಕ್ತಿ ತೋರಿಸಿದ್ದೆ, ಇಷ್ಟೆಲ್ಲ ದಿನ ಶೀತಲ ಸಮರಕ್ಕೂ ಕಾರಣ ಅವಳ ಆ ಕಲೆಯನ್ನು ನಾ ಗುರಿತಿಸಲಾಗದಿದ್ದದ್ದೇ, ಹಾಗೂ ಅದಕ್ಕೆ ತಕ್ಕ ಮನ್ನಣೆ ಕೊಡದಿದ್ದುದು ಅಷ್ಟೇ. ಅವಳಿಗೆ ಕೆಲವು ಹೊಸ ಹೊಸ ಆಧುನಿಕ ಡಿಸೈನುಗಳನ್ನೂ ಬರೆದು ಕೊಟ್ಟೆ, ಜತನವಾಗಿ ತೆಗೆದಿಟ್ಟುಕೊಂಡಳು.

ಎಷ್ಟೋ ಬಾರಿ ಏನೊ ಚೆನ್ನಾಗಿರುವುದ ನೊಡುತ್ತೇವೆ, ಅದನ್ನ ನಾವು ಹೊರಗೆ ಹೇಳಲ್ಲ, ರುಚಿಯಾಗಿ ಮಾಡಿದ ಒಂದು ಸಾರು ಪಲ್ಯವೇ ಇರಬಹುದು, ಇಷ್ಟ ಪಟ್ಟು ಧರಿಸಿದ ಉಡುಪೇ ಆಗಿರಬಹುದು, ಒಪ್ಪ ಓರಣವಾಗಿ ಜೋಡಿಸಿಟ್ಟ ಮನೆಯ ಸಾಮಾನುಗಳೇ ಆಗಿರಬಹುದು, ಇಲ್ಲ ಚೆನ್ನಾಗಿ ಬಿಡಿಸಿದ ಈ ರಂಗೋಲಿಯೇ ಆಗಿರಬಹುದು, ಚೆನ್ನಾಗಿದೆ ಅಂತ ಮನಸಿನಲ್ಲಿ ಅಂದುಕೊಂಡುಬಿಟ್ಟರೆ ಹೇಗೆ, ಅದು ಅವರಿಗೆ ಗೊತ್ತಾಗುವುದು ಹೇಗೆ, ಯಾಕೆ ನಾವು ಇಂಥ ಚಿಕ್ಕ ಚಿಕ್ಕ ವಿಷಯಗಳಲ್ಲಿ ಅಸಡ್ಡೆ ತೋರಿಸುತ್ತೇವೆ. ಅದೇ, ಅನ್ನಕ್ಕೆ ಉಪ್ಪು ಜಾಸ್ತಿಯಾಗಿದ್ದರೆ ಹೇಳಲು ಮರೆಯುವುದಿಲ್ಲ, ಝಗಮಘ ಅನ್ನುವ ಸೀರೆ ಉಟ್ಟು ಅ-ಸಹ್ಯವಾಗಿ ಕಂಡರೆ ಟೀಕಿಸಲು ಮರೆಯುವುದಿಲ್ಲ, ಎಲ್ಲೋ ಬಿದ್ದಾಡುತ್ತಿರುವ ಸಾಮಾನುಗಳು ಎತ್ತಿ ಇಡುವುದಿಲ್ಲ, ಬೇಕಿದ್ದರೆ ಎತ್ತಿಡು ಅಂತ ಹಾರಾಡುತ್ತೇವೆ. ಯಾಕೆ ಹೀಗೆ ಯಾಕೋ ನನ್ನಲ್ಲೂ ಉತ್ತರವಿಲ್ಲ. ಆದರೂ **ಬದುಕೇ ಒಂದು ಸುಂದರ ರಂಗೋಲಿಯೆಂದರೆ ಅದಕ್ಕೆ ಅವಳ ಕೈಯಲ್ಲಿ ನಾ ಬಣ್ಣ ತುಂಬಿಸುತ್ತಿದ್ದೇನೆ**. ನಿಮ್ಮ ಮನೆಯ ರಂಗೋಲಿ ಏನು ತುಳಿದು ನಡೆದು ಹೋಗುತ್ತೀರೊ ಇಲ್ಲ... ಏನು ಮಾಡುತ್ತಿರೊ ನಿಮಗೆ ಬಿಟ್ಟಿದ್ದು.

ಮರುದಿನ ಎದ್ದು ಬೈಕು ತೆಗೆದೆ, ಮರದ ಹಲಗೆಯೇನೂ ಇಲ್ಲದೆ ಪ್ರಯಾಸವಿಲ್ಲದೇ, ಅವಳೇನು ರಂಗೋಲಿ ಹಾಕಿಲ್ಲ ಅಂದುಕೊಂಡಿರಾ ಇಲ್ಲ ಜಾಗ ಬದಲಾಯಿಸಿದಳೆಂದು ಅಂದುಕೊಂಡಿರಾ. ಏನೂ ಇಲ್ಲ, ಅದೇ ಗೇಟಿನ ಮುಂದೆ ರಂಗೋಲಿ ಹಾಕಿದ್ದಳು, ಮತ್ತೆ ನಾ ಹಾಳು ಮಾಡಿದೆನೆ ಇಲ್ಲ... ಮತ್ತದೇ ಹೂವುಗಳು ಮತ್ತದೇ ಎಲೆಗಳು, ಬೈಕು ದಾಟುವಷ್ಟು ಜಾಗ ಬಿಟ್ಟು, ಗೇಟಿನ ಇಕ್ಕೆಲಗಳಲ್ಲಿ ಬರುವಂತೆ ರಂಗೋಲಿ ಬಿಡಿಸಿದ್ದಳು, ಬೈಕು ಸರಾಗವಾಗಿ ದಾಟಿತ್ತು. ಬೈಕು ನಿಲ್ಲಿಸಿ ಇಳಿದು, ಅದೊಂದು ಎಸಳನ್ನು ಸರಿ ಮಾಡುತ್ತಿದ್ದೆ, ಕಿಟಕಿಯಲ್ಲಿ ನಿಂತು "ರೀ ಆಫೀಸಿಗೆ ಹೊಗುತ್ತೀರೊ, ಇಲ್ಲ ರಂಗೋಲಿ ಸರಿ ಮಾಡುತ್ತ ಇಲ್ಲೇ ಕೂಡುತ್ತೀರೊ" ಅಂತ ಚೀರಿದಳು, ಪಕ್ಕದ ಮನೆ ಪದ್ದು ಕೂಡ ಹೊರಗೆ ಬಂದಳು ಇವಳ ಬಾಯಿಗೆ, ಪದ್ದೂ ಕೂಡ ನಕ್ಕಳು ನಾ ರಂಗೋಲಿ ಸರಿ ಮಾಡುತ್ತಿರುವುದ ನೋಡಿ, ಎದ್ದು ಅಲ್ಲಿಂದ ಓಟಕ್ಕಿತ್ತೆ... ಅವಳು ಇಂದು ರಂಗೋಲಿಗೆ ಬಣ್ಣ ತುಂಬಿರಲಿಲ್ಲ, ಆದರೂ ಅದು ಬಣ್ಣದ ರಂಗೋಲಿಯೆಂತನಿಸುತ್ತಿತ್ತು ನನಗೆ...

ಮತ್ತೆ ಸಿಗುತ್ತೀನಿ ಅದೇ ನಮ್ಮನೆ ರಂಗೋಲಿ ಸರಿ ಮಾಡುತ್ತ...

Copyright© Prabhuraj Moogi
www.telprabhu.com

## ಬಸ್ಸು ಬಂತು ಬಸ್ಸು...

ಬೇಗ ಬೇಗ ರೆಡಿ ಆಗುತ್ತಿದ್ದೆ, ಬೈಕು ಸರ್ವೀಸಿಂಗಗೆ ಕೊಡಬೇಕಿತ್ತು, ಲೇಟಾದರೆ ಎಲ್ಲಿ ನನ್ನ ಸರದಿ ಬರುವುದಿಲ್ಲವೊ ಅಂತ. ನನ್ನ ಗಡಿಬಿಡಿ ನೋಡಿ ಅವಳು ಬಂದು "ಏನು ಅಷ್ಟು ಅವಸರ, ಏನ್ ನಿಮ್ ಲವರ್ ಯಾರದ್ರೂ ಕಾಯ್ತಾ ಇದಾಳ" ಅಂದ್ಲು. "ಯಾರೂ ಇಲ್ಲಾ ಕಣೇ" ಅಂತ ಹಲ್ಲು ಕಿರಿದೆ, "ಅಹಾಹಾ ನಂಗೊತ್ತಿಲ್ವಾ ನಿಮ್ಮ ಬುಧ್ಧಿ, ಹೇಳ್ರೀ ಪರ್ವಾಗಿಲ್ಲ" ಅಂತ ಪುಸಲಾಯಿಸಿದಳು. ನಿಧಾನವಾಗಿ ಬಾಯಿ ಬಿಟ್ಟೆ "ಲೇ ಅಲ್ಲಿ ಕ್ಯಾಶಿಯರ್ ಅಂತ ಒಬ್ಳು ಹುಡುಗಿ.." ಅಂತಿದ್ದಂಗೆ, "ರೀ ಅಲ್ಲೂ.." ಅಂತ ಬೆನ್ನಿಗೆ ನಾಲ್ಕು ಗುದ್ದು ಕೊಟ್ಟಳು, ಪ್ರೀತಿಯಿಂದ ಕೊಟ್ಟಿದ್ದಳಲ್ವಾ ಹಿತವಾಗಿತ್ತು, "ಅಹಾ ಹಿತವಾಗಿದೆ, ಬೆನ್ನು ಹಗುರವಾಯ್ತು, ಇನ್ನೊಂದು ನಾಲ್ಕು ಕೊಡೇ" ಅಂದೇ ಹೇಳಿದ್ದೆ ತಪ್ಪಯ್ತು, ಈ ಸಾರಿ ಜೋರಾಗಿಯೇ ಏಟು ಬಿತ್ತು. "ಅಮ್ಮ.." ಅಂತ ಚೀರಿ ಕುಳಿತೆ, ಒಮ್ಮೆಲೇ ಗಾಬರಿಗೊಂಡು ಬೆನ್ನು ಸವರಿ "ರೀ ನಿಜವಾಗ್ಲೂ ಪೆಟ್ಟಾಯ್ತಾ, ಜೋರಾಗಿ ಕೊಟ್ಟೆ" ಅಂದ್ಲು, ಅವಳ ಹೆದರಿದ್ದು ನೋಡಿ "ಇಲ್ಲಾ, ಸುಮ್ನೇ ಸೌಂಡ ಏಫೆಕ್ಟ ಕೊಟ್ಟೆ, ಈ ಸಿನಿಮಾದಲ್ಲಿ ಹೀರೊ ಹೊಡೆದರೆ ಚೀರಿ ಬೀಳೊ ವಿಲನಗಳ ಹಾಗೆ" ಅಂದೆ, "ಆ್ಯಕ್ಟಿಂಗ್ ಮಾಡ್ತೀರಾ ಆ್ಯಕ್ಟಿಂಗ್..." ಅಂತ ಇನ್ನೆರಡು ಕೊಟ್ಟಳು, ನೋವಾದರೂ ಚೆನ್ನಾಗಿತ್ತು, "ಮಧುರಾ ಯಾತನೆ... ಕೊಲ್ಲು ಹುಡುಗಿ ಒಮ್ಮೆ ನನ್ನ ಹಾಗೆ ಸುಮ್ಮನೇ..." ಅಂತನ್ನುತ್ತಾ ಮೇಲೆದ್ದೆ.

ನಿನ್ನೆ ಉಳಿದ ರೊಟ್ಟಿಗೇ ವಗ್ಗರಣೆ ಹಾಕಿ ತಂದಿಟ್ಟಿದ್ದಳು, "ಉಳಿದದ್ದನ್ನು ಬಳಿದು ತಂದು ಹಾಕೀದೀಯ, ಭಿಕ್ಷೆ ಹಾಕೊ ಹಾಗೆ" ಅಂತ ಕಾಡುತ್ತ ತಿಂದು ಮುಗಿಸಿ ಹೊರಟು ನಿಂತೆ, "ರೀ ನಾನೂ ಬರ್ಲಾ" ಅಂದ್ಲು, "ಲೇ ನಿನ್ನಾಣೆಗೂ ಆ ಕ್ಯಾಶಿಯರ ಕಡೆ ನೋಡಲ್ಲ ಕೂಡ, ಆಯ್ತಾ" ಅಂದೆ. ಎಲ್ಲಿ ಆ ಹುಡುಗಿ ನೊಡಲೇ ನಾ ಹೊಗುತ್ತಿದ್ದೀನೆ ಅಂತ ಕಾಯಲು ಬರ್ತಿರಬೇಕು ಅಂತ ನಾ ಸಮಜಾಯಿಸಿ ಕೊಟ್ಟೆ. "ಇನ್ನೇನು ಕಣ್ಣು ಮುಚ್ಚಿಕೊಂಡು ದುಡ್ಡು ಕೊಡ್ತೀರಾ! ಅದೆಲ್ಲ ಏನಿಲ್ಲ, ನಾನೂ ಅವಳನ್ನೂ ನೋಡಿದ ಹಾಗೆ ಆಗತ್ತೆ, ಅಲ್ದೆ ಒಬ್ಬೆ ಕೂತು ನಾನದ್ರೂ ಏನು ಮಾಡಲಿ" ಅಂತ ಬಾಲಂಗೋಚಿಯಂತೆ ಬೆನ್ನು ಹತ್ತಿದಳು, ತಾಳಿ ಕಟ್ಟಿದ ಮೇಲೆ ಬೆನ್ನಿಗೆ ಬಿದ್ದಂತೆಯೇ ಎಲ್ಲಿ ಹೋದರೂ ಹಿಂಬಾಲಕರು ಹೆಂಡಂದಿರು ಏನು ಮಾಡೋದು, "ಆಯ್ತು ಬಾ, ಬೈಕು ಕೊಟ್ಟು ಬರೊವಾಗ ಆಟೊಗೆ ಬಂದರಾಯ್ತು, ಬಸ್ಸಿಗೆ ಬಂದು ಹಣ ಉಳಿಸೋಣ ಅಂತಿದ್ದೆ ರಿಸೆಪ್ಷನನಲ್ಲಿ" ಅಂದೆ. "ಯಾಕೆ ಬಸ್ಸಲ್ಲೇ ಬರೋಣ ಏನೀಗ" ಅಂದ್ಲು, "ಅಯ್ಯೊ ಬಸ್ಸು ರಶ್ ನೋಡೀದೀಯಾ, ನಿಂಗೊತ್ತಿಲ್ಲ, ಮೂರು ವರ್ಷ ಬಸ್ಸಲ್ಲಿ ಸುತ್ತಿದ ನನಗೇ ಗೊತ್ತು ಅದೊಂದು ದೊಡ್ಡ ಕಥೆ ಏನ್ ಕೇಳ್ತೀಯಾ" ಅಂದೆ, ಕಣ್ಣರಳಿಸಿ "ಕಥೇನಾ ರೀ.. ರೀ.. ಹೇಳ್ರೀ ಪ್ಲೀಜ್" ಅಂತ ದುಂಬಾಲು ಬಿದ್ದಳು, ಇನ್ನು ಅವಳು ಹೇಳುವವರೆಗೆ ಬಿಟ್ರೆ ಕೇಳಿ "ಲೇಟಾಯ್ತು ದಾರೀಲಿ ಹೇಳ್ತೀನಿ ಬಾ" ಅಂದೆ, ಸೀರೆಯೊಂದು ಸುತ್ತಿಕೊಂಡು ಬಂದು ಹಿಂದೆ ಕೂತಳು, ಹೊರಟಿತು ನಮ್ಮ ಸವಾರಿ...

ದಾರೀಲಿ ಕಥೆ ಅಂತ ಮತ್ತೆ ನೆನಪು ಮಾಡಿದಳು, ಹೇಳತೊಡಗಿದೆ.. "ಬೆಂಗಳೂರಿಗೆ ಹೊಸದಾಗಿ ಬಂದಾಗ ಬಸ್ಸಿನಲ್ಲಿ ಸುತ್ತಿದ್ದೇ ಸುತ್ತಿದ್ದು, ಬಸ್ಸಿಗೆ ಪಾಸು ಮಾಡಿಸಿದ್ದು ಎಲ್ಲಿ ಬೇಕಾದರೂ ಸುತ್ತು ಅಂತ ಮತ್ತಷ್ಟು ಖುಷಿ, ಅದರಲ್ಲೂ ಹಣ ಉಳಿಸಲು **ಬ್ಲಾಕ ಬೋರ್ಡ ಪಾಸು ಮಾಡಿಸೋದು, ರೆಡ್ ಬೋರ್ಡ ಬಸ್ಸುಗಳು ಬರುತ್ತಿದ್ದರೆ ಶಪಿಸುತ್ತ ಕಾಯೋದರಲ್ಲೂ ಒಂಥರಾ ಸುಖಾ ಇತ್ತು, ಮದುವೆಗೆ ಮೊದಲು ನಿನಗೆ ಕಾದಷ್ಟೆ ಖುಷಿ**" ಅನ್ನುತ್ತಿದ್ದರೆ "ಯಾವಾಗ್ರೀ ನಾನು ನಿಮಗೆ ಕಾಯಿಸಿದ್ದು, ನೀವೇ ಹತ್ತು ನಿಮಿಷ ಮುಂಚೆ ಬಂದಿರೊರೊ" ಅಂದ್ಲು, "ಒಟ್ಟಿನಲ್ಲೆ ಕಾದಿದ್ದು ನಿಜವಲ್ಲವೋ, ಹಾಗೆ ಕಾಯಿಸಿದಾಗ ನಾ ಮುನಿಸಿಕೊಂಡಿದ್ದು, ನೀ ರಮಿಸಿದ್ದು" ಅಂದೆ, "ಸರಿ ಗೊತ್ತು ಗೊತ್ತು" ಅಂತ ನಾಚಿ ಬಾಚಿ ತಬ್ಬಿಕೊಂಡು ಕೂತಳು, ಹಿಂದೆ ನೋಡುವ ಕನ್ನಡಿಯಲ್ಲಿ, ಆ ದಿನಗಳ ನೆನಪಿಗೆ ಅವಳ ಕೆನ್ನೆ ಕೆಂಪಾಗಿದ್ದು ಕಂಡಿತು. ಮತ್ತೆ ಮುಂದುವರೆಸಿದೆ "ಮುಂಜಾನೆದ್ದು ಕಂಪನಿಗಳಿಗೆ ಅಲೆಯೋದು ಅಲ್ಲಿ ರೆಸ್ಯುಮು ಕೊಟ್ಟೆ, ಇಲ್ಲಿ ಇಂಟರವೀವ್, ಎಲ್ಲೇಲ್ಲಿ ಸುತ್ತಿದ್ದೆ ಅದಕ್ಕೆಲ್ಲ ಸಾಕ್ಷಿ ಇದೇ ಬಸ್ಸುಗಳಲ್ಲವೇ, ಎಲ್ಲೊ ಗೊತ್ತಿಲ್ಲದ ಏರಿಯಾಗಳಿಗೆ, ತಿಳಿಯದ ವಿಳಾಸಗಳಿಗೆ ನಿರ್ಭೀತಿಯಿಂದ ಹೊರಡುತ್ತಿದ್ದದ್ದು ಇದೇ ಬಸ್ಸು ಅಲ್ಲಿ ತಲುಪಿಸುತ್ತದೆ ಎನ್ನುವ ಖಾತ್ರಿಯಿದ್ದದ್ದರಿಂದಲೇ ಅಲ್ಲವೇ. ದಾರಿ ತಪ್ಪಿದರೆ ಮತ್ತೆ ಮೆಜೆಸ್ಟಿಕ(ಬೆಂಗಳೂರಿನ ಕೇಂದ್ರ ಬಸ್ ನಿಲ್ದಾಣದ ನಿಕ್‌ನೇಮ್!) ಬಸ್ಸು ಹಿಡಿದರೆ ಸಾಕು" ಹೇಳುತ್ತಿದ್ದರೆ "ನಿಮ್ಮ ಮಾಮನ ಮನೆಗೆ ಸುತ್ತಿ ಬಳಸಿ ಬಂದದ್ದು ಹೇಳಿದ್ದಿರಲ್ಲ" ಅಂತ ನೆನೆಪಿಸಿದಳು "ಹೂಂ ನಾನಿರುವಲ್ಲಿಂದ ಎರಡು ಸ್ಟಾಪು ಮುಂದೆ ಹೋದರೆ ಅವರ ಮನೆ ಬರುತ್ತದೆಂದು ಗೊತ್ತಿಲ್ಲದೇ, ಮೆಜೆಸ್ಟಿಕಗೆ ಹೋಗಿ, ಅಲ್ಲಿಂದ ಬಸ್ಸು ಬದಲಾಯಿಸುತ್ತಿದ್ದೆ, ಬಹಳ ಲೇಟಾಗಿ ಬರುವುದ ನೋಡಿ ಮಾವ ಕೇಳಿದಾಗಲೇ ಗೊತ್ತಾಗಿದ್ದು, ನಾನು ಬೆಂಗಳೂರು ದರ್ಶನ ಮಾಡಿ ಬರುತ್ತಿದ್ದೆನೆಂದು ಹ ಹ ಹ.. ಅಲ್ಲಿವರೆಗೆ ಪಕ್ಕದ ಏರಿಯಾದ ಮನೆಗೆ ನಾ ಎಷ್ಟು ಸಾರಿ ಸುತ್ತಿಬಳಸಿ ಹೋಗಿಲ್ಲಾ" ಅವಳೂ ಗಹಗಹಿಸಿ ನಕ್ಕಳು "ನಿಮ್ಮ ಆವಾಂತರಗಳು ಒಂದೇ ಎರಡೇ, ಬಸ್ಸಲ್ಲಿ ಯಾರೂ ಹುಡುಗಿ ಸಿಕ್ಕಿರಲಿಲ್ಲವಾ, ನಿಜ ಹೇಳ್ರೀ ನಂಗೇನೂ ಬೇಜಾರಿಲ್ಲ" ಅಂದಳು. "ನಿನ್ನ ಹತ್ತಿರ ಏನು ಮುಚ್ಚಿಟ್ಟಿದ್ದೀನೆ ಹೇಳು, ಅಲ್ಲಿ ಹುಡುಗೀನಾ, ಹುಡುಗೀರು ಇದ್ರು!!!" ಅಂದೆ "ಕಳ್ಳ ಕೃಷ್ಣ" ಅಂತ ತಿವಿದಳು "ನನಗೆ ಮೊದಲು ಕೆಲ್ಸ ಸಿಕ್ಕಿದ್ದೇ

Copyright© Prabhuraj Moogi
www.telprabhu.com

ದೂರದಲ್ಲಿ, ಅಲ್ಲೀವರೆಗೆ ಎರಡು ಬಸ್ಸು ಬದಲಾಯಿಸಬೇಕಿತ್ತು, ಲೇಟಾಗುತ್ತದೆಂದು ಬೇಗ ಆರೂವರೆಗೆ ಮನೆ ಬಿಡ್ತಿದ್ದೆ ಆಗ ಟ್ಯೂಶನ್ನು ಅಂತ ಹೊರಡುವವರು ಇರ್ತಿದ್ರು, ಆಮೇಲೆ ಏಳೂವರೆಗೆ ಹೊರಡುವಾಗಲೊ ಸರಿಯಾಗಿ ಕಾಲೇಜುಗಳು ಶುರುವಾಗುವ ಸಮಯ ದಾರಿಯಲ್ಲಿ ಎರಡು ಕಾಲೇಜುಗಳು ಬರುತ್ತಿದ್ದವು, ಮತ್ತಿನ್ನೇನು ಕೇಳ್ತೀಯಾ, ದಿನಾ ಸಿಗುವವರು ಬಹಳ ಜನ ಇದ್ರು, ಕಣ್ಣಲ್ಲೇ ಮಾತುಗಳ ವಿನಿಮಯವೇನೊ, 'ಏನೀವತ್ತು ಲೇಟಾಯ್ತಾ?' ಅನ್ನುವಂತೆ ನಾ ನೋಡಿದ್ರೆ, 'ಏನು ನೀನು ನನ್ನ ಲವರಾ ನಿನ್ನ ಟೈಮಿಗೆ ಸರಿಯಾಗಿ ಬರೋಕೆ' ಅನ್ನುವಂತೆ ಅವರು ಮರಳಿ ನೋಡುತ್ತಿದ್ದುದು ಒಂದೇ ಎರಡೇ, ಯಾರದೋ ಕಣ್ಣು, ಯಾರದೋ ಮೂಗು, ಯಾರದೋ ಜಡೆ, ಯಾರದೋ ಮಾತು, ಯಾರದೋ ಮೌನ, ಯಾರದೋ ನಿಲುವು, ಯಾರದೋ ನಗು ಇಷ್ಟವಾಗಿದ್ದು, ಇಡಿಯಾಗಿ ಯಾರೂ ಇಷ್ಟವಾಗದೆ ಕನಸಿನ ಕನ್ಯೆಯ ಸೃಷ್ಟಿಸಿಕೊಂಡು ಬರೆದೆಲ್ಲ ನಾಲ್ಕು ಸಾಲುಗಳಿಗೆ(ಕವನ ಅಂತ ಕರೆಯಬಹುದು, ಆದ್ರೆ ಆ ಲೇವಲ್ಲಿನಲ್ಲಿ ಇಲ್ಲ ಬಿಡಿ) ಸ್ಪೂರ್ತಿಯಾದ ಆ ಬಸ್ಸಿನ ಹುಡುಗಿಯರು ಏಷ್ಟೋ ಏನೊ" ಅನ್ನುತ್ತಿದ್ದರೆ "ಅದೇ ಅಂತೀನೀ ಅದಕ್ಕೆ ಇತ್ತೀಚೆಗೆ ನೀವೇನು ಬರೆದಿಲ್ಲ" ಅಂದ್ಳು, "ಅದೇ ಸಮಯಾನೂ ಇಲ್ಲಾ, ಸ್ಪೂರ್ತಿಯೂ ಇಲ್ಲಾ, ಆಫೀಸಿಗೆ ತಲುಪಲು ಎರಡು ಎರಡೂವರೆ ಘಂಟೆಯಾಗುತ್ತಿತ್ತು, ಸೀಟು ಸಿಕ್ಕರೆ ಕೂತು ಬರೆಯೋದೇ, ಒಂದು ದಿನವೂ ಅಷ್ಟು ಸಮಯ ಸಂಚಾರದಲ್ಲಿ ಹಾಳಾಯಿತಲ್ಲ ಅಂತ ನನಗನಿಸಿದ್ದೇ ಇಲ್ಲ, ಬಸ್ಸು ಕುಲುಕುತ್ತ ಬಳುಕುತ್ತ ನಡೆಯುತ್ತಿದ್ದರೆ ಬಸ್ಸಿನ ಮೇಲೂ ಒಂದು ಕವನ ರೆಡಿ, ದಿನಕ್ಕೆ ಐದಾರು ಘಂಟೆ ಟ್ರಾಫಿಕ್ಕಿನಲ್ಲೇ ಕಳೆಯುತ್ತೀ ಬೈಕು ತುಗೊ ಎಂದು ಹೇಳಿದೆಲ್ಲರಿಗೂ ನಗುವೇ ನನ್ನ ಉತ್ತರವಾಗಿತ್ತು". "ಮತ್ಯಾಕೆ ಬೈಕು ತುಗೊಂಡಿದ್ದು" ಅಂತ ಕೇಳಿದ್ಲು ಅಷ್ಟರಲ್ಲಿ ಸರ್ವೀಸ ಸ್ಟೇಷನ್ನು ಬಂದಿತ್ತು.

ಬೈಕು ಕೊಟ್ಟೆ, ಗೇರು ಬದಲಾಯಿಸುವ ತೊಂದ್ರೆ, ಬ್ರೆಕು ಅಂತ ನಾ ಹೇಳುತ್ತಿದ್ದರೆ ಇವಳೂ ಬೈಕಿನಲ್ಲಿ ವೈಬ್ರೇಶನ್ನೂ ಬಹಳ ಬರುತ್ತೆ ಅಂತ ತನಗನಿಸಿದ್ದನ್ನೂ ಹೇಳಿದಳು, ಆಯ್ತು ಮೇಡಮ ಚೆಕ ಮಾಡ್ತೀವಿ ಅಂತ ಅವನಂದ. "ಹೊರಡೋಣ, ಸಂಜೆ ಸಿಗುತ್ತೆ ಬೈಕು" ಅಂದೆ, "ರೀ" ಅಂತ ಹುಬ್ಬು ಹಾರಿಸಿದಳು!!!. ಏನು ಅನ್ನುವಂತೆ ನಾ ನೋಡಿದೆ "ಕ್ಯಾಶಿಯರ್, ಕ್ಯಾಶಿಯರ್" ಅಂದ್ಲು ಹ ಹ ಹ ಏನಂತ ಹೇಳಲಿ ಇವಳ ಬಗ್ಗೆ ತಲೆಗೆ ಕೈ ಹಚ್ಚಿ, ನನಗೆ ನೆನಪೇ ಇರಲಿಲ್ಲ... ನನ್ನ ಪೋಲಿತನಗಳಿಗೆ ಇವಳ ಈ ಬೆಂಬಲ ಬೇರೆ... "ಈಗೇನೂ ದುಡ್ಡು ತುಂಬೊದಿಲ್ಲ" ಅಂದೆ ಹುಬ್ಬು ಗಂಟಿಕ್ಕಿದಳು. ಇವಳಿಗೆ ಆ ಕ್ಯಾಶಿಯರನ್ನು ನೊಡಲೇ ಬೇಕಾಗಿತ್ತು. ಆಯ್ತು ಅಂತ ಬೈಕು ಯಾವಾಗ ಸಿಗುತ್ತೊ ಅಂತ ಮ್ಯಾನೇಜರ್ ಕೇಳ ಹೋದ ಹಾಗೆ ಮಾಡಿ ಅದೊ ಅಲ್ಲಿ ಅಂತ ತೋರಿಸಿದೆ, "ಪರವಾಗಿಲ್ಲಾರೀ, ಕೃಷ್ಣ ಸುಂದರಿ... ಕಪ್ಪಗಿದ್ದರೂ ಖಳೆಯಿದೆ" ಅಂದ್ಲು "ನನಗೆ ಮದುವೆ ಸಂಭಂದ ಕೇಳ್ತೀಯಾ ನೋಡು ಹಾಗಾದ್ರೆ" ಅಂದೆ. ಎಳೆದುಕೊಂಡು ಹೊರಬಂದ್ಲು, ಆಯ್ತು ಆಟೋ ತರ್ತೀನಿ ಇಲ್ಲೇ ಇರು ಅಂದೆ, "ರೀ ಬಸ್ಸಲ್ಲೇ ಹೋಗೋಣ" ಅಂತ ಹಠ ಹಿಡಿದಳು. "ಬೇಡ ಬಹಳ ರಶ್ ಇರತ್ತೆ ನಿನಗೆ ಗೊತ್ತಾಗಲ್ಲಾ" ಅಂದ್ರೂ ಕೇಳಲಿಲ್ಲ "ಒಂದು ಸಾರಿ ಪ್ಲೀಜ" ಅವಳ ಹಾಗೆ ಮುಖ ಮಾಡಿ ಗೊಗರೆಯುತ್ತಿದ್ದರೆ ಬೇಡವೆನ್ನಲಾಗಲಿಲ್ಲ.

ಬಸ್ಸು ಬಂತು ಬಸ್ಸು... ಹಿಂದಿನ ಬಾಗಿಲಿಗೆ ನಾ ಓಡುತ್ತ ನೀ ಮುಂದೆ ಹತ್ತು ಅಂದೆ, ಒಳಗೆ ಹೋಗಿ, ನನಗೂ ಸೀಟು ಹಿಡಿದಿದ್ಲು, ಮುಂಜಾನೆ ಅಲ್ವಾ ರಶ್ ಕಮ್ಮಿ ಇತ್ತು, ಆದ್ರೆ ಅವಳು ಹಿಡಿದಿದ್ದು ಲೇಡಿಸ ಮೀಸಲು ಸೀಟು, ನಾನೊಲ್ಲೆ ಅಂತ ನಿಂತು ಬಿಟ್ಟೆ, ಗುರಾಯಿಸಿ ನೋಡಿದ್ಲು. ಮುಂದಿನ ಸ್ಟಾಪಿನಲ್ಲಿ ಜನ ಇಳಿದ ಮೇಲೆ ಎರಡು ಅಕ್ಕ ಪಕ್ಕದ ಸೀಟು ಹಿಂದೆ ಖಾಲಿಯಾಯ್ತು, ನಾ ಹೋಗಿ ಕೂರುವಷ್ಟರಲ್ಲಿ ನನಗೆ ಕಿಟಕೀ ಸೀಟು ಅಂತ ಬಂದು ಅಲ್ಲಿ ಆಕ್ರಮಿಸಿಕೊಂಡಳು. "ಲೇ ನಿಮಗೆ ಅಂತ ಅಲ್ಲಿ ರಿಸರ್ವ್ ಸೀಟಿದೆ ಅಲ್ಲಿ ಹೋಗು, ಪಾಪ ನಮಗೆ ಸೀಟು ಬೇಡವಾ" ಅಂತ ಕಿಚಾಯಿಸಿದೆ, ಕೂತಲ್ಲೇ ಚಿವುಟಿದಳು.. ಚೀರಲಾಗದೇ ಸುಮ್ಮನಾದೆ, ಬಾಯಿ ತೆಗೆದರೆ ನೋಡು ಅನ್ನುವಂತೆ ನೋಡಿದ್ಲು.

ಬಸ್ಸು ಸ್ವಲ್ಪ ಮುಂದೆ ಹೊಗುತ್ತಿದ್ದಂತೆ ಕಾಲೇಜಿನ ಹುಡುಗ ಹುಡುಗಿಯರು ತುಂಬಿಕೊಂಡರು, ಬಸ್ಸು ಈಗ ತುಂಬಿ ತುಳುಕತೊಡಗಿತು.. **ಇವಳು ನನ್ನ ನೋಡಿ ನಕ್ಕಳು, ಬಂದ್ರು ನೋಡಿ ನಿಮ್ಮ ಬಸ್ಸಿನ ಹುಡುಗಿಯರು, ಕನಸಿನ ಕನ್ಯೆಯ ತುಣುಕುಗಳು ಅನ್ನುವಂತೆ. ನಾನೂ ನಕ್ಕೆ ಕನಸಿನ ಕನ್ಯೆ ನನ್ನಾಕೆ ನನ್ನ ಪಕ್ಕದಲ್ಲೇ ಕೂತಿರುವಾಗ ಅವರೆಲ್ಲ ಯಾಕೆ ಅನ್ನುವಂತೆ.** ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಅಲ್ಲೇ ಪಕ್ಕದಲ್ಲಿ ನಿಂತಿದ್ದ ಹುಡುಗಿಗೆ ನನ್ನ ಸೀಟು ಬಿಟ್ಟು ಕೊಟ್ಟೆ, ಏನು ಇಂಪ್ರೆಸ್ಸು ಮಾಡಲಿಕ್ಕ ಅನ್ನುವ ಪ್ರಶ್ನೆ ನನ್ನವಳ ಮುಖದಲ್ಲಿ ಕಂಡಿತು, ಉತ್ತರವೇನೊ ಅನ್ನುವಂತೆ ನಾ ನಕ್ಕೆ.

ಅಂತೂ ನಮ್ಮ ನಿಲುಗಡೆ ಬಂತು, ಇಳಿದು ನಡೆಯುತ್ತಿದ್ದಂತೆ ಬಂತು ಅವಳ ಮೊದಲ ಪ್ರಶ್ನೆ "ಅಲ್ಲಾ ಆ ಹುಡುಗೀಗೇ ಸೀಟು ಯಾಕ್ರೀ ಬಿಟ್ಟು ಕೊಟ್ರೀ, ಏನ್ ಇಂಪ್ರೆಸ್ ಮಾಡೋಕಾ" ಅಂದ್ಲು, ಸುಮ್ನೇ ನಕ್ಕೆ "ಈ ನಕ್ರೆ ಏನರ್ಥ" ಅಂತ ಮತ್ತೆ... "ಹೂಂ ಇಂಪ್ರೆಸ್ ಮಾಡೋಕೆ" ಅಂದೆ "ನಂಗೊತ್ತು, ಅದಕ್ಕಲ್ಲ, ಅದೇ ಸ್ಟಾಪಿನಲ್ಲಿ ಇಳಿಯೋಕೆ ಜನ ಆಕಡೆ ಈಕಡೆ ಅಂತ ನುಸುಳಿ, ಆ ಹುಡುಗಿ ಅಲ್ಲೇ ಹತ್ತಿಕ್ಕುತ್ತಿದ್ದರೆ ಅವಳು ಹೇಳಲೂ ಆಗದೆ ಬಿಡಲೂ ಆಗದೆ ಒದ್ದಾಡುತ್ತಿದ್ದು ನೋಡಿ ತಾನೇ,

ನಾನೇ ನಿಮ್ಮನ್ನ ಎಬ್ಬಿಸಬೇಕೆಂದಿದ್ದೆ, ನೀವೆ ಎದ್ದು, ರೀ ನಂಗೆ ಖುಷಿಯಾಯ್ತು" ಅಂತ ಕೈನಲ್ಲಿ ಕೈ ಸೇರಿಸಿ ನಡೆಯತೊಡಗಿದಳು, ನನಗೂ ಸಮಾಧಾನವಾಯ್ತು ಅವಳಿಗೆ ಅದು ಅರ್ಥವಾಯಿತಲ್ಲ ಅಂತ.. "ಬೇರೆ ಯಾರಾದ್ರೂ ಇದ್ರೆ ಬಿಟ್ಟು ಕೊಡ್ತಿದ್ರಾ" ಅಂದ್ಲು. "ನಿಜ ಹೇಳಬೇಕೆಂದ್ರೆ ನನಗೆ ಸೀಟು ಬಿಟ್ಟು ಕೊಡಲು ಅವರು ಅರ್ಹರು ಅನ್ನಿಸ್ಬೇಕು ಆಗಲಷ್ಟೇ" ಅಂದ್ರೆ "ಏನು ಮುಖ್ಯಮಂತ್ರಿ ಸೀಟು ಉತ್ತರಾಧಿಕಾರಿಗೆ ಬಿಟ್ಟು ಕೊಟ್ಟ ಹಾಗೆ ಹೇಳ್ತಿದೀರಾ" ಅಂತಂದ್ಲು. "ಅಲ್ಲ ಅದೂ ನಿಜ ಕಣೇ, ಬಸ್ಸಿನಲ್ಲಿ ಸೀಟು ಅಂದ್ರೆ ಸುಮ್ನೇನಾ, ಯಾರಿಗೋ ಯಾಕೆ ಬಿಟ್ಟು ಕೊಡಬೇಕು ಹೇಳು, ಈ ಲೇಡೀಸಗೆ ಅಂತ ಮೀಸಲು ಸೀಟು ಮಾಡಿರ್ತಾರೆ, ಕಾಲೇಜು ಅಮ್ಮಣ್ಣಿಗಳು(ಎಲ್ಲರೂ ಅಲ್ಲ) ನೀಟಾಗಿ ಕುಂತಿರುತ್ತಾರೆ, ಪಕ್ಕದಲ್ಲೇ ಒಬ್ಬಳು ಗರ್ಭಿಣಿ ಪಾಪ ಕಷ್ಟಪಟ್ಟು ನಿಂತಿದ್ದರೆ ಜಾಗ ಕೊಡೊದಿಲ್ಲ, ಕೊಟ್ಟು ಸ್ವಲ್ಪ ನಿಂತ್ರೆ ಏನ್ ಕಾಲು ಸವೆದು ಹೋಗುತ್ತಾ ನಾಳೆ ಅವರೂ... ಬಿಡು ಏನ್ ಹೇಳೊದು, ಈ ಹಿರಿಯ ನಾಗರೀಕರಿಗೆ ಅಂತ ಸೀಟಿರತ್ತೆ ಅದನ್ಯಾರೊ 'ಹಿ' ಅನ್ನೋದನ್ನ 'ಕಿ' ಮಾಡಿ, ಕಿರಿಯ ನಾಗರೀಕರಿಗೆ ಅಂತ ತಿದ್ದಿ ತಮ್ಮ ಸೃಜನಶೀಲತೆ(ಕ್ರಿಯೇಟಿವಿಟಿ) ಪ್ರದರ್ಶಿಸಿರುತ್ತಾರೆ, ಅದನ್ನೆ ಇಟ್ಟುಕೊಂಡು ಜಾಗ ಕೇಳಿದ ಹಿರಿಯರನ್ನ ಈ ಕೆಲ ಪುಂಡರು ಸೀಟು ಬಿಡದೇ ಕಾಡಿಸ್ತಾರೆ ಏನನ್ನೋದು ಇಂಥ ಅನಾಗರೀಕರಿಗೆ. ಇನ್ನು ಬಸ್ಸಿನ ತುಂಬ ಸೀಟು ಖಾಲಿ ಹೊಡೀತಿದ್ರೂ, ಫುಟ್ ಬೋರ್ಡ ಮೇಲೆ ನಿಲ್ಬೇಡಿ ಹತ್ತೋರಿಗೆ ತೊಂದ್ರೆಯಾಗತ್ತೆ ಅಂತ ಕಂಡಕ್ಟರ್ರು ಬಡಕೊಂಡ್ರೂ ಕೇಳದವರಿಗೆ ಬಾ ಅಂತ ಸೀಟು ಬಿಟ್ಟುಕೊಟ್ಟರೂ ಕೂಡೊದಿಲ್ಲ ಏನ್ ಮಾಡ್ತಿಯಾ, ಮೂರು ವರ್ಷದಲ್ಲಿ ನಾ ಏನೇನು ನೋಡಿಲ್ಲ" ಅಂತ ಬೇಜಾರಾಗಿ ನುಡಿದೆ. "ರೀ ಯಾಕ್ರೀ ಅಷ್ಟು ಬೇಜಾರಾಗ್ತೀರಾ, ನಾ ತಮಾಷೆ ಮಾಡಿದೆ" ಅಂದ್ಲು. "ನಿನ್ನ ತಮಾಷೆಗಲ್ಲ ನಾ ಬೇಜಾರಾಗಿದ್ದು ನಮ್ಮದೇ, ವರ್ತನೆಗಳು ನನಗೆ ಹಾಗನಿಸಿದ್ದು, ನಾಗರೀಕರಿಗೆ ಅಂತ ಇರುವ ಸಾರಿಗೆ ಹೀಗೆ ಅನಾಗರೀಕರಿಂದಾಗಿ ಬಹಳ ಜನ ವಿಮುಖವಾಗುವಂತೆ ಆದ್ರೆ ಏನು ಪ್ರಯೋಜನ ಅದಕ್ಕೆ ಬೇಜಾರು" ಅಂದೆ.

ಹೀಗೆ ಮಾತಿನಲ್ಲೇ ಮನೆ ತಲುಪಿದೆವು, ದಣಿದಿದ್ದೆವು, ಬಹಳ ದಿನಗಳಾಯ್ತಲ್ಲ ನಡೆದು, **ನಮ್ಮದೆ ಆದ ಕೆಲವು ಸವಲತ್ತುಗಳಿಗೆ(ಬೈಕು, ಕಾರು) ದೇಹ ಕೂಡ ಒಗ್ಗಿಕೊಂಡು ನಾಲ್ಕು ಹೆಜ್ಜೆ ಹಾಕಿದರೂ ಉಸ್ಸೆನ್ನುತ್ತದೆ**. ನಿಂಬೆ ಶರಬತ್ತು ಮಾಡಿದ್ಲು, ಹೊಟ್ಟೆ ತಣ್ಣಗಾಯ್ತು. "ಆಗಲೇ ಕೇಳಿದೆ, ಮತ್ಯಾಕ್ಕೆ ನೀವು ಬೈಕು ತುಗೊಂಡಿದ್ದು, ಇದೆಲ್ಲಕ್ಕೆ ಬೇಸತ್ತಾ" ಅಂದ್ಲು, "ಹಾಗೇನಿಲ್ಲ, ಈಗಲೂ ನನಗೆ ಸಾಧ್ಯವಾದಾಗಲೆಲ್ಲ, ನಾ ಬಸ್ಸಿನಲ್ಲೇ ತಿರುಗೋದು ನಿನಗೇ ಗೊತ್ತಿದೆ, ಆದರೂ ಬೈಕು ರೂಢಿಯಾಗಿ ಸ್ವಲ್ಪ ಕಿರಿಕಿರಿಯಾಗುತ್ತದೆ ಆದರೂ ನನಗೇಕೊ ಬಸ್ಸೆಂದರೆ ಇನ್ನೂ ಅದೇ ಪ್ರೀತಿ, ವರ್ಷಗಳಾದಂತೆ ನನ್ನ ಕೆಲಸ ಹೆಚ್ಚಿತು, ರಾತ್ರಿ ಬರುವುದು ಲೇಟಾಗತೊಡಗಿತು, ಕೆಲವು ತಿಂಗಳು ಬಸ್ಸಿನಲ್ಲೇ ರಾತ್ರಿ ಹನ್ನೊಂದೂವರೆ ಹನ್ನೆರಡಕ್ಕೆಲ್ಲ ಬಂದಿದ್ದೇನೆ, ಕೊಲೀಗು ಹತ್ತಿರದ ನಿಲುಗಡೆಗೆ ಬಿಟ್ಟರೆ ಅಲ್ಲಿಂದ ಬಸ್ಸೆ ಗತಿ, ಆಟೊನಲ್ಲಿ ಹೋಗದೆ ಹಣ ಉಳಿಸಲೆಂದಲ್ಲ, ಅದೇನೊ ಬಸ್ಸೆ ಇಷ್ಟ, ಕೆಲವು ಸಾರಿ ಬಸ್ಸಿರದೇ ಆಟೊ ಕೂಡ... ಹೀಗೆ ಕೆಲದಿನಗಳಾದ ಮೇಲೆ ಆ ಅಪರಾತ್ರಿ ಹಾಗೆಲ್ಲ ಬರುವುದು ಸರಿಯಲ್ಲ, ಮೊದಲಿನ ಹಾಗೆ ಭದ್ರತೆಯಿಲ್ಲ ಎಂದು ಎಲ್ಲರೂ ಅನ್ನುವುದು, ನನಗೂ ಅದು ಸರಿಯೆನಿಸಿದ್ದು, ಸಮಯದ ಅಭಾವ, ಬಸ್ಸುಗಳು ಸಮಯಕ್ಕೆ ಸಿಗದಿರುವುದು, ಸಿಕ್ಕರೂ ಕಿಕ್ಕಿರಿದು ತುಂಬಿರುವುದೂ ಎಲ್ಲ ಸೇರಿ ಕೊನೆಗೆ ಬೈಕು ಕೊಳ್ಳಲು ನಿರ್ಧರಿಸಿದ್ದು. ಇನ್ನೂ ಓಡಿಸಲೂ ಬರುತ್ತಿರಲಿಲ್ಲ ನನಗೆ ಆಗ, ಕೆಲವೊಂದು ಸಾರಿ ಬಸ್ಸೇ ಚೆನ್ನಾಗಿತ್ತು ಅನಿಸಿದ್ದೂ ಇದೆ, ಆದ್ರೆ ಈಗ ಈ ಸೌಲಭ್ಯಕ್ಕೆ ಹೊಂದಿಕೊಂಡು ಹೋಗಿದೆ. ಒಂದು ದಿನ ಬೈಕಿಲ್ಲ ಅಂದ್ರೆ ಸಾಕು ಸಾಕಾಗಿ ಹೋಗುತ್ತದೆ. ಈಗೆಲ್ಲ ವೊಲ್ವೊ ಏಸೀ ಬಸ್ಸುಗಳು ಬಂದಿವೆ, ಅಡಿಗಡಿಗೆ ಬಸ್ಸುಗಳೂ ಬಹಳ ಆಗಿವೆ, ಮೆಟ್ರೊ ಆಗೋದಿದೆ ನೋಡೊಣ ಬಸ್ಸುಗಳು ಮಾತ್ರ ಇದ್ದೇ ಇರುತ್ತವೆ" ಅಂದೆ. "ಅದೂ ಸರಿ, ನಾನೂ ಮಾರ್ಕೆಟ್ಗೆ ಬಸ್ಸಿನಲ್ಲೇ ಹೋಗ್ತೀನಿ ಇನ್ಮೇಲೆ" ಅಂದ್ಲು, ಬೇಡ ರಶ್‌ನಲ್ಲಿ ನಿನಗೆಲ್ಲ ಸರಿ ಹೋಗಲ್ಲ ಅಂತ ಹೇಳಬೇಕೆನಿಸಿತು, ಆದ್ರೂ ಅವಳಿಗೂ ಅನುಭವವಾಗ್ಲಿ ಅಲ್ಲದೇ ಈಗೀಗ ಸ್ವಲ್ಪ ಜನರಿಗೆ ತಿಳುವಳಿಕೆ ಬಂದು ಪ್ರಜ್ಞಾವಂತರಾಗಿದ್ದಾರೆ ಏನೂ ತೊಂದರೆ ಆಗಲಿಕ್ಕಿಲ್ಲ ಬಿಡು ಅಂತನ್ನಿಸಿ ಸುಮ್ಮನಾದೆ.

ಸಂಜೆಯಾಗುತ್ತಿದ್ದಂತೆ ಮತ್ತೆ ಬೈಕು ತರಲು ಹೋಗಬೇಕು ಬರ್ತೀಯಾ ಅಂದೆ, ನೀವೇ ಹೋಗಿಬನ್ನಿ ಅಂದ್ಲು, ಕ್ಯಾಶಿಯರ್ ಹುಡುಗಿ ನೋಡಲಲ್ಲ ಅಂತ ಖಾತರಿಯಾಗಿದ್ದರಿಂದ ಬರುವುದಿಲ್ಲ ಅಂದಿರಬೇಕು ಅಂತ ಹೊರಟೆ. "ಮತ್ತೆ ಬಸ್ಸಲ್ಲೇ ಹೋಗ್ತೀರಾ" ಅಂದ್ಲು ಹೌದೆನ್ನುತ್ತಾ ತಲೆಯಾಡಿಸಿದೆ.. "ಬಸ್ಸು ಬಂತು ಬಸ್ಸು..." ಅಂತ ರಾಗವಾಗಿ ಅವಳು ಗುನುಗುನಿಸತೊಡಗಿದರೆ "ಕೆಂಪು ವೊಲ್ವೊ ಬಸ್ಸು..." ಅಂತ ನಾನೂ ದನಿಗೂಡಿಸಿದೆ... ಮನಸಾರೆ ನಕ್ಕೆವು, ಹೊರಗೆ ಕಾಲಿಡುತ್ತಿದ್ದಂತೆ, "ಪೀಂ... ಪೀಂ... ಕ್ಯಾಶಿಯರ್ ಕೇಳ್ದೆ ಅಂತ ಹೇಳಿ" ಅಂದ್ಲು... ತುಂಟಿಯ ತರಲೆಗೆ ನಗು ಬಂದು ಕಂಡಕ್ಟರ ಹಾಗೆ "ಒಕೇ ರೈಟ್ ರೈಟ.." ಅನ್ನುತ್ತ ಹೊರಬಿದ್ದೆ...

ಮತ್ತೆ ಎಂದೊ ಬಸ್ಸಿನಲ್ಲಿ ನಿಮ್ಮ ಪಕ್ಕದ ಸೀಟಿನಲ್ಲಿ ಕೂತು ಹರಟೆ ಹೊಡೆಯುತ್ತ ಸಿಗುತ್ತೇನೆ...

Copyright© Prabhuraj Moogi
www.telprabhu.com

# ಪತ್ರ ಬರೆಯಲಾ...

ಮುಂಜಾನೆ ಎಫ್ ಎಂ ರೇಡಿಯೋ ಕೇಳುತ್ತಲೇ ಇವಳೆಲ್ಲ ಕೆಲಸ ಮಾಡೊದು ಹೀಗಾಗಿ ಕೆಲವೊಮ್ಮೆ ಇಷ್ಟವಾಗದಿದ್ದರೂ ಅವಳಿಂದಾಗಿ ಅದು ನನ್ನ ಕಿವಿ ಮೇಲೆ ಬೀಳುತ್ತಲೇ ಇರುತ್ತದೆ. ಇತ್ತೀಚಿನ ಆ ರೇಡಿಯೊ ಜಾಕಿಗಳ ಮಾತುಕತೆಯಂತೂ ಬಹಳ ಕಿರಿಕಿರಿಯಾಗುತ್ತದೆ, ಅವರ ಮಾತಿನ ಹಾಗೂ ಜಾಹೀರಾತಿನ ನಡುವೆ ಎಲ್ಲೋ ಸ್ವಲ್ಪ ಹಾಡು ಕೇಳಿಸಿದರೆ ಅದೇ ನಮ್ಮ ಅದೃಷ್ಟ. ಅಂದು ದುನಿಯಾದ ಹಾಡೊಂದು ಕೇಳಿ ಬರುತ್ತಿತ್ತು... "ಕರಿಯ ಆಯ್ ಲವ್ ಯು..." ಅಂತ.. ನಾನೂ ನನ್ನ ಸಾಹಿತ್ಯ ಸ್ವಲ್ಪ ಸೇರಿಸಿ ಗುನುಗುನಿಸುತ್ತಿದ್ದೆ ಬಾತರೂಮಿನಲ್ಲಿ... ನನ್ನದೇ ದನಿ ಸ್ವಲ್ಪ ಹೆಚ್ಚಾಯಿತೆನ್ನಿಸುತ್ತದೆ, ಪಾಕಶಾಲೆಯಿಂದ ಇವಳು "ರೀ ಎಸ್ ಪೀ ಬಾಲಸುಬ್ರಹ್ಮಣ್ಯಂ ಅವರೇ ಸ್ವಲ್ಪ ಹಾಡೋದು ನಿಲ್ಲಿಸ್ತೀರಾ, ರೇಡಿಯೋದಲ್ಲಿ ಹಾಡು ಬರ್ತಿದೆ, ಆಮೇಲೆ ನೀವು ಹಾಡುವಿರಂತೆ" ಅಂತ ಗದರಿದಳು. "ಆಯ್ತು ಲತಾ ಮಂಗೇಶ್ಕರ ಅವರೇ, ಆಮೇಲೆ ಇಬ್ಬರೂ ಸೇರಿ ಹಾಡೊಣಾ ಅಂತೆ" ಅಂತ ಮಾರುತ್ತರ ಕೊಟ್ಟೆ. ಅಷ್ಟರಲ್ಲಿ ಹಾಡು ಮುಗಿಯಿತು, ಇಲ್ಲಾ ಅವರೇ ಮುಗಿಸಿದರೋ(ಜಾಹೀರಾತು ಹಾಕಬೇಕಲ್ಲ)... ಹಾಡು ನಿಂತಹೋಯಿತಲ್ಲ, ಅವಳ ಅಪ್ಪಣೆಯಂತೆ ನಾ ಮತ್ತೆ ಹಾಡ ಬಹುದಿತ್ತು, ಮತ್ತೆ ಶುರುವಿಟ್ಟುಕೊಂಡೆ... ಅವಳೂ ದನಿ ಸೇರಿಸಿದಳು "ನಿನಗೊಂದು ಪ್ರೇಮದ ಪತ್ರ ಬರೆಯೋದು ನನಗಾಸೆ.." ನಾನೂ ಜತೆಯಾದೆ, "ನಾನೇ ಇರುವೆ ಹತ್ರ ಬಿಡು ಆಸೆ ಓ ಕೂಸೇ..." ಅಂತ... ಅದೇ ಸಾಲಿನ ಯೋಚನೆಯಲ್ಲೇ "ನೀನ್ಯಾವತ್ತು ನನಗೆ ಪ್ರೇಮಪತ್ರ ಬರೆದೇ ಇಲ್ವಲ್ಲ" ಅಂದೆ.. ನಾಚಿ ಅವಳ ಕೆನ್ನೆ ಕೆಂಪಾಯಿತು.. "ನೀವು ಬರೆದಿರಬೇಕಲ್ಲ, ಮೊದಲೇ ಕೃಷ್ಣ ಪರಮಾತ್ಮನ ಕಲಿಯುಗದ ಅವತಾರ, ಯಾರ್‍ಯಾರಿಗೆ ಎಷ್ಟು ಬರೆದೀದೀರಿ" ಅಂದ್ಲು. ನಾನು ಒಂದು ಪ್ರೇಮಪತ್ರದ ಮಾತೆತ್ತಿದರೆ ಇವಳು ಎಷ್ಟು ಅಂತ ಎಣಿಕೆ ಕೇಳಬೇಕೆ? "ಕಾಲೇಜಿನಲ್ಲಿ ಹುಡುಗನಿಗೊಬ್ಬನಿಗೆ ಗೆಳೆಯರೆಲ್ಲ ಸೇರಿ ಹುಡುಗಿ ಹಾಗೆ ಪತ್ರ ಬರೀಬೇಕಾದ್ರೆ ಎನು ಚೂರು ಪಾರು ಸಲಹೆ ನೀಡಿದ್ದು ಬಿಟ್ಟರೆ, ಎಲ್ಲೊ ನಾ ಬರೆದ ನಾಲ್ಕು ಸಾಲುಗಳನ್ನು ಯಾರೋ ತಮ್ಮ ಪತ್ರದಲ್ಲಿ ಉಪಯೋಗಿಸುತ್ತೀನಿ ಅಂತದದ್ದಕ್ಕೆ ಓಕೆ ಅಂದಿದ್ದೆ ಅಷ್ಟೇ, ಪತ್ರಗಿತ್ರ ಬರೆಯೋ 'ಸಾಹಸ'ಕ್ಕೆ ಕೈ ಹಾಕಿಲ್ಲ ಬಿಡು, ಅಲ್ಲದೇ ಪ್ರೀತಿ ಮಾಡುವಷ್ಟು ಯಾರೂ ನನಗೆ ಇಷ್ಟವೇ ಆಗಲಿಲ್ಲ" ಅಂದೆ. "ನನಗಾದ್ರೂ ಒಂದು ಬರೀಬೇಕಿತ್ತಲ್ಲಾ?ಯಾಕೆ ನಾನೂ ಇಷ್ಟ ಆಗಿಲ್ವಾ" ಅಂದ್ಲು. "ಅಲ್ಲಾ ನಿಶ್ಚಿತಾರ್ಥ ಅಂತ ಆದ ಮೇಲೆ ಒಂದು ಬರೆಯೋಣ ಅಂತಿದ್ರೆ, ಮುಂಜಾನೆ ಕಾಲು ಘಂಟೆ, ಮಧ್ಯಾಹ್ನ ಒಂದು ಘಂಟೆ, ರಾತ್ರಿಯೊ ಘಂಟೆಗಳ ಲೆಕ್ಕ ಇಲ್ಲದ ಹಾಗೆ ಫೋನು ಮಾಡಿ ಮಾತಾಡ್ತಿದ್ದೆ, ಇನ್ನು ಪತ್ರದಲ್ಲಿ ಬರೆಯೋಕೆ ಎನಿರತ್ತೆ ಮಣ್ಣು ಎಲ್ಲ ಮಾತಾಡಿ ಮುಗಿಸಿದ ಮೇಲೆ, ಅದಕ್ಕೇ ಬರೀಲಿಲ್ಲ" ಅಂದೆ. ಅವಳಿಗೂ ಅದು ಸರಿಯೆನಿಸಿರಬೇಕು ಸುಮ್ಮನಾದ್ಲು.

ಆದರೆ ನನಗೇಕೋ ಈ ಫೊನು ಬಂದು ಪತ್ರ ಬರೆಯೋದನ್ನೆ ಇಲ್ಲದಾಗಿಸಿಬಿಟ್ಟಿತಲ್ಲ ಅಂತ ತಲೆಯಲ್ಲಿ ಕೊರೆಯುತ್ತಿತ್ತು ಆ ಯೋಚನೆ. ಅದೇ ಯೊಚನೆಯಲ್ಲೇ, ಆಫೀಸಿಗೆ ಬಂದೆ, ಅಲ್ಲಿ ನೋಡಿದ್ರೆ ನೆಟವರ್ಕ ಪ್ರಾಬ್ಲಂ ಆಗಿದೆ, ಇಂಟರನೆಟ್ಟು, ಆಯ್ ಪಿ ಫೋನು ಏನೂ ಕೆಲ್ಸ ಮಾಡ್ತಿಲ್ಲ, ಅದಕ್ಕೆ ಸಧ್ಯ ಅದು ಸರಿ ಹೋಗೊವರೆಗೆ ಏನೂ ಕೆಲಸ ಮಾಡಾಕಾಗಲ್ಲ ಅಂದ್ರು. ನಾ ನಕ್ಕೆ, ಕೆಲ್ಸ ಇಲ್ಲ ಅಂತಲ್ಲ, ಅಲ್ಲಾ ಈವತ್ತೇ ಪತ್ರದ ಬಗ್ಗೆ ಮಾತಾಡ್ತಿದ್ದೆ, ಫೋನು, ಇ-ಮೇಲ್ ಎಲ್ಲ ಇಲ್ಲದಾಗಿ ಬಿಡಬೇಕಾ ಹ ಹ ಹ... ಕ್ಯಾಂಟೀನಿಗೆ ಹೋಗಿ ಬಿಸಿ ಕಪ್ಪು ಕಾಫಿ ಹೊಟ್ಟೆಗೆ ಇಳಿಸಿದ್ದಾಯ್ತು. ಆಗಲೇ ಬಂದದ್ದು ಯೋಚನೆ ನನ್ನಾಕೆಗೆ ಈಗ ಯಾಕೆ ಪತ್ರ ಬರೀಬಾರದು ಅಂತ... ಕಾನ್ಫರೆನ್ಸ ರೂಮ ಒಂದು ಸೇರಿಕೊಂಡು ಕೂತು ಪೆನ್ನು ಪೇಪರು ತೆಗೆದುಕೊಂಡು ಬರೆಯಲು ಕೂತೆ...

ಪ್ರೀತಿಯ, ನನ್ನವಳೇ, ನನ್ನಾಕೆಯೆ, ಲೇ ಇವಳೇ, ತಗಡು, (ಅಲ್ಲಾ ಎದುರು ಮಾತಾಡೋವಾಗ್ಲೇ ನಿನ್ನ ಹೆಸರಿಂದ ಕರೆದಿಲ್ಲ, ಇನ್ನು ಪತ್ರದಲ್ಲಿ ಯಾಕೆ?) ಅದಕ್ಕೇ
ಪ್ರೀತಿಯ ನಿನಗೆ,

ಇಲ್ಲಿ ಎನೂ ಕ್ಷೇಮವಿಲ್ಲ, ಕೆಲಸ ಇಲ್ಲಾ, ಖಾಲೀ ಕೂತಿದ್ದೇನೆ, ಕಾಡಿಸೋಣಾ ಅಂದ್ರೂ ನೀನಿಲ್ಲ, ಅಲ್ಲಿನ ಕ್ಷೇಮ ಸಮಾಚಾರವನ್ನು ನಿರಂತರವಾಗಿ ಎನ್ ಡಿ ಟೀವೀ ಬ್ರೇಕಿಂಗ ನ್ಯೂಜ ಥರ ನೀನು ಫೋನು ಮಾಡಿ ತಿಳಿಸುವುದರಿಂದ.. ಅಲ್ಲಿ ಎಲ್ಲ ಕ್ಷೇಮವಾಗಿದೆ ಎಂದುಕೊಳ್ಳುತ್ತೇನೆ.

ಮುಂಜಾನೆ ಅಲ್ಲಿಂದ ಆಫೀಸಿಗೆ ಹೊರಟು ಘಂಟೆಕಾಲದ ಈ ಟ್ರಾಫಿಕ್ಕಿನಲ್ಲಿ ಹಾಗೂ ಹೀಗೂ ಬಂದು ತಲುಪಿದ್ದೇನೆ, ಪ್ರಯಾಣ ಸುಖಕರವಾಗಿತ್ತು(ಸಿಗ್ನಲ್ಲಿನಲ್ಲಿ ಸುಂದರಿಯರು ಸಿಕ್ಕಿದ್ದರಲ್ಲ), ಸರಿಯಾಗಿ ಬಂದು ತಲುಪಿದ್ದು ನನ್ನ ಅದೃಷ್ಟ. ಬೈಕಿನಲ್ಲಿ ಬಂದಿದ್ದರಿಂದ ಬೇಗ ತಲುಪಿದೆ, ಬಸ್ಸಿನಲ್ಲಿ ಬರುವುದಾಗಿದ್ದರೆ, ಊಹಿಸಲೂ ಸಾಧ್ಯ ಇಲ್ಲ.

Copyright© Prabhuraj Moogi
www.telprabhu.com

ಈಗ ಪತ್ರ ಬರೆಯಲು ಕಾರಣವೇನೆಂದರೆ, ಪತ್ರ ಬರೆಯೋದೇ ಆಗಿದೆ. ನಸುಕಿಗೆ ಕೇಳಿದ ಹಾಡು ನನ್ನ ಮನದಲ್ಲಿ ಹಾಗೆ ಕೊರೆಯುತ್ತಿತ್ತು ಅದರಲ್ಲೂ ನೀನು ಪತ್ರ ಬರೆದೇ ಇಲ್ಲಾ ಅಂದಾಗ ನೀನು ಬರೆದಿಲ್ಲದಿದ್ದರೂ ನಾನ್ಯಾಕೆ ಬರೆಯಬಾರದು ಅಂತ ಬರೆಯಲು ಕುಳಿತೆ.

ಮದುವೆಯಾಗಿ ಇನ್ನೂ ಎಣಿಕೆ ಮಾಡಿ ಹೇಳೊವಷ್ಟು ವರ್ಷಗಳಾಗಿಲ್ಲ ಆದರೂ ಕಷ್ಟಾನೋ ಸುಖಾನೋ ನಾವಿಬ್ಬರೂ ಬೇವು ಬೆಲ್ಲದಂತೆ ಬದುಕು ಅಂತ ಹೊಂದಿಕೊಂಡು ಹೋಗುತ್ತಿದ್ದೇವೆ. ಮದುವೆಯಾದ ಹೊಸತನದಲ್ಲಿನ ನಿನ್ನ ಹಿಂಜರಿತ ಈಗ ಇಲ್ಲವಾಗಿ ನನ್ನೊಂದಿಗೆ ನಿರ್ಭಿಡೆಯಿಂದ ಮಾತಾಡುತ್ತೀ... ಹಾಗಾಗಿ ಎಲ್ಲ ಪಾರದರ್ಶಕವಾಗಿರುವುದರಿಂದ ಅನುಮಾನಗಳು ಹುಟ್ಟಿ ನಮ್ಮಿಬ್ಬರ ಜೀವನದಲ್ಲಿ ಬಿರುಕು ಕಾಣಿಸಿಕೊಳ್ಳಲು ಎಲ್ಲಿ ಆಸ್ಪದವಿದೆ. ಬರೀ ನನ್ನೊಂದಿಗೆ ಮಾತ್ರವಲ್ಲ ನನ್ನವರೊಂದಿಗೂ ನೀ ಬೆರೆತುಕೊಂಡ ರೀತಿ ನನಗೆ ನಂಬಲಾಗುತ್ತಿಲ್ಲ. ನೀನಿಲ್ಲದೇ ನನಗೆ ಒಂದು ದಿನ ಕೂಡ ಕಳೆಯಲಾಗದಷ್ಟು ನನ್ನ ಆವರಿಸಿಕೊಂಡಿರುವಿ. ಚುನಾವಣೆಗೆ ನಿಂತ ರಾಜಕೀಯ ಮುಖಂಡನನ್ನು ಹಿಂಬಾಲಕರು ಹೊಗಳಿದಂತೆ ನನ್ನವು ಹೊಗಳಿಕೆ ಮಾತೆಂದುಕೊಳ್ಳಬೇಡ, ನನ್ನ ಮನದಿಂದ ನನಗನಿಸಿದ್ದು ಮಾತ್ರ ಹೇಳುತ್ತಿದ್ದೇನೆ.

ನಾಯಿ ಬೆಕ್ಕಿನಂತೆ ನಾವಿಬ್ಬರೂ ಎಷ್ಟು ಸಾರಿ ಕಚ್ಚಾಡಿಲ್ಲ, ನಶೆಯೇರದೇ ನಟಿಸಿ ಗೋಳು ಹೊಯ್ದುಕೊಂಡಿದ್ದು, ಸೀರೆ ಖರೀದಿ ಮಾಡಿ ಬಂದಾಗ ಕಣ್ಣಂಚಲ್ಲಿ ಕಣ್ಣೀರಿನೊಂದಿಗೂ ನಿನ್ನ ನಗಿಸಿದ್ದು, ಒಂದೇ ಎರಡೇ ನನ್ನ ಕೀತಾಪತಿಗಳು ಎಲ್ಲವನ್ನೂ ಸಹಿಸಿ, ನಿನ್ನ ಪ್ರೀತಿಯ ಪರಿಧಿಯಲ್ಲಿ ನನ್ನ ಬಂಧಿಸಿ ಬಿಗಿದಪ್ಪಿಕೊಂಡಿದ್ದು ಎಲ್ಲ ನೆನಸಿದರೆ ನಿನ್ನ ನನ್ನಾಕೆಯಾಗಿ ಪಡೆದ ನಾನೇ ಧನ್ಯ. ಇನ್ನೇನು ಹೇಳಲಿ ನಿನ್ನಲ್ಲಿ ನನ್ನದೊಂದೇ ಕೋರಿಕೆ, ದಾರಿ ತಪ್ಪಿ ತಪ್ಪುಗಳ ಮಾಡಲು ನಮಗೆಷ್ಟು ತಿರುವುಗಳಿದ್ದವು, ಎಲ್ಲ ಮೀರಿ ಸರಿದಾರಿಯಲ್ಲಿ ಇಷ್ಟೊಂದು ದೂರ ಪಯಣಿಸಿ ಬಂದಿದ್ದೇವೆ.  ನನ್ನ ಈ ಬರುಡು ಬದುಕನ್ನು ಹಸಿರು ಕಾನನ ಮಾಡಲು ನನಗೆ ಹೀಗೆ ಜತೆಯಾಗು, ಎಲ್ಲರಿಗೂ ಮಾದರಿಯಾಗಿ ಬಾಳಿ ತೋರಿಸೋಣ.

ಹೆಚ್ಚಿಗೇನು ಬರೆಯಲು ಇಲ್ಲ, ಹಾಂ ಮುಂಜಾನೆ ನೀ ಹಾಕಿದ್ದ ರಂಗೋಲಿ ಬಹಳ ಚೆನ್ನಾಗಿತ್ತು, ಅದರಲ್ಲಿ ಬಣ್ಣ ತುಂಬಿದ್ದರೆ ಇನ್ನೂ ಚೆನ್ನಾಗಿರೋದು, ನಾನು ಬಣ್ಣ ತುಂಬಲು ಹೆಲ್ಪು ಮಾಡುತ್ತೀನಿ ಅಂದ್ರೂ ನೀನು ಬಿಡಲ್ಲ ಏನ್ ಮಾಡೊದು. ಈ ನೆಟವರ್ಕ ತೊಂದ್ರೆಯಿಂದಾಗಿ ಭಾರೀ ಒತ್ತಡದ ಕೆಲಸದ ನಡುವೆ ಬಿಡುವು ಸಿಕ್ಕಿತ್ತು, ಮತ್ತೆ ಸರಿಯಾಗಿರಬೇಕು ಹೋಗಿ ನೋಡುತ್ತೇನೆ, ಹೊಟ್ಟೇ ಪಾಡು ಕೆಲಸ ಮಾಡಲೇಬೇಕಲ್ಲ, ಸಂಜೆ ಬೇಗ ಬರ್ತೀನೆ.

ಪಕ್ಕದ ಮನೆ ಪದ್ದು, ಮತ್ತು ಹಾಲಿನಂಗಡಿ ಹಾಸಿನಿನಾ ಕೇಳ್ತಾ ಇದ್ದೆ ಅಂತ ಹೇಳು... ಪರಫ್ಯೂಮ್ ಪರಿಮಳ ಅವರು ಬಂದ್ರೆ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತೀ ಪ್ರೀತಿಯಿಂದ
ನಿನ್ನವ.

ಅಂತೂ ಇಂತೂ ಮೊದಲ ಪ್ರೇಮ ಪತ್ರ ಬರೆದು ಹಾಕಿದೆ, ಏನೊ ಮನಸಿಗೆ ಹಿತವೆನ್ನಿಸಿತು, ಫೋನಿನಲ್ಲಿ ಘಂಟೆಗಟ್ಟಲೇ ಮಾತಾಡಬಹುದು ಏನು ಬೇಕಾದ್ರೂ, ಅದೇ ಬರೆಯಲು ಆಗಲ್ಲ, ಬರೆಯಲು ಪದಗಳು ಸಿಗೋದಿಲ್ಲ, ಎಲ್ಲಿ ಸರಿಯಾಗಿದೆಯೋ ಇಲ್ವೊ, ಅಲ್ಲಿ ತಪ್ಪಾಯಿತು, ಇಲ್ಲಿ ಸರಿ ಮಾಡು, ಅಂತ ನಾಲ್ಕು ಸಾರಿ ಬರೆದು ಗೀಚಿ, ಗೀಟು ಹಾಕಿ, ಹರಿದು ಬೀಸಾಕಿ, ಬಹಳಷ್ಟು ಶ್ರಮ ಪಟ್ಟಾಗಲೇ ಒಂದು ಸುಂದರ ಪತ್ರ ತಯ್ಯಾರಾಗೋದು, ಆದರೂ ಆ ಶ್ರಮ ಸಾರ್ಥಕ, ಪತ್ರ ಜತನವಾಗಿ ಕಾದಿಟ್ಟು, ಮತ್ತೆ ಮತ್ತೆ ಓದಬಹುದು, ನೆನಪಿನ ಖಜಾನೆಯನ್ನು ಮತ್ತೆ ಮತ್ತೆ ತೆರೆದು ನೋಡಬಹುದು, ಅದೇ ಫೋನಿನಲ್ಲಿ ಮುಂಜಾನೆ ಮಾತಾಡಿ ಸಂಜೆ ಮರೆತು ಬಿಡಬಹುದು. ಫೊನಿನಲ್ಲಿ ಒಂದು ಸಾರಿ ಪ್ರೀತಿಸುತ್ತೀನಿ ಅಂತ ಒಂದು ಸಾರಿ ಭಾವನೆಗಳ ಬಿಚ್ಚಿಡಬಹುದು, ಆದರೆ ಒಂದು ಸಾರಿ ಹೀಗೆ ಬರೆದು, ಅವರು ಅದನ್ನು ಬಚ್ಚಿಟ್ಟುಕೊಂಡು, ಆಗಾಗ ಬಿಚ್ಚಿ ಓದುತ್ತಿದ್ದರೆ, ಒಂದು ಸಾರಿ ಹೇಳಿದ್ದು ನೂರು ಸಾರಿಯಾಗಿರುತ್ತದೆ. ಕೆಲವೊಮ್ಮೆ ಪತ್ರದಲ್ಲಿ ಬರೆದ ಕೆಲ ಸಂಗತಿಗಳು ಅನಾಹುತಕ್ಕೆ ಎಡೆ ಮಾಡಿಕೊಡಬಹುದಾದರೂ, ಪತ್ರಗಳದ್ದೇ, ಒಂದು ಭಾವನೆಗಳ ಬಿತ್ತರಿಸುವ ವಿಭಿನ್ನ ವೈಖರಿ. ಅದೆಲ್ಲ ಈ ಆಧುನಿಕತೆಯಲ್ಲಿ ನಾವು ಕಳೆದುಕೊಳ್ಳುತ್ತಿದ್ದೇವೆ ಅನ್ನಿಸಿತು, ಅದಕ್ಕೆ ನಾ ನನ್ನವಳಿಗೆ ಬರೆದೆ... ಪತ್ರಗಳನ್ನು ನನ್ನ ಬದುಕಿನಲ್ಲಿ ಜೀವಂತವಾಗಿರಿಸಿದೆ, ನಿಮ್ಮ ನಿಮ್ಮ ಅನುಕೂಲಗಳು ನಿಮಗೆ ಬಿಟ್ಟಿದ್ದು.

ಪತ್ರ ಬರೆದದ್ದೇನೊ ಆಯ್ತು, ಇನ್ನು ಪೋಸ್ಟಿಗೆ ಹಾಕಿದ್ರೆ, ಅದು ಯಾವಾಗ ಹೋಗಿ ತಲುಪುತ್ತೋ ಯಾರಿಗೆ ಗೊತ್ತು, ನಾ ಮನೆಗೆ ಹೋಗಿ ನಾಲ್ಕು ದಿನಗಳಾದ ಮೇಲೆ ತಲುಪಿದರೆ ತಲುಪೀತು ಅಂದುಕೊಂಡು, ಆಫೀಸಿನಲ್ಲಿ "ಸೂಪರ್ ಸೇವಾ" ಅಂತ ಸೌಲಭ್ಯವಿದೆ, ಬಿಲ್ಲ್ ತುಂಬಲು, ಕೊರಿಯರ್ ಮಾಡಲು.. ಅವರನ್ನು ಹೋಗಿ ಕೇಳಿದ್ದಕ್ಕೆ, ಲೋಕಲ ಕೊರಿಯರ ಈಗ ಕೊಟ್ಟರೆ ಮಧ್ಯಾಹ್ನ ತಲುಪುತ್ತದಂತ ಕೇಳಿ ಖುಶಿಯಾಗಿ ಕೊರಿಯರ ಮಾಡಿ ಬಂದು ಕುಳಿತೆ... ಫೋನಿನಲ್ಲಿ ಮತ್ತೆ ಎಫ್

Copyright© Prabhuraj Moogi
www.telprabhu.com

ಎಂ ಹಾಕಿಕೊಂಡೆ "ಪತ್ರ ಬರೆಯಲಾ ಇಲ್ಲ ಚಿತ್ರ ಬಿಡಿಸಲಾ ಹೇಗೆ ಹೇಳಲಿ ನನ್ನ ಮನದ ಹಂಬಲ..." ಹಾಡು ಬರುತ್ತಿತ್ತು... ಅಯ್ಯೊ ಸಾಕಪ್ಪ ಪತ್ರ ನಾನು ಬರೆದಾಯ್ತು, ಇನ್ನೆಲ್ಲಿ ಚಿತ್ರ ಬಿಡಿಸಲಿ.. ಅಂತ ಆಫ್ ಮಾಡಿದೆ... ನೋಡಬೇಕು ಪತ್ರ ಓದಿ ಫೋನು ಮಾಡುತ್ತಾಳೋ ಇಲ್ಲಾ ಪತ್ರ ಬರೆಯುತ್ತಾಳೊ... ನಿಮಗೆ ಇಷ್ಟವಾಗಿದ್ದರೆ, ನೀವು ಪತ್ರ(ಇಂಚೆ) ಇಲ್ಲಾಂದ್ರೂ ಕಾಮೆಂಟಾದ್ರೂ ಬರೆಯುತ್ತೀರಲ್ಲವೇ...

ಮತ್ತೆ ಸಿಕ್ತೀನಿ, ಹೀಗೆ ಪತ್ರ, ಅಲ್ಲಲ್ಲ ಬ್ಲಾಗ ಪೋಸ್ಟಿನಲ್ಲಿ...

ಈ ಲೇಖನದೊಂದಿಗೆ ನನ್ನವಳೊಂದಿಗಿನ ನನ್ನ ಲೇಖನಗಳು ಇಪ್ಪತ್ತೈದರ ಗಡಿ ತಲುಪಿವೆ(ಇದೇ ೨೫). ಎಲ್ಲ ಲೇಖನಗಳ ತಲೆಬರಹಗಳ ತುಣುಕುಗಳನ್ನು ಈ ನನ್ನ ಪತ್ರದಲ್ಲಿ ಹುದುಗಿಸಿದ್ದೇನೆ... ಆಸಕ್ತಿಯಿದ್ದವರು ಅವನ್ನೂ ಓದಬಹುದು, ಇಷ್ಟು ದೂರ ಬ್ಲಾಗ ಲೋಕದಲ್ಲಿ ಪಯಣಿಸಲು ನಿಮ್ಮೆಲ್ಲ ಓದುಗರ, ಹಾಗೂ ಸಹ ಬ್ಲಾಗಿಗರ ಪ್ರೊತ್ಸಾಹವೇ ಕಾರಣ, ಅದಕ್ಕೆ ನಿಮೆಲ್ಲರಿಗೂ ನಾನು ಚಿರಋಣಿ, ಹಾಗೆ ಎಲ್ಲ ಲೇಖನಗಳ ಸಂಕಲನ ಮಾಡಿ ಪಿ ಡಿ ಎಫ್ ಫೈಲು ಮಾಡಿ ಲಿಂಕು ಕೊಡುತ್ತಿದ್ದೇನೆ, ಬಹಳ ದೊಡ್ಡ ದೊಡ್ಡ ಲೇಖನಗಳಾದ್ದರಿಂದ ಇಲ್ಲಿ ಓದಲಾಗದವರು ಅದನ್ನು ಡೌನಲೋಡ ಮಾಡಿಕೊಂಡು ಓದಬಹುದು, ಇದೆಲ್ಲದರ ಬದಲಿಗೆ ನಿಮ್ಮಿಂದ ಒಂದೆರಡು ಮೆಚ್ಚುಗೆಯ ನುಡಿಗಳು ಮಾತ್ರ ನನ್ನ ನಿರೀಕ್ಷೆ. ಹೀಗೆ ಬರುತ್ತಿರಿ...

Copyright© Prabhuraj Moogi
www.telprabhu.com

**ಕೊನೇ ಮಾತು...**



ನಾನು ಪ್ರಭು, ಹುಟ್ಟಿ ಬೆಳೆದದ್ದು ಬೈಲಹೊಂಗಲ ಅಂತ ಬೆಳಗಾವಿ ಹತ್ತಿರದ ಒಂದು ಊರಿನಲ್ಲಿ, ಸಧ್ಯ ಬೆಂಗಳೂರಿನ ಸಾಫ್ಟವೇರ ಕಂಪನಿಯೊಂದರಲ್ಲಿ ಉದ್ಯೋಗಿ. ಬರಹ ನನ್ನ ಹವ್ಯಾಸ, ಅದರ ಪ್ರತಿಫಲವೇ ನೀವೀಗ ಓದುತ್ತಿರುವ ಲೇಖನಗಳು. ಕೆಲವು ಸಮಯದ ಹಿಂದೆ ಯಾರೊ ಸಹುದ್ಯೋಗಿಯೊಬ್ಬರು ಕಳಿಸಿದ ಒಂದು ಲೇಖನ ಓದಿ ಅದೆ ಸ್ಪೂರ್ಥಿಯಿಂದ ನನ್ನ ಬ್ಲಾಗನಲ್ಲಿ ಬರೆಯಲು ಶುರುವಿಟ್ಟುಕೊಂಡೆ. ಇಲ್ಲಿ ಲೇಖನಗಳಲ್ಲಿ ಬರುವ "ನಾನು" ನಾನಲ್ಲ, ನನ್ನ ಪ್ರತಿಬಿಂಬ ಎಂದರೂ ಸರಿ ಇನ್ನು "ನನ್ನಾಕೆ" ಬರೀ ನನ್ನ ಕಲ್ಪನೆ, ಹಾಗೆ ಅಲ್ಲಲ್ಲಿ ಸಿಗುವ ಇನ್ನೂ ಹಲವು ಪಾತ್ರಗಳು ಕೇವಲ ಕಾಲ್ಪನಿಕ. ಕಲ್ಪನೆಗಳಿಗೆ ಕೊನೆ ಎಲ್ಲಿ, ಹಾಗೆ ಬರೆಯುತ್ತ ಹೋಗಿ, ಓದುಗರು ಬಂದು ಓದಿ ಅನಿಸಿಕೆಗಳ ತಿಳಿಸಿ ಪ್ರೋತ್ಸಾಹವನ್ನಿತ್ತಿದ್ದಕ್ಕೆ ಇಲ್ಲಿಯವರೆಗೆ ಇಪ್ಪತ್ತೈದು ಬರಹಗಳಾಗಿವೆ, ಅದನ್ನೇ ಸಂಕಲಿಸಿ ನಿಮ್ಮ ಕೈಗಿಡುತ್ತಿದ್ದೇನೆ. ನಿಮಗೂ ಇಷ್ಟವೆನಿಸಿದರೆ ಓದಿ ಹಾಗೆ ಇತರರಿಗೂ ಹಂಚಿ, ಇನ್ನೂ ಹೊಸ ಹೊಸ ಲೇಖನಗಳಿಗಾಗಿ ನನ್ನ ಬ್ಲಾಗ್ http://blog.telprabhu.com ಗೆ ಭೇಟಿ ನೀಡಿ, ಹಾಗೆ ನನ್ನ ಈ ಹುಚ್ಚು ಕಲ್ಪನೆಗಳು ಇಷ್ಟವಾದರೆ ಮೆಚ್ಚಿಗೆಯ ನಾಲ್ಕು ಸಾಲು ಬರೆಯಲು ಹಾಗೂ ನಿಮ್ಮ ಅನಿಸಿಕೆಗಳ ತಿಳಿಸಬೇಕೆನಿಸಿದರೆ ನನ್ನ ವಿಳಾಸ pm@telprabhu.com

ಮತ್ತೆ ಸಿಗೋಣ...

ತಮ್ಮ...
ಪ್ರಭು.

Copyright© Prabhuraj Moogi
www.telprabhu.com